ಮಂಗಳವಾರ, ಜುಲೈ 23, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 204 | ಪುಟ 14

● www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕ್ಷೇಮ ಕುಶಲ
ಸುಸ್ತಿಗೆ ದೈಹಿಕ ಸಮಸ್ಯೆಗಳ ಜೊತೆಗೆ ಮಾನಸಿಕ ತೊಂದರೆಗಳೂ ಕಾರಣವಾಗಿರಬಹುದು

ಆಳ-ಅಗಲ: ಪಶ್ಚಿಮದ ಮಾದರಿ ಭಾರತಕ್ಕಲ್ಲ

ಬೆಳಗಾವಿ: 22 ಸೇತುವೆ ಮುಳುಗಡೆ 10

ನಾನ್ಯಾಕೆ ರಾಜೀನಾಮೆ ನೀಡಲಿ: ಸಿ.ಎಂ 7

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
80,502	24,509	₹75,850 (ಬೆಂಗಳೂರು)	₹91,400 (ಬೆಂಗಳೂರು)	83.66

ವಾಲ್ಮೀಕಿ ನಿಗಮ: ಜಾರಿ ನಿರ್ದೇಶನಾಲಯದ ಮೇಲೆ ರಾಜ್ಯ ಸರ್ಕಾರದ ‘ಅಸ್ತ್ರ’

ಇ.ಡಿ ವಿರುದ್ಧವೇ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ನಡೆದಿರುವ ₹94.73 ಕೋಟಿ ಅಕ್ರಮ ಪ್ರಕರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಆರೋಪಿಯನ್ನಾಗಿಸಲು ಒತ್ತಡ ಹೇರುತ್ತಿರುವ ಆರೋಪದಡಿ ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳ ವಿರುದ್ಧವೇ ನಗರದ ವಿಲ್ಸನ್ ಗಾರ್ಡನ್ ಪೊಲೀಸ್ ಠಾಣೆಯಲ್ಲಿ ಸೋಮವಾರ ಎಫ್‌ಐಆರ್ ದಾಖಲಿಸಲಾಗಿದೆ.

ದೆಹಲಿ, ಜಾರ್ಖಂಡ್ ಮಾದರಿಯಲ್ಲಿ ಮುಖ್ಯಮಂತ್ರಿಯವರನ್ನು ಪ್ರಕರಣದಲ್ಲಿ ಸಿಲುಕಿಸಲು ಇ.ಡಿ ಯತ್ನಿಸುತ್ತಿದೆ ಎಂದು ವಿಧಾನಮಂಡಲದ ಒಳಗೆ, ಹೊರಗೆ ಸಚಿವರು, ಮುಖ್ಯಮಂತ್ರಿಯವರ ಕಾನೂನು ಸಲಹೆಗಾರ ಆರೋಪಿಸಿದ್ದರು. ಈಗ ಇ.ಡಿ ಅಧಿಕಾರಿಗಳ ವಿರುದ್ಧವೇ ಎಫ್‌ಐಆರ್ ದಾಖಲಿಸಿರುವುದರಿಂದ ರಾಜ್ಯ ಸರ್ಕಾರವು ತನಿಖಾ ಸಂಸ್ಥೆ ಜೊತೆ ನೇರ ಸಂಘರ್ಷಕ್ಕೆ ಇಳಿದಿದೆ.

ವಾಲ್ಮೀಕಿ ಅಭಿವೃದ್ಧಿ ನಿಗಮದ ಪದನಿಮಿತ್ತ ನಿರ್ದೇಶಕರೂ ಆಗಿದ್ದ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ಹಿಂದಿನ ನಿರ್ದೇಶಕ ಕಲ್ಲೇಶ್ ಬಿ. ನೀಡಿರುವ ದೂರನ್ನು ಆಧರಿಸಿ ಇ.ಡಿ ಬೆಂಗಳೂರು ವಲಯ ಕಚೇರಿಯ ಉಪ ನಿರ್ದೇಶಕ ಮನೋಜ್ ಮಿತ್ತಲ್ ಮತ್ತು ಸಹಾಯಕ ನಿರ್ದೇಶಕ ಮುರುಳಿ ಕಣ್ಣನ್ ವಿರುದ್ಧ ಭಾರತೀಯ ನ್ಯಾಯಸಂಹಿತೆಯ ವಿವಿಧ ಸೆಕ್ಷನ್‌ಗಳ ಅಡಿ ಪ್ರಕರಣ ದಾಖಲು ಮಾಡಲಾಗಿದೆ.

ಪ್ರಕರಣದಲ್ಲಿ ಶಾಸಕ ಬಿ.ನಾಗೇಂದ್ರ ಅವರನ್ನು ಇ.ಡಿ ಅಧಿಕಾರಿಗಳು ಬಂಧಿಸಿ, ಕಸ್ಟಡಿಗೆ ಪಡೆದುಕೊಂಡು ವಿಚಾರಣೆ ನಡೆಸಿದ್ದರು. ರಾಯಚೂರು ಗ್ರಾಮೀಣ ಕ್ಷೇತ್ರದ ಕಾಂಗ್ರೆಸ್ ಶಾಸಕ ಬಸನಗೌಡ ದದ್ದಲ್ ಹಾಗೂ ನಾಗೇಂದ್ರ ಅವರ ಪತ್ನಿ ಮಂಜುಳಾ ಮತ್ತು ಹಲವು ಅಧಿಕಾರಿಗಳ ವಿಚಾರಣೆ ನಡೆಸಿದ್ದರು.

7ನೇ ಪುಟ ನೋಡಿ

ದೂರಿನಲ್ಲಿ ಏನಿದೆ?

‘ಜುಲೈ 16ರಂದು ದೂರವಾಣಿ ಮೂಲಕ ಕರೆ ಮಾಡಿ ವಿಚಾರಣೆಗೆ ಬರುವಂತೆ ಸೂಚಿಸಿದ್ದರು. ಶಾಂತಿನಗರ ದಲ್ಲಿರುವ ಕಚೇರಿಗೆ ಹೋಗಿದ್ದೆ. ಮುರುಳಿ ಕಣ್ಣನ್ ಅವರು ಹೇಳಿಕೆ ದಾಖಲಿಸಿಕೊಂಡಿದ್ದರು. ಅವರು ಕೇಳಿದ 17 ಪ್ರಶ್ನೆಗಳಿಗೆ ಉತ್ತರಿಸಿದ್ದೆ. ಅದರಲ್ಲಿ ಮೂರು ಪ್ರಶ್ನೆಗಳಿಗೆ ಉತ್ತರಿಸಲು ಕಡತ ಹಾಗೂ ಕೆಳಹಂತದ ಅಧಿಕಾರಿಗಳು ಬೇಕೆಂದು ತಿಳಿಸಿದ್ದೆ. ಜುಲೈ 18ರಂದು ಮಧ್ಯಾಹ್ನ 2 ಗಂಟೆಗೆ ಕಡತ ಹಾಗೂ ಇತರೆ ಅಧಿಕಾರಿಗಳ ಜತೆಗೆ ಬರುವಂತೆ ಸೂಚಿಸಿದ್ದರು. ಆಗ ಹೇಳಿಕೆಗೆ ಸಹಿ ಪಡೆದ ಮೇಲೆ ಅದರ ಪ್ರತಿ ನೀಡುವಂತೆ ಮನವಿ ಮಾಡಿದ್ದೆ. ಆದರೆ, ಅಧಿಕಾರಿಗಳು ಪ್ರತಿ ನೀಡಲಿಲ್ಲ’ ಎಂದು ಕಲ್ಲೇಶ್ ದೂರಿನಲ್ಲಿ ವಿವರಿಸಿದ್ದಾರೆ.

‘ಅದಾದ ಮೇಲೆ ಮತ್ತೆ ಕೆಲವು ಮೌಖಿಕ ಪ್ರಶ್ನೆಗಳನ್ನು ಕೇಳಿದರು. ಮಹಾತ್ಮ ಗಾಂಧಿ ರಸ್ತೆಯಲ್ಲಿರುವ ವಾಲ್ಮೀಕಿ ನಿಗಮದ ಬ್ಯಾಂಕ್ ಖಾತೆಗೆ ಖಜಾನೆಯ ಮೂಲಕ ಹಣವನ್ನು ಜಮೆ ಮಾಡಿರುವುದು ತಪ್ಪು ಎಂದು ಅವರು ಹೇಳಿದರು. ಅದಕ್ಕೆ ನಾನು ಸರ್ಕಾರದ ಆದೇಶದ ಪ್ರಕಾರ ಬಿಲ್ ಮಾಡಿ, ಮಾರ್ಚ್ 25ರಂದು ಜಮೆ ಮಾಡಿದ್ದೇನೆ. ಆ ಖಾತೆಯಲ್ಲಿ ಮಾರ್ಚ್ 5ರಿಂದಲೇ ಹಣ ಅಕ್ರಮವಾಗಿ ವರ್ಗಾವಣೆಯಾಗಿದ್ದು, ನನ್ನ ತಪ್ಪಿಲ್ಲ ಎಂದು ಹೇಳಿದ್ದರೂ ಬಂಧನ ಮಾಡುವುದಾಗಿ ಬೆದರಿಕೆ ಹಾಕಿದರು’ ಎಂದು ಉಲ್ಲೇಖಿಸಿದ್ದಾರೆ.

‘ಸಿ.ಎಂ ಸಿಲುಕಿಸಲು ಒತ್ತಡ’

‘ಹಣ ವರ್ಗಾವಣೆಗೆ ಮುಖ್ಯಮಂತ್ರಿ (ಸಿದ್ದರಾಮಯ್ಯ), ಮಾಜಿ ಸಚಿವ ಬಿ.ನಾಗೇಂದ್ರ ಹಾಗೂ ಹಣಕಾಸು ಇಲಾಖೆ (ಎಫ್.ಡಿ) ಸೂಚನೆ ಇತ್ತು ಎಂಬುದಾಗಿ ಒಪ್ಪಿಕೊಳ್ಳಬೇಕು. ಆಗ ನಿಮಗೆ ಸಹಾಯ ಮಾಡುತ್ತೇವೆ. ಇಲ್ಲದಿದ್ದರೆ ಬಂಧಿಸುತ್ತೇವೆ ಎಂದು ಭಯದ ವಾತಾವರಣ ಸೃಷ್ಟಿಸಿದ್ದರು’ ಎಂದು ಕಲ್ಲೇಶ್ ದೂರಿನಲ್ಲಿ ಉಲ್ಲೇಖಿಸಿದ್ದಾರೆ.

‘ನೀನೊಬ್ಬ ಅಪರಾಧಿ. ಇ.ಡಿ ನಿನ್ನನ್ನು ಬಂಧಿಸಿದರೆ ಎರಡರಿಂದ ಮೂರು ವರ್ಷ ಜಾಮೀನು ಸಿಗುವುದಿಲ್ಲ. ನಿನಗೆ ಸಹಾಯ ಮಾಡಬೇಕೆಂದರೆ, ಮುಖ್ಯಮಂತ್ರಿ, ನಾಗೇಂದ್ರ ಮತ್ತು ಎಫ್.ಡಿ ನಿರ್ದೇಶನದಂತೆ ಹಣ ವರ್ಗಾವಣೆ ಮಾಡಿರುತ್ತೇನೆಂದು ಬರೆದುಕೊಡಬೇಕು. ಇಲ್ಲದಿದ್ದರೆ, ಏಳು ವರ್ಷ ಜೈಲಿಗೆ ಕಳುಹಿಸುವವರೆಗೂ ಬಿಡುವುದಿಲ್ಲವೆಂದು ಅಧಿಕಾರಿ ಮಿತ್ತಲ್ ತಮ್ಮ ಕೊಠಡಿಗೆ ಕರೆಸಿಕೊಂಡು ಬೆದರಿಕೆ ಹಾಕಿದರು. ಕೊನೆಯಲ್ಲಿ, ಇಬ್ಬರೂ ಅಧಿಕಾರಿಗಳು ನನ್ನನ್ನು ಬಂಧಿಸುವುದಾಗಿ ಮಾತನಾಡಿಕೊಂಡರು’ ಎಂದು ದೂರಿನಲ್ಲಿ ಹೇಳಿದ್ದಾರೆ.

ನೀಟ್ ವಿರೋಧಿಸಿ ನಿರ್ಣಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೈದ್ಯಕೀಯ ಕೋರ್ಸ್‌ಗಳ ಪ್ರವೇಶಕ್ಕೆ ರಾಷ್ಟ್ರೀಯ ಪರೀಕ್ಷಾ ಏಜೆನ್ಸಿ (ಎನ್‌ಟಿಎ) ನಡೆಸುವ ರಾಷ್ಟ್ರೀಯ ಅರ್ಹತಾ ಪ್ರವೇಶ ಪರೀಕ್ಷೆ (ನೀಟ್) ವಿರೋಧಿಸಿ ವಿಧಾನ ಮಂಡಲ ಅಧಿವೇಶನದಲ್ಲಿ ನಿರ್ಣಯ ಮಂಡಿಸಲು ರಾಜ್ಯ ಸರ್ಕಾರ ನಿರ್ಧರಿಸಿದೆ.

ಈ ಸಾಲಿನಲ್ಲಿ ನಡೆದ ನೀಟ್‌ನಲ್ಲಿ ಅಕ್ರಮಗಳು ನಡೆದಿವೆ ಆರೋಪಗಳು ಎದುರಾಗಿವೆ. ಈ ವಿಚಾರ ಸೋಮವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ಚರ್ಚೆಯಾಗಿದ್ದು, ಇದೇ ಅಧಿವೇಶನ ದಲ್ಲಿ ನೀಟ್ ವಿರೋಧಿಸಿ ನಿರ್ಣಯ ತೆಗೆದುಕೊಳ್ಳಲು ಸರ್ಕಾರ ನಿರ್ಧರಿಸಿದೆ.

ವೈದ್ಯಕೀಯ ಕೋರ್ಸ್‌ಗಳ ಪ್ರವೇಶಕ್ಕೆ ರಾಜ್ಯ ಸರ್ಕಾರವೇ ಪರೀಕ್ಷೆ ನಡೆಸಲು ಸಿದ್ಧವಿದೆ. ಅದಕ್ಕೆ ಅವಕಾಶ ನೀಡಬೇಕು ಎಂಬ ಮತ್ತೊಂದು ನಿರ್ಣಯವನ್ನು ತೆಗೆದುಕೊಳ್ಳಲು ಸಭೆ ಅನುಮೋದನೆ ನೀಡಿದೆ ಎಂದು ಮೂಲಗಳು ತಿಳಿಸಿವೆ.

ಕೇಂದ್ರ ಸರ್ಕಾರದ ‘ಒಂದು ದೇಶ, ಒಂದು ಚುನಾವಣೆ’ ಪರಿಕಲ್ಪನೆ ಮತ್ತು ಜನಸಂಖ್ಯೆ ಆಧಾರದಲ್ಲಿ ಲೋಕಸಭೆ ಹಾಗೂ ವಿಧಾನಸಭೆ ಕ್ಷೇತ್ರಗಳ ಮರು ವಿಂಗಡನೆ ಪ್ರಕ್ರಿಯೆಯನ್ನು ವಿರೋಧಿಸಿ ಅಧಿವೇಶನದಲ್ಲಿ ನಿರ್ಣಯ ತೆಗೆದುಕೊಳ್ಳಲು ಸಚಿವ ಸಂಪುಟ ಸಭೆ ತೀರ್ಮಾನಿಸಿದೆ ಎಂದು ಮೂಲಗಳು ಹೇಳಿವೆ.

ವರ್ಷಧಾರೆ.... ಹಾವೇರಿ ತಾಲ್ಲೂಕಿನ ದೇವಗಿರಿ ಬಳಿ ವರದಾ ನದಿ ತುಂಬಿ ಹರಿಯುತ್ತಿದ್ದು, ಜಮೀನುಗಳಿಗೆ ನೀರು ನುಗ್ಗಿದೆ

ಪ್ರಜಾವಾಣಿ ಚಿತ್ರ: ಮಾಲತೇಶ ಇಚ್ಚಂಗಿ

‘ಗ್ರೇಟರ್ ಬೆಂಗಳೂರು’ ಮಸೂದೆಗೆ ಸರ್ಕಾರ ಸಮ್ಮತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ನಗರಕ್ಕೆ ಮೂರು ಹಂತದಲ್ಲಿ ಹೊಸ ಆಡಳಿತ ವ್ಯವಸ್ಥೆ ಕಲ್ಪಿಸುವ ‘ಗ್ರೇಟರ್ ಬೆಂಗಳೂರು ಆಡಳಿತ ಮಸೂದೆ– 2024’ಕ್ಕೆ ಸಂಪುಟ ಸಭೆ ಒಪ್ಪಿಗೆ ನೀಡಿದೆ.

ಮಂಗಳವಾರವೇ ವಿಧಾನಸಭೆಯಲ್ಲಿ ಈ ಮಸೂದೆಯು ಮಂಡನೆಯಾಗಲಿದೆ.

ಸೋಮವಾರ ನಡೆದ ಸಂಪುಟ ಸಭೆಯಲ್ಲಿ ಈ ಮಸೂದೆಗೆ ಅನುಮೋದನೆ ದೊರೆತಿದೆ.

ಒಂದರಿಂದ 10 ಪಾಲಿಕೆಗಳನ್ನು ರಚಿಸುವ ಅಧಿಕಾರ ವನ್ನು ಸರ್ಕಾರ ಹೊಂದಲಿದ್ದು, ಪ್ರತಿ ಪಾಲಿಕೆಯ ಮೇಯರ್ ಹಾಗೂ ಉಪ ಮೇಯರ್ ಅಧಿಕಾರದ ಅವಧಿ ಐದು ವರ್ಷಗಳಾಗಲಿದೆ. ವಾರ್ಡ್‌ಗಳ ಸಮಿತಿಗೆ ಅಭಿವೃದ್ಧಿ ಕಾಮಗಾರಿಗಳನ್ನು ನಿರ್ಧರಿಸುವ ಅಧಿಕಾರವನ್ನು ಕಾಯ್ದೆ ನೀಡಲಿದೆ.

‘ಗ್ರೇಟರ್ ಬೆಂಗಳೂರು ಆಡಳಿತ ಮಸೂದೆ–2024’ರಲ್ಲಿ ಕಾಯ್ದೆಯಾದರೆ, ಮೂರು ಹಂತದ ಆಡಳಿತ ವ್ಯವಸ್ಥೆಯನ್ನು ಕಲ್ಪಿಸುವ ‘ಗ್ರೇಟರ್ ಬೆಂಗಳೂರು ಪ್ರಾಧಿಕಾರ’ (ಜಿಬಿಎ) ರಚನೆಯಾಗುತ್ತದೆ. ಪ್ರಾಧಿಕಾರ, ಪಾಲಿಕೆ ಹಾಗೂ ವಾರ್ಡ್‌ಗಳೆಂಬ ಮೂರು ಹಂತದಲ್ಲಿ ಆಡಳಿತ ವ್ಯವಸ್ಥೆ ಇರಲಿದೆ. ಬೃಹತ್ ಬೆಂಗಳೂರು ಮಹಾ ನಗರ ಪಾಲಿಕೆ ವ್ಯಾಪ್ತಿಯನ್ನು ‘ಗ್ರೇಟರ್ ಬೆಂಗಳೂರು’ ಎಂದು ಕರೆಯಲಾಗುತ್ತದೆ.

ಜಿಬಿಎಗೆ ಮುಖ್ಯಮಂತ್ರಿ ಅಧ್ಯಕ್ಷರಾಗಲಿದ್ದು, ಬೆಂಗಳೂರು ಅಭಿವೃದ್ಧಿ ಸಚಿವರು ಉಪಾಧ್ಯಕ್ಷರಾಗಿರುತ್ತಾರೆ. ಗೃಹ, ನಗರಾಭಿವೃದ್ಧಿ, ಸಾರಿಗೆ, ಇಂಧನ ಸಚಿವರು ಹಾಗೂ ಗ್ರೇಟರ್ ಬೆಂಗಳೂರು ವ್ಯಾಪ್ತಿಯ ಶಾಸಕರು, ಮುಖ್ಯ ಆಯುಕ್ತರು, ಮೇಯರ್‌ಗಳು, ಪ್ರತಿ ಪಾಲಿಕೆಯಿಂದ ನಾಮನಿರ್ದೇಶನಗೊಳ್ಳುವ ಇಬ್ಬರು ಸದಸ್ಯರು, ಬಿಡಿಎ, ಜಲಮಂಡಳಿ, ಬಿಎಂಟಿಸಿ, ಬಿಎಂಆರ್‌ಸಿಎಲ್, ಬೆಸ್ಕಾಂ, ನಗರ ಪೊಲೀಸ್ ಕಮಿಷನರ್, ಬಿಎಂಎಲ್‌ಟಿಎ ಸಿಇಒ, ಬಿಎಸ್‌ಡಬ್ಲ್ಯುಎಂಎಲ್ ಎಂಡಿ, ಗ್ರೇಟರ್ ಬೆಂಗಳೂರು ನಗರ ಯೋಜನೆಯ ಮುಖ್ಯ ನಗರ ಯೋಜಕ, ಗ್ರೇಟರ್ ಬೆಂಗಳೂರಿನ ಪ್ರಧಾನ ಎಂಜಿನಿಯರ್, ಅಗ್ನಿಶಾಮಕ ದಳದ ನಿರ್ದೇಶಕರು ಸದಸ್ಯರಾಗಿರುತ್ತಾರೆ.

4ನೇ ಪುಟ ನೋಡಿ

ಸರ್ಕಾರದ ಕೈಯಲ್ಲಿ ಪಾಲಿಕೆ ‘ಅಧಿಕಾರ’

ಹೊಸ ಕಾಯ್ದೆ ಮೂಲಕ ರಚನೆಯಾಗುವ ಪಾಲಿಕೆಯಲ್ಲಿ ತೆಗೆದುಕೊಳ್ಳಲಾಗುವ ನಿರ್ಣಯವನ್ನು ತಿರಸ್ಕರಿಸಬಹುದಾದ ಅಧಿಕಾರವನ್ನು ರಾಜ್ಯ ಸರ್ಕಾರ ಹೊಂದಿರುತ್ತದೆ. ಪಾಲಿಕೆ ವಜಾಗೊಳಿಸುವ ಅಧಿಕಾರವೂ ಸರ್ಕಾರಕ್ಕಿರುತ್ತದೆ.

ವಜಾಗೊಂಡ ಪಾಲಿಕೆಗೆ ಆಡಳಿತಾಧಿಕಾರಿಯನ್ನು ಸರ್ಕಾರ ನೇಮಿಸಬಹುದು. ಅವರಿಗೆ 5 ಸದಸ್ಯರ ಸಲಹಾ ಸಮಿತಿಯನ್ನು ರಚಿಸಬಹುದು. ಪಾಲಿಕೆಗಳು ಕೈಗೊಳ್ಳುವ ಅಭಿವೃದ್ಧಿ ಕಾರ್ಯ, ಆರ್ಥಿಕ ವೆಚ್ಚದ ಮೇಲೆ ಸರ್ಕಾರ ನಿಗಾ ವಹಿಸಿ, ಸರಿ ಇಲ್ಲ ಎಂದಾದರೆ ಆ ಬಗ್ಗೆ ಕ್ರಮ ಕೈಗೊಳ್ಳಬಹುದಾಗಿದೆ.

ನಿಷೇಧ ಹಿಂದಕ್ಕೆ: ಸರ್ಕಾರಿ ಉದ್ಯೋಗಿಗಳಿಗೂ ಸಂಘ ಸೇರಲು ಅವಕಾಶ

ನೌಕರರಿಗೆ ಆರ್‌ಎಸ್‌ಎಸ್ ಮುಕ್ತ

ನವದೆಹಲಿ (ಎಎಫ್‌ಪಿ/ಪಿಟಿಐ): ರಾಷ್ಟ್ರೀಯ ಸ್ವಯಂ ಸೇವಕ ಸಂಘದ (ಆರ್‌ಎಸ್‌ಎಸ್) ಚಟುವಟಿಕೆಗಳಲ್ಲಿ ಸರ್ಕಾರಿ ನೌಕರರು ಭಾಗವಹಿಸುವುದು ಮತ್ತು ಸದಸ್ಯತ್ವ ಪಡೆಯುವುದಕ್ಕೆ ದಶಕಗಳ ಹಿಂದೆ ವಿಧಿಸಲಾಗಿದ್ದ ನಿಷೇಧವನ್ನು ಕೇಂದ್ರ ಸರ್ಕಾರ ವಾಪಸ್ ಪಡೆದಿದೆ.

ಈ ಸಂಬಂಧ ಸರ್ಕಾರ ಜುಲೈ 9ರಂದೇ ಹೊರಡಿಸಿದ್ದ ಜ್ಞಾಪನಾ ಪತ್ರ ಸೋಮವಾರ ಬಹಿರಂಗವಾಗಿದೆ.

ಭಾರತೀಯ ಸೇವಾ ನಿಯಮವು 1966ರಿಂದ ಸರ್ಕಾರಿ ಸಿಬ್ಬಂದಿಗೆ ಆರ್‌ಎಸ್‌ಎಸ್ ಮತ್ತು ‘ಜಮಾತ್–ಎ–ಇಸ್ಲಾಮಿ’ ಸಂಘಟನೆಗಳ ಸದಸ್ಯತ್ವ ಪಡೆಯುವುದು ಮತ್ತು ಅವುಗಳ ಕಾರ್ಯ ಚಟುವಟಿಕೆಗಳಲ್ಲಿ ಭಾಗವಹಿಸುವುದನ್ನು ನಿಷೇಧಿಸಿತ್ತು.

ಆರ್‌ಎಸ್‌ಎಸ್ ಸದಸ್ಯತ್ವಕ್ಕೆ ಸಂಬಂಧಿಸಿದ ನಿಷೇಧವನ್ನು ತೆರವುಗೊಳಿಸಿ ಕೇಂದ್ರ ಸರ್ಕಾರ ಹೊರಡಿಸಿರುವ ಜ್ಞಾಪನಾ ಪತ್ರವನ್ನು ಬಿಜೆಪಿಯ ಐ.ಟಿ ವಿಭಾಗದ ಮುಖ್ಯಸ್ಥ ಅಮಿತ್ ಮಾಳವೀಯಾ ‘ಎಕ್ಸ್’ನಲ್ಲಿ ಹಂಚಿಕೊಂಡಿದ್ದಾರೆ.

‘58 ವರ್ಷಗಳ ಹಿಂದೆ ಅಸಾಂವಿಧಾನಿಕವಾಗಿ ಹೊರಡಿಸಲಾಗಿದ್ದ ಆದೇಶವನ್ನು ಈ ಮೂಲಕ ತೆರವುಗೊಳಿಸಲಾಗಿದೆ’ ಎಂದು ಹೇಳಿದ್ದಾರೆ.

ಆದರೆ ಸರ್ಕಾರದ ಜ್ಞಾಪನಾ ಪತ್ರದಲ್ಲಿ ‘ಜಮಾತ್–ಎ–ಇಸ್ಲಾಮಿ’ ಬಗ್ಗೆ ಯಾವುದೇ ಉಲ್ಲೇಖ ಇಲ್ಲದಿರುವುದು ವಿರೋಧ ಪಕ್ಷಗಳ ಆಕ್ರೋಶಕ್ಕೆ ಕಾರಣವಾಗಿದೆ.

ಮಹಾತ್ಮ ಗಾಂಧಿ ಹತ್ಯೆ ಸೇರಿದಂತೆ ಮೂರು ಸಂದರ್ಭಗಳಲ್ಲಿ ಆರ್‌ಎಸ್‌ಎಸ್ ಅನ್ನು ಕಾನೂನುಬಾಹಿರ ಸಂಘಟನೆ ಎಂದು ಘೋಷಿಸಲಾಗಿತ್ತು.

ದೇಶವು ಧರ್ಮ ನಿರಪೇಕ್ಷ ಎಂಬುದರ ಬದಲಿಗೆ ಹಿಂದೂ ರಾಷ್ಟ್ರವಾಗಿಸಬೇಕು ಎಂಬುದು ಆರ್‌ಎಸ್‌ಎಸ್ ಪ್ರತಿಪಾದನೆ. ಇದು ದೇಶವನ್ನು ವಿಭಜಿಸುವ ಉದ್ದೇಶ ಹೊಂದಿದೆ ಎಂಬುದು ವಿಮರ್ಶಕರ ಆರೋಪವಾಗಿದೆ.

ಇನ್ನೊಂದು ಸುದ್ದಿ 11

> ದೇಶದ ಸಂವಿಧಾನವನ್ನು ಬದಲಿಸಬೇಕು ಎಂಬ ತನ್ನ ನೀಚ ಉದ್ದೇಶವನ್ನು ಚುನಾವಣೆಯಲ್ಲಿ ಜನರು ತಿರಸ್ಕರಿಸಿದ್ದರಿಂದ ಸರ್ಕಾರ ಈ ಕ್ರಮ ತೆಗೆದುಕೊಂಡಿರಬಹುದು
> **ಮಲ್ಲಿಕಾರ್ಜುನ ಖರ್ಗೆ**, ಕಾಂಗ್ರೆಸ್ ಅಧ್ಯಕ್ಷ

> ಆರ್‌ಎಸ್‌ಎಸ್‌ನ ಪ್ರತಿಯೊಬ್ಬರು ಹಿಂದುತ್ವದ ಮೇಲೆ ಪ್ರತಿಜ್ಞೆ ಮಾಡುತ್ತಾರೆ. ಅವರಿಗೆ ದೇಶಕ್ಕಿಂತ ಹಿಂದುತ್ವವೇ ಮೊದಲು. ಹೀಗಿರುವಾಗ ಆರ್‌ಎಸ್‌ಎಸ್‌ನ ಸದಸ್ಯತ್ವವನ್ನು ಪಡೆಯುವ ಸರ್ಕಾರಿ ಸಿಬ್ಬಂದಿ ದೇಶಕ್ಕೆ ಹೇಗೆ ನಿಷ್ಠರಾಗಿರುತ್ತಾರೆ
> **ಅಸಾದುದ್ದೀನ್ ಓವೈಸಿ**, ಎಐಎಂಐಎಂ ಅಧ್ಯಕ್ಷ

> ಇನ್ನು ಮುಂದೆ ಅಧಿಕಾರಿಗಳು ‘ನಿಕ್ಕರ್’ ಧರಿಸಿ ಬರಬಹುದು
> **ಜೈರಾಮ್ ರಮೇಶ್**, ಕಾಂಗ್ರೆಸ್‌ನ ಪ್ರಧಾನ ಕಾರ್ಯದರ್ಶಿ

ಸರಿ ಉತ್ತರ ಗುರುತಿಸಲು ತಂಡ

ನವದೆಹಲಿ (ಪಿಟಿಐ): ನೀಟ್–ಯುಜಿ 2024 ಪರೀಕ್ಷೆಯಲ್ಲಿ ಕೇಳಿದ್ದ ಒಂದು ಪ್ರಶ್ನೆಗೆ ಸರಿಯಾದ ಉತ್ತರ ಏನು ಎಂಬ ಬಗ್ಗೆ ವರದಿಯೊಂದನ್ನು ಸಲ್ಲಿಸಲು ಮೂವರು ತಜ್ಞರ ತಂಡವೊಂದನ್ನು ರಚಿಸುವಂತೆ ಐಐಟಿ–ದೆಹಲಿಯ ನಿರ್ದೇಶಕರಿಗೆ ಸುಪ್ರೀಂ ಕೋರ್ಟ್ ಸೂಚನೆ ನೀಡಿದೆ. 11

ಜಿಎಸ್‌ಟಿ ಬಾಕಿ ಇಲ್ಲ: ಕೇಂದ್ರ ಸರ್ಕಾರ

ನವದೆಹಲಿ: ‘ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ವ್ಯವಸ್ಥೆಯಿಂದ ಆಗುವ ವರಮಾನ ನಷ್ಟಕ್ಕೆ ಎಲ್ಲ ರಾಜ್ಯಗಳಿಗೆ ಪರಿಹಾರ ನೀಡಲಾಗಿದೆ. ಕರ್ನಾಟಕ ರಾಜ್ಯಕ್ಕೆ ಯಾವುದೇ ಪರಿಹಾರ ಬಾಕಿ ಇಲ್ಲ’ ಎಂದು ಕೇಂದ್ರ ಹಣಕಾಸು ಖಾತೆ ರಾಜ್ಯ ಸಚಿವ ಪಂಕಜ್ ಚೌಧರಿ ಸ್ಪಷ್ಟಪಡಿಸಿದರು. 12

‘ಟ್ರಂಪ್ ಸೋಲಿಸಲು ದೇಶ ಒಗ್ಗೂಡಿಸುವೆ’

ವಾಷಿಂಗ್ಟನ್ (ಪಿಟಿಐ): ಅಮೆರಿಕದ ಅಧ್ಯಕ್ಷ ಜೋ ಬೈಡನ್ ಅವರು ನವೆಂಬರ್‌ನಲ್ಲಿ ನಡೆಯಲಿರುವ ಚುನಾವಣೆಗೆ ಡೆಮಾಕ್ರಟಿಕ್ ಪಕ್ಷದ ಅಭ್ಯರ್ಥಿಯಾಗಿ ತಮ್ಮ ಹೆಸರನ್ನು ಅನುಮೋದಿಸಿರುವುದಕ್ಕೆ ಉಪಾಧ್ಯಕ್ಷೆ ಕಮಲಾ ಹ್ಯಾರಿಸ್ ಹರ್ಷ ವ್ಯಕ್ತಪಡಿಸಿದ್ದಾರೆ. 12

ದಲಿತ ಯುವಕನ ಕೈ ಕಡಿದರು

ಪ್ರಜಾವಾಣಿ ವಾರ್ತೆ

ಕನಕಪುರ (ರಾಮನಗರ): ಮಾಳಗಾಳು ಗ್ರಾಮದಲ್ಲಿ ಒಕ್ಕಲಿಗ ಸಮುದಾಯದ ಯುವಕರ ಗುಂಪೊಂದು ಭಾನುವಾರ ರಾತ್ರಿ ಪರಿಶಿಷ್ಟ ಜಾತಿ ಯುವಕನ ಮುಂಗೈ ಕತ್ತರಿಸಿ ಹಾಕಿದೆ.

ದಲಿತರ ಕಾಲೊನಿಗೆ ನುಗ್ಗಿದ ಗುಂಪು ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷ ಹಾಗೂ ಕಾಂಗ್ರೆಸ್ ಮುಖಂಡ ವೈರಮುಡಿ ಅವರ ಪುತ್ರ ಅನೀಶ್ ಮೇಲೆ ಮಾರಕಾಸ್ತ್ರಗಳಿಂದ ಹಲ್ಲೆ ನಡೆಸಿದೆ. ಅನೀಶ್ ಎಡಗೈ ತುಂಡಾಗಿದ್ದು ಬೆಂಗಳೂರಿನ ಸೇಂಟ್ ಜಾನ್ಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಹಲ್ಲೆಯಲ್ಲಿ ತೀವ್ರವಾಗಿ ಗಾಯಗೊಂಡಿರುವ ಅವರ ಮಾವ, ಪಿಎಲ್‌ಡಿ ಬ್ಯಾಂಕ್ ಉದ್ಯೋಗಿ ಲಕ್ಷ್ಮಣ್ ಹಾಗೂ ಗೋವಿಂದರಾಜು ಕನಕಪುರ ತಾಲ್ಲೂಕು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಮಹಿಳೆಯರು ಸೇರಿದಂತೆ ಏಳು ಮಂದಿ ಮೇಲೆ ಗುಂಪು ಹಲ್ಲೆ ನಡೆಸಿದೆ. ಮನೆ ಮುಂದೆ ನಿಲ್ಲಿಸಿದ್ದ ಎರಡು ಆಟೊಗಳನ್ನು ಜಖಂಗೊಳಿಸಿದೆ.

7ನೇ ಪುಟ ನೋಡಿ

‘ಮಾಲ್ ಪ್ರವೇಶಕ್ಕೆ ಮಾರ್ಗಸೂಚಿ ಶೀಘ್ರ’

ಬೆಂಗಳೂರು: ‘ರಾಜ್ಯದ ಮಾಲ್‌ಗಳಿಗೆ ಭೇಟಿ ನೀಡುವಾಗ ನಿರ್ದಿಷ್ಟ ವಸ್ತ್ರ ಧರಿಸುವಂತೆ ನಿರ್ಬಂಧ ಹೇರಿಕೆಗೆ ತಡೆ ಒಡ್ಡಿ ಮಾರ್ಗಸೂಚಿ ಹೊರಡಿಸಲಾಗುವುದು’ ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಹೇಳಿದರು.

ವಿಧಾನಸಭೆಯಲ್ಲಿ ಈ ವಿಷಯ ಪ್ರಕಟಿಸಿದ ಅವರು, ‘ಪಂಚೆ ನಮ್ಮ ಸಂಸ್ಕೃತಿ. ಅದಕ್ಕೆ ಪೂರಕವಾಗಿ ನಿಯಮ ರೂಪಿಸಲಾಗುವುದು’ ಎಂದರು.

7ನೇ ಪುಟ ನೋಡಿ

ಚಿನಕುರುಳಿ

ಪ್ರಕಾಶ್ ಶೆಟ್ಟಿ



ಹೆಸರು ಪ್ರದರ್ಶನ: ‘ಸುಪ್ರೀಂ’ ತಡೆ

ನವದೆಹಲಿ (ಪಿಟಿಐ): ‘ಕಾವಡ್ ಯಾತ್ರೆ’ಯ ಮಾರ್ಗಗಳಲ್ಲಿರುವ ತಿಂಡಿ–ತಿನಿಸುಗಳ ಮಳಿಗೆಗಳ ಮಾಲೀಕರು ತಮ್ಮ ಹೆಸರು ಮತ್ತು ಇತರ ವಿವರಗಳನ್ನು ಮಳಿಗೆಗಳ ಮುಂದೆ ಪ್ರದರ್ಶಿಸುವಂತೆ ಬಿಜೆಪಿ ಆಡಳಿತವಿರುವ ಉತ್ತರ ಪ್ರದೇಶ ಮತ್ತು ಉತ್ತರಾಖಂಡ ರಾಜ್ಯಗಳಲ್ಲಿ ಹೊರಡಿಸಿದ್ದ ನಿರ್ದೇಶನಗಳಿಗೆ ಸುಪ್ರೀಂ ಕೋರ್ಟ್ ಸೋಮವಾರ ಮಧ್ಯಂತರ ತಡೆಯಾಜ್ಞೆ ನೀಡಿದೆ.

ಉತ್ತರ ಪ್ರದೇಶ, ಉತ್ತರಾಖಂಡ ಮತ್ತು ಮಧ್ಯಪ್ರದೇಶ ಸರ್ಕಾರಗಳಿಗೆ ನೋಟಿಸ್ ಜಾರಿಗೊಳಿಸಿರುವ ನ್ಯಾಯಮೂರ್ತಿಗಳಾದ ಹೃಷಿಕೇಶ್ ರಾಯ್ ಮತ್ತು ಎಸ್‌ವಿಎನ್ ಭಟ್ಟಿ ಅವರಿದ್ದ ಪೀಠ, ‘ಆದಾಗ್ಯೂ, ಮಳಿಗೆಗಳು ತಮ್ಮಲ್ಲಿನ ತಿಂಡಿಗಳು ಸಸ್ಯಾಹಾರಿ ಅಥವಾ ಮಾಂಸಾಹಾರಿ ಎಂಬುದನ್ನು ತಿಳಿಸಲು ಹೆಸರು ಪ್ರದರ್ಶಿಸುವ ಅಗತ್ಯವಿದೆ’ ಎಂದು ಹೇಳಿತು.

ಮಧ್ಯ ಪ್ರದೇಶದ ಉಜ್ಜಯಿನಿಯಲ್ಲಿನ ಅಂಗಡಿಗಳ ಮುಂದೆ ಮಾಲೀಕರ ಹೆಸರು, ಮೊಬೈಲ್ ಸಂಖ್ಯೆಯನ್ನು ಪ್ರದರ್ಶಿಸಬೇಕು ಎಂದು ಅಲ್ಲಿನ ಮಹಾನಗರ ಪಾಲಿಕೆ ಆದೇಶಿಸಿತ್ತು. ಇದರಿಂದ ಮಧ್ಯ ಪ್ರದೇಶ ಸರ್ಕಾರಕ್ಕೂ ನೋಟಿಸ್ ಜಾರಿಗೊಳಿಸಿದೆ.

ಉತ್ತರ ಪ್ರದೇಶ ಸರ್ಕಾರದ ನಿರ್ದೇಶನಕ್ಕೆ ವಿಪಕ್ಷಗಳು ಹಾಗೂ ಆಡಳಿತಾರೂಢ ಮೈತ್ರಿಕೂಟದ ಅಂಗಪಕ್ಷವಾಗಿರುವ ಆರ್‌ಎಲ್‌ಡಿ ಆಕ್ಷೇಪ ವ್ಯಕ್ತಪಡಿಸಿದ್ದವು. ಇದು ‘ಧಾರ್ಮಿಕತಾರತಮ್ಯ’ವನ್ನು ಉತ್ತೇಜಿಸುತ್ತದೆ ಎಂದು ಆರೋಪಿಸಿದ್ದವು. ಇದರ ಬೆನ್ನಲ್ಲೇ, ಸುಪ್ರೀಂ ಕೋರ್ಟ್‌ನ ಆದೇಶ ಹೊರಬಿದ್ದಿದೆ.

‘ಇಂತಹ ನಿರ್ದೇಶನಗಳ ಜಾರಿಗೆ ತಡೆ ನೀಡುವ ಮಧ್ಯಂತರ ಆದೇಶ ಹೊರಡಿಸುವುದು ಸೂಕ್ತವೆಂದು ನಾವು ಪರಿಗಣಿಸುತ್ತೇವೆ. ತಿಂಡಿ ತಿನಿಸುಗಳ ಮಾರಾಟಗಾರರು ಆಹಾರದ ಹೆಸರನ್ನು ಪ್ರದರ್ಶಿಸಬೇಕಾಗಬಹುದು. ಆದರೆ ಮಾಲೀಕರು ಮತ್ತು ಸಿಬ್ಬಂದಿಯ ಹೆಸರನ್ನು ಪ್ರದರ್ಶಿಸುವಂತೆ ಒತ್ತಾಯಿಸಬಾರದು’ ಎಂದು ಹೇಳಿದ ಪೀಠ ಮುಂದಿನ ವಿಚಾರಣೆಯನ್ನು ಶುಕ್ರವಾರಕ್ಕೆ ನಿಗದಿಪಡಿಸಿತು.

ಸಂಸದೆ ಮಹುವಾ ಮೊಯಿತ್ರಾ, ಪ್ರಾಧ್ಯಾಪಕ ಅಪೂರ್ವಾನಂದ ಝಾ ಮತ್ತು ಅಂಕಣಕಾರ ಆಕಾರ್ ಪಟೇಲ್ ಅಲ್ಲದೆ ಅಸೋಸಿಯೇಷನ್ ಆಫ್ ಪ್ರೊಟೆಕ್ಷನ್ ಆಫ್ ಸಿವಿಲ್ ರೈಟ್ಸ್ ಸಲ್ಲಿಸಿರುವ ಅರ್ಜಿಗಳ ವಿಚಾರಣೆಯನ್ನು ಪೀಠವು ನಡೆಸಿತು.

ಇನ್ನೊಂದು ಸುದ್ದಿ 11

ಪ್ರಮುಖ ಅಂಶಗಳು

- ಉತ್ತರ ಪ್ರದೇಶ, ಉತ್ತರಾಖಂಡ ಮತ್ತು ಮಧ್ಯಪ್ರದೇಶ ಸರ್ಕಾರಗಳಿಗೆ ನೋಟಿಸ್
- ಯಾತ್ರಿಕರು ಶಿವನನ್ನು ಪೂಜಿಸುತ್ತಾರೆ ಅಲ್ಲವೇ, ಆಹಾರವನ್ನು ನಿರ್ದಿಷ್ಟ ಸಮುದಾಯದವರು ಬೆಳೆಯಬೇಕು, ತಯಾರಿಸಬೇಕು, ಬಡಿಸಬೇಕೆಂದು ಬಯಸುವರೇ: ಪೀಠ ಪ್ರಶ್ನೆ
- ಹಿಂದೂಗಳು ನಡೆಸುತ್ತಿರುವ ಅನೇಕ ಸಸ್ಯಾಹಾರಿ ಹೋಟೆಲ್‌ಗಳು ಮತ್ತು ರೆಸ್ಟೊರೆಂಟ್‌ಗಳಲ್ಲಿ ಮುಸ್ಲಿಂ ಹಾಗೂ ದಲಿತ ನೌಕರರು ಇದ್ದಾರೆ. ಇಂತಹ ನಿರ್ದೇಶನಗಳನ್ನು ನೀಡಲು ಕಾನೂನಿನಲ್ಲಿ ಯಾವುದೇ ಅವಕಾಶವಿಲ್ಲ: ಹಿರಿಯ ವಕೀಲ ಅಭಿಷೇಕ್ ಸಿಂಘ್ವಿ

ಶೇ 6.5ರಿಂದ ಶೇ 7ರಷ್ಟು ಬೆಳವಣಿಗೆ ಸಾಧ್ಯತೆ

ಜಿಡಿಪಿ ಅಂದಾಜು ತಗ್ಗಿಸಿದ ಆರ್ಥಿಕ ಸಮೀಕ್ಷೆ

ನವದೆಹಲಿ (ಪಿಟಿಐ): ಪ್ರಸಕ್ತ ಹಣಕಾಸು ವರ್ಷದಲ್ಲಿ ದೇಶದ ಒಟ್ಟು ಆಂತರಿಕ ಉತ್ಪಾದನೆಯ (ಜಿಡಿಪಿ) ಬೆಳವಣಿಗೆ ದರವು ಶೇಕಡ 6.5ರಿಂದ ಶೇ 7ರಷ್ಟು ಇರಲಿದೆ ಎಂದು ಆರ್ಥಿಕ ಸಮೀಕ್ಷೆ ವರದಿಯಲ್ಲಿ ಅಂದಾಜಿಸಲಾಗಿದೆ.

ದೇಶದಲ್ಲಿ ಇನ್ನಷ್ಟು ಉದ್ಯೋಗ ಸೃಷ್ಟಿಯ ಅಗತ್ಯ ಇದೆ ಎಂಬುದನ್ನು ಕೂಡ ವರದಿಯಲ್ಲಿ ಹೇಳಲಾಗಿದೆ. ದೇಶದ ರಫ್ತು ಹೆಚ್ಚಿಸಲು ಚೀನಾದಿಂದ ಹೆಚ್ಚಿನ ವಿದೇಶಿ ನೇರ ಬಂಡವಾಳ ಹರಿದುಬಂದರೆ ಚೆನ್ನ ಎಂಬ ಮಾತು ವರದಿಯಲ್ಲಿದೆ.

ಆರ್ಥಿಕ ಸಮೀಕ್ಷೆಯ ವರದಿಯನ್ನು ಕೇಂದ್ರ ಬಜೆಟ್ ಮಂಡನೆಯ ಒಂದು ದಿನ ಮೊದಲು ಸಂಸತ್ತಿನಲ್ಲಿ ಮಂಡಿಸಲಾಯಿತು.

ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಅಂದಾಜಿನ ಪ್ರಕಾರ ಪ್ರಸಕ್ತ ಹಣಕಾಸು ವರ್ಷದಲ್ಲಿ ಆರ್ಥಿಕ ಬೆಳವಣಿಗೆ ದರವು ಶೇ 7.2ರಷ್ಟು ಇರಲಿದೆ. ಆದರೆ ಆರ್ಥಿಕ ಸಮೀಕ್ಷೆಯ ಅಂದಾಜು ಇದಕ್ಕಿಂತ ಕಡಿಮೆ ಇದೆ. ಅಲ್ಲದೆ, ಹಿಂದಿನ ಹಣಕಾಸು ವರ್ಷದಲ್ಲಿ ದಾಖಲಾದ ಶೇ 8.2ರಷ್ಟು ಬೆಳವಣಿಗೆಗಿಂತಲೂ ಈಗಿನ ಅಂದಾಜು ಕಡಿಮೆ ಇದೆ.

ಜಿಡಿಪಿ ಬೆಳವಣಿಗೆ ದರದ ಅಂದಾಜು ಕಡಿಮೆ ಮಟ್ಟದಲ್ಲಿ ಇದೆ ಎಂಬುದನ್ನು ಉಲ್ಲೇಖಿಸಿರುವ ವರದಿಯು, ಖಾಸಗಿ ವಲಯದಿಂದ ಆಗುವ ಹೂಡಿಕೆಗಳ ಬೆಳವಣಿಗೆ ಪ್ರಮಾಣವು ಕಡಿಮೆ ಇರುವುದು ಹಾಗೂ ಹವಾಮಾನದಲ್ಲಿನ ಅನಿಶ್ಚಿತತೆಗಳು ಮಿತವಾದ ಈ ಅಂದಾಜಿಗೆ ಕಾರಣ ಎಂದು ಹೇಳಿದೆ.

ದುಡಿಯುವ ವರ್ಗದ ಜನರ ಸಂಖ್ಯೆಯು ಹೆಚ್ಚುತ್ತಿದೆ. ಈ ವರ್ಗದ ಬೇಡಿಕೆಗಳಿಗೆ ಸ್ಪಂದಿಸಲು ದೇಶವು ಕೃಷಿಯೇತರ ವಲಯಗಳಲ್ಲಿ 2030ರ ವರೆಗೆ ವಾರ್ಷಿಕವಾಗಿ ಸರಾಸರಿ 78.5 ಲಕ್ಷ ಉದ್ಯೋಗ ಸೃಷ್ಟಿಸಬೇಕು ಎಂದು ವರದಿಯು ಹೇಳಿದೆ.

ಚೀನಾದಿಂದ ಹೂಡಿಕೆ ಹೆಚ್ಚಲಿ

ಚೀನಾದಿಂದ ಆಗುವ ನೇರ ಬಂಡವಾಳ ಹೂಡಿಕೆಯನ್ನು (ಎಫ್‌ಡಿಐ) ಹೆಚ್ಚು ಮಾಡುವ ಅಗತ್ಯ ಇದೆ ಎಂಬ ಮಾತನ್ನು ವರದಿಯು ಹೇಳಿದೆ. ಆದರೆ, ಚೀನಾದಿಂದ ಆಗುವ ಆಮದು ಪ್ರಮಾಣವನ್ನು ತಗ್ಗಿಸಬೇಕಾಗಿದೆ ಎಂದು ಕೂಡ ಹೇಳಿದೆ.

2020ರಲ್ಲಿ ಗಡಿಯಲ್ಲಿ ಸಂಘರ್ಷ ಉಂಟಾದಾಗಿನಿಂದಲೂ ಭಾರತ–ಚೀನಾ ಸಂಬಂಧ ಚೆನ್ನಾಗಿಲ್ಲ. ಭಾರತವು ರಫ್ತು ಹೆಚ್ಚು ಮಾಡಬೇಕು ಎಂದಾದರೆ, ಚೀನಾದ ಪೂರೈಕೆ ವ್ಯವಸ್ಥೆಯಲ್ಲಿ ತಾನು ಸೇರಿಕೊಳ್ಳಬೇಕು ಅಥವಾ ಚೀನಾದಿಂದ ನೇರ ಬಂಡವಾಳ ಹೂಡಿಕೆ ಹೆಚ್ಚಾಗುವಂತೆ ಮಾಡಬೇಕು ಎಂದು ವರದಿಯು ಸಲಹೆ ನೀಡಿದೆ.

‘ಪೂರ್ವ ಏಷ್ಯಾದ ಕೆಲವು ಅರ್ಥ ವ್ಯವಸ್ಥೆಗಳು ಈ ಹಿಂದೆ ಮಾಡಿದ ರೀತಿಯಲ್ಲಿ, ಚೀನಾದಿಂದ ನೇರ ಬಂಡವಾಳ ಹೂಡಿಕೆ ಹೆಚ್ಚಾಗುವಂತೆ ಮಾಡಿ, ಭಾರತದಿಂದ ಅಮೆರಿಕಕ್ಕೆ ರಫ್ತು ಹೆಚ್ಚುವಂತೆ ಮಾಡುವುದು ಹೆಚ್ಚು ಉತ್ತಮವಾಗಿರುವಂತೆ ಕಾಣುತ್ತದೆ’ ಎಂದು ವರದಿಯಲ್ಲಿ ವಿವರಿಸಲಾಗಿದೆ.

ಇಂದು ಕೇಂದ್ರ ಬಜೆಟ್

ನವದೆಹಲಿ: ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಮಂಗಳವಾರ ಬೆಳಿಗ್ಗೆ 11 ಗಂಟೆಗೆ ಬಜೆಟ್ ಮಂಡಿಸಲಿದ್ದಾರೆ. ಅವರು ಸತತವಾಗಿ ಮಂಡಿಸಲಿರುವ ಏಳನೇ ಬಜೆಟ್ ಇದಾಗಿದೆ.

• ₹12-15 ಲಕ್ಷ ಬಂಡವಾಳ ಮತ್ತು 200 ಚ.ಯಾರ್ಡ್ಸ್ ಜಾಗ
• ಪಠ್ಯಕ್ರಮ ಮತ್ತು ವ್ಯವಸ್ಥೆಗಳ ಬೆಂಬಲ
• ನಿಮ್ಮ ಪ್ರಸಕ್ತ ಶಾಲೆಯನ್ನು ಪ್ರಾಥಮಿಕ/ಕೆ–12 ಮಾದರಿಯಲ್ಲಿ ಬದಲಾಯಿಸಿ

ಕರ್ನಾಟಕ ಎಲ್ಲಾ ಬಚ್‌ಪನ್ ವಿಚಾರಣೆಗಳಿಗೆ ಸ್ವಾಗತ
ಈ ನಗರಗಳಲ್ಲಿರುವ ನಮ್ಮ ಫ್ರಾಂಚೈಸ್ ಮ್ಯಾನೇಜರ್‌ಗಳನ್ನು ಸಂಪರ್ಕಿಸಿ

Yeshvanth Gowda 8123065553 | Dharmaraj Hegde 9900083744

ADMISSION OPEN BANGALORE: Arasinakunte # 9980833955 • Avalahalli # 9591522979 • AECS Layout # 9880978590 • Akshayanagar # 9741132614 • Arekere # 9900056977 • Attibele # 9738211888 • Ayyappa Nagar # 9148029955 • Budigere Cross # 9008421983 • Bagalur KIADB # 6364898686 • B Narayanpura # 9902901454 • Bagalur Road # 6364898686 • Balagere # 6364619999 • Basaveshwar Nagar # 9148005047 • Byrathi # 9986004391 • Chokkanahalli # 8050809798 • Domlur # 9916246426 • Electronic City #9900408935 • E-city Phase-2 # 7259454731 • Gunjur # 9845141485 • Haralur Road # 9900052789 • HBR Layout # 9591652552 •Horamavu # 9632317733 • Hosakote # 8494924999 • HSR Layout # 9900094177 • ISRO Layout # 7975323917 • J.P. Nagar Dollars Colony # 7411216399 • Jalahalli Cross # 9845208633 • J.P. Nagar 7th Phase # 9900061977 • Jakkur # 9606676120 • K. Channasandra # 99025 00998 • Kaggadasapura # 9739000600 • Kasturi Nagar # 7406588877 • Kithaganur # 6366414488 • Kodigehalli # 8971857455 • Koramangala # 9686044111 • KR Puram # 9148029955 • Manyata Tech Park # 9900920600 • Munnekolala # 7338567423 • New Thippasandra # 9916768811 •Nandini Layout # 9449513005 • Nagarbhavi # 9686033399 • Panathur # 9901053610 •Rayasandra Circle # 9739006066 • R.T. Nagar # 7411353555 • Sanjay Nagar # 9964353555 • Sarjapur Road # 9900085177 • Seegehalli # 9606299494 • Soukya Road # 9448040193 • Srinivasapura R.R Nagar # 9606063144 • Surya Nagar phase -1# 9916969459 • TC Palya # 9591793344 • Varthur # 9986111881 • Whitefield # 9900038268 • Yelahanka # 7022055537

OPENING SHORTLY AT : • Dommasandra # 9381642771 • Kengeri Shirke Circle # 8217694499

Registered Office: S.K Tower. 9988/B-1, Sarai Rohilla, New Rohtak Road, New Delhi-110005

Phone: 011-35106666/7777 • E-mail : franchise@bachpanglobal.com • CIN: U74899DL1999PTC101251

ಬೆಂಗಳೂರು ಮಹಾನಗರ ಪಾಲಿಕೆ ಆಸ್ತಿ 30 ವರ್ಷಕ್ಕಿಂತ ಹೆಚ್ಚಿನ ಅವಧಿಗೆ ಗುತ್ತಿಗೆ ಇಲ್ಲ

ಆಸ್ತಿ ನಿರ್ವಹಣೆಗೆ ಹೊಸ ನಿಯಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ಆಸ್ತಿಗಳನ್ನು 30 ವರ್ಷಕ್ಕಿಂತ ಹೆಚ್ಚಿನ ಅವಧಿಗೆ ಗುತ್ತಿಗೆ ನೀಡುವುದನ್ನು ನಿರ್ಬಂಧಿಸುವ ಹೊಸ ನಿಯಮಗಳ ಕರಡು ಅಧಿಸೂಚನೆಯನ್ನು ನಗರಾಭಿವೃದ್ಧಿ ಇಲಾಖೆ ಪ್ರಕಟಿಸಿದೆ.

'ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಆಸ್ತಿ ನಿರ್ವಹಣೆ ನಿಯಮ-2024' ಅನ್ನು ಪ್ರಕಟಿಸಿದ್ದು, ಆಕ್ಷೇಪಣೆ ಸಲ್ಲಿಸಲು 30 ದಿನಗಳ ಅವಕಾಶ ನೀಡಿದೆ. ಈ ನಿಯಮಗಳು ಅಂತಿಮ ಅಧಿಸೂಚನೆಯಾದ ಮೇಲೆ 'ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಕಾಯ್ದೆ- 2020'ರ 11ನೇ ಅಧ್ಯಾಯದಲ್ಲಿ ಬದಲಾವಣೆಗೊಂಡು ಸೇರ್ಪಡೆಯಾಗಲಿವೆ.

ಬಿಬಿಎಂಪಿಯ ಎಲ್ಲ ಆಸ್ತಿಗಳ ಪಟ್ಟಿಯನ್ನು ಆಸ್ತಿಗಳ ವಿಭಾಗದಲ್ಲಿ ನಿರ್ವಹಣೆಯಾಗುವಂತೆ ಮುಖ್ಯ ಆಯುಕ್ತರು ನೋಡಿಕೊಳ್ಳಬೇಕು. ವಲಯಗಳಲ್ಲೂ ವಲಯ ಆಯುಕ್ತರು ಇದೇ ರೀತಿಯ ಪಟ್ಟಿಯನ್ನು ಹೊಂದಿರಬೇಕು. ಪಾಲಿಕೆಯ ಆಸ್ತಿಗಳನ್ನು ರಾಜ್ಯ ಮತ್ತು ಕೇಂದ್ರ ಸರ್ಕಾರದ ವಿವಿಧ ಇಲಾಖೆಗಳು, ಸರ್ಕಾರಿ ಸ್ವಾಮ್ಯದ ಸಾರ್ವಜನಿಕ ಉದ್ದಿಮೆಗಳು ಹಾಗೂ ಸಂಸ್ಥೆಗಳಿಗೆ ಮಾತ್ರ ಮಾರಾಟ ಮಾಡಲು ಅವಕಾಶವಿರುತ್ತದೆ. ಹೀಗೆ ಮಾರುವುದಕ್ಕೂ ಮುನ್ನ ರಾಜ್ಯ ಸರ್ಕಾರದ ಅನುಮತಿ ಕಡ್ಡಾಯ. ಬಿಬಿಎಂಪಿಯ ಆಸ್ತಿಗಳನ್ನು ಮಾರಾಟ ಮಾಡುವಾಗ ನೋಂದಣಿ ಮತ್ತು ಮುದ್ರಾಂಕ ಕಾಯ್ದೆಯಂತೆ (45-ಬಿ) ನಿಗದಿಪಡಿಸಲಾಗಿರುವ ಮಾರ್ಗಸೂಚಿ ದರವನ್ನೇ ಅನುಸರಿಸಬೇಕು.

ಬಿಬಿಎಂಪಿಯ ಸ್ಥಿರಾಸ್ತಿಗಳನ್ನು ಗುತ್ತಿಗೆಗೆ ನೀಡುವಾಗ ಹಲವು ಮಾನದಂಡಗಳನ್ನು ಮುಖ್ಯ ಆಯುಕ್ತರು ಅನುಸರಿಸಬೇಕು. ಸ್ಥಿರಾಸ್ತಿಗಳ ಗುತ್ತಿಗೆ ಅವಧಿ ಐದು ವರ್ಷವಾಗಿದ್ದರೆ, ಸಂಬಂಧಿಸಿದ ಸ್ಥಾಯಿ ಸಮಿತಿಯಿಂದ ಅನುಮತಿ ಪಡೆದುಕೊಳ್ಳಬೇಕು. ಐದು ವರ್ಷಕ್ಕಿಂತ ಹೆಚ್ಚು ಹಾಗೂ 15 ವರ್ಷಕ್ಕಿಂತ ಕಡಿಮೆ ಅವಧಿಗೆ ಗುತ್ತಿಗೆ ನೀಡಬೇಕಾದರೆ ಪಾಲಿಕೆಯ ಕೌನ್ಸಿಲ್ ಅನುಮತಿ ಪಡೆಯಬೇಕು. 15 ವರ್ಷದಿಂದ ಗರಿಷ್ಠ 30 ವರ್ಷಗಳವರೆಗೆ ಗುತ್ತಿಗೆ ನೀಡಲು ರಾಜ್ಯ ಸರ್ಕಾರದ ಪೂರ್ವಾನುಮತಿಯನ್ನು ಪಡೆದುಕೊಳ್ಳಬೇಕು. 30 ವರ್ಷಕ್ಕಿಂತ ಹೆಚ್ಚಿನ ಅವಧಿಗೆ ಯಾವುದೇ ಸ್ಥಿರಾಸ್ತಿಯನ್ನು ಪಾಲಿಕೆಯು ಗುತ್ತಿಗೆ ನೀಡುವಂತಿಲ್ಲ ಎಂದು ಕರಡು ನಿಯಮಗಳಲ್ಲಿ ವಿವರಿಸಲಾಗಿದೆ.

ಪಾಲಿಕೆ ಈಗಾಗಲೇ 30 ವರ್ಷಕ್ಕಿಂತ ಹೆಚ್ಚಿನ ಅವಧಿಗೆ ಗುತ್ತಿಗೆ ನೀಡಿದ್ದರೆ, ಅದರ ನವೀಕರಣ ಸಂದರ್ಭದಲ್ಲಿ 30 ವರ್ಷಕ್ಕಿಂತ ಹೆಚ್ಚಿನ ಅವಧಿಗೆ ಗುತ್ತಿಗೆ ನೀಡುವಂತಿಲ್ಲ. ಇದಲ್ಲದೆ, ಠೇವಣಿ, ಬಾಡಿಗೆಯನ್ನೂ ಮಾರ್ಗಸೂಚಿ ದರದಂತೆ ನಿಗದಿಪಡಿಸುವ ಲೆಕ್ಕಾಚಾರವನ್ನು ಹೊಸ ನಿಯಮಗಳಲ್ಲಿ ಸೇರಿಸಲಾಗಿದೆ.

ಮುಖ್ಯಾಂಶಗಳು

- ಆಕ್ಷೇಪಣೆ ಸಲ್ಲಿಸಲು 30 ದಿನಗಳ ಅವಕಾಶ
- ಪಾಲಿಕೆಯ ಆಸ್ತಿ ಮಾರಾಟಕ್ಕೆ ಸರ್ಕಾರದ ಅನುಮತಿ ಕಡ್ಡಾಯ
- ಠೇವಣಿ ಮತ್ತು ಬಾಡಿಗೆ ಲೆಕ್ಕಾಚಾರದಲ್ಲೂ ಹೊಸ ನಿಯಮ

ಬಿಬಿಎಂಪಿ ಸುದ್ದಿ

ಬೀದಿ ಬದಿ ವ್ಯಾಪಾರ ವಲಯ ಗುರುತಿಸಲು ಸೂಚನೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ಬೀದಿ ಬದಿ ವ್ಯಾಪಾರಿಗಳ ವಲಯಗಳನ್ನು ತ್ವರಿತವಾಗಿ ಗುರುತಿಸಲು ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಬಿಬಿಎಂಪಿ ವ್ಯಾಪ್ತಿಯಲ್ಲಿ ಬೀದಿ ವ್ಯಾಪಾರಿಗಳ ಸಮೀಕ್ಷೆ ಹಾಗೂ ಮಾರಾಟ ವಲಯಗಳನ್ನು ಗುರುತಿಸುವ ಸಂಬಂಧ ಸೋಮವಾರ ನಡೆದ ವರ್ಚ್ಯುವಲ್ ಸಭೆಯಲ್ಲಿ ಅವರು ಮಾತನಾಡಿದರು.

ಪಾಲಿಕೆ ವ್ಯಾಪ್ತಿಯಲ್ಲಿ ಬೀದಿ ವ್ಯಾಪಾರಿಗಳ ಸಮೀಕ್ಷೆಗಾಗಿ ಈಗಾಗಲೇ ಪ್ರಮಾಣಿತ ಕಾರ್ಯಾಚರಣೆಯ ವಿಧಾನ (ಎಸ್‌ಒಪಿ) ಬಿಡುಗಡೆಗೊಳಿಸಿದ್ದು, ಅದರ ಅನುಸಾರ ವ್ಯಾಪಾರ ವಲಯಗಳನ್ನು ಗುರುತಿಸಬೇಕು ಎಂದು ಹೇಳಿದರು.

ನಿಖರವಾದ ಮಾಹಿತಿಗಾಗಿ ಬೀದಿ ವ್ಯಾಪಾರಿಗಳ ಸಮೀಕ್ಷೆಯಾಗಬೇಕಿದೆ. ಅಗತ್ಯ ಸಿಬ್ಬಂದಿಯನ್ನು ನಿಯೋಜಿಸಿ ನಿಗದಿತ ಸಮಯದಲ್ಲಿ ಸಮೀಕ್ಷೆಯನ್ನು ಪೂರ್ಣಗೊಳಿಸಬೇಕು ಎಂದು ತಿಳಿಸಿದರು.

ಕಲ್ಯಾಣ ವಿಭಾಗದ ವಿಶೇಷ ಆಯುಕ್ತ ಸುರಳ್ಕರ್ ವಿಕಾಸ್ ಕಿಶೋರ್ ಮಾತನಾಡಿ, 'ಆಯಾ ವಲಯದ ಜನಸಂಖ್ಯೆಗೆ ಅನುಗುಣವಾಗಿ ಶೇಕಡ 2.5ರಷ್ಟು ಮಾರಾಟ ವಲಯ ಗುರುತಿಸಬೇಕು. ಬೀದಿ ವ್ಯಾಪಾರಿಗಳ ಸಮೀಕ್ಷೆ ಮಾಡಲು ವೆಬ್ ಅಪ್ಲಿಕೇಷನ್ ಹಾಗೂ ಮೊಬೈಲ್ ಅಪ್ಲಿಕೇಷನ್ ಸಿದ್ಧಪಡಿಸಲಾಗಿದೆ. ಬೀದಿ ವ್ಯಾಪಾರ ಮಾಡುತ್ತಿರುವ ಸ್ಥಳದಲ್ಲಿ ತಂತ್ರಾಂಶ ಬಳಸಿಕೊಂಡು ಜಿಯೋ ಟ್ಯಾಗಿಂಗ್ ಮೂಲಕ ಸಮೀಕ್ಷೆ ಮಾಡಲಾಗುತ್ತದೆ' ಎಂದು ಮಾಹಿತಿ ನೀಡಿದರು.

ಆಯಾ ವಲಯಗಳಲ್ಲಿ ಸಮೀಕ್ಷೆ ನಡೆದ ನಂತರ ಪೂರ್ಣ ವಿವರ ಇರುವ ಪಟ್ಟಿಯನ್ನು ಪಟ್ಟಣ ಮಾರಾಟ ಸಮಿತಿಯ ಮುಂದಿರಿಸಲಾಗುವುದು. ಆಕ್ಷೇಪಣೆ ಸ್ವೀಕರಿಸಲು ಕಾಲಾವಕಾಶ ನೀಡಿ ಪಾಲಿಕೆಯ ಅಧಿಕೃತ ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಲಾಗುತ್ತದೆ ಎಂದು ತಿಳಿಸಿದರು.

ಬೆಂಗಳೂರಿನ ಹೋಟೆಲ್ ಆಶ್ರಯ ಇಂಟರ್‌ನ್ಯಾಷನಲ್‌ನಲ್ಲಿ ಸೋಮವಾರ ಫ್ಯಾಮಿಲಿ ಪ್ಲ್ಯಾನಿಂಗ್ ಅಸೋಸಿಯೇಷನ್ ಆಫ್ ಇಂಡಿಯಾದ ಸಂಸ್ಥಾಪಕರ ದಿನಾಚರಣೆ ಕಾರ್ಯಕ್ರಮದಲ್ಲಿ ಕಾಲೇಜು ಶಿಕ್ಷಣ ಇಲಾಖೆ ನಿರ್ದೇಶಕಿ ಜಿ. ಶೋಭಾ ಮತ್ತು ಎಫ್‌ಪಿಎ ಅಧ್ಯಕ್ಷೆ ಪದ್ಮಿನಿ ಪ್ರಸಾದ್ ಚರ್ಚೆಯಲ್ಲಿ ತೊಡಗಿದ್ದರು. ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾದ ಪ್ರಾದೇಶಿಕ ಮುಖ್ಯಸ್ಥ ಬೆಂಗಳೂರು ಕೆ. ಪಾರ್ಥಸಾರಥಿ ನಾಯ್ಡು, ಮಾಜಿ ಅಧ್ಯಕ್ಷೆ ಶಾಂತಿ ಆರ್. ಬಾಳಿಗ ಉಪಸ್ಥಿತರಿದ್ದರು —ಪ್ರಜಾವಾಣಿ ಚಿತ್ರ

ಗರ್ಭಕಂಠ ಕ್ಯಾನ್ಸರ್: ಜಾಗೃತಿ ಅಗತ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹದಿಹರೆಯದ ಹೆಣ್ಣು ಮಕ್ಕಳು ಮತ್ತು ಮಹಿಳೆಯರಿಗೆ ಗರ್ಭಕಂಠ ಕ್ಯಾನ್ಸರ್ ಬಗ್ಗೆ ಜಾಗೃತಿ ಮೂಡಿಸುವ ಅಗತ್ಯವಿದೆ ಎಂದು ಕಾಲೇಜು ಶಿಕ್ಷಣ ಇಲಾಖೆ ನಿರ್ದೇಶಕಿ ಜಿ.ಶೋಭಾ ಹೇಳಿದರು.

ನಗರದಲ್ಲಿ ಸೋಮವಾರ ಏರ್ಪಡಿಸಿದ್ದ ಫ್ಯಾಮಿಲಿ ಪ್ಲ್ಯಾನಿಂಗ್ ಅಸೋಸಿಯೇಷನ್ ಆಫ್ ಇಂಡಿಯಾದ (ಎಫ್‌ಪಿಎಐ) ಸಂಸ್ಥಾಪನಾ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಜಾಗೃತಿ ಕೊರತೆ, ಹಿಂಜರಿಕೆಯಿಂದ ಮಹಿಳೆಯರು ತಪಾಸಣೆಗೆ ಒಳಪಡುವುದು ಕಡಿಮೆ. ಹೆಣ್ಣು-ಮಕ್ಕಳಿಗೆ ಗರ್ಭಕಂಠ ಕ್ಯಾನ್ಸರ್ ತಡೆ ಲಸಿಕೆಯನ್ನು ಎಫ್‌ಪಿಎಐ ವತಿಯಿಂದ ನೀಡುತ್ತಿದ್ದು, ಇದನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದು ಹೇಳಿದರು.

ಸಾಕಷ್ಟು ಸ್ವಯಂ ಸೇವಾಸಂಸ್ಥೆಗಳು ಕಾರ್ಯನಿರ್ವಹಿಸುತ್ತಿವೆ. ಕೆಲವು ಸಂಸ್ಥೆಗಳು ಎರಡು-ಮೂರು ವರ್ಷಕ್ಕೆ ಬಾಗಿಲು ಮುಚ್ಚಿವೆ. ಆದರೆ ಎಫ್‌ಪಿಎಐ ಅಮೃತ ಮಹೋತ್ಸವ ಆಚರಿಸಿಕೊಳ್ಳುತ್ತಿರುವುದು ಹೆಮ್ಮೆಯ ವಿಷಯ ಎಂದು ನುಡಿದರು.

ಸಂಸ್ಥೆ ನಡೆದು ಬಂದ ಹಾದಿ ಬಗ್ಗೆ ವಿವರಿಸಿದ ಎಫ್‌ಪಿಎಐ ಬೆಂಗಳೂರು ಶಾಖೆ ಮುಖ್ಯಸ್ಥೆ ಡಾ.ಪದ್ಮಿನಿ ಪ್ರಸಾದ್, 'ಕುಟುಂಬ ಯೋಜನೆ, ಗರ್ಭನಿರೋಧಕ್ಕೆ ಮಾತ್ರ ಸೀಮಿತವಾಗದೆ ಮಹಿಳಾ ಸಬಲೀಕರಣ, ಆರೋಗ್ಯದ ಬಗ್ಗೆಯೂ ಜಾಗೃತಿ ಮೂಡಿಸಲಾಗುತ್ತಿದೆ. ಬಾಲಕಿಯರು, ಕೈಗಾರಿಕೆಗಳಲ್ಲಿ ಕೆಲಸ ಮಾಡುವ ಮಹಿಳೆಯರು ಹಾಗೂ ಲಿಂಗತ್ವ ಅಲ್ಪಸಂಖ್ಯಾತರಿಗೆ ಆರೋಗ್ಯ ಸೇವೆ ಒದಗಿಸಲು ಕಾರ್ಯಕ್ರಮ ರೂಪಿಸಲಾಗುತ್ತಿದೆ' ಎಂದು ವಿವರಿಸಿದರು.

ಇದೇ ವೇಳೆ ಸಂಸ್ಥೆ ವತಿಯಿಂದ ತಾಯಂದಿರಿಗೆ ಗರ್ಭಕಂಠ ಕ್ಯಾನ್ಸರ್ ತಪಾಸಣೆ ಮತ್ತು ಹೆಣ್ಣುಮಕ್ಕಳಿಗೆ ಎಚ್‌ಪಿವಿ ಲಸಿಕೆ ನೀಡುವ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು.

ಗರ್ಡರ್ ಕಾಮಗಾರಿ: 8 ರೈಲುಗಳ ಸಂಚಾರ ರದ್ದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಿಟ್ಟೂರು ಮತ್ತು ಸಂಪಿಗೆ ರೋಡ್ ನಿಲ್ದಾಣಗಳ ಮಧ್ಯದ ಲೆವೆಲ್ ಕ್ರಾಸಿಂಗ್ -64ರ ರಸ್ತೆ ಕೆಳಸೇತುವೆಗೆ ತಾತ್ಕಾಲಿಕ ಗರ್ಡರ್ ಅಳವಡಿಸುವ ಮತ್ತು ತೆಗೆದುಹಾಕುವ ಕಾಮಗಾರಿ ಹಮ್ಮಿಕೊಂಡಿರುವುದರಿಂದ ಆಗಸ್ಟ್ 8 ಮತ್ತು 15ರಂದು 8 ರೈಲುಗಳ ಸಂಚಾರ ರದ್ದುಗೊಳ್ಳಲಿದೆ. ಹಲವು ರೈಲುಗಳ ಸಂಚಾರ ಭಾಗಶಃ ರದ್ದು, ಮಾರ್ಗ ಬದಲಾವಣೆಯಾಗಲಿದೆ.

ತುಮಕೂರು-ಚಾಮರಾಜನಗರ ಪ್ಯಾಸೆಂಜರ್ ಸ್ಪೆಷಲ್, ಚಾಮರಾಜನಗರ-ಮೈಸೂರು ಪ್ಯಾಸೆಂಜರ್ ಸ್ಪೆಷಲ್, ಚಿಕ್ಕಮಗಳೂರು-ಯಶವಂತಪುರ ಎಕ್ಸ್‌ಪ್ರೆಸ್, ಯಶವಂತಪುರ-ಚಿಕ್ಕಮಗಳೂರು ಎಕ್ಸ್‌ಪ್ರೆಸ್, ತುಮಕೂರು-ಕೆಎಸ್‌ಆರ್ ಬೆಂಗಳೂರು ಮೆಮು ಸ್ಪೆಷಲ್, ಕೆಎಸ್‌ಆರ್ ಬೆಂಗಳೂರು-ತುಮಕೂರು ಮೆಮು ಸ್ಪೆಷಲ್, ಯಶವಂತಪುರ-ಶಿವಮೊಗ್ಗ ಇಂಟರ್‌ಸಿಟಿ, ಶಿವಮೊಗ್ಗ-ಯಶವಂತಪುರ ಇಂಟರ್‌ಸಿಟಿ ರೈಲುಗಳ ಸಂಚಾರ ರದ್ದಾಗಲಿದೆ.

ಭಾಗಶಃ ರದ್ದು: ಕೆಎಸ್‌ಆರ್ ಬೆಂಗಳೂರು-ತುಮಕೂರು ಮೆಮು ಮತ್ತು ತುಮಕೂರು-ಕೆಎಸ್‌ಆರ್ ಬೆಂಗಳೂರು ಮೆಮು ರೈಲುಗಳ ಸಂಚಾರ ತುಮಕೂರು-ಹಿರೇಹಳ್ಳಿ ನಿಲ್ದಾಣಗಳ ಮಧ್ಯೆ ಭಾಗಶಃ ರದ್ದಾಗಲಿದೆ.

ತಾಳಗುಪ್ಪ-ಕೆಎಸ್‌ಆರ್ ಬೆಂಗಳೂರು ಡೈಲಿ ಎಕ್ಸ್‌ಪ್ರೆಸ್ ರೈಲಿನ ಸಂಚಾರ ಅರಸೀಕೆರೆ-ಕೆಎಸ್‌ಆರ್ ಬೆಂಗಳೂರು ನಿಲ್ದಾಣಗಳ ಮಧ್ಯೆ ಭಾಗಶಃ ರದ್ದುಗೊಳ್ಳಲಿದೆ. ಧಾರವಾಡ-ಕೆಎಸ್‌ಆರ್ ಬೆಂಗಳೂರು ಸಿದ್ದಗಂಗಾ ಡೈಲಿ ಎಕ್ಸ್‌ಪ್ರೆಸ್ ರೈಲಿನ ಸಂಚಾರ ಅರಸೀಕೆರೆ-ಕೆಎಸ್‌ಆರ್ ಬೆಂಗಳೂರು ನಿಲ್ದಾಣಗಳ ನಡುವೆ ಭಾಗಶಃ ರದ್ದುಗೊಳ್ಳಲಿದೆ. ಕೆಎಸ್‌ಆರ್ ಬೆಂಗಳೂರು-ಧಾರವಾಡ ಸಿದ್ದಗಂಗಾ ಡೈಲಿ ಎಕ್ಸ್‌ಪ್ರೆಸ್ ರೈಲಿನ ಸಂಚಾರ ಕೆಎಸ್‌ಆರ್ ಬೆಂಗಳೂರು-ಅರಸೀಕೆರೆ ನಿಲ್ದಾಣಗಳ ನಡುವೆ ಭಾಗಶಃ ರದ್ದುಗೊಳ್ಳಲಿದೆ.

ಮಾರ್ಗ ಬದಲಾವಣೆ: ಆ.7 ಮತ್ತು 14ರಂದು ವಾಸ್ಕೋ ಡ ಗಾಮಾ-ಯಶವಂತಪುರ ಡೈಲಿ ಎಕ್ಸ್‌ಪ್ರೆಸ್ ರೈಲು ಅರಸೀಕೆರೆ, ಹಾಸನ, ನೆಲಮಂಗಲ, ಯಶವಂತಪುರ ಮಾರ್ಗದ ಮೂಲಕ ಸಂಚರಿಸಲಿದೆ. ತಿಪಟೂರು ಮತ್ತು ತುಮಕೂರು ನಿಲ್ದಾಣಗಳಲ್ಲಿ ನಿಗದಿತ ನಿಲುಗಡೆ ಇರುವುದಿಲ್ಲ.

ಆ. 8 ಮತ್ತು 15 ರಂದು ಮೈಸೂರು-ವಾರಾಣಸಿ ಸೂಪರ್‌ಫಾಸ್ಟ್ ರೈಲು ಯಶವಂತಪುರ, ನೆಲಮಂಗಲ, ಹಾಸನ, ಅರಸೀಕೆರೆ ನಿಲ್ದಾಣಗಳ ಮೂಲಕ ಸಂಚರಿಸಲಿದೆ. ತುಮಕೂರಿನಲ್ಲಿ ನಿಗದಿತ ನಿಲುಗಡೆ ಇರುವುದಿಲ್ಲ. ಯಶವಂತಪುರ-ಜೈಪುರ ಎಕ್ಸ್‌ಪ್ರೆಸ್ ರೈಲು ಯಶವಂತಪುರ, ನೆಲಮಂಗಲ, ಹಾಸನ, ಅರಸೀಕೆರೆ ನಿಲ್ದಾಣಗಳ ಮೂಲಕ ಸಂಚರಿಸಲಿದೆ. ತುಮಕೂರಿನಲ್ಲಿ ನಿಗದಿತ ನಿಲುಗಡೆ ಇರುವುದಿಲ್ಲ.

ಮೈಸೂರು-ಉದಯಪುರ ಸಿಟಿ ಸಾಪ್ತಾಹಿಕ ಎಕ್ಸ್ ಪ್ರೆಸ್ ರೈಲು ಕೆಎಸ್‌ಆರ್ ಬೆಂಗಳೂರು, ಯಶವಂತಪುರ, ನೆಲಮಂಗಲ, ಹಾಸನ, ಅರಸೀಕೆರೆ, ದಾವಣಗೆರೆ ಮಾರ್ಗವಾಗಿ ಸಂಚರಿಸಲಿದೆ. ಮೈಸೂರು-ಬೆಳಗಾವಿ ವಿಶ್ವಮಾನವ ಡೈಲಿ ಎಕ್ಸ್ ಪ್ರೆಸ್ ರೈಲು ಯಶವಂತಪುರ, ನೆಲಮಂಗಲ, ಹಾಸನ, ಅರಸೀಕೆರೆ ನಿಲ್ದಾಣಗಳ ಮೂಲಕ ಸಂಚರಿಸಲಿದೆ. ತುಮಕೂರು ಮತ್ತು ತಿಪಟೂರು ನಿಲ್ದಾಣಗಳಲ್ಲಿ ನಿಗದಿತ ನಿಲುಗಡೆ ಇರುವುದಿಲ್ಲ.

ನಿಯಂತ್ರಣ: ಆ. 6 ಮತ್ತು 13 ರಂದು ಬಿಕಾನೇರ್-ಯಶವಂತಪುರ ಎಕ್ಸ್‌ಪ್ರೆಸ್ ರೈಲನ್ನು ಮಾರ್ಗ ಮಧ್ಯೆ ಎರಡೂವರೆ ಗಂಟೆ ನಿಯಂತ್ರಿಸಲಾಗುತ್ತದೆ.

ಆ. 8 ಮತ್ತು 15 ರಂದು ಯಶವಂತಪುರ-ಹಜರತ್ ನಿಜಾಮುದ್ದೀನ್ ರೈಲನ್ನು ಮಾರ್ಗ ಮಧ್ಯೆ 50 ನಿಮಿಷ, ಕೆಎಸ್‌ಆರ್ ಬೆಂಗಳೂರು-ತಾಳಗುಪ್ಪ ಡೈಲಿ ಸೂಪರ್‌ಫಾಸ್ಟ್ ರೈಲನ್ನು 10 ನಿಮಿಷ, ಬೆಳಗಾವಿ-ಮೈಸೂರು ವಿಶ್ವಮಾನವ ಎಕ್ಸ್‌ಪ್ರೆಸ್ ರೈಲನ್ನು 55 ನಿಮಿಷ, ಚಾಮರಾಜನಗರ-ತುಮಕೂರು ಪ್ಯಾಸೆಂಜರ್ ಸ್ಪೆಷಲ್ ರೈಲನ್ನು ಮಾರ್ಗ ಮಧ್ಯೆ ಎರಡು ಗಂಟೆ ನಿಮಿಷ ನಿಯಂತ್ರಿಸಲಾಗುತ್ತದೆ.

ಯಶವಂತಪುರ-ವಾಸ್ಕೋಡಗಾಮಾ ಎಕ್ಸ್‌ಪ್ರೆಸ್ ರೈಲು ಯಶವಂತಪುರದಿಂದ ಒಂದು ಗಂಟೆ ತಡವಾಗಿ ಹೊರಡಲಿದೆ. ಆ.14ರಂದು ತುಮಕೂರು-ಶಿವಮೊಗ್ಗ ಮೆಮು ಸ್ಪೆಷಲ್ ರೈಲು ತುಮಕೂರಿನಿಂದ 85 ನಿಮಿಷ ತಡವಾಗಿ ಹೊರಡಲಿದೆ ಎಂದು ನೈರುತ್ಯ ರೈಲ್ವೆ ಸಾರ್ವಜನಿಕ ಸಂಪರ್ಕಾಧಿಕಾರಿ ತಿಳಿಸಿದ್ದಾರೆ.

ಸಾದ್ಯ ಪೊಲವರಪುಗೆ ಬೆಳ್ಳಿ ಪದಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ದಿ ಅಮೆರಿಕನ್ ಪ್ರೊಟೆಜ್ ಅಂತರರಾಷ್ಟ್ರೀಯ ಸಂಗೀತ ಸ್ಪರ್ಧೆ'ಯ ಗಾಯನ ವಿಭಾಗದಲ್ಲಿ ಸಾದ್ಯ ನಗರದ ದಿ ಇಂಟರ್‌ನ್ಯಾಷನಲ್ ಸ್ಕೂಲ್‌ನ (ಟಿಐಎಸ್‌ಬಿ) ಆರನೇ ತರಗತಿಯ ವಿದ್ಯಾರ್ಥಿನಿ ಸಾದ್ಯ ಪೊಲವರಪು ಬೆಳ್ಳಿ ಪದಕ ಪಡೆದುಕೊಂಡಿದ್ದಾರೆ.

2024ರ ಜೂನ್ 23ರಂದು ಅಮೆರಿಕಾದ ನ್ಯೂಯಾರ್ಕ್‌ನ ಪ್ರತಿಷ್ಠಿತ ಕಾರ್ನಗಿ ಸಭಾಂಗಣದಲ್ಲಿ ನಡೆದ ಸಂಗೀತ ಸ್ಪರ್ಧೆಯಲ್ಲಿ ಸಾದ್ಯ ಸೇರಿದಂತೆ ವಿಶ್ವದ ವಿವಿಧ ದೇಶಗಳ 30 ಗಾಯಕರು, ಸಂಗೀತ ಕಲಾವಿದರು ಭಾಗವಹಿಸಿದ್ದರು.

ನಗರದ ವೈದ್ಯ ದಂಪತಿ ಡಾ. ಸ್ವೈರಾ ರಾವ್ ಮತ್ತು ಡಾ. ಸಿರಿ ಕೃಷ್ಣ ಅವರ ಪುತ್ರಿ ಸಾದ್ಯ ಅವರು ಹಲವಾರು ಅಂತರರಾಷ್ಟ್ರೀಯ ಸಂಗೀತ ಸ್ಪರ್ಧೆಗಳಲ್ಲಿ ಭಾಗವಹಿಸಿ, ಪ್ರಶಸ್ತಿ ಮತ್ತು ಬಹುಮಾನಗಳನ್ನು ಗೆದ್ದಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

'ಮಾಧ್ಯಮ ಜ್ಞಾನ' ಹೊಸ ಕೋರ್ಸ್ ಸೇರ್ಪಡೆಗೆ ಕ್ರಮ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿದ್ಯಾರ್ಥಿಗಳಲ್ಲಿ ಮಾಧ್ಯಮ ಸಾಕ್ಷರತೆ ಬಗ್ಗೆ ಅರಿವು ಮೂಡಿಸುವ ಅಗತ್ಯವಿದೆ. ಹಾಗಾಗಿ ಮಾಧ್ಯಮ ಸಾಕ್ಷರತೆ, ಸಂವಹನದ ಪ್ರಾಮುಖ್ಯ ಕುರಿತು ಹೊಸ ಕೋರ್ಸ್‌ಗಳನ್ನು ವಿದ್ಯಾರ್ಥಿಗಳಿಗೆ ಪರಿಚಯಿಸುವ ಕುರಿತು ಗಂಭೀರ ಚಿಂತನೆ ನಡೆದಿದೆ ಎಂದು ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ ಉಪಾಧ್ಯಕ್ಷ ಪ್ರೊ.ಎಸ್.ಆರ್.ನಿರಂಜನ ಹೇಳಿದರು.

ಭಾರತೀಯ ಸಂವಹನ ಕಾಂಗ್ರೆಸ್ (ಐಸಿಸಿ) ಹಾಗೂ ಕರ್ನಾಟಕ ರಾಜ್ಯ ಪತ್ರಿಕೋದ್ಯಮ ಮತ್ತು ಸಂವಹನ ಶಿಕ್ಷಕರ ಸಂಘದ (ಕೆಎಸ್ ಜೆಸಿಟಿಎ) ಸಹಯೋಗದೊಂದಿಗೆ ಬೆಂಗಳೂರು ವಿಶ್ವವಿದ್ಯಾಲಯದ ಸಂವಹನ ವಿಭಾಗದ ಸುವರ್ಣ ಮಹೋತ್ಸವದ (1973-2023) ಪ್ರಯುಕ್ತ ಸೋಮವಾರ ಆಯೋಜಿಸಿದ್ದ ರಾಷ್ಟ್ರೀಯ ಸಮ್ಮೇಳನದಲ್ಲಿ ಮಾತನಾಡಿದರು.

ಮಾಧ್ಯಮ ಸಾಕ್ಷರತೆ ಮತ್ತು ಸಂವಹನ ಜ್ಞಾನ ಪ್ರಮುಖ ಕೌಶಲವಾಗಿದ್ದು, ಪಠ್ಯಕ್ರಮದಲ್ಲಿ ಮಾಧ್ಯಮ ಜ್ಞಾನವನ್ನು ಕೂಡ ಬೋಧನಾ ವಿಷಯವಾಗಿ ಸೇರಿಸಲಾಗುವುದು. ನಿರ್ದಿಷ್ಟ ವಿಷಯದ ಕುರಿತು ಮಾಹಿತಿ ತಿಳಿದುಕೊಳ್ಳುವುದಕ್ಕಷ್ಟೇ ಸೀಮಿತವಾಗಿದ್ದ ಮಾಧ್ಯಮ ಇಂದು ಬಹು ದೊಡ್ಡ ಉದ್ಯಮವಾಗಿ ಬೆಳೆದು ನಿಂತಿದೆ. ದೇಶದ ನಿವ್ವಳ ಆಂತರಿಕ ಉತ್ಪನ್ನ (ಜಿಡಿಪಿ) ಏರಿಕೆಗೆ ಮನರಂಜನಾ ಮತ್ತು ಮಾಧ್ಯಮ ಕ್ಷೇತ್ರಗಳ ಕೊಡುಗೆ ಕೂಡ ಅಪಾರವಾಗಿದೆ ಎಂದರು.

ಮಾಧ್ಯಮದ ಪಾತ್ರ, ಶಕ್ತಿ, ಬಳಕೆ ಕುರಿತು ವಿದ್ಯಾರ್ಥಿಗಳಲ್ಲಿ ಅರಿವು ಮೂಡಿಸುವ ಅಗತ್ಯವಿದೆ. ಈ ನಿಟ್ಟಿನಲ್ಲಿ ಬೆಂಗಳೂರು ವಿಶ್ವವಿದ್ಯಾಲಯದ ಸಂವಹನ ವಿಭಾಗವು ಪ್ರಸ್ತಾವ ಸಲ್ಲಿಸಿದರೆ, ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನಲ್ಲಿ ಈ ಕುರಿತು ಚರ್ಚಿಸಿ ಅನುಷ್ಠಾನಕ್ಕೆ ಕ್ರಮ ವಹಿಸಲಾಗುವುದು ಎಂದು ಭರವಸೆ ಕೂಡ ನೀಡಿದರು.

ಕೊಪ್ಪಳ ವಿಶ್ವವಿದ್ಯಾಲಯದ ಕುಲಪತಿ ಬಿ.ಕೆ. ರವಿ, ಬೆಂಗಳೂರು ವಿಶ್ವವಿದ್ಯಾಲಯದ ಕುಲಸಚಿವ ಶೇಕ್ ಲತೀಫ್, ಮೌಲ್ಯಮಾಪನ ಕುಲಸಚಿವ ಶ್ರೀನಿವಾಸ್ ಚೌಡಪ್ಪ, ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದ ಮುಖ್ಯಸ್ಥೆ ಬಿ.ಶೈಲಶ್ರೀ, ಪಶ್ಚಿಮ ಬಂಗಾಳದ ವಿಶ್ವ ಭಾರತಿ ಕೇಂದ್ರೀಯ ವಿಶ್ವವಿದ್ಯಾಲಯದ ಮುಖ್ಯಸ್ಥ ಬಿಪ್ಲಾಬ್ ಲೋಹೋ ಚೌದರಿ, ಭುವನೇಶ್ವರದ ಉತ್ಕಲ್ ವಿಶ್ವವಿದ್ಯಾಲಯದ ಮಾಧ್ಯಮ ಅಧ್ಯಯನ ಸಂಸ್ಥೆಯ ನಿರ್ದೇಶಕ ಉಪೇಂದ್ರ ಪಾಢಿ ಹಾಜರಿದ್ದರು.

ನಗರದಲ್ಲಿ ಇಂದು

ರಾಜ್ಯಮಟ್ಟದ ಉತ್ತಮ ಶಿಕ್ಷಕರ ಅಭಿನಂದನಾ ಸಮಾರಂಭ: ಉದ್ಘಾಟನೆ: ಮಧು ಬಂಗಾರಪ್ಪ, ಅಧ್ಯಕ್ಷತೆ: ಪಿ.ಜಿ. ಆರ್. ಸಿಂಧ್ಯ, ಅತಿಥಿಗಳು: ಎಚ್.ಎಂ. ರೇವಣ್ಣ, ಸಿ.ಎಸ್. ಷಡಕ್ಷರಿ, ಪ್ರಸನ್ನಕುಮಾರ್, ಕೆ.ಬಿ. ಲಿಂಗರಾಜಪ್ಪ, ಹನುಮಂತರಾಯ ಡಿ., ಆಯೋಜನೆ: ರಾಜ್ಯ ಮತ್ತು ರಾಷ್ಟ್ರಪ್ರಶಸ್ತಿ ಪುರಸ್ಕೃತ ಶಿಕ್ಷಕರ ಕೇಂದ್ರ ಸಂಘ, ಸ್ಥಳ: ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕಚೇರಿ ಆವರಣ, ಅರಮನೆ ರಸ್ತೆ, ಬೆಳಿಗ್ಗೆ 10

ಭಜನೆ: ಜಿಎಸ್‌ಬಿ ಮಹಿಳಾ ಭಜನಾ ಮಂಡಳಿ ಕಾಶಿಮಠ, ಉಪನ್ಯಾಸ: ಅಂಬರೀಶಾಚಾರ್ಯ, ಆಯೋಜನೆ: ತಿರುಮಲ ತಿರುಪತಿ ದೇವಸ್ಥಾನಗಳು, ಹಿಂದೂ ಧರ್ಮ ಪ್ರಚಾರ ಪರಿಷತ್, ಸ್ಥಳ: ಕಾಶಿಮಠ, ಮಲ್ಲೇಶ್ವರ, ಸಂಜೆ 6ರಿಂದ

'ಏಕಲವ್ಯ' ಪೌರಾಣಿಕ ನಾಟಕ ಪ್ರದರ್ಶನ: ರಚನೆ: ಕುವೆಂಪು, ನಿರ್ದೇಶನ: ಶಾಂತಕುಮಾರ್, ಅತಿಥಿಗಳು: ಶ್ರೀನಾಥ್, ರಾಮಚಂದ್ರ, ಅರ್ಚನ, ರಘು, ಆಯೋಜನೆ: ಪ್ರೇರಣ ಸಾಂಸ್ಕೃತಿಕ ಟ್ರಸ್ಟ್, ಸ್ಥಳ: ಲಾಸ್ಯರಂಜಿನಿ ಕಲಾಕ್ಷೇತ್ರ, ಲಿಂಗರಾಜಪುರ, ಸಂಜೆ 6.30

ಡಿಸಿಇಟಿ: ಮೊದಲ ಸುತ್ತಿನ ಸೀಟು ಹಂಚಿಕೆ ಪ್ರಕಟ

ಬೆಂಗಳೂರು: ಎಂಜಿನಿಯರಿಂಗ್ ಕೋರ್ಸ್‌ಗಳ ಮೂರನೇ ಸೆಮಿಸ್ಟರ್‌ಗೆ ಪ್ರವೇಶ ಪಡೆಯುವ ಡಿಪ್ಲೊಮಾ ವಿದ್ಯಾರ್ಥಿಗಳ ಮೊದಲ ಸುತ್ತಿನ ಸೀಟು ಹಂಚಿಕೆ ಫಲಿತಾಂಶವನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಸೋಮವಾರ ಪ್ರಕಟಿಸಿದೆ. ಆಯ್ಕೆ (ಛಾಯ್ಸ್) ಮಾಡಿಕೊಳ್ಳಲು ಜುಲೈ 24ರ ಬೆಳಿಗ್ಗೆ 11ರವರೆಗೆ ಅವಕಾಶವಿದೆ. ಮೊದಲ ಸುತ್ತಿನ ಪ್ರವೇಶ ಪ್ರಕ್ರಿಯೆ 26ಕ್ಕೆ ಕೊನೆಗೊಳ್ಳಲಿದೆ. ಛಾಯ್ಸ್-1 ಮತ್ತು 2 ಅನ್ನು ಆಯ್ಕೆ ಮಾಡಿಕೊಂಡವರು ಜು. 25ರ ಸಂಜೆ 4ರ ಒಳಗೆ ಶುಲ್ಕ ಪಾವತಿಸಿ, ಪ್ರವೇಶ ಪತ್ರ ಡೌನ್‌ಲೋಡ್ ಮಾಡಿಕೊಳ್ಳಬಹುದು ಎಂದು ಹೇಳಿದೆ.

ನಿಧನ ವಾರ್ತೆ

ಚಂದ್ರನಾಥ ಬಿ. ಮಿಣಜಗಿ



ಬೆಂಗಳೂರು: ಹೈಕೋರ್ಟ್ ವಕೀಲರಾಗಿದ್ದ ಚಂದ್ರನಾಥ ಬಿ. ಮಿಣಜಗಿ (96) ಅವರು ಭಾನುವಾರ ನಿಧನರಾದರು. ಅವರಿಗೆ ಪತ್ನಿ, ಮೂವರು ಪುತ್ರಿಯರು, ಒಬ್ಬ ಪುತ್ರ ಇದ್ದಾರೆ.

ಸೋಮವಾರ ಬನಶಂಕರಿಯ ಚಿತಾಗಾರದಲ್ಲಿ ಚಂದ್ರನಾಥ್ ಅವರ ಅಂತ್ಯಕ್ರಿಯೆ ನಡೆಯಿತು ಎಂದು ಕುಟುಂಬದ ಸದಸ್ಯರು ತಿಳಿಸಿದ್ದಾರೆ.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ: 080 - 45557160 /161/ 162/ 163/ 164 9845114560 / 9731810277/ 9886213331

PUBLIC NOTICE

ಮಾನ್ಯ ಗೌರವಾನ್ವಿತ ಪ್ರಿನ್ಸಿಪಲ್ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ನೆಲಮಂಗಲ
Crl.Misc. 199/2024
ಅರ್ಜಿದಾರರು: ಶ್ರೀ ಕರಿಯಪ್ಪ ಮತ್ತು ಇತರರು
ವಿರುದ್ಧ
ಎದುರುದಾರರು: ತಹಶೀಲ್ದಾರ್, ನೆಲಮಂಗಲ, ಬೆಂಗಳೂರು ಗ್ರಾಮಾಂತರ ಜಿಲ್ಲೆ.
ಪತ್ರಿಕಾ ಪ್ರಕಟಣೆ
ಈ ಮೇಲ್ಕಂಡ ಅರ್ಜಿದಾರರ ಮುತ್ತಜ್ಜ ಶ್ರೀ ಕರೆಅಜ್ಜಯ್ಯ ಬಿನ್ ಲೇಟ್ ಕರೇತಿಮ್ಮಯ್ಯನವರು ದಿನಾಂಕ: 08.09.1977 ರಂದು ಚಂದನ ಹೊಸಹಳ್ಳಿ ಗ್ರಾಮ, ಸೋಂಪುರ ಹೋಬಳಿ ನೆಲಮಂಗಲ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇಲ್ಲಿ ಮರಣ ಹೊಂದಿದ್ದು, ಅರ್ಜಿದಾರರ ಮುತ್ತಜ್ಜ ಮರಣ ಪ್ರಮಾಣ ಪತ್ರ ನೀಡುವಂತೆ ಎದುರುದಾರರಾದ ತಹಶೀಲ್ದಾರ್ ರವರಿಗೆ ನಿರ್ದೇಶನ ನೀಡುವಂತೆ ಆದೇಶಿಸಬೇಕೆಂದು ಕೋರಿ, ಮೇಲ್ಕಂಡ ನ್ಯಾಯಾಲಯದಲ್ಲಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಮಾನ್ಯ ನ್ಯಾಯಾಲಯವು ಸದರಿ ಅರ್ಜಿಯ ವಿಚಾರಣೆ ಯನ್ನು ದಿನಾಂಕ: 21.08.2024 ರಂದು ಬೆಳಗ್ಗೆ 11.00 ಗಂಟೆಗೆ ನಿಗಧಿಗೊಳಿಸಿದ್ದು, ಮೇಲ್ಕಂಡ ಅರ್ಜಿಗೆ ಸಂಬಂಧಿಸಿದಂತೆ ಯಾವುದೇ ಆಕ್ಷೇಪಣೆಗಳಿದ್ದಲ್ಲಿ ಅಂತಹ ವ್ಯಕ್ತಿಗಳು, ಮೇಲ್ಕಂಡ ದಿನಾಂಕದಂದು ತಾವಾಗಲೀ, ತಮ್ಮ ವಕೀಲರ ಮೂಲಕವಾಗಲೀ ಹಾಜರಾಗಲು ಈ ಮೂಲಕ ತಿಳಿಯಪಡಿಸಲಾಗಿದೆ. ತಪ್ಪಿದಲ್ಲಿ ಮಾನ್ಯ ನ್ಯಾಯಾಲಯವು ಸದರಿ ಅರ್ಜಿಗೆ ಯಾವುದೇ ಆಕ್ಷೇಪಣೆಗಳಿಲ್ಲವೆಂದು ಪರಿಗಣಿಸಿ ಸದರಿ ಅರ್ಜಿಯನ್ನು ಏಕಪಕ್ಷೀಯವಾಗಿ ಇತ್ಯರ್ಥಪಡಿಸುತ್ತದೆ. ಪ್ರಕಟಣೆ: ಪ್ರಜಾವಾಣಿ ಮತ್ತು ಡೆಕ್ಕನ್ ಹೆರಾಲ್ಡ್ ದಿನ ಪತ್ರಿಕೆಗಳಲ್ಲಿ ಪ್ರಕಟಣೆ ಮಾಡಲಾಗುವುದು.
ಈ ಪ್ರಕಟಣೆಯನ್ನು ಮಾನ್ಯ ನ್ಯಾಯಾಲಯದ ಸಹಿ ಮತ್ತು ಮೊಹರಿನೊಂದಿಗೆ ದಿನಾಂಕ: 06/07/2024 ರಂದು ನೀಡಲಾಯಿತು.
ಮಾನ್ಯ ನ್ಯಾಯಾಲಯದ ಆದೇಶ
ಶಿರಸ್ತೇದಾರರು
ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನೆಲಮಂಗಲ
ಅರ್ಜಿದಾರರ ಪರ ವಕೀಲರು
ಕೃಷ್ಣ, ಬಿ.ಎ. ಎಲ್.ಎಲ್.ಬಿ, ವಕೀಲರು, ನಂ. 80/3, 2ನೇ ಮಹಡಿ, 26ನೇ ಕ್ರಾಸ್, 6ನೇ ಬ್ಲಾಕ್, ಜಯನಗರ, ಯಡಿಯೂರು, ಕನಕಪುರ ಮುಖ್ಯ ರಸ್ತೆ, ಬೆಂಗಳೂರು-560070.

ಮಾನ್ಯ ಗೌರವಾನ್ವಿತ ಪ್ರಿನ್ಸಿಪಲ್ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ನೆಲಮಂಗಲ
Crl.Misc. 200/2024
ಅರ್ಜಿದಾರರು: ಶ್ರೀ ಕರಿಯಪ್ಪ ಮತ್ತು ಇತರರು
ವಿರುದ್ಧ
ಎದುರುದಾರರು: ತಹಶೀಲ್ದಾರ್, ನೆಲಮಂಗಲ, ಬೆಂಗಳೂರು ಗ್ರಾಮಾಂತರ ಜಿಲ್ಲೆ.
ಪತ್ರಿಕಾ ಪ್ರಕಟಣೆ
ಈ ಮೇಲ್ಕಂಡ ಅರ್ಜಿದಾರರ ಅಜ್ಜಿ ಶ್ರೀಮತಿ ತಾಯಮ್ಮ ಕೋಂ ಲೇಟ್ ಹಾವಿನಕರಿಯಪ್ಪನವರು ದಿನಾಂಕ: 01.10.1995 ರಂದು ಚಂದನಹೊಸಹಳ್ಳಿ ಗ್ರಾಮ, ಸೋಂಪುರ ಹೋಬಳಿ, ನೆಲಮಂಗಲ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇಲ್ಲಿ ಮರಣ ಹೊಂದಿದ್ದು, ಅರ್ಜಿದಾರರ ಅಜ್ಜಿ ಮರಣ ಪ್ರಮಾಣ ಪತ್ರ ನೀಡುವಂತೆ ಎದುರುದಾರರಾದ ತಹಶೀಲ್ದಾರ್ ರವರಿಗೆ ನಿರ್ದೇಶನ ನೀಡುವಂತೆ ಆದೇಶಿಸಬೇಕೆಂದು ಕೋರಿ, ಮೇಲ್ಕಂಡ ನ್ಯಾಯಾಲಯದಲ್ಲಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಮಾನ್ಯ ನ್ಯಾಯಾಲಯವು ಸದರಿ ಅರ್ಜಿಯ ವಿಚಾರಣೆಯನ್ನು ದಿನಾಂಕ: 21.08.2024 ರಂದು ಬೆಳಗ್ಗೆ 11.00 ಗಂಟೆಗೆ ನಿಗಧಿಗೊಳಿಸಿದ್ದು, ಮೇಲ್ಕಂಡ ಅರ್ಜಿಗೆ ಸಂಬಂಧಿಸಿದಂತೆ ಯಾವುದೇ ಆಕ್ಷೇಪಣೆಗಳಿದ್ದಲ್ಲಿ ಅಂತಹ ವ್ಯಕ್ತಿಗಳು, ಮೇಲ್ಕಂಡ ದಿನಾಂಕದಂದು ತಾವಾಗಲೀ, ತಮ್ಮ ವಕೀಲರ ಮೂಲಕವಾಗಲೀ ಹಾಜರಾಗಲು ಈ ಮೂಲಕ ತಿಳಿಯಪಡಿಸಲಾಗಿದೆ. ತಪ್ಪಿದಲ್ಲಿ ಮಾನ್ಯ ನ್ಯಾಯಾಲಯವು ಸದರಿ ಅರ್ಜಿಗೆ ಯಾವುದೇ ಆಕ್ಷೇಪಣೆಗಳಿಲ್ಲವೆಂದು ಪರಿಗಣಿಸಿ ಸದರಿ ಅರ್ಜಿಯನ್ನು ಏಕಪಕ್ಷೀಯವಾಗಿ ಇತ್ಯರ್ಥಪಡಿಸುತ್ತದೆ. ಪ್ರಕಟಣೆ ಪ್ರಜಾವಾಣಿ ಮತ್ತು ಡೆಕ್ಕನ್ ಹೆರಾಲ್ಡ್ ದಿನ ಪತ್ರಿಕೆಗಳಲ್ಲಿ ಪ್ರಕಟಣೆ ಮಾಡಲಾಗುವುದು.
ಈ ಪ್ರಕಟಣೆಯನ್ನು ಮಾನ್ಯ ನ್ಯಾಯಾಲಯದ ಸಹಿ ಮತ್ತು ಮೊಹರಿನೊಂದಿಗೆ ದಿನಾಂಕ 06/07/2024 ರಂದು ನೀಡಲಾಯಿತು.
ಮಾನ್ಯ ನ್ಯಾಯಾಲಯದ ಆದೇಶ
ಶಿರಸ್ತೇದಾರರು
ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನೆಲಮಂಗಲ
ಅರ್ಜಿದಾರರ ಪರ ವಕೀಲರು
ಕೃಷ್ಣ, ಬಿ.ಎ, ಎಲ್.ಎಲ್.ಬಿ, ವಕೀಲರು, ನಂ, 80/3, 2ನೇ ಮಹಡಿ, 26ನೇ ಕ್ರಾಸ್, 6ನೇ ಬ್ಲಾಕ್, ಜಯನಗರ, ಯಡಿಯೂರು, ಕನಕಪುರ ಮುಖ್ಯ ರಸ್ತೆ, ಬೆಂಗಳೂರು-560070.

PUBLIC NOTICE
For Disposal of Patients Medical Records
CHINMAYA MISSION HOSPITAL Bangalore - 560038
Tel: 080-25026100/364
This is to inform all our Patients/ Concerned that, the old Medical records pertaining to the **Out-Patients** for the Period 01/01/2020 to 31/12/2022 & **In-patients** from 01/01/2018 to 31/12/2018 will be destroyed as per the retention policy of the Hospital.
Whosoever interested can contact Medical Records Department of our Hospital to collect their records **within 1 Month** from the date of this notification with valid ID proof, Registration number, Admission & Discharge details.
Note: Not applicable to Medico- Legal Cases, Birth & Death Records.
Sd/- Medical Director

ಮಾನ್ಯ ಗೌರವಾನ್ವಿತ ಪ್ರಿನ್ಸಿಪಲ್ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ನೆಲಮಂಗಲ
Crl.Misc. 201/2024
ಅರ್ಜಿದಾರರು: ಶ್ರೀ ಕರಿಯಪ್ಪ ಮತ್ತು ಇತರರು
ವಿರುದ್ಧ
ಎದುರುದಾರರು: ತಹಶೀಲ್ದಾರ್, ನೆಲಮಂಗಲ, ಬೆಂಗಳೂರು ಗ್ರಾಮಾಂತರ ಜಿಲ್ಲೆ.
ಪತ್ರಿಕಾ ಪ್ರಕಟಣೆ
ಈ ಮೇಲ್ಕಂಡ ಅರ್ಜಿದಾರರ ಮುತ್ತಜ್ಜಿ ಶ್ರೀಮತಿ ದೊಡ್ಡಮ್ಮ ಕೋಂ ಲೇಟ್ ಕರೆಅಜ್ಜಯ್ಯ ನವರು ದಿನಾಂಕ: 07.06.1987 ರಂದು ಚಂದನ ಹೊಸಹಳ್ಳಿ ಗ್ರಾಮ, ಸೋಂಪುರ ಹೋಬಳಿ ನೆಲಮಂಗಲ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇಲ್ಲಿ ಮರಣ ಹೊಂದಿದ್ದು, ಅರ್ಜಿದಾರರ ಮುತ್ತಜ್ಜಿ ಮರಣ ಪ್ರಮಾಣ ಪತ್ರ ನೀಡುವಂತೆ ಎದುರುದಾರರಾದ ತಹಶೀಲ್ದಾರ್ ರವರಿಗೆ ನಿರ್ದೇಶನ ನೀಡುವಂತೆ ಆದೇಶಿಸಬೇಕೆಂದು ಕೋರಿ, ಮೇಲ್ಕಂಡ ನ್ಯಾಯಾಲಯದಲ್ಲಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಮಾನ್ಯ ನ್ಯಾಯಾಲಯವು ಸದರಿ ಅರ್ಜಿಯ ವಿಚಾರಣೆಯನ್ನು ದಿನಾಂಕ: 21.08.2024 ರಂದು ಬೆಳಗ್ಗೆ 11.00 ಗಂಟೆಗೆ ನಿಗಧಿಗೊಳಿಸಿದ್ದು, ಮೇಲ್ಕಂಡ ಅರ್ಜಿಗೆ ಸಂಬಂಧಿಸಿದಂತೆ ಯಾವುದೇ ಆಕ್ಷೇಪಣೆಗಳಿದ್ದಲ್ಲಿ ಅಂತಹ ವ್ಯಕ್ತಿಗಳು, ಮೇಲ್ಕಂಡ ದಿನಾಂಕದಂದು ತಾವಾಗಲೀ, ತಮ್ಮ ವಕೀಲರ ಮೂಲಕವಾಗಲೀ ಹಾಜರಾಗಲು ಈ ಮೂಲಕ ತಿಳಿಯಪಡಿಸಲಾಗಿದೆ. ತಪ್ಪಿದಲ್ಲಿ, ಮಾನ್ಯ ನ್ಯಾಯಾಲಯವು ಸದರಿ ಅರ್ಜಿಗೆ ಯಾವುದೇ ಆಕ್ಷೇಪಣೆಗಳಿಲ್ಲವೆಂದು ಪರಿಗಣಿಸಿ ಸದರಿ ಅರ್ಜಿಯನ್ನು ಏಕಪಕ್ಷೀಯವಾಗಿ ಇತ್ಯರ್ಥಪಡಿಸುತ್ತದೆ. ಪ್ರಕಟಣೆ ಪ್ರಜಾವಾಣಿ ಮತ್ತು ಡೆಕ್ಕನ್ ಹೆರಾಲ್ಡ್ ದಿನ ಪತ್ರಿಕೆಗಳಲ್ಲಿ ಪ್ರಕಟಣೆ ಮಾಡಲಾಗುವುದು.
ಈ ಪ್ರಕಟಣೆಯನ್ನು ಮಾನ್ಯ ನ್ಯಾಯಾಲಯದ ಸಹಿ ಮತ್ತು ಮೊಹರಿನೊಂದಿಗೆ ದಿನಾಂಕ 06/07/2024 ರಂದು ನೀಡಲಾಯಿತು.
ಮಾನ್ಯ ನ್ಯಾಯಾಲಯದ ಆದೇಶ
ಶಿರಸ್ತೇದಾರರು
ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನೆಲಮಂಗಲ
ಅರ್ಜಿದಾರರ ಪರ ವಕೀಲರು
ಕೃಷ್ಣ, ಬಿ.ಎ, ಎಲ್.ಎಲ್.ಬಿ, ವಕೀಲರು ನಂ. 80/3, 2ನೇ ಮಹಡಿ, 26ನೇ ಕ್ರಾಸ್, 6ನೇ ಬ್ಲಾಕ್, ಜಯನಗರ, ಯಡಿಯೂರು, ಕನಕಪುರ ಮುಖ್ಯ ರಸ್ತೆ, ಬೆಂಗಳೂರು-560070.

JOB OPPORTUNITIES

Teachers/ Professors

515 ABW HIGH SCHOOL
Cambridge Road Cross Halasuru, Bangalore-08
REQUIRES TEACHING & NON-TEACHING STAFF on Contract Basis
Kindly Visit: https://515armyschool.co.in/recruitment
OR
Contact : 080-25307559

WANTED BE / Diploma / ITI in Electrical, Electronics Mechanical to take part time / Full time Diploma Day & Evening classes and M.A, B.A, B.Ed, for English and Social for High school classes. Contact personally with resume, original documents. Nadgir Institute Near Modi Hospital Rajajinagar Bangalore – 560010. Ph: 23387333, 8867065525, 9731721446

PERSONAL

Change of Name

CHANGE OF NAME
I, **MAHAMMAD ISMAIL KAJI,** S/o Mahammad Ibrahim Kaji, residing at #2055, 2nd Wing, Casa Serenita, Sobha City,Thanisandra Main Road, Hegde Nagar, Bangalore-560077, have changed my name to **MOHMMED ISMAIL KAZI** vide affidavit dated 19.07.2024, before notary I.Kanikha Raja, Bangalore. Henceforth I shall be known as **MOHMMED ISMAIL KAZI** only

CHANGE OF NAME
I, **S Meenakshi Sundereswaran S/o Late. Swamynathan (Old)** Residing at No.40, Pooja Garden Rajaram Layout, 4th Cross, Canara Bank, Kalkere, Bangalore-560043, have changed my name to **S MEENAKSHI SUNDARESWARAN** & father's name to **Late. SWAMINATHAN (New)** vide affidavit dated 22-07-2024, sworn before notary Y.R. Chandrasekar, Bangalore.

CHANGE OF NAME
I, **UDAY DAS** alias **UDAY KUMAR** Residing at No.89, B11, BDA Flat, Domlur, Near Raghavendra Temple, Domlur 2nd Stage, Bangalore North, Bangalore-560071, declare that the above names pertain to me and henceforth I shall be known as **UDAY KUMAR** vide affidavit dated 22-07-2024, sworn before notary A. Idinabba, Bangalore.

I, SHWETA B PATIL D/o Basanagouda Patil & W/o.Santosh Patil R/o.Flat#005 Sai Balaji Elegance Nagamuneshwara Temple, Revenue Layout, Parappana Agrahara Bangalore-560100 have changed my`Name to SHWETA PATIL vide`affidavit dated:20.7.2024 before`Notary Mamatha N.K. Bengaluru

I, INDIRA MALU aged about 61 years, W/o Bal Chand Maloo residing at No.4, Senehlok, 5th Main, 5th Cross, Near Om Shakti Temple, Hanumagiri Nagar, Subramayapura Bangalore-560061 have changed my name to INDIRA SURANA vide affidavit dated 19.07.2024 sworn before Advocate & Notary B.Prasanna Bangalore

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

DH DECCAN HERALD Classifieds More value, more impact | ಪ್ರಜಾವಾಣಿ
EDUCATION
Book your Educational Related Ads in DH All Karnataka + Prajavani Bengaluru City
www.dhclassifieds.com BOOK NOW
*Conditions apply
For more details contact:
+91 9731810277 | +91 9886213331
+91 9901641752 | 080- 45557163/164

ಕಿರ್ಲೋಸ್ಕರ್ ಎಲೆಕ್ಟ್ರಿಕ್ ಕಂಪನಿ ಲಿಮಿಟೆಡ್.,

ನೋಂದಾಯಿತ ಕಛೇರಿ : ಸಂ. 19, 2ನೇ ಮುಖ್ಯ ರಸ್ತೆ, ಪೀಣ್ಯ 1ನೇ ಸ್ಟೇಜ್, ಫೇಸ್–1, ಪೀಣ್ಯ, ಬೆಂಗಳೂರು – 560058. **ದೂರವಾಣಿ :** 080 28397256; **ಫ್ಯಾಕ್ಸ್ :** 080 28396727;
ವೆಬ್‌ಸೈಟ್ : www.kirloskarelectric.com **ಇ–ಮೇಲ್ :** investors@kirloskarelectric.com
CIN : L31100KA1946PLC000415

ಅಂಚೆ ಮತಪತ್ರದ ಸೂಚನೆ ಮತ್ತು ಇ–ಮತದಾನದ ಬಗ್ಗೆ ಮಾಹಿತಿ:

ಸೆಕ್ಷನ್ 108, 110 ಕಂಪನಿಗಳ ಕಾಯಿದೆ, 2013 ("ದಿ ಆಕ್ಟ್"), ನಿಯಮ 20 ಮತ್ತು ನಿಯಮ 22 ಕಂಪನಿಗಳ (ನಿರ್ವಹಣೆ ಮತ್ತು ಆಡಳಿತ) ನಿಯಮಗಳು, 2014 ("ನಿಯಮಗಳು") ಮತ್ತು ಇತರ ಅನ್ವಯವಾಗುವ ನಿಬಂಧನೆಗಳಿಗೆ ಅನುಸಾರವಾಗಿ ಸದಸ್ಯರಿಗೆ ಈ ಮೂಲಕ ತಿಳಿಸುವುದೇನೆಂದರೆ, ಇನ್‌ಸ್ಟಿಟ್ಯೂಟ್ ಆಫ್ ಕಂಪನಿ ಸೆಕ್ರೆಟರೀಸ್ ಆಫ್ ಇಂಡಿಯಾ ಹೊರಡಿಸಿದ ಸಾಮಾನ್ಯ ಸಭೆಗಳ ಮೇಲಿನ ಸೆಕ್ರೆಟರಿಯಲ್ ಸ್ಟ್ಯಾಂಡರ್ಡ್ ("SS-2") ಮತ್ತು ನಿಯಮ 44 ರಿಂದ ಹೊರಡಿಸಲಾದ ಸೆಕ್ಯುರಿಟೀಸ್ ಅಂಡ್ ಎಕ್ಸ್ಚೇಂಜ್ ಬೋರ್ಡ್ ಆಫ್ ಇಂಡಿಯಾದ (ಪಟ್ಟಿ ಮಾಡುವ ಬಾಧ್ಯತೆಗಳು ಮತ್ತು ಬಹಿರಂಗಪಡಿಸುವಿಕೆಯ ಅಗತ್ಯತೆಗಳು) ನಿಯಮಗಳು, 2015, ("SEBI ಪಟ್ಟಿಯ ನಿಯಮಗಳು 2015") (ಯಾವುದೇ ಶಾಸನಬದ್ಧ ಮಾರ್ಪಾಡುಗಳು ಅಥವಾ ಅದರ ಮರು-ಅನುಷ್ಠಾನವನ್ನು ಒಳಗೊಂಡಂತೆ) ಸಾಮಾನ್ಯ ಸುತ್ತೋಲೆ ನಂ. 09/2023 ದಿನಾಂಕ ಸೆಪ್ಟೆಂಬರ್ 25, 2023 ಮತ್ತು SEBI ಸುತ್ತೋಲೆ ನಂ. SEBI/HO/CFD/CFD-PoD-2/P/CIR/2023/167 ದಿನಾಂಕ ಅಕ್ಟೋಬರ್ 07, 2023, ರಲ್ಲಿ ನಿಗದಿಪಡಿಸಿದಂತೆ ನಿರ್ಣಯಗಳು ಅಂಚೆ ಮತಪತ್ರದ ಸೂಚನೆಯನ್ನು ಕಂಪನಿಯ ಸದಸ್ಯರು ಅಂಚೆ ಮತಪತ್ರದ ಮೂಲಕ ವಿದ್ಯುನ್ಮಾನ ವಿಧಾನದ ಮೂಲಕ ಮಾತ್ರ ಮತ ಚಲಾಯಿಸುವ ಮೂಲಕ ಅಂಗೀಕರಿಸಲು ಪ್ರಸ್ತಾಪಿಸಲಾಗಿದೆ ('ರಿಮೋಟ್ ಇ–ವೋಟಿಂಗ್').

MCA ಮತ್ತು SEBI ಸುತ್ತೋಲೆಗಳಿಗೆ ಅನುಸಾರವಾಗಿ, ಕಂಪನಿ / ರಿಜಿಸ್ಟ್ರಾರ್ ಮತ್ತು ಷೇರು ವರ್ಗಾವಣೆ ಏಜೆಂಟ್ / ಡಿಪಾಸಿಟರಿಗಳಲ್ಲಿ ನೋಂದಾಯಿಸಲಾದ ಇಮೇಲ್ ಐಡಿಗಳನ್ನು ಹೊಂದಿರುವ ಎಲ್ಲಾ ಸದಸ್ಯರಿಗೆ ವಿವರಣಾತ್ಮಕ ಹೇಳಿಕೆಯೊಂದಿಗೆ ಅಂಚೆ ಮತಪತ್ರದ ಸೂಚನೆಯನ್ನು ವಿದ್ಯುನ್ಮಾನವಾಗಿ ಕಳುಹಿಸಲಾಗಿದೆ. ಕಂಪನಿಯು ಸೋಮವಾರ, ಜುಲೈ 22, 2024 ರಂದು ಪೋಸ್ಟಲ್ ಬ್ಯಾಲೆಟ್ ನೋಟೀಸ್ ರವಾನೆಯನ್ನು ಪೂರ್ಣಗೊಳಿಸಿದೆ. ಅಂಚೆ ಮತಪತ್ರದ ಸೂಚನೆಯನ್ನು ಕಂಪನಿಯ ವೆಬ್‌ಸೈಟ್ www.kirloskarelectric.com ನಲ್ಲಿಯೂ ಸಹ ಲಭ್ಯವಾಗುವಂತೆ ಮಾಡಲಾಗಿದೆ. ಈ ಮಾಹಿತಿಯು ಸ್ಟಾಕ್ ಎಕ್ಸ್ಚೇಂಜ್‌ಗಳಾದ BSE ಲಿಮಿಟೆಡ್, www.bseindia.com ಮತ್ತು ನ್ಯಾಷನಲ್ ಸ್ಟಾಕ್ ಎಕ್ಸ್ಚೇಂಜ್ ಆಫ್ ಇಂಡಿಯಾ ಲಿಮಿಟೆಡ್, www.nseindia.com ಮತ್ತು CDSL ವೆಬ್‌ಸೈಟ್ www.evotingindia.com ನಲ್ಲಿ ಸಹ ಲಭ್ಯವಿದೆ.

ಕಂಪನಿಗಳ ಕಾಯಿದೆ, 2013 ರ ಸೆಕ್ಷನ್ 108 ರ ಪ್ರಕಾರ, MCA ಸುತ್ತೋಲೆಗಳೊಂದಿಗೆ, ಕಂಪನಿಯು ತನ್ನ ಎಲ್ಲಾ ಸದಸ್ಯರಿಗೆ ರಿಮೋಟ್ ಇ–ವೋಟಿಂಗ್ ಸೌಲಭ್ಯವನ್ನು ಒದಗಿಸಿದೆ ಹಾಗೂ ಸೆಂಟ್ರಲ್ ಡಿಪಾಸಿಟರಿ ಸರ್ವಿಸಸ್ (ಇಂಡಿಯಾ) ಲಿಮಿಟೆಡ್ (CDSL) ಒದಗಿಸಿದ ರಿಮೋಟ್ ಇ–ವೋಟಿಂಗ್ ಸೇವೆಗಳ ಮೂಲಕ ಸದಸ್ಯರು ತಮ್ಮ ಮತಗಳನ್ನು ವಿದ್ಯುನ್ಮಾನವಾಗಿ ಚಲಾಯಿಸಬಹುದು. ಈ ಉದ್ದೇಶಕ್ಕಾಗಿ ಕಟ್–ಆಫ್ ದಿನಾಂಕವು **ಶುಕ್ರವಾರ, ಜುಲೈ 12, 2024** ಆಗಿದೆ ಮತ್ತು ಸದಸ್ಯರ ರಿಜಿಸ್ಟರ್‌ನಲ್ಲಿ ಅಥವಾ ಕಟ್–ಆಫ್ ದಿನಾಂಕದಂದು ಡಿಪಾಸಿಟರಿಗಳಲ್ಲಿ ನಿರ್ವಹಿಸುವ ಲಾಭದಾಯಕ ಮಾಲೀಕರ ರಿಜಿಸ್ಟರ್‌ನಲ್ಲಿ ಹೆಸರು ನೋಂದಾಯಿಸಿರುವ ಸದಸ್ಯರು ಮಾತ್ರ ಇ–ಮತದಾನ ಸೇವೆಗಳನ್ನು ಪಡೆಯಲು ಅರ್ಹರಾಗಿರುತ್ತಾರೆ. ಕಟ್–ಆಫ್ ದಿನಾಂಕದ ನಂತರ ಸದಸ್ಯರಾದವರು ಈ ಸೂಚನೆಯನ್ನು ಮಾಹಿತಿ ಉದ್ದೇಶಕ್ಕಾಗಿ ಮಾತ್ರ ಎಂದು ಪರಿಗಣಿಸಬೇಕು. ಇ–ಮತದಾನದ ಅವಧಿಯು **ಮಂಗಳವಾರ, ಜುಲೈ 23, 2024** ರಂದು 9.00 A.M (IST) ಕ್ಕೆ ಪ್ರಾರಂಭವಾಗುತ್ತದೆ ಮತ್ತು **ಬುಧವಾರ, ಆಗಸ್ಟ್ 21, 2024** ರಂದು 5.00 P.M (IST) ಕ್ಕೆ ಕೊನೆಗೊಳ್ಳುತ್ತದೆ. ಆನಂತರ CDSL ಇ–ವೋಟಿಂಗ್ ಮಾಡ್ಯೂಲ್ ಅನ್ನು ಮತ ಚಲಾಯಿಸಲು ನಿಷ್ಕ್ರಿಯಗೊಳಿಸುತ್ತದೆ. ಒಮ್ಮೆ ನಿರ್ಣಯದ ಮೇಲಿನ ಮತವನ್ನು ಸದಸ್ಯರು ಚಲಾಯಿಸಿದರೆ, ನಂತರ ಅದನ್ನು ಬದಲಾಯಿಸಲು ಅಥವಾ ಮತ್ತೊಮ್ಮೆ ಮತ ಚಲಾಯಿಸಲು ಅವರಿಗೆ ಅನುಮತಿಸಲಾಗುವುದಿಲ್ಲ.

ಡಿಮೆಟಿರಿಯಲೈಸ್ಡ್ ಮತ್ತು ಫಿಸಿಕಲ್ ರೀತಿಗಳಲ್ಲಿ ಷೇರುಗಳನ್ನು ಹೊಂದಿರುವ ಸದಸ್ಯರು ಹಾಗೂ ತಮ್ಮ ಇ–ಮೇಲ್ ಐಡಿಯನ್ನು ನೋಂದಾಯಿಸದ ಸದಸ್ಯರಿಗೆ ರಿಮೋಟ್ ಇ–ವೋಟಿಂಗ್ ವಿಧಾನವನ್ನು ಪೋಸ್ಟಲ್ ಬ್ಯಾಲೆಟ್ ಸೂಚನೆಯಲ್ಲಿ ಒದಗಿಸಲಾಗಿದೆ.

ಶ್ರೀ ಸುಧೀಂದ್ರ ಪಿ ಫಾಲಿ, ಪ್ರಾಕ್ಟಿಸಿಂಗ್ ಕಂಪನಿ ಕಾರ್ಯದರ್ಶಿ (ACS No. 7037 / PCS No. 7537), ಬೆಳಗಾವಿ, ಇವರನ್ನು ಇ–ಮತದಾನ ಪ್ರಕ್ರಿಯೆಯನ್ನು ನ್ಯಾಯಯುತ ಮತ್ತು ಪಾರದರ್ಶಕ ರೀತಿಯಲ್ಲಿ ನಡೆಸಲು ಪರಿಶೀಲಕರಾಗಿ ನೇಮಿಸಲಾಗಿದೆ. ಪೋಸ್ಟಲ್ ಬ್ಯಾಲೆಟ್ ಮೂಲಕ ನಡೆಸಿದ ಇ–ವೋಟಿಂಗ್ ಫಲಿತಾಂಶವನ್ನು ಪರಿಶೀಲಕರ ವರದಿಯೊಂದಿಗೆ ಆಗಸ್ಟ್ 22, 2024 ರ ಗುರುವಾರ ಅಥವಾ ಮೊದಲು ಪ್ರಕಟಿಸಲಾಗುತ್ತದೆ. ಇದನ್ನು ಕಂಪನಿಯ ವೆಬ್‌ಸೈಟ್‌ನಲ್ಲಿ www.kirloskarelectric.com ನಲ್ಲಿ ಪ್ರದರ್ಶಿಸಲಾಗುತ್ತದೆ ಹಾಗೂ ಸ್ಟಾಕ್ ಎಕ್ಸ್‌ಚೇಂಜ್‌ಗಳ ವೆಬ್‌ಸೈಟ್‌ಗಳು ಅಂದರೆ, BSE ಲಿಮಿಟೆಡ್‌ನ ವೆಬ್‌ಸೈಟ್ www.bseindia.com ನಲ್ಲಿ, ನ್ಯಾಷನಲ್ ಸ್ಟಾಕ್ ಎಕ್ಸ್‌ಚೇಂಜ್ ಆಫ್ ಇಂಡಿಯಾ ಲಿಮಿಟೆಡ್‌ನ ವೆಬ್‌ಸೈಟ್ www.nseindia.com ನಲ್ಲಿ, ಮತ್ತು CDSL ನ ವೆಬ್‌ಸೈಟ್ www.evotingindia.com ನಲ್ಲಿ ಪ್ರಕಟಿಸಲಾಗುವುದು.

ಇ–ಮತದಾನಕ್ಕೆ ಸಂಬಂಧಿಸಿದಂತೆ ಯಾವುದೇ ಪ್ರಶ್ನೆ / ಕುಂದುಕೊರತೆಗಳಿದ್ದರೆ ಅವುಗಳನ್ನು ಶ್ರೀ ಸಿ. ಎಸ್ ಹರೀಶ, ಪ್ರಾದೇಶಿಕ ವ್ಯವಸ್ಥಾಪಕರು–ಕರ್ನಾಟಕ, CDSL, ಅವರಿಗೆ 022–23058738 ಮತ್ತು 22–23058542–43 ಮುಖಾಂತರ ಅಥವಾ helpdesk.evoting@cdslindia.com ಗೆ ಮತ್ತು ಒಂದು ಪ್ರತಿಯೊಂದಿಗೆ investors@kirloskarelectric.com ನಲ್ಲಿ ಸಲ್ಲಿಸಬಹುದು.

ನಿರ್ದೇಶಕರ ಮಂಡಳಿಯ ಆದೇಶದಂತೆ,
ಕಿರ್ಲೋಸ್ಕರ್ ಎಲೆಕ್ಟ್ರಿಕ್ ಕಂಪನಿ ಲಿಮಿಟೆಡ್,
ಸಹಿ/–
ಮಹಾಬಲೇಶ್ವರ ಭಟ್,
ಕಂಪನಿ ಕಾರ್ಯದರ್ಶಿ ಮತ್ತು ಅನುಸರಣೆ ಅಧಿಕಾರಿ

ಸ್ಥಳ : ಬೆಂಗಳೂರು
ದಿನಾಂಕ : ಜುಲೈ 22, 2024

ಅಸಭ್ಯ ವರ್ತನೆ: ತರಬೇತುದಾರ ಅಣ್ಣಪ್ಪ ಚಾಲನಾ ಪರವಾನಗಿ ಸಹ ಅಮಾನತು

ಮಾರುತಿ ಡ್ರೈವಿಂಗ್ ಸ್ಕೂಲ್ ಪರವಾನಗಿ ರದ್ದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಸವೇಶ್ವರ ನಗರದ ಮಾರುತಿ ಡ್ರೈವಿಂಗ್ ಸ್ಕೂಲ್‌ನ ಪರವಾನಗಿ ಹಾಗೂ ಅದೇ ಶಾಲೆಯ ತರಬೇತುದಾರನ ಚಾಲನಾ ಪರವಾನಗಿಯನ್ನು (ಡಿಎಲ್) ಸಾರಿಗೆ ಮತ್ತು ರಸ್ತೆ ಸುರಕ್ಷತಾ ಇಲಾಖೆ ರದ್ದುಗೊಳಿಸಿದೆ.

ಯುವತಿಗೆ ಕಾರು ಚಾಲನೆಯ ತರಬೇತಿ ನೀಡುವ ವೇಳೆ ಅಸಭ್ಯವಾಗಿ ವರ್ತಿಸಿದ್ದ ಆರೋಪದ ಅಡಿ ಕಾರು ತರಬೇತಿದಾರನ ವಿರುದ್ಧ ಬಸವೇಶ್ವರ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಪ್ರಕರಣ ದಾಖಲಾದ ಬೆನ್ನಲ್ಲೇ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅವರ ಸೂಚನೆಯಂತೆ ಸಾರಿಗೆ ಇಲಾಖೆ ಕ್ರಮ ಕೈಗೊಂಡಿದೆ.

ಮುಖ್ಯಾಂಶಗಳು

- 18 ವರ್ಷದ ಯುವತಿ ನೀಡಿದ್ದ ದೂರು
- ಸಾರಿಗೆ ಸಚಿವರ ಸೂಚನೆಯಂತೆ ಇಲಾಖೆ ಕ್ರಮ
- ಗಾಬರಿಗೊಂಡಿದ್ದರೂ ಮನೆಯತ್ತ ಕಾರು ತಿರುಗಿಸಿದ್ದ ಯುವತಿ

ನಗರದ ಯಾವುದೇ ಡ್ರೈವಿಂಗ್ ಶಾಲೆಯಲ್ಲೂ ಈ ರೀತಿಯ ಘಟನೆಗಳು ನಡೆಯಬಾರದು. ಈ ನಿಟ್ಟಿನಲ್ಲಿ ಬಿಗಿ ಕ್ರಮ ಕೈಗೊಳ್ಳಬೇಕು ಎಂದು ಸಚಿವರು ಇಲಾಖೆಯ ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಮಹಾಲಕ್ಷ್ಮೀಪುರದ 18 ವರ್ಷ ವಯಸ್ಸಿನ ಯುವತಿ ನೀಡಿದ್ದ ದೂರು ಆಧರಿಸಿ, ಬಸವೇಶ್ವರನಗರದ ಮಾರುತಿ ಡ್ರೈವಿಂಗ್ ಸ್ಕೂಲ್‌ನ ತರಬೇತುದಾರ ಅಣ್ಣಪ್ಪ ಅವರ ವಿರುದ್ಧ ಪೊಲೀಸರು ಪ್ರಕರಣ ದಾಖಲು ಮಾಡಿಕೊಂಡು ತನಿಖೆ ನಡೆಸುತ್ತಿದ್ದಾರೆ.

ಏನಿದು ಪ್ರಕರಣ?: 'ದೂರು ನೀಡಿದ್ದ ಯುವತಿ ಕಾರು ಚಾಲನೆ ಕಲಿಯಲು ಮಾರುತಿ ಡ್ರೈವಿಂಗ್ ಸ್ಕೂಲ್‌ಗೆ ಸೇರಿದ್ದರು. ಅಣ್ಣಪ್ಪ ಎಂಬಾತ ಕಾರು ಚಾಲನೆ ಬಗ್ಗೆ ತರಬೇತಿ ನೀಡಿದ್ದರು. ಒಂದು ತಿಂಗಳ ಕೋರ್ಸ್ ಮುಕ್ತಾಯವಾದ ಮೇಲೆ ಅಣ್ಣಪ್ಪ, 'ನಿಮ್ಮ ಮನೆಯ ಕಾರಿನಲ್ಲೇ ಪರಿಪೂರ್ಣವಾಗಿ ಚಾಲನೆ ಬಗ್ಗೆ ಹೇಳಿಕೊಡುತ್ತೇನೆ. ಒಂದು ಗಂಟೆಯ ವಿಶೇಷ ಕ್ಲಾಸ್‌ಗೆ ₹750 ಕೊಡಬೇಕು' ಎಂದು ಯುವತಿಯನ್ನು ಕೇಳಿಕೊಂಡಿದ್ದರು. ಯುವತಿ 15 ದಿನಗಳ ವಿಶೇಷ ಕ್ಲಾಸ್‌ಗೆ ಅಣ್ಣಪ್ಪ ಅವರಿಗೆ ₹10,500 ಪಾವತಿಸಿದ್ದರು. ಅದರಂತೆ ಅಣ್ಣಪ್ಪ ವಿಶೇಷ ತರಬೇತಿ ಆರಂಭಿಸಿದ್ದರು' ಎಂದು ಪೊಲೀಸರು ಹೇಳಿದರು.

'ಪ್ರತಿದಿನ ಯುವತಿಯ ಮನೆ ಬಳಿ ಬಂದು ಆಕೆಯ ಕಾರಿನಲ್ಲೇ ಅಣ್ಣಪ್ಪ ಚಾಲನೆ ತರಬೇತಿ ನೀಡುತ್ತಿದ್ದರು. ಜುಲೈ 7ರಂದು ಬೆಳಿಗ್ಗೆ 6 ಗಂಟೆ ಸುಮಾರಿಗೆ ಯುವತಿ ಮನೆ ಬಳಿ ಬಂದಿದ್ದ ಅಣ್ಣಪ್ಪ, ಯುವತಿಯನ್ನು ಕಾರಿನಲ್ಲಿ ಕರೆದುಕೊಂಡು ಚಾಲನೆ ಬಗ್ಗೆ ಹೇಳಿಕೊಡಲು ಮುಂದಾಗಿದ್ದರು. ಬಸವೇಶ್ವರ ನಗರದ ನ್ಯಾಷನಲ್ ಶಾಲೆಯ ಮೇಲ್ಸೇತುವೆಯಲ್ಲಿ ತೆರಳುವಾಗ, ಯುವತಿ ಕಾರು ಚಾಲನೆ ಮಾಡುತ್ತಿದ್ದರು. ಆಗ ಅಣ್ಣಪ್ಪ ಅಸಭ್ಯವಾಗಿ ವರ್ತಿಸಿದ್ದರು' ಎಂದು ಪೊಲೀಸರು ತಿಳಿಸಿದರು.

ತರಬೇತುದಾರನ ಅಸಭ್ಯ ವರ್ತನೆಯಿಂದ ಗಾಬರಿಗೊಂಡಿದ್ದ ಯುವತಿ ಕಾರನ್ನು ಮನೆಯತ್ತ ತಿರುಗಿಸಿದ್ದರು. ಅದಾದ ಮೇಲೆ ತರಬೇತುದಾರ ಸುಮ್ಮನಾಗಿದ್ದರು. ಅಣ್ಣಪ್ಪ ಅವರ ವಿರುದ್ಧ ಕ್ರಮ ಕೈಗೊಳ್ಳುವಂತೆ ಕೋರಿ ಯುವತಿ ಪೊಲೀಸರಿಗೆ ದೂರು ನೀಡಿದ್ದರು.

ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ 'ಆರೋಗ್ಯ ಸಂಜೀವಿನಿ': ಪರಿಶೀಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅನುದಾನರಹಿತ ಶಿಕ್ಷಣ ಸಂಸ್ಥೆಗಳ ಸಿಬ್ಬಂದಿಗೆ 'ಆರೋಗ್ಯ ಸಂಜೀವಿನಿ' ಯೋಜನೆ ವಿಸ್ತರಿಸುವ ಬಗ್ಗೆ ಆರ್ಥಿಕ ಇಲಾಖೆಯೊಂದಿಗೆ ಸಮಾಲೋಚಿಸಿ ಕ್ರಮ ಕೈಗೊಳ್ಳಲಾಗುತ್ತದೆ ಎಂದು ಶಾಲಾ ಮತ್ತು ಸಾಕ್ಷರತಾ ಸಚಿವ ಎಸ್. ಮಧು ಬಂಗಾರಪ್ಪ ತಿಳಿಸಿದರು.

ವಿಧಾನ ಪರಿಷತ್‌ನಲ್ಲಿ ಜೆಡಿಎಸ್‌ನ ಎಸ್.ಎಲ್. ಬೋಜೇಗೌಡ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, 'ಖಾಸಗಿ ಅನುದಾನರಹಿತ ಸಂಸ್ಥೆಗಳ ಸಿಬ್ಬಂದಿ ವೈದ್ಯಕೀಯ ವೆಚ್ಚ ಮರುಪಾವತಿ ಸೌಲಭ್ಯಕ್ಕೆ ಅರ್ಹರಲ್ಲ' ಎಂದರು. 'ಆರ್ಥಿಕ ವೆಚ್ಚ ಹಾಗೂ ಇತರೆ ವಿಷಯ ಚರ್ಚಿಸಿ ಕ್ರಮ ಕೈಗೊಳ್ಳಲಾಗುವುದು' ಎಂದು ಭರವಸೆ ನೀಡಿದರು.



ಯು ಎಸ್ ಅಧ್ಯಕ್ಷರು ಅಧ್ಯಕ್ಷೀಯ ಚುನಾವಣೆಯಿಂದ ಹಿಂದೆ ಸರಿದಿದ್ದಾರೆ!

ಸಂಚಾರ ನಿಯಮ ಉಲ್ಲಂಘನೆ: ಆ.1ರಿಂದ ವಿಶೇಷ ಕಾರ್ಯಾಚರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಏಕಮುಖ ಸಂಚಾರ ಮಾರ್ಗದಲ್ಲಿ ವಿರುದ್ಧ ದಿಕ್ಕಿನ ವಾಹನ ಚಾಲನೆ, ಪಾದಚಾರಿ ಮಾರ್ಗದಲ್ಲಿ ದ್ವಿಚಕ್ರ ವಾಹನ ಸವಾರಿ ಮಾಡುತ್ತಿರುವ ಚಾಲಕರ ವಿರುದ್ಧ ವಿಶೇಷ ಕಾರ್ಯಾಚರಣೆ ನಡೆಸಿ ಪ್ರಕರಣ ದಾಖಲಿಸುವಂತೆ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕ (ಸಂಚಾರ ಮತ್ತು ರಸ್ತೆ ಸುರಕ್ಷತಾ ವಿಭಾಗ) ಅಲೋಕ್ ಕುಮಾರ್ ಸೂಚಿಸಿದ್ದಾರೆ.

ಅಪಘಾತಕ್ಕೆ ಕಾರಣವಾಗಿರುವ ಪ್ರಖರ ಬೆಳಕು ಹೊರಸೂಸುವ ಮತ್ತು ಕಣ್ಣುಕುಕ್ಕುವ ಎಲ್‌ಇಡಿ ದೀಪ ಅಳವಡಿಸಿಕೊಂಡಿರುವ ವಾಹನಗಳ ವಿರುದ್ಧ ವಿಶೇಷ ಕಾರ್ಯಾಚರಣೆ ನಡೆಸಲಾಗುತ್ತಿತ್ತು. ಈಗ ಮತ್ತೊಂದು ಕಾರ್ಯಾಚರಣೆಗೆ ಪೊಲೀಸ್ ಇಲಾಖೆ ಸಜ್ಜಾಗಿದೆ.

ಹೆದ್ದಾರಿಗಳಲ್ಲಿ ವಿರುದ್ಧ ದಿಕ್ಕಿನಲ್ಲಿ ವಾಹನ ಚಾಲನೆ ಮಾಡುವವರ ಮೇಲೆ ಬಿಎನ್‌ಎಸ್ ಸೆಕ್ಷನ್ 281 ಹಾಗೂ ಮೋಟಾರು ವಾಹನ ಕಾಯ್ದೆಯ ಸೆಕ್ಷನ್ 184ರ ಅಡಿ ಎಫ್‌ಐಆರ್ ದಾಖಲು ಮಾಡಿಕೊಳ್ಳುವಂತೆ ಅವರು ಸೂಚನೆ ನೀಡಿದ್ದಾರೆ.

ಬೆಂಗಳೂರು, ಇತರ ನಗರಗಳಲ್ಲಿ ವಿರುದ್ಧ ದಿಕ್ಕಿನಲ್ಲಿ ಸಂಚರಿಸುವುದು ಹಾಗೂ ಪಾದಚಾರಿ ಮಾರ್ಗದಲ್ಲಿ ದ್ವಿಚಕ್ರ ವಾಹನ ಚಾಲನೆ ಮಾಡುವುದು ಸಾಮಾನ್ಯವಾಗಿದೆ. ಆಗಸ್ಟ್ 1ರಿಂದ ವಿಶೇಷ ಕಾರ್ಯಾಚರಣೆ ನಡೆಸಬೇಕು. ಅದಕ್ಕೂ ಮೊದಲು ಸಾಮಾಜಿಕ ಜಾಲತಾಣ, ಕರಪತ್ರ, ಧ್ವನಿವರ್ಧಕ ಮೂಲಕ ತಿಳಿವಳಿಕೆ ನೀಡಬೇಕು ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

ಜಾನ್, ಸಹಚರರ ವಿರುದ್ಧ 'ಕೋಕಾ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರ, ಬೆಂಗಳೂರು ಗ್ರಾಮಾಂತರ ಜಿಲ್ಲೆ, ರಾಮನಗರ ಸೇರಿದಂತೆ ಹಲವು ಪ್ರದೇಶಗಳಲ್ಲಿ ನಕಲಿ ದಾಖಲೆ ಸೃಷ್ಟಿಸಿ ಅಮಾಯಕರ ಆಸ್ತಿ ಕಬಳಿಸುತ್ತಿದ್ದ ಜಾನ್ ಮೋಸಸ್ ಹಾಗೂ ಆತನ ಸಹಚರರ ವಿರುದ್ಧ ಸಿಐಡಿ ಪೊಲೀಸರು, 'ಕರ್ನಾಟಕ ಸಂಘಟಿತ ಅಪರಾಧಗಳ ನಿಯಂತ್ರಣ ಕಾಯ್ದೆ' (ಕೋಕಾ) ಪ್ರಯೋಗಿಸಿದ್ದಾರೆ.

ಸ್ವತ್ತಿನ ಸಂಬಂಧ ನಕಲಿ ದಾಖಲೆ ಸೃಷ್ಟಿಸಿ, ನ್ಯಾಯಾಲಯಕ್ಕೆ ಸುಳ್ಳು ಮಾಹಿತಿ ನೀಡಿ ಡಿಕ್ರಿ ಪಡೆದುಕೊಂಡಿದ್ದ ಆರೋಪದ ಮೇರೆಗೆ ಲಘು ವ್ಯವಹಾರಗಳ ನ್ಯಾಯಾಲಯದ ರಿಜಿಸ್ಟ್ರಾರ್ 2020ರಲ್ಲಿ ಜಾನ್ ಮೋಸಸ್ ಹಾಗೂ ಸಹಚರರ ವಿರುದ್ಧ ಹಲಸೂರು ಗೇಟ್ ಪೊಲೀಸ್ ಠಾಣೆಗೆ ದೂರು ನೀಡಿದ್ದರು. ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಿದ್ದರು. ದೊಡ್ಡ ಪ್ರಮಾಣದಲ್ಲಿ ಅಕ್ರಮ ನಡೆದಿರುವುದು ಪತ್ತೆಯಾದ ಮೇಲೆ ಪ್ರಕರಣದ ತನಿಖೆಯನ್ನು ಸರ್ಕಾರ ಸಿಐಡಿಗೆ ವರ್ಗಾಯಿಸಿತ್ತು.

ಸಿಐಡಿ ತನಿಖೆ ವೇಳೆ ಈ ತಂಡದ ವಿರುದ್ಧ 100ಕ್ಕೂ ಅಧಿಕ ವಂಚನೆ ಪ್ರಕರಣಗಳು ದಾಖಲಾಗಿದ್ದವು. ಎಲ್ಲ ಪ್ರಕರಣಗಳನ್ನೂ ಸಿಐಡಿಗೆ ವರ್ಗಾವಣೆ ಮಾಡಲಾಗಿತ್ತು. 51 ಪ್ರಕರಣಗಳ ತನಿಖೆ ಪೂರ್ಣಗೊಳಿಸಿರುವ ತನಿಖಾಧಿಕಾರಿಗಳು ನ್ಯಾಯಾಲಯಕ್ಕೆ ದೋಷಾರೋಪಪಟ್ಟಿ ಸಲ್ಲಿಸಿದ್ದರು.

ವಂಚಕರ ತಂಡವು ಸಂಘಟಿತ ತಂಡ ಕಟ್ಟಿಕೊಂಡು ಬಡವರ ಜಮೀನು, ನಿವೇಶನ ಹಾಗೂ ಮನೆಗಳನ್ನು ಕಬಳಿಸಿರುವುದು, ಮೂಲ ಮಾಲೀಕರನ್ನು ಬೆದರಿಸಿ, ಕೋಟ್ಯಂತರ ರೂಪಾಯಿ ಸುಲಿಗೆ ಮಾಡಿರುವುದು ತನಿಖೆಯಲ್ಲಿ ಸಾಬೀತಾಗಿತ್ತು. ವಿವಾದಿತ ಅಥವಾ ಖಾಲಿ ಜಮೀನನನ್ನು ಹುಡುಕಿ ಆರೋಪಿಗಳು ವಂಚನೆ ಎಸಗುತ್ತಿದ್ದರು.

ವೃದ್ಧೆಗೆ ₹1.28 ಕೋಟಿ ವಂಚನೆ

ಬೆಂಗಳೂರು: ವೃದ್ಧೆಯೊಬ್ಬರ ಹೆಸರಿನಲ್ಲಿ ಸಿಮ್ ಖರೀದಿಸಿ, ಅಕ್ರಮ ಚಟುವಟಿಕೆಗೆ ಬಳಕೆ ಮಾಡುತ್ತಿರುವುದಾಗಿ ಹೇಳಿ ಟೆಲಿಕಾಂ ಇಲಾಖೆ ಅಧಿಕಾರಿಗಳ ಸೋಗಿನಲ್ಲಿ ಕರೆ ಮಾಡಿ 77 ವರ್ಷದ ವೃದ್ಧೆಗೆ ₹1.28 ಕೋಟಿ ವಂಚಿಸಿದ್ದು, ನಗರದ ಉತ್ತರ ವಿಭಾಗದ ಸೈಬರ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಟೆಲಿಕಾಂ ಇಲಾಖೆ ಅಧಿಕಾರಿಗಳ ಸೋಗಿನಲ್ಲಿ ಕರೆ ಮಾಡಿ, 'ನಿಮ್ಮ ಹೆಸರಿನಲ್ಲಿ ಮುಂಬೈನ ಅಂಧೇರಿ ವೆಸ್ಟ್ ಶಾಪ್‌ನಲ್ಲಿ ಸಿಮ್ ಖರೀದಿಯಾಗಿದ್ದು, ಅದನ್ನು ಅಕ್ರಮ ಚಟುವಟಿಕೆಗೆ ಬಳಸಲಾಗುತ್ತಿದೆ. ಆ ನಂಬರ್‌ನಿಂದ ಕಿರುಕುಳದ ಸಂದೇಶವನ್ನು ಹಲವರಿಗೆ ಕಳುಹಿಸಲಾಗುತ್ತಿದೆ. ಈ ಸಂಬಂಧ ಎಫ್‌ಐಆರ್ ದಾಖಲಾಗಿದೆಯೆಂದು ಸೈಬರ್ ವಂಚಕರು ಬೆದರಿಕೆ ಒಡ್ಡಿದ್ದರು' ಎಂದು ಪೊಲೀಸರು ತಿಳಿಸಿದರು.

'ಮುಂಬೈ ಪೊಲೀಸರೆಂದು ಹೇಳಿಕೊಂಡು ಸಂದೀಪ್ ರಾವ್, ಆಕಾಶ್ ಕುಲಹರಿ ಎಂಬುವವರು ವಿಡಿಯೊ ಕರೆ ಮಾಡಿದ್ದರು. ನಿಮ್ಮ ಹೆಸರಿನ ಕೆನರಾ ಬ್ಯಾಂಕ್ ಖಾತೆಗೆ ರಾಕೇಶ್ ಕುಂದ್ರಾ ಎಂಬುವವರು ₹60 ಕೋಟಿ ವರ್ಗಾವಣೆ ಮಾಡಿದ್ದಾರೆಂದು ನಕಲಿ ಎಫ್‌ಐಆರ್ ಹಾಗೂ ಸುಪ್ರೀಂ ಕೋರ್ಟ್‌ನ ನಕಲಿ ವಾರಂಟ್ ಅನ್ನು ಕಳುಹಿಸಿದ್ದರು. ಹೂಡಿಕೆ ಮಾಡಿರುವ ಹಣದ ಬಗ್ಗೆ ತಪಾಸಣೆ ನಡೆಸಲು ಸಹಕರಿಸದಿದ್ದರೆ ನಿಮ್ಮನ್ನು ಬಂಧಿಸುತ್ತೇವೆ ಎಂದು ವೃದ್ಧೆಗೆ ಬೆದರಿಸಿ ಹಂತಹಂತವಾಗಿ ಹಣ ಪಡೆದುಕೊಂಡಿದ್ದರು' ಎಂದು ಪೊಲೀಸರು ಹೇಳಿದರು.

ಐ.ಟಿ: ಅವಧಿ ವಿಸ್ತರಣೆಗೆ ವಿರೋಧ

ಐ.ಟಿ ಕ್ಷೇತ್ರದಲ್ಲಿ ದುಡಿಮೆಯ ಅವಧಿಯನ್ನು ದಿನಕ್ಕೆ 14 ಗಂಟೆಗಳಿಗೆ ಏರಿಸಲು ಹೊರಟ ಸರ್ಕಾರದ ನೀತಿ ವಿರುದ್ಧ ಬೆಂಗಳೂರಿನ ಐ.ಟಿ ಉದ್ಯೋಗಿಗಳು ಪ್ರತಿಭಟನೆಗೆ ಚಾಲನೆ ನೀಡಿದರು.

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾಹಿತಿ ತಂತ್ರಜ್ಞಾನ (ಐ.ಟಿ) ಕ್ಷೇತ್ರದ ಉದ್ಯೋಗಿಗಳಿಗೆ ದುಡಿಮೆಯ ಅವಧಿಯನ್ನು 14 ಗಂಟೆಗೆ ವಿಸ್ತರಿಸಬೇಕು ಎಂದು ಉದ್ಯಮಿಗಳು ರಾಜ್ಯ ಸರ್ಕಾರದ ಮುಂದೆ ಇಟ್ಟಿರುವ ಪ್ರಸ್ತಾವಕ್ಕೆ ವಿವಿಧ ಕಾರ್ಮಿಕ ಸಂಘಟನೆಗಳು ವಿರೋಧ ವ್ಯಕ್ತಪಡಿಸಿವೆ.

ಪ್ರಸ್ತುತ 12 ಗಂಟೆ ಇರುವ ಕೆಲಸದ ಅವಧಿಯನ್ನು 2 ಗಂಟೆ ಹೆಚ್ಚಿಸಿ 14 ಗಂಟೆಗೆ ವಿಸ್ತರಣೆ ಮಾಡಲು ಅನುಕೂಲವಾಗುವಂತೆ ಕರ್ನಾಟಕ ಅಂಗಡಿಗಳು ಮತ್ತು ವಾಣಿಜ್ಯ ಸ್ಥಾಪನೆ ಕಾಯ್ದೆ-1961ಕ್ಕೆ ತಿದ್ದುಪಡಿ ತರಬೇಕು ಎಂದು ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಿವೆ.

ಈಗಲೇ 12 ಗಂಟೆ ಕೆಲಸ ಮಾಡಿ ಉದ್ಯೋಗಿಗಳು ಹೈರಾಣ ಆಗುತ್ತಿದ್ದಾರೆ. ದುಡಿಮೆಯ ಅವಧಿಯನ್ನು 14 ಗಂಟೆಗೆ ಏರಿಸುವ ಮೂಲಕ ಉದ್ಯೋಗಿಗಳನ್ನು ಹಿಂಡಿ ಹಿಪ್ಪೆ ಮಾಡಲು ಐ.ಟಿ ಕಂಪನಿಗಳು ಹೊರಟಿವೆ ಎಂದು ಐ.ಟಿ ಉದ್ಯೋಗಿ ಸೂರಜ್ ಬೇಸರ ವ್ಯಕ್ತಪಡಿಸಿದ್ದಾರೆ.

ಐ.ಟಿ ಕಂಪನಿಗಳು ಸಲ್ಲಿಸಿರುವ ಪ್ರಸ್ತಾವವನ್ನು ಈಗ ಸರ್ಕಾರ ಒಪ್ಪದೇ ಇರಬಹುದು. ಮುಂದೆ ಒತ್ತಡಕ್ಕೆ ಮಣಿದು ಜಾರಿಗೆ ತರಬಹುದು ಎಂದು ಎಐಯುಟಿಯುಸಿ ರಾಜ್ಯ ಘಟಕದ ಕಾರ್ಯದರ್ಶಿ ಕೆ. ಸೋಮಶೇಖರ್ ಯಾದಗಿರಿ ಟೀಕಿಸಿದ್ದಾರೆ.

ಕಾರ್ಮಿಕರ ಮೂಲಭೂತ ಹಕ್ಕಿನ ಮೇಲಿನ ಆಕ್ರಮಣ ಇದು. ಉದ್ಯೋಗಿಗಳಿಗೆ ವೈಯಕ್ತಿಕ ಬದುಕು ಇಲ್ಲದಂತೆ ಮಾಡುವ ಹುನ್ನಾರ ಇದು. ಇದರಿಂದ ಆರೋಗ್ಯದ ಮೇಲೆ ಪರಿಣಾಮ ಆಗಲಿದೆ. ಮೂರು ಪಾಳಿಗಳನ್ನು ಎರಡೇ ಪಾಳಿಗೆ ಇಳಿಸುವ ಈ ದುಷ್ಟ ಯೋಚನೆಯಿಂದ ಮೂರನೇ ಒಂದು ಭಾಗದಷ್ಟು ನೌಕರರು ಉದ್ಯೋಗ ಕಳೆದುಕೊಳ್ಳಲಿದ್ದಾರೆ ಎಂದು ಸಿಐಟಿಯು ಮುಖಂಡರಾದ ಎಸ್. ವರಲಕ್ಷ್ಮೀ ಆತಂಕ ವ್ಯಕ್ತಪಡಿಸಿದ್ದಾರೆ.

THE PRINTERS (MYSORE) PRIVATE LIMITED
Publishers: DECCAN HERALD, PRAJAVANI, SUDHA & MAYURA

We are a leading newspaper and magazine publishing group in Karnataka. We invite applications for the following position in our organisation.

AD SALES

Qualification : Minimum Graduate
Experience : 3-5 years
Location : Bangalore (should be open to work from Bangalore)

REQUIREMENT:
* Drive advertisement revenue for educational publications (DHiE, Spardhavani, Student events and other products).
* Willingness to travel across Bangalore.
* Generate and follow up on leads.
* Develop and maintain client relationships
* Should have good communication skills both in English and kannada.

SALARY: Open for Discussion

Please send your application for the above position mentioning the job applied for (subject of the e-mail) and along with updated resume to:

Assistant Manager-Talent Acquisition
The Printers (Mysore) Private Limited
75, Mahatma Gandhi Road, Bengaluru – 560 001
E-mail: neesha.srinivas@printersmysore.co.in

'ಡಿಎಸ್‌ಎಸ್ ದಯಾ ಸಮ್ಯಕ್ ಸಭಾ ಆಗಲಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ದಲಿತ ಸಂಘರ್ಷ ಸಮಿತಿಯು ಚಳವಳಿ ಮೂಲಕ ನಮಗೆ ಶಕ್ತಿ ಕೊಟ್ಟಿದೆ. ಅದರ ಜೊತೆಗೆ ಎಲ್ಲ ಧಾರ್ಮಿಕ ಚಿಂತನೆಗಳ ಆಧ್ಯಾತ್ಮಿಕ ಹಸಿವನ್ನು ಒಂದುಗೂಡಿಸುವ ತಾಯಿಮಡಿಲು ದಯಾ ಸಮ್ಯಕ್ ಸಭಾ (ಡಿಎಸ್‌ಎಸ್) ಆಗಲಿ' ಎಂದು ಸಂಗೀತ ನಿರ್ದೇಶಕ ಹಂಸಲೇಖ ಆಶಿಸಿದರು.

ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್‌ವಾದ) ಸೋಮವಾರ ಹಮ್ಮಿಕೊಂಡಿದ್ದ 'ದಲಿತ ಚಳವಳಿ ಮತ್ತು ಸಮಕಾಲೀನ ಕರ್ನಾಟಕ' ವಿಚಾರ ಸಂಕಿರಣಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

'ಕಪ್ಪು ನಮ್ಮ ಗುರುತು, ಕಾಯಕ ನಮ್ಮ ವಿಳಾಸ, ಸಂವಿಧಾನದಿಂದಾಗಿ ಶಿಕ್ಷಣ ನಮ್ಮ ರಕ್ತವಾಗಿದೆ. ಈ ರಕ್ತ ಕುದಿದರೆ ಭಾರತವೇ ನಮ್ಮ ವಿಳಾಸವಾಗುತ್ತದೆ. ನಮ್ಮ ಅಧ್ಯಾತ್ಮದ ಚಿಕ್ಕ ಚಿಕ್ಕ ಘಟಕಗಳು ದೇಶದ ತುಂಬಾ ಹರಡಿವೆ. ಅವುಗಳನ್ನೆಲ್ಲ ಒಗ್ಗೂಡಿಸಬೇಕು' ಎಂದು ಸಲಹೆ ನೀಡಿದರು.

'ಸಂವಿಧಾನಕ್ಕೆ ಒಂದು ಲಯ ಇದೆ. ಯಾವುದೇ ತಾಳಕ್ಕೆ ರಾಗ ಸಂಯೋಜನೆ ಮಾಡಿದರೂ ಸರಿಯಾಗಿ ಹೊಂದಿಕೊಳ್ಳುತ್ತದೆ. ಡಾ.ಬಿ.ಆರ್. ಅಂಬೇಡ್ಕರ್ ಅವರು ಉತ್ತಮ ಪಿಟೀಲು ವಾದಕರಾಗಿದ್ದರು. ಉತ್ತಮ ಚಿತ್ರ ಕಲಾವಿದರೂ ಆಗಿದ್ದುದು ಇದಕ್ಕೆ ಕಾರಣ. ಸಮಾಜದ ಲಯವನ್ನು ಸರಿಯಾದ ಸ್ಥಿತಿಗೆ ತರಬೇಕು ಎಂಬ ಕಾರಣಕ್ಕಾಗಿ ಪಿಟೀಲು ಮತ್ತು ಕುಂಚವನ್ನು ಪಕ್ಕಕ್ಕೆ ಇಟ್ಟು ಪೆನ್ನು ಹಿಡಿದಿದ್ದರು' ಎಂದರು.

'ಡಿಎಸ್‌ಎಸ್ ಹೋರಾಟದ ಜೊತೆಗೆ ಕನ್ನಡವನ್ನು ಅಪ್ಪಿಕೊಳ್ಳಬೇಕು. ಕನ್ನಡದ ಹೆಸರಿನಲ್ಲಿ ನಾವೆಲ್ಲ ಒಂದಾಗಬೇಕು. ಸಂಗೀತವನ್ನು ಅಳವಡಿಸಿಕೊಳ್ಳಬೇಕು. ಸಾಹಿತ್ಯ ಓದುವುದನ್ನು ಬೆಳೆಸಿಕೊಳ್ಳಬೇಕು. ಶಿಕ್ಷಣ, ಸಂಘಟನೆ, ಹೋರಾಟದ ಜೊತೆಗೆ ಒಡನಾಟವನ್ನೂ ಬೆಳೆಸಿಕೊಳ್ಳಬೇಕು' ಎಂದು ಸಲಹೆ ನೀಡಿದರು.

ದಸಂಸ (ಅಂಬೇಡ್ಕರ್‌ವಾದ) ರಾಜ್ಯ ಪ್ರಧಾನ ಸಂಚಾಲಕ ಮಾವಳ್ಳಿ ಶಂಕರ್ ಅಧ್ಯಕ್ಷತೆ ವಹಿಸಿದ್ದರು. ಬಿ.ಕೃಷ್ಣಪ್ಪ ಟ್ರಸ್ಟ್ ಮುಖ್ಯಸ್ಥೆ ಇಂದಿರಾ ಕೃಷ್ಣಪ್ಪ, ಪತ್ರಕರ್ತ ದಿನೇಶ್ ಅಮಿನ್ ಮಟ್ಟು, ಕರ್ನಾಟಕ ಜಾನಪದ ಅಕಾಡೆಮಿ ಅಧ್ಯಕ್ಷ ಗೊಲ್ಲಹಳ್ಳಿ ಶಿವಪ್ರಸಾದ್ ವಿಚಾರ ಮಂಡನೆ ಮಾಡಿದರು. ರಾಮದೇವ ರಾಕೆ, ವಿ. ನಾಗರಾಜ್, ಎನ್. ಮುನಿಸ್ವಾಮಿ, ಕುಂದೂರು ತಿಮ್ಮಯ್ಯ, ರಮೇಶ್ ಡಾಕುಳಕಿ ಅನುಭವ ಹಂಚಿಕೊಂಡರು.

ನಗರದಲ್ಲಿ ಸೋಮವಾರ ಆಯೋಜಿಸಿದ್ದ ವಿಚಾರಸಂಕಿರಣದಲ್ಲಿ ಸಂಗೀತ ನಿರ್ದೇಶಕ ಹಂಸಲೇಖ ಅವರು ಡಾ.ಬಿ.ಆರ್ ಅಂಬೇಡ್ಕರ್ ಪ್ರತಿಮೆ ಮುಂದೆ ಮೇಣದಬತ್ತಿ ಹಚ್ಚುವ ಮೂಲಕ ಉದ್ಘಾಟಿಸಿದರು – ಪ್ರಜಾವಾಣಿ ಚಿತ್ರ.

ಮಟ್ಟು ಮಾತಿಗೆ ಆಕ್ಷೇಪ

'ಎಸ್‌ಸಿಎಸ್‌ಪಿ-ಟಿಎಸ್‌ಪಿ ಹಣವನ್ನು ಪರಿಶಿಷ್ಟ ಸಮುದಾಯದವರನ್ನು ಒಳಗೊಳ್ಳುವ ಇತರ ಯೋಜನೆಗಳಿಗೆ ಬಳಸಿಕೊಳ್ಳಲು ಸೆಕ್ಷನ್ '7ಸಿ'ಯಲ್ಲಿ ಅವಕಾಶ ಇದೆ. ಹಿಂದಿನ ಸರ್ಕಾರವೂ ಬಳಸಿಕೊಂಡಿದೆ. ಗ್ಯಾರಂಟಿ ಯೋಜನೆಗಳಿಗೂ ಕಾನೂನು ಪ್ರಕಾರವೇ ಬಳಕೆಯಾಗಿದೆ. ಪ್ರಯಾಣಿಕರು ಯಾವ ಜಾತಿ, ಸಮುದಾಯದವರು ಎಂಬುದು ಗೊತ್ತಾಗದೇ ಇರುವ 'ಶಕ್ತಿ' ಯೋಜನೆಗೆ ಬಳಸಿದ್ದು ಮಾತ್ರ ತಪ್ಪು' ಎಂದು ಪತ್ರಕರ್ತ ದಿನೇಶ್ ಅಮಿನ್ ಮಟ್ಟು ಹೇಳಿದರು. ಇದಕ್ಕೆ ಸಭೆಯಲ್ಲಿದ್ದವರೊಬ್ಬರು 'ಕಾಂಗ್ರೆಸ್ ಪರ ವಕಾಲತ್ತು ವಹಿಸುವುದಾದರೆ ಮಾತು ನಿಲ್ಲಿಸಿ' ಎಂದು ಆಕ್ಷೇಪ ವ್ಯಕ್ತಪಡಿಸಿದರು.

'ಬೇರೆ ಯೋಜನೆಗಳಿಗೆ ಬಳಸುವುದು ಬೇಡ ಎಂದಾದರೆ '7ಸಿ' ರದ್ದತಿಗೆ ಒತ್ತಾಯಿಸಬೇಕು. '7ಡಿ' ರದ್ದು ಮಾಡಲು ಹಿಂದೆ ಹೋರಾಟ ಮಾಡುತ್ತಿದ್ದಾಗ '7ಸಿ'ಯನ್ನೂ ಗಮನಿಸಬೇಕಿತ್ತು' ಎಂದು ಮಟ್ಟು ಸಮರ್ಥಿಸಿಕೊಂಡರು.

ಸಿಯುಕೆಯಲ್ಲಿ ಆರ್‌ಎಸ್‌ಎಸ್ ಚಟುವಟಿಕೆಗೆ ವಿರೋಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಲಬುರಗಿಯ ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದಲ್ಲಿ ಆರ್‌ಎಸ್‌ಎಸ್ ಚಟುವಟಿಕೆ ಹಮ್ಮಿ ಕೊಂಡಿರುವುದನ್ನು 'ಜಾಗೃತ ನಾಗರಿಕರು, ಕರ್ನಾಟಕ' ಸಂಘಟನೆ ಖಂಡಿಸಿದೆ.

'ಕೇಂದ್ರೀಯ ವಿಶ್ವವಿದ್ಯಾಲಯವನ್ನು ಕೋಮುವಾದದ ಆಡುಂಬೊಲ ಮಾಡಲು ಹೊರಟಿರುವ ಅಲ್ಲಿನ ಆಡಳಿತ ಮಂಡಳಿಯ ಈ ಕುಕೃತ್ಯ ಶೈಕ್ಷಣಿಕ ವಲಯದ ಮಹಾ ದುರಂತ' ಎಂದು 'ಜಾಗೃತ ನಾಗರಿಕರು, ಕರ್ನಾಟಕ'ದ ಕೆ. ಮರುಳಸಿದ್ದಪ್ಪ, ಜಿ. ರಾಮಕೃಷ್ಣ, ಎಸ್.ಜಿ. ಸಿದ್ದರಾಮಯ್ಯ, ವಿಜಯಾ, ಬಿ.ಶ್ರೀಪಾದ ಭಟ್, ಕೆ.ಎಸ್. ವಿಮಲಾ, ಟಿ. ಸುರೇಂದ್ರ ರಾವ್, ಮೀನಾಕ್ಷಿ ಬಾಳಿ, ಬಿ.ಎನ್. ಯೋಗಾನಂದ, ಎನ್. ಗಾಯತ್ರಿ ಬೇಸರ ವ್ಯಕ್ತಪಡಿಸಿದ್ದಾರೆ.

'ಈ ವಿಶ್ವವಿದ್ಯಾಲಯದಲ್ಲಿ ಪ್ರಾರಂಭದಿಂದಲೂ ಆರ್‌ಎಸ್‌ಎಸ್ ಅಕ್ರಮ ಚಟುವಟಿಕೆ ನಡೆಸುತ್ತಿರುವುದು ವರದಿಯಾಗುತ್ತಲೇ ಇದೆ. ಇದನ್ನು ವಿರೋಧಿಸಿ ಸ್ಥಳೀಯರು ಪ್ರತಿಭಟನೆ ನಡೆಸುತ್ತಲೇ ಇದ್ದಾರೆ. ಆದರೆ, ಆಡಳಿತ ಮಂಡಳಿಯು ಸಂಘದ ಭಾಗವೆಂಬಂತೆ ವರ್ತಿಸುತ್ತಿದೆ' ಎಂದು ಆರೋಪಿಸಿದ್ದಾರೆ.

ವಿಶ್ವವಿದ್ಯಾಲಯದಲ್ಲಿ ಆರ್‌ಎಸ್‌ಎಸ್ ಸಭೆ, ಚಟುವಟಿಕೆ ನಡೆಸುವುದು, ಸಂಘದ ಗೀತೆ ಹಾಡಿಸುವುದು ದೇಶದ ಸಂವಿಧಾನಕ್ಕೆ ಮಾಡುತ್ತಿರುವ ಅಪಚಾರ. ಉನ್ನತ ಮಟ್ಟದ ಶೈಕ್ಷಣಿಕ ಚಟುವಟಿಕೆ, ಜನೋಪಯೋಗಿ ಸಂಶೋಧನೆಗಳು, ವರ್ತಮಾನದ ತಲ್ಲಣಗಳ ಕುರಿತು ರಾಷ್ಟ್ರ, ಅಂತರರಾಷ್ಟ್ರೀಯ ಮಟ್ಟದ ವಿಚಾರಸಂಕಿರಣ, ಚಿಂತನ-ಮಂಥನಗಳನ್ನು ನಡೆಸಿದರೆ ವಿದ್ಯಾರ್ಥಿಗಳ ಬೆಳವಣಿಗೆಯಾಗುತ್ತದೆ. ಆದರೆ ಇಲ್ಲಿ ಸಂಕುಚಿತ ಮನಃಸ್ಥಿತಿಯನ್ನು ಮೂಡಿಸುವ, ಧರ್ಮದ್ವೇಷ, ಹಗೆತನ, ದೇಶದ ಸಂವಿಧಾನ ಎಂದಿಗೂ ಒಪ್ಪಲಾರದ ಕೋಮುದ್ವೇಷಗಳನ್ನು ತುಂಬುವ ಆರ್‌ಎಸ್‌ಎಸ್ ಪ್ರತಿ ಪಾದಿಸುವ ದೇಶ ವಿಭಜಕ ವಿಧ್ವಂಸಕ ಕೃತ್ಯ ನಡೆಯುತ್ತಿದೆ ಎಂದು ದೂರಿದ್ದಾರೆ.

'ಕೇಂದ್ರೀಯ ವಿಶ್ವವಿದ್ಯಾಲಯ ದೇಶದ ಆಸ್ತಿಯೇ ಹೊರತು ಯಾವುದೇ ಒಂದು ಪಕ್ಷದ ಅಥವಾ ಕೋಮುವಾದಿ ಸಿದ್ಧಾಂತವನ್ನು ಪ್ರತಿಪಾದಿಸುವ ಸಂಘಿಗಳ ಆಸ್ತಿಯಲ್ಲ. ದೇಶದ ಸಂವಿಧಾನದ ಅಡಿ ಕೆಲಸ ನಿರ್ವಹಿಸಬೇಕೇ ಹೊರತು ಕೇಶವ ಕೃಪಾ ಅಥವಾ ನಾಗಪುರದ ಕಚೇರಿಯಾಗಿ ಅಲ್ಲ. ಇದರ ವಿರುದ್ಧ ಕಲಬುರಗಿಯ ಪ್ರಜ್ಞಾವಂತರು ನಡೆಸುವ ಸಂವಿಧಾನ ಪರ, ನಿಜ ಭಾರತದ ಉಳಿವಿನ ಪರವಾದ ಎಲ್ಲ ಕೆಲಸ, ಪ್ರತಿಭಟನೆಗಳಿಗೆ ಬೆಂಬಲಿಸುತ್ತೇವೆ' ಎಂದು ತಿಳಿಸಿದ್ದಾರೆ.

8,362 ಅನಧಿಕೃತ ಫ್ಲೆಕ್ಸ್ ತೆರವು: 142 ಎಫ್‌ಐಆರ್ ದಾಖಲು

ವಲಯ	ತೆರವು	ದೂರು	ಎಫ್‌ಐಆರ್	ದಂಡ (₹)
ಪೂರ್ವ	439	10	10	0
ಪಶ್ಚಿಮ	135	74	27	53,000
ದಕ್ಷಿಣ	351	12	12	0
ಆರ್‌ಆರ್ ನಗರ	1,431	85	7	50,000
ದಾಸರಹಳ್ಳಿ	368	6	6	0
ಮಹದೇವಪುರ	3,989	26	26	0
ಯಲಹಂಕ	673	24	24	0
ಬೊಮ್ಮನಹಳ್ಳಿ	976	30	30	0

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅನಧಿಕೃತವಾಗಿ ಅಳವಡಿಸಿದ್ದ 8,362 ಫ್ಲೆಕ್ಸ್, ಬ್ಯಾನರ್‌ಗಳನ್ನು ತೆರವುಗೊಳಿಸಿರುವ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು (ಬಿಬಿಎಂಪಿ) 142 ಎಫ್‌ಐಆರ್‌ಗಳನ್ನು ದಾಖಲಿಸಿದೆ. ₹ 1.03 ಲಕ್ಷ ದಂಡ ವಸೂಲಿ ಮಾಡಲಾಗಿದೆ.

ನಗರದಲ್ಲಿ ಅನಧಿಕೃತ ಜಾಹೀರಾತುಗಳನ್ನು ತೆರವುಗೊಳಿಸುವ ಕಾರ್ಯಾಚರಣೆ ಜೂನ್ 1ರಿಂದ ಆರಂಭವಾಗಿತ್ತು. ಅನಧಿಕೃತವಾಗಿ ಅಳವಡಿಸಿದ್ದ ಜಾಹೀರಾತುಗಳು, ಶುಭಕೋರುವ ಬ್ಯಾನರ್‌ಗಳನ್ನು ತೆರವುಗೊಳಿಸಿರುವ ಬಿಬಿಎಂಪಿ ಅಧಿಕಾರಿಗಳು 267 ದೂರುಗಳನ್ನು ನೀಡಿದ್ದು, 142 ಎಫ್‌ಐಆರ್‌ಗಳನ್ನು ದಾಖಲಿಸಲಾಗಿದೆ.

ಜನ್ಮದಿನದ ಶುಭಾಶಯ ಹಾಗೂ ಇನ್ನಿತರ ಶುಭಾಶಯಗಳನ್ನು ಕೋರುವ ಫ್ಲೆಕ್ಸ್‌ಗಳನ್ನು ಅನಧಿಕೃತವಾಗಿ ಅಳವಡಿಸಿದರೆ ಕಠಿಣ ಕ್ರಮ ಕೈಗೊಳ್ಳಲಾಗುವುದು. ತೆರವು ಕಾರ್ಯದಲ್ಲಿ ಪೊಲೀಸ್ ಅಧಿಕಾರಿಗಳು ಕೂಡ ಬಿಬಿಎಂಪಿ ಅಧಿಕಾರಿಗಳ ಜೊತೆಗೆ ಕೈ ಜೋಡಿಸಿದ್ದಾರೆ. ಅನಧಿಕೃತ ಫ್ಲೆಕ್ಸ್, ಬ್ಯಾನರ್‌ಗಳು ಕಂಡುಬಂದರೆ ಸಾರ್ವಜನಿಕರು ದೂರವಾಣಿ ಸಂಖ್ಯೆ 1533ಗೆ ಕರೆ ಮಾಡಿ ಅಥವಾ ವಾಟ್ಸ್‌ಆ್ಯಪ್ ಸಂಖ್ಯೆ 9480683939ಕ್ಕೆ ಛಾಯಾಚಿತ್ರದ ಸಮೇತ ದೂರು ನೀಡಬಹುದು ಎಂದು ಬಿಬಿಎಂಪಿ ಉಪ ಆಯುಕ್ತರು (ಜಾಹೀರಾತು) ತಿಳಿಸಿದ್ದಾರೆ.

40 ಐ ಫೋನ್, ಆ್ಯಪಲ್ ವಾಚ್ ವಶ

ಪ್ರಜಾವಾಣಿ ವಾರ್ತೆ

ದೇವನಹಳ್ಳಿ: ದುಬೈನಿಂದ ಕಳ್ಳಸಾಗಣೆ ಮಾಡುತ್ತಿದ್ದ ಪ್ರಯಾಣಿಕನಿಂದ 'ಐ' ಫೋನ್, ಆ್ಯಪಲ್ ವಾಚ್‌ಗಳನ್ನು ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಕಸ್ಟಮ್ಸ್ ಅಧಿಕಾರಿಗಳು ಶನಿವಾರ ವಶಪಡಿಸಿಕೊಂಡಿದ್ದಾರೆ.

ದುಬೈನಿಂದ ಶನಿವಾರ ತಡರಾತ್ರಿ ಕೆಂಪೇಗೌಡ ವಿಮಾನ ನಿಲ್ದಾಣಕ್ಕೆ ಬಂದಿಳಿದ ಆರೋಪಿಯನ್ನು ಪರಿಶೀಲಿಸಿ, ಆತನ ಬಳಿ 40 ಐ ಫೋನ್ ಹಾಗೂ ಐದು ಆ್ಯಪಲ್ ವಾಚ್‌ಗಳನ್ನು ವಶಪಡಿಸಿಕೊಂಡಿದ್ದಾರೆ.

ಅಪರಾಧ ಹಿನ್ನೆಲೆಯ ಆರೋಪಿ ಲಗೇಜ್ ಹಾಗೂ ಕ್ಯಾಬಿನ್ ಬ್ಯಾಗ್ ಪರಿಶೀಲಿಸಿದಾಗ ಅದರಲ್ಲಿ ಐ ಫೋನ್ ಮತ್ತು ವಾಚ್ ಅಡಗಿಸಿಟ್ಟಿದ್ದ ಎಂದು ಕಸ್ಟಮ್ಸ್ ಮೂಲಗಳು ತಿಳಿಸಿವೆ.

पंजाब नैशनल बैंक ...भरोसे का प्रतीक!
punjab national bank ...the name you can BANK upon!
ZO: 6-1-73, 2nd Floor, Saeed Plaza, Lakdi-Ka-Pul, Hyderabad-04, Tel-040-24475118. E-mail : zohydsec@pnb.co.in

ಅರ್ಜಿ ಆಹ್ವಾನ ನೋಟಿಸ್

ಸಿಸಿಟಿವಿ ವ್ಯವಸ್ಥೆಯ ಪೂರೈಕೆ, ಅನುಸ್ಥಾಪನೆ, ಪರೀಕ್ಷೆ, ಕಾರ್ಯಾರಂಭ (ಎಸ್ ಐಟಿಸಿ) ಮತ್ತು ನಿರ್ವಹಣೆಗಾಗಿ ಹೈದರಾಬಾದಿನ ವಲಯ ಕಚೇರಿಯಲ್ಲಿನ ಎಎಂಸಿ ಮೂಲಕ ತೆಲಂಗಾಣ ರಾಜ್ಯದಲ್ಲಿ ಅದರ ಶಾಖೆ / ಕಚೇರಿಗಳಿಗೆ ಎಸ್‌ಐಗಳನ್ನು ಪಟ್ಟಿ ಮಾಡಲು ಟೆಂಡರ್. **ಪಂಜಾಬ್ ನ್ಯಾಷನಲ್ ಬ್ಯಾಂಕಿನ** ಹೈದರಾಬಾದ್ ವಲಯ ಕಚೇರಿ ಅಡಿಯಲ್ಲಿನ ಶಾಖೆಗಳು / ಕಚೇರಿಗಳಲ್ಲಿ ಹಾಲಿ ಇರುವ ಹಾಗೂ ಹೊಸ ಸಿಸಿಟಿವಿ ಮತ್ತು ಎಸ್‌ಐಟಿಸಿ ಸ್ಥಾಪನೆ ಮತ್ತು ನಿರ್ವಹಣೆಗೆ ಎಸ್‌ಐಗಳನ್ನು ಪಟ್ಟಿ ಮಾಡಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಒಇಎಂಗಳು ಮತ್ತು ಸಂಭಂದತ ಸಿಸಿಟಿವಿ ಉಪಕರಣಗಳನ್ನು ಈಗಾಗಲೇ ಬ್ಯಾಂಕ್ ಪಟ್ಟಿ ಮಾಡಿದೆ (ಅನುಬಂಧ VII ಆಗಿ ಲಗತ್ತಿಸಲಾಗಿದೆ). ಮೂಲ ಸಲಕರಣೆ ತಯಾರಕರ ಅಧಿಕೃತ ಮಾರಾಟಗಾರ (ಎಸ್‌ಐ) / ಚಾನೆಲ್ ಪಾಲುದಾರರಾಗಿರುವ ಸಿಸ್ಟಮ್ಸ್ ಇಂಟಿಗ್ರೇಟರ್ (ಎಸ್‌ಐಗಳು) (ಇನ್ನು ಮುಂದೆ ಒಇಎಂಗಳು ಎಂದು ಕರೆಯಲಾಗುತ್ತದೆ) ಅಂದರೆ ಸಮೃದ್ಧಿ ಆಟೋಮೇಷನ್ ಪ್ರೈವೇಟ್ ಲಿಮಿಟೆಡ್ (ಸ್ಪರ್ಶ್) ಮತ್ತು ಮೆಸರ್ಸ್ ಅದಿಯಾ ಇನ್ಫೋಟೆಕ್ ಲಿಮಿಟೆಡ್ (ಸಿಪಿ ಪ್ಲಸ್) ಈಗಾಗಲೇ ಪಂಜಾಬ್ ನ್ಯಾಷನಲ್ ಬ್ಯಾಂಕ್, ಪ್ರಧಾನ ಕಚೇರಿಯಿಂದ ಪಟ್ಟಿ ಮಾಡಲಾಗಿದೆ.

ಅರ್ಹತಾ ಮಾನದಂಡಗಳು (ಅನುಬಂಧ-1), ನಿಯಮಗಳು ಮತ್ತು ಷರತ್ತುಗಳು (ಅನುಬಂಧ-III), ಪಟ್ಟಿ ಮಾಡಲಾದ ಸಿಸಿಟಿವಿ ಸಲಕರಣೆ ಪ್ರದೇಶ ಮತ್ತಿತರ ವಿವರಗಳು ಎಂಪನೇಲ್‌ಮೆಂಟ್ ದಾಖಲೆಯಲ್ಲಿ ನೀಡಲಾಗಿದೆ. ಆಸಕ್ತ ಎಸ್‌ಐಗಳು ನಿಗದಿತ ನಮೂನೆಯಲ್ಲಿ ತುಂಬಿದ ಅರ್ಜಿಯನ್ನು ಎಲ್ಲ ದಾಖಲೆಗಳೊಂದಿಗೆ 05.08.2024 16.00 **ರೊಳಗೆ** ಉಪ ವಲಯ ವ್ಯವಸ್ಥಾಪಕರು, **ಪಂಜಾಬ್ ನ್ಯಾಷನಲ್ ಬ್ಯಾಂಕ್ ವಲಯ ಕಚೇರಿ** ಹೈದರಾಬಾದ್, 6-1-73, 2 ನೇ ಮಹಡಿ, ಸಯೀದ್ ಪ್ಲಾಜಾ, ಲಕ್ಡಿಕಾಪುಲ್, ಹೈದರಾಬಾದ್-500004 ಗೆ ಸಲ್ಲಿಸಬಹುದು. ಟೆಂಡರ್ ದಾಖಲೆಗಳನ್ನು ನಮ್ಮ ವೆಬ್ಸೈಟ್ https://www.pnbindia.in ಇಲ್ಲಿ ಡೌನ್ಲೋಡ್ ಮಾಡಬಹುದು.

ದಿನಾಂಕ: 23.07.2024, ಸ್ಥಳ: ಹೈದರಾಬಾದ್ ಡೆಪ್ಯುಟಿ ಜನರಲ್ ಮ್ಯಾನೇಜರ್

ಸ್ವಾದದ ಸಿತಾರಾ, ಕಾಂತಾರ.!

555 ಕಾಂತಾರ ಪಾನ ಮಸಾಲಾ
Mfgd By: Ghodawat Fresheners LLP
For Trade inquiry Mob.: 095525 72564, 098440 55085.
0% Nicotine & Tobacco
Statutory Warning: Chewing of Pan Masala is injurious to Health. Not for Minors.

‘ಸಂಕಷ್ಟ ಕಾಲದಲ್ಲಿ ‘ಕಾವೇರಿ’ ಪಾಲು ಕಡಿತ’

ಪ್ರಜಾವಾಣಿ ವಾರ್ತೆ

ನವದೆಹಲಿ: ‘ಕಾವೇರಿ ಜಲಾನಯನ ಪ್ರದೇಶದಲ್ಲಿ ಮಳೆ ಪ್ರಮಾಣ ಕಡಿಮೆಯಾದರೆ ಕರ್ನಾಟಕ, ತಮಿಳುನಾಡು, ಪುದುಚೆರಿ ಹಾಗೂ ಕೇರಳ ರಾಜ್ಯಗಳಿಗೆ ನೀರಿನ ಹಂಚಿಕೆಯನ್ನು ಪ್ರಮಾಣಾನುಗುಣವಾಗಿ ಕಡಿತ ಮಾಡಲು ಅವಕಾಶ ಇದೆ. ಈ ಬಗ್ಗೆ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ ಹಾಗೂ ನೀರು ನಿಯಂತ್ರಣ ಸಮಿತಿ ಸೂಕ್ತ ಕ್ರಮ ಕೈಗೊಳ್ಳಬಹುದು’ ಎಂದು ಕೇಂದ್ರ ಜಲಶಕ್ತಿ ಸಚಿವಾಲಯ ಸ್ಪಷ್ಟಪಡಿಸಿದೆ.

ಲೋಕಸಭೆಯಲ್ಲಿ ತಮಿಳುನಾಡಿನ ಸಂಸದರಾದ ವೈಕೊ, ಸಿ.ವಿ.ಷಣ್ಮುಖಂ ಕೇಳಿರುವ ಪ್ರಶ್ನೆಗೆ ಜಲಶಕ್ತಿ ಖಾತೆಯ ರಾಜ್ಯ ಸಚಿವ ರಾಜ್‌ಭೂಷಣ್ ಚೌಧರಿ ಸೋಮವಾರ ಈ ಉತ್ತರ ನೀಡಿದ್ದಾರೆ.

‘ಕಾವೇರಿ ಜಲವಿವಾದ ನ್ಯಾಯಮಂಡಳಿಯು 2007ರಲ್ಲಿ ಅಂತಿಮ ತೀರ್ಪು ನೀಡಿದೆ. ಸಂಕಷ್ಟದ ವರ್ಷಗಳಲ್ಲಿ ರಾಜ್ಯಗಳ ನೀರಿನ ಪಾಲನ್ನು ಕಡಿತ ಮಾಡಬಹುದು ಎಂದು ನ್ಯಾಯಮಂಡಳಿಯ ತೀರ್ಪಿನಲ್ಲಿ ಉಲ್ಲೇಖಿಸಲಾಗಿದೆ. ಈ ತೀರ್ಪನ್ನು ಸುಪ್ರೀಂ ಕೋರ್ಟ್ 2018ರಲ್ಲಿ ಮಾರ್ಪಡಿಸಿದೆ. ಸುಪ್ರೀಂ ಕೋರ್ಟ್ ತೀರ್ಪಿನ ಪ್ರಕಾರ, ಸಾಮಾನ್ಯ ವರ್ಷಗಳಲ್ಲಿ ಕರ್ನಾಟಕವು ತಮಿಳುನಾಡಿಗೆ 177.25 ಟಿಎಂಸಿ ಅಡಿ ನೀರು ಹರಿಸಬೇಕು. ನಿರ್ವಹಣಾ ಪ್ರಾಧಿಕಾರದ ಮಧ್ಯಸ್ಥಿಕೆಯಲ್ಲಿ ಸಂಕಷ್ಟದ ವರ್ಷಗಳಲ್ಲಿ ನೀರಿನ ಪ್ರಮಾಣ ಕಡಿಮೆ ಮಾಡಬಹುದು ಎಂದೂ ‘ಸುಪ್ರೀಂ’ ಹೇಳಿದೆ’ ಎಂದರು.

‘ಕಾವೇರಿ ನೀರು ಹರಿಸುವಿಕೆ ಸಂಬಂಧ ಪ್ರಾಧಿಕಾರ ಹಾಗೂ ಸಮಿತಿ ನಿಯಮಿತವಾಗಿ ಸಭೆ ನಡೆಸಿ ಕಾವೇರಿ ಜಲಾನಯನ ಪ್ರದೇಶದ ಪರಿಸ್ಥಿತಿ ಹಾಗೂ ನೀರಿನ ಹರಿವಿನ ಪ್ರಮಾಣದ ಬಗ್ಗೆ ಚರ್ಚಿಸಿ ತೀರ್ಮಾನ ತೆಗೆದುಕೊಳ್ಳುತ್ತವೆ. ಕಾವೇರಿ ನೀರು ನಿಯಂತ್ರಣ ಸಮಿತಿಯು ಜುಲೈ 11ರಂದು ಸಭೆ ನಡೆಸಿ ಕರ್ನಾಟಕವು ತಮಿಳುನಾಡಿಗೆ ಪ್ರತಿದಿನ 1 ಟಿಎಂಸಿ ಅಡಿ ನೀರು ಬಿಡುಗಡೆ ಮಾಡಬೇಕು ಎಂದು ಶಿಫಾರಸು ಮಾಡಿದೆ’ ಎಂದರು.

ಕರ್ನಾಟಕದಿಂದ ತಮಿಳುನಾಡಿಗೆ ಕಾವೇರಿ ನೀರು

2019-20	275.40
2020-21	211.35
2021-22	281
2022-23	667.48
2023-24	81.41
2024-25	6.69 ಜುಲೈ 15ರ ವರೆಗೆ

ರಾಜ್ಯಗಳಿಗೆ ನೀರು ಹಂಚಿಕೆ
(ಸುಪ್ರೀಂ ಕೋರ್ಟ್ ಆದೇಶ ಪ್ರಕಾರ)
(ಟಿಎಂಸಿಗಳಲ್ಲಿ)

30 ಕೇರಳ	404.25 ತಮಿಳುನಾಡು
284.75 ಕರ್ನಾಟಕ	7 ಪುದುಚೆರಿ
726 ಒಟ್ಟು	

‘ವಿಶೇಷ ಸ್ಥಾನಮಾನಕ್ಕೆ ಬಿಹಾರ ಪರಿಗಣಿಸಿಲ್ಲ’

ನವದೆಹಲಿ (ಪಿಟಿಐ): ‘ವಿಶೇಷ ವರ್ಗ ಸ್ಥಾನಮಾನ ನೀಡಲು ಬಿಹಾರವನ್ನು ಪರಿಗಣಿಸಿಲ್ಲ’ ಎಂದು ಅಂತರ ಸಚಿವಾಲಯಗಳ ಸಮಿತಿಯೊಂದು (ಐಎಂಜಿ) 2012ರಲ್ಲಿ ನೀಡಿದ್ದ ವರದಿ ಆಧರಿಸಿ ಕೇಂದ್ರ ಸರ್ಕಾರವು ಲೋಕಸಭೆಗೆ ಸೋಮವಾರ ಮಾಹಿತಿ ನೀಡಿತು.

ಕೇಂದ್ರ ಹಣಕಾಸು ರಾಜ್ಯಖಾತೆ ಸಚಿವ ಪಂಕಜ್ ಚೌಧರಿ ಅಧಿವೇಶನದ ಮೊದಲ ದಿನ ಈ ಕುರಿತು ಲಿಖಿತ ಉತ್ತರ ನೀಡಿದರು.

ರಾಷ್ಟ್ರೀಯ ಅಭಿವೃದ್ಧಿ ಮಂಡಳಿಯು (ಎನ್‌ಡಿಸಿ) ವಿಶೇಷ ಪರಿಗಣನೆಯ ಅಗತ್ಯವಿದ್ದ ಕೆಲ ರಾಜ್ಯಗಳಿಗೆ ವಿಶೇಷ ವರ್ಗ ಸ್ಥಾನಮಾನ ನೀಡಿತ್ತು. ಪರ್ವತ ಪ್ರದೇಶದಿಂದ ಕೂಡಿರುವ ರಾಜ್ಯಗಳು, ವಿರಳ ಜನಸಂಖ್ಯೆ, ಒಟ್ಟು ಜನಸಂಖ್ಯೆಯಲ್ಲಿ ಆದಿವಾಸಿ ಸಮುದಾಯ ಮಹತ್ವದ ಪಾಲು, ನೆರೆ ರಾಷ್ಟ್ರಗಳ ಜೊತೆ ಗಡಿ ಹಂಚಿಕೊಂಡಿರುವ ಮತ್ತು ಆರ್ಥಿಕವಾಗಿ ಹಾಗೂ ಮೂಲಸೌಕರ್ಯದಲ್ಲಿ ಹಿಂದುಳಿದ ರಾಜ್ಯಗಳಿಗೆ ವಿಶೇಷ ವರ್ಗ ಸ್ಥಾನಮಾನವನ್ನು ಎನ್‌ಡಿಸಿ ನೀಡಿತ್ತು.

ಎನ್‌ಡಿಸಿಯ ಮಾನದಂಡಗಳ ಪ್ರಕಾರ ಬಿಹಾರಕ್ಕೆ ಈ ಸ್ಥಾನಮಾನವನ್ನು ನೀಡಲಾಗಿಲ್ಲ ಎಂದು ವಿವರಿಸಿದರು.

‘ರಾಜ್ಯದ ಹಿತಾಸಕ್ತಿ ಜೊತೆ ರಾಜಿ’

ಪಟ್ನಾ (ಪಿಟಿಐ): ‘ಅಧಿಕಾರ-ಕ್ಕೋಸ್ಕರ ಬಿಹಾರ ಜನರ ಆಶೋತ್ತರಗಳು ಮತ್ತು ನಂಬಿಕೆಯ ಜೊತೆ ರಾಜ್ಯದ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರು ರಾಜಿ ಮಾಡಿಕೊಂಡಂತಿದೆ’ ಎಂದು ಆರ್‌ಜೆಡಿ ಮುಖ್ಯಸ್ಥ ಲಾಲು ಪ್ರಸಾದ್ ಅವರು ಸೋಮವಾರ ಹೇಳಿದರು.

ಬಿಹಾರಕ್ಕೆ ವಿಶೇಷ ಸ್ಥಾನಮಾನ ನೀಡುವಂತೆ ರಾಜ್ಯ ಸರ್ಕಾರವು ಸಲ್ಲಿಸಿದ್ದ ಬೇಡಿಕೆಯನ್ನು ಕೇಂದ್ರ ಸರ್ಕಾರ ತಿರಸ್ಕರಿಸಿದ ಕುರಿತು ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದ ಅವರು, ‘ಬಿಹಾರಕ್ಕೆ ವಿಶೇಷ ಸ್ಥಾನಮಾನ ಕೊಡಿಸುವ ಭರವಸೆಯನ್ನು ನಿತೀಶ್ ನೀಡಿದ್ದರು. ಅದನ್ನು ಈಡೇರಿಸುವಲ್ಲಿ ವಿಫಲರಾದ ಕಾರಣ ಅವರು ರಾಜೀನಾಮೆ ನೀಡಬೇಕು’ ಎಂದು ಆಗ್ರಹಿಸಿದರು.

250 ಸರ್ಕಾರಿ ಮಾಂಟೆಸ್ಸರಿಗಳಿಗೆ ಚಾಲನೆ

ಬೆಂಗಳೂರು ನಗರದಲ್ಲಿ ಎಲ್‌ಕೆಜಿ, ಯುಕೆಜಿ ತರಗತಿ ಉದ್ಘಾಟಿಸಿದ ಸಚಿವೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಎಲ್ಲ ವರ್ಗದ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ, ಪೌಷ್ಟಿಕ ಆಹಾರ ಸಿಗಬೇಕೆಂಬ ಉದ್ದೇಶದಿಂದ ದೇಶದಲ್ಲಿ ಮೊದಲ ಬಾರಿಗೆ ಅಂಗನವಾಡಿ ಕೇಂದ್ರಗಳಲ್ಲಿ ಸರ್ಕಾರಿ ಮಾಂಟೆಸ್ಸರಿ ತರಗತಿಗಳನ್ನು ಆರಂಭಿಸಲಾಗಿದೆ’ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮಿ ಹೆಬ್ಬಾಳಕರ ಹೇಳಿದರು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಬೆಂಗಳೂರಿನ ಗೋವಿಂದರಾಜನಗರ ವಿಧಾನಸಭೆ ಕ್ಷೇತ್ರದ ಪಟ್ಟೆಗಾರಪಾಳ್ಯದಲ್ಲಿ ಸಮಗ್ರ ಶಿಶು ಅಭಿವೃದ್ಧಿ ಯೋಜನೆ ಅಡಿಯಲ್ಲಿ ಆರಂಭಿಸಿರುವ ‘ಸರ್ಕಾರಿ ಮಾಂಟೆಸ್ಸರಿ ಪೂರ್ವ ಪ್ರಾಥಮಿಕ ಕೇಂದ್ರ’ಕ್ಕೆ (ಎಲ್‌ಕೆಜಿ, ಯುಕೆಜಿ ತರಗತಿಗಳಿಗೆ) ಸೋಮವಾರ ಚಾಲನೆ ನೀಡಿ ಅವರು ಮಾತನಾಡಿದರು.

‘ರಾಜ್ಯದಲ್ಲಿ ಪೂರ್ವ ಪ್ರಾಥಮಿಕ ತರಗತಿಗಳನ್ನು ಶಿಕ್ಷಣ ಇಲಾಖೆಯಿಂದ ಆರಂಭಿಸುವ ಯೋಜನೆ ಇತ್ತು. ಆದರೆ, ಅಂಗನವಾಡಿ ಕಾರ್ಯಕರ್ತೆಯರ ಹೋರಾಟಕ್ಕೆ ಮಣಿದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ವತಿಯಿಂದ ಅಂಗನವಾಡಿ ಕೇಂದ್ರಗಳಲ್ಲಿ ಎಲ್‌ಕೆಜಿ, ಯುಕೆಜಿ ತರಗತಿಗಳನ್ನು ಆರಂಭಿಸಲಾಗಿದೆ’ ಎಂದು ಹೇಳಿದರು.

ನಗರದ ಪಟ್ಟೆಗಾರಪಾಳ್ಯದಲ್ಲಿ ಅಂಗನವಾಡಿ ಕೇಂದ್ರದಲ್ಲಿ ಸರ್ಕಾರಿ ಮಾಂಟೆಸ್ಸರಿ ಚಾಲನಾ ಕಾರ್ಯಕ್ರಮದಲ್ಲಿ ಸಚಿವೆ ಲಕ್ಷ್ಮಿ ಹೆಬ್ಬಾಳಕರ ಅವರು ಮಕ್ಕಳಿಗೆ ಆಟಿಕೆಗಳನ್ನು ನೀಡಿದರು. ಎಂ.ಕೃಷ್ಣಪ್ಪ, ಚನ್ನರಾಜ ಹಟ್ಟಿಹೊಳಿ, ಜಿ.ಸಿ. ಪ್ರಕಾಶ್ ಭಾಗವಹಿಸಿದ್ದರು –ಪ್ರಜಾವಾಣಿ ಚಿತ್ರ

‘ಸರ್ಕಾರಿ ಮಾಂಟೆಸ್ಸರಿಗಳಲ್ಲಿ ಕನ್ನಡ, ಇಂಗ್ಲಿಷ್ ಎರಡೂ ಮಾಧ್ಯಮಗಳಲ್ಲಿ ಶಿಕ್ಷಣ ನೀಡಲಾಗುವುದು. ಮಕ್ಕಳಿಗೆ ಒಂದು ಜೊತೆ ಸಮವಸ್ತ್ರ, ಒಂದು ಬ್ಯಾಗ್ ಮತ್ತು ಪೆನ್ಸಿಲ್ ಬಾಕ್ಸ್ ನೀಡಲಾಗುವುದು. ಮಕ್ಕಳ ಮುಂದಿನ ಶೈಕ್ಷಣಿಕ ಅನುಕೂಲಕ್ಕಾಗಿ ವರ್ಗಾವಣೆ ಪತ್ರ ಕೂಡ ನೀಡಲಾಗುವುದು. ಮಾಂಟೆಸ್ಸರಿಗಳಲ್ಲಿ ಪಿಯುಸಿ, ಪದವಿ, ಸ್ನಾತಕೋತ್ತರ ಪದವಿ ವಿದ್ಯಾರ್ಹತೆ ಹೊಂದಿರುವ ಹಾಗೂ ಅಗತ್ಯ ತರಬೇತಿ ಪಡೆದಿರುವ ಅಂಗನವಾಡಿ ಕಾರ್ಯಕರ್ತೆಯರನ್ನು ಮಾತ್ರ ಬೋಧಕರಾಗಿ ಬಳಸಿಕೊಳ್ಳಲಾಗುವುದು’ ಎಂದರು.

> **ಅಂಗನವಾಡಿ ಕೇಂದ್ರಗಳಿಗೆ ಕಳಪೆ ಗುಣಮಟ್ಟದ ಆಹಾರ ಪೂರೈಕೆಯಾದರೆ ಉಪನಿರ್ದೇಶಕ ಹಾಗೂ ಸಿಡಿಪಿಒಗಳನ್ನು ಅಮಾನತು ಮಾಡಲಾಗುವುದು**
> **ಲಕ್ಷ್ಮಿ ಹೆಬ್ಬಾಳಕರ,** ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ

‘ಪ್ರಾಯೋಗಿಕವಾಗಿ ಬೆಂಗಳೂರು ನಗರ ಜಿಲ್ಲೆಯ 250 ಅಂಗನವಾಡಿ ಕೇಂದ್ರಗಳಲ್ಲಿ ಸರ್ಕಾರಿ ಮಾಂಟೆಸ್ಸರಿಗಳನ್ನು ಆರಂಭಿಸಲಾಗಿದೆ. ಹಂತ-ಹಂತವಾಗಿ ರಾಜ್ಯದ ಐದು ಸಾವಿರ ಅಂಗನವಾಡಿ ಕೇಂದ್ರಗಳಲ್ಲಿ ಮಾಂಟೆಸ್ಸರಿಗಳನ್ನು ಪ್ರಾರಂಭಿಸಲು ನಮ್ಮ ಇಲಾಖೆ ಸನ್ನದ್ಧವಾಗಿದೆ’ ಎಂದು ತಿಳಿಸಿದರು.

ವಿಜಯನಗರ ಕ್ಷೇತ್ರದ ಶಾಸಕ ಎಂ. ಕೃಷ್ಣಪ್ಪ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ವಿಧಾನ ಪರಿಷತ್ ಸದಸ್ಯ ಚನ್ನರಾಜ ಹಟ್ಟಿಹೊಳಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಕಾರ್ಯದರ್ಶಿ ಜಿ.ಸಿ. ಪ್ರಕಾಶ್, ಇಲಾಖೆಯ ನಿರ್ದೇಶಕ ಎನ್. ಸಿದ್ದೇಶ್ವರ್, ಅಂಗವಿಕಲ ವ್ಯಕ್ತಿಗಳ ರಾಜ್ಯ ಆಯುಕ್ತ ದಾಸ್ ಸೂರ್ಯವಂಶಿ ಭಾಗವಹಿಸಿದ್ದರು.

ಸುದ್ದಿ 2 ನಿಮಿಷ

ವಿಧಾನ ಪರಿಷತ್: ವಿಪಕ್ಷ ನಾಯಕರಾಗಿ ಛಲವಾದಿ

ಬೆಂಗಳೂರು: ವಿಧಾನಪರಿಷತ್ತಿನ ವಿರೋಧ ಪಕ್ಷದ ನಾಯಕರನ್ನಾಗಿ ಬಿಜೆಪಿಯು ಛಲವಾದಿ ನಾರಾಯಣಸ್ವಾಮಿ ಅವರನ್ನು ಆಯ್ಕೆ ಮಾಡಿದೆ.

ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಅವರ ಆದೇಶದ ಮೇರೆಗೆ ರಾಜ್ಯ ಪ್ರಭಾರಿ ರಾಧಾಮೋಹನ್ ದಾಸ್ ಅಗರ್‌ವಾಲ್ ಅವರು ನಾರಾಯಣಸ್ವಾಮಿ ಅವರ ನೇಮಕ ಪ್ರಕಟಿಸಿದ್ದಾರೆ ಎಂದು ಬಿಜೆಪಿ ಪ್ರಕಟಣೆ ತಿಳಿಸಿದೆ.

ಈ ಹಿಂದೆ ವಿರೋಧ ಪಕ್ಷದ ನಾಯಕರಾಗಿದ್ದ ಕೋಟ ಶ್ರೀನಿವಾಸ ಪೂಜಾರಿ ಅವರು ಲೋಕಸಭೆಗೆ ಆಯ್ಕೆಯಾಗಿದ್ದರಿಂದಾಗಿ, ಪರಿಷತ್ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು. ಹೀಗಾಗಿ, ಈ ಸ್ಥಾನ ಖಾಲಿಯಾಗಿತ್ತು.

2018ರ ವಿಧಾನಸಭೆ ಚುನಾವಣೆ ಸಂದರ್ಭದಲ್ಲಿ ಕಾಂಗ್ರೆಸ್ ಬಿಟ್ಟು ಬಿಜೆಪಿ ಸೇರಿದ ಛಲವಾದಿ ಅವರನ್ನು ಆರಂಭದಲ್ಲಿ ಪರಿಶಿಷ್ಟ ಮೋರ್ಚಾ ಅಧ್ಯಕ್ಷರನ್ನಾಗಿ ಪಕ್ಷ ನೇಮಕ ಮಾಡಿತ್ತು. ಬಳಿಕ ವಿಧಾನಸಭೆಯಿಂದ ವಿಧಾನಪರಿಷತ್‌ಗೆ ಆಯ್ಕೆ ಮಾಡಲಾಯಿತು.

ಈ ಕುರಿತು ‘ಎಕ್ಸ್’ ಮೂಲಕ ಪ್ರತಿಕ್ರಿಯಿಸಿರುವ ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ, ಪರಿಶಿಷ್ಟ ಸಮುದಾಯಗಳ ಹಾಗೂ ಸಾಂವಿಧಾನಿಕ ಹಕ್ಕುಗಳ ಪರ ನಿರಂತರ ದನಿಯಾಗಿ ಹೋರಾಟ ನಡೆಸಿಕೊಂಡು ಬಂದ ಹಿನ್ನೆಲೆಯಲ್ಲಿ ನಾರಾಯಣಸ್ವಾಮಿಯವರ ನಾಯಕತ್ವ ಮತ್ತು ಪಕ್ಷದ ಮೇಲಿನ ಬದ್ಧತೆಯನ್ನು ಗುರುತಿಸಿ ಈ ಅವಕಾಶ ನೀಡಿದೆ ಎಂದು ಹೇಳಿದ್ದಾರೆ.

‘ಸ್ವಜನ ಪಕ್ಷಪಾತ ಹಾಗೂ ಹಗರಣಗಳ ವ್ಯೂಹದಲ್ಲಿ ಮುಳುಗಿ ಶೂನ್ಯ ಆಡಳಿತದಿಂದ ಜನಾಕ್ರೋಶ ಎದುರಿಸುತ್ತಿರುವ ಕಾಂಗ್ರೆಸ್ ಸರ್ಕಾರದ ವೈಫಲ್ಯ ಹಾಗೂ ದುರಾಡಳಿತದ ವಿರುದ್ಧ ಸಮರ್ಥವಾಗಿ ಧ್ವನಿ ಎತ್ತಲು ನಾರಾಯಣಸ್ವಾಮಿಯವರನ್ನು ಆಯ್ಕೆ ಮಾಡಿರುವುದು ಸಮಯೋಚಿತ ನಿರ್ಧಾರ’ ಎಂದು ತಿಳಿಸಿದ್ದಾರೆ.

ಅಶೋಕ ವಿರುದ್ಧ ಪ್ರದೀಪ್ ಈಶ್ವರ್ ಹಕ್ಕುಚ್ಯುತಿ ಮಂಡನೆ

ಬೆಂಗಳೂರು: ವಿರೋಧ ಪಕ್ಷದ ನಾಯಕ ಆರ್. ಅಶೋಕ ವಿರುದ್ಧ ಕಾಂಗ್ರೆಸ್‌ನ ಪ್ರದೀಪ್ ಈಶ್ವರ್ ಅವರು ವಿಧಾನಸಭೆಯಲ್ಲಿ ಸೋಮವಾರ ಹಕ್ಕುಚ್ಯುತಿ ಮಂಡಿಸಿದರು.

ಸಂವಿಧಾನದ ಪೀಠಿಕೆ ಉಲ್ಲೇಖಿಸಿ ಮಾತನಾಡಿದ ಅವರು, ‘ವಿರೋಧಪಕ್ಷದ ನಾಯಕರು ನನ್ನ ವಿರುದ್ಧ ಅವಾಚ್ಯ ಶಬ್ದಗಳನ್ನು ಬಳಸಿದ್ದಾರೆ. ಈ ರೀತಿ ಮಾಡಿದರೆ, ಹೊಸ ಶಾಸಕರ ಕನಸು ನನಸಾಗುವುದಿಲ್ಲ. ನಾನು ಬಡತನದಿಂದ, ನೋವು ಅನುಭವಿಸಿ ಬಂದಿದ್ದೇನೆ. ನನ್ನ ತಂದೆ, ತಾಯಿಗೆ ಅನಾರೋಗ್ಯವಾದಾಗ ಸೂಕ್ತ ಚಿಕಿತ್ಸೆ ಸಿಗಲಿಲ್ಲ. ಆ ಕಾರಣಕ್ಕಾಗಿ ನನ್ನ ಕ್ಷೇತ್ರದಲ್ಲಿ 10 ಆಂಬುಲೆನ್ಸ್ ವ್ಯವಸ್ಥೆ ಮಾಡಿದ್ದೇನೆ. ಡಿಜಿಟಲ್ ಕ್ರಾಂತಿಗೆ ಮುನ್ನುಡಿ ಬರೆದಿದ್ದೇನೆ’ ಎಂದರು.

ಆಗ ಮಧ್ಯಪ್ರವೇಶಿಸಿದ ಸಭಾಧ್ಯಕ್ಷ ಯು.ಟಿ. ಖಾದರ್, ‘ವಿಧಾನಸಭೆಯಲ್ಲಿ ಶುಕ್ರವಾರ ನಡೆದಿರುವ ವಿಚಾರಕ್ಕೆ ಸೀಮಿತವಾಗಿ ಮಾತನಾಡಿ’ ಎಂದರು.

ಸ್ಪಷ್ಟನೆ ನೀಡಿದ ಆರ್. ಅಶೋಕ, ‘ನಾವು ಶುಕ್ರವಾರ ಧರಣಿ ನಡೆಸುವಾಗ ಪ್ರದೀಪ್ ಈಶ್ವರ್ ಮಾತನಾಡಿದರು. ಆಗ ನಾನು ಅವಾಚ್ಯ ಶಬ್ದ ಬಳಕೆ ಮಾಡಿರುವುದಾಗಿ ಅವರು ಹೇಳುತ್ತಿದ್ದಾರೆ. ಆದರೆ, ಆ ರೀತಿ ಪದಬಳಕೆ ಮಾಡಿರುವುದು ದಾಖಲೆಗಳಲ್ಲಿ ಇಲ್ಲ. ಪ್ರದೀಪ್ ಈಶ್ವರ್ ಅವರು ರೋಷಾವೇಶದಲ್ಲಿ ದೊಡ್ಡ ಪದ ಬಳಕೆ ಮಾಡಿದ್ದಾರೆ. ಒಂದು ವೇಳೆ ಆ ರೀತಿ ಪದಬಳಕೆ ಮಾಡಿದ್ದರೆ ಕಡತದಿಂದ ತೆಗೆಸಿ, ತಪ್ಪಾಗಿದ್ದರೆ ತಪ್ಪೇ’ ಎಂದರು.

ಕಾನೂನು ಸಚಿವ ಎಚ್‌.ಕೆ. ಪಾಟೀಲ, ‘ಈ ವಿಷಯವನ್ನು ಮುಂದುವರಿಸದೆ, ಇಲ್ಲಿಗೇ ಬಿಡಿ’ ಎಂದು ಸಲಹೆ ನೀಡಿದರು. ಆಗ ಸಭಾಧ್ಯಕ್ಷರು ಆಡಿಯೊ, ವಿಡಿಯೊ ದಾಖಲೆಗಳನ್ನು ಪರಿಶೀಲಿಸಿ, ಹಕ್ಕುಚ್ಯುತಿ ಮಂಡನೆಯ ಸೂಚನೆ ಬಗ್ಗೆ ನಿರ್ಣಯ ಪ್ರಕಟಿಸುವುದಾಗಿ ತಿಳಿಸಿದರು.

ಆರೋಪಿಗಳು ಖುಲಾಸೆ

ಬೆಂಗಳೂರು: ಶಿವಾನಂದ ಮೇಲ್ಸೇತುವೆ ಕಾಮಗಾರಿ ವಿರುದ್ಧ ಹೋರಾಟ ಸಂಬಂಧ ದಾಖಲಾಗಿದ್ದ ಕ್ರಿಮಿನಲ್ ಪ್ರಕರಣದಿಂದ ಆಮ್ ಆದ್ಮಿ ಪಕ್ಷದ (ಎಎಪಿ) 17 ಮಂದಿಯನ್ನು 1ನೇ ಎಸಿಎಂಎಂ ನ್ಯಾಯಾಲಯ ಖುಲಾಸೆಗೊಳಿಸಿದೆ.

ಶಿವಾನಂದ ಮೇಲ್ಸೇತುವೆ ಕಾಮಗಾರಿಯಲ್ಲಿ ಅವ್ಯವಹಾರ ನಡೆದಿದೆ ಎಂದು ಆರೋಪಿಸಿ, 2022ರ ಆಗಸ್ಟ್‌ನಲ್ಲಿ ಹೋರಾಟ ನಡೆದಿತ್ತು. ‘40 ಪರ್ಸೆಂಟ್ ಕಮಿಷನ್ ಸರ್ಕಾರ’ ಎಂದು ಆರೋಪಿಸಿ ಅಂದಿನ ಬಿಜೆಪಿ ಸರ್ಕಾರದ ವಿರುದ್ಧ ಎಎಪಿಯ ರಾಜ್ಯ ಸಂಘಟನಾ ಕಾರ್ಯದರ್ಶಿ ಮೋಹನ್ ದಾಸರಿ ಸೇರಿ ಹಲವರು ಪ್ರತಿಭಟನೆ ನಡೆಸಿದ್ದರು.

ಅಶ್ಲೀಲ ಚಿತ್ರ ವೀಕ್ಷಣೆ ಆರೋಪ: ಆದೇಶ ಹಿಂಪಡೆದ ಪೀಠ; ಪ್ರಾಸಿಕ್ಯೂಷನ್ ಸಲ್ಲಿಸಿದ್ದ ಮೆಮೊಗೆ ಪುರಸ್ಕಾರ

‘ನ್ಯಾಯಮೂರ್ತಿಗಳು ದೋಷಕ್ಕೆ ಹೊರತಾದವರಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನ್ಯಾಯಮೂರ್ತಿಗಳು ಎಂದಾಕ್ಷಣ ದೋಷಾತೀತರೇನೂ ಅಲ್ಲ. ನಾವುಗಳೂ ಮನುಷ್ಯರೇ. ನಿರ್ವಹಿಸುವ ಕೆಲಸಗಳಲ್ಲಿ ಕೆಲವೊಮ್ಮೆ ತಪ್ಪುಗಳಾಗುತ್ತವೆ. ತಪ್ಪಾಗಿದೆ ಎಂದು ಕಂಡುಬಂದ ತಕ್ಷಣ, ನಮ್ಮ ಆತ್ಮಸಾಕ್ಷಿಗೆ ಅನುಗುಣವಾಗಿ ಒಪ್ಪಿಕೊಳ್ಳಬೇಕಾದ್ದು ಧರ್ಮ. ತಪ್ಪನ್ನೇ ಮುಂದುವರಿಸುತ್ತೇವೆಂದರೆ ನಾವೇನೂ ದೊಡ್ಡವರಾಗಿ ಬಿಡುವುದಿಲ್ಲ...’

‘ಆನ್‌ಲೈನ್‌ಲ್ಲಿ ಮಕ್ಕಳ ಅಶ್ಲೀಲ ವಿಡಿಯೊ ವೀಕ್ಷಿಸಿದ ವ್ಯಕ್ತಿಯ ವಿರುದ್ಧ ಮಾಹಿತಿ ತಂತ್ರಜ್ಞಾನ ಕಾಯ್ದೆ–2008ರ ಕಲಂ 67ಬಿ ಅಡಿ ಪ್ರಕರಣ ದಾಖಲಿಸಲಾಗದು’ ಎಂದು 2024ರ ಜುಲೈ 10ರಂದು ನೀಡಿದ್ದ ತನ್ನ ಆದೇಶವನ್ನು ಹಿಂಪಡೆದಿರುವ ಹೈಕೋರ್ಟ್ ಹೇಳಿರುವ ಮಾತುಗಳಿವು.

‘ಅಶ್ಲೀಲ ವೆಬ್‌ಸೈಟ್ ವೀಕ್ಷಿಸುವುದು ಮಾಹಿತಿ ಪ್ರಸಾರ ಅಥವಾ ವರ್ಗಾವಣೆ ಮಾಡಿದಂತಾಗುವುದಿಲ್ಲ’ ಎಂದು ನೀಡಿದ್ದ ತನ್ನ ಈ ಮೊದಲಿನ ಆದೇಶವನ್ನು ಹಿಂಪಡೆದಿರುವ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠವು, ‘ಮಾಹಿತಿ ತಂತ್ರಜ್ಞಾನ ಕಾಯ್ದೆ–2008ರ ಕಲಂ 67ಬಿ (ಬಿ) ಅನ್ನು ಪರಿಗಣಿಸದೆ ಆದೇಶ ಮಾಡಲಾಗಿತ್ತು. ಆದರೆ, ಇದು ತಪ್ಪು ಎಂಬುದು ಗೊತ್ತಾಗಿದೆ’ ಎಂದು ಹೇಳಿ, ತಪ್ಪನ್ನು ಸರಿಪಡಿಸಿಕೊಂಡಿರುವುದಾಗಿ ತಿಳಿಸಿದೆ.

ಹೈಕೋರ್ಟ್ ಸುದ್ದಿ

ಆದೇಶ ಹಿಂಪಡೆಯುವಂತೆ ಕೋರಿ ರಾಜ್ಯ ಪ್ರಾಸಿಕ್ಯೂಷನ್ ಸಲ್ಲಿಸಿದ್ದ ಮೆಮೊ ಅನ್ನು ಪುರಸ್ಕರಿಸಿದೆ. ಅಂತೆಯೇ, ಪ್ರಕರಣದ ಅರ್ಜಿದಾರ ಎನ್. ಇನಾಯತ್‌ಉಲ್ಲಾ ವಿರುದ್ಧ ತನಿಖೆ ಮುಂದುವರಿಸಲು ಅನುಮತಿ ನೀಡಿದೆ.

ಮೆಮೊ ವಿಚಾರಣೆ ನಡೆಸಿದ ನ್ಯಾಯಪೀಠವು, ‘ಮಾಹಿತಿ ತಂತ್ರಜ್ಞಾನ ಕಾಯ್ದೆಯ ಕಲಂ 67ಬಿ (ಎ) ಆಧರಿಸಿ ಈ ಮೊದಲು ಆದೇಶ ಮಾಡಲಾಗಿತ್ತು. ಕಲಂ 67ಬಿ (ಬಿ) ಅಡಿ ವಿದ್ಯುನ್ಮಾನ ಮಾಧ್ಯಮದಲ್ಲಿ ಮಕ್ಕಳನ್ನು ಅಶ್ಲೀಲವಾಗಿ ಚಿತ್ರಿಸುವ, ಲೈಂಗಿಕವಾಗಿ ಬಿಂಬಿಸುವ ಬರಹ ಅಥವಾ ಡಿಜಿಟಲ್ ಪ್ರತಿಬಿಂಬ ಕಳುಹಿಸುವುದು, ಕೇಳುವುದು, ಅವುಗಳನ್ನು ಬ್ರೌಸ್ ಮಾಡುವುದು, ಡೌನ್‌ಲೋಡ್ ಮಾಡುವುದು, ಜಾಹೀರಾತುಗಳ ಮೂಲಕ ಉತ್ತೇಜಿಸುವುದು, ಹಂಚುವುದು ಕಲಂ 67ಬಿ ಅಡಿಯ ಪ್ರಕ್ರಿಯೆಗೆ ನಾಂದಿ ಹಾಡಲಿದೆ’ ಎಂದು ಹೇಳಿದೆ.

‘ಈ ಪ್ರಕರಣದಲ್ಲಿ ಕಾಯ್ದೆಯ ಕಲಂ 67ಬಿಯ ಉಪ ಕಲಂ ಬಿ ಅನ್ವಯವಾಗುತ್ತದೆ. ಮುಂದಿನ ತನಿಖೆಗೆ ಅವಕಾಶ ನೀಡದೇ ಪ್ರಕ್ರಿಯೆ ರದ್ದುಪಡಿಸಿದ್ದು, ಕಲಂ 67ಬಿ (ಬಿ) ಹಿನ್ನೆಲೆಯಲ್ಲಿ ನಿಸ್ಸಂಶಯವಾಗಿ ಅರ್ಜಿದಾರರ ವಿರುದ್ಧದ ಪ್ರಕ್ರಿಯೆ ವಜಾ ಮಾಡಿರುವುದನ್ನು ಹಿಂಪಡೆಯಲು ಸಕಾರಣವಿದೆ’ ಎಂದು ತಿಳಿಸಿದೆ.

‘ಒಮ್ಮೆ ಹೊರಡಿಸಿದ ಆದೇಶ ಹಿಂಪಡೆಯಲು ಅಥವಾ ಅದನ್ನು ಮರು ಪರಿಶೀಲಿಸಿಲು ಅಪರಾಧ ದಂಡ ಪ್ರಕ್ರಿಯಾ ಸಂಹಿತೆ-1973ರ (ಸಿಆರ್‌ಪಿಸಿ) ಕಲಂ 362ರ ಅಡಿಯಲ್ಲಿ ಈ ನ್ಯಾಯಾಲಯಕ್ಕೆ ನಿರ್ಬಂಧವಿದೆ’ ಎಂಬ ಅರ್ಜಿದಾರರ ಪರ ವಕೀಲರ ವಾದವನ್ನು ತಿರಸ್ಕರಿಸಿರುವ ನ್ಯಾಯಪೀಠ, ‘ಸಿಆರ್‌ಪಿಸಿ ಕಲಂ 482 ಅನ್ನು ಕಲಂ 362 ನಿಯಂತ್ರಿಸಲು ಆಗದು’ ಎಂದು ಹೇಳಿದೆ.

ಏನಿದು ಪ್ರಕರಣ?

‘ಹೊಸಕೋಟೆ ತಾಲ್ಲೂಕಿನ ವಿವಿ ಬಡಾವಣೆ ನಿವಾಸಿ ಎನ್.ಇನಾಯತ್‌ಉಲ್ಲಾ ಬಿನ್ ನವಾಬ್ ಜಾನ್ (46) 2022ರ ಮಾರ್ಚ್ 23ರಂದು ಮಧ್ಯಾಹ್ನ 3.50ರಿಂದ ಸಂಜೆ 4.40 ಗಂಟೆ ಮಧ್ಯದ ಅವಧಿಯಲ್ಲಿ ಮಕ್ಕಳ ಅಶ್ಲೀಲ ಭಾವಚಿತ್ರ, ವಿಡಿಯೊ ವೀಕ್ಷಣೆ ಮಾಡಿದ್ದಾರೆ’ ಎಂಬ ಆರೋಪದಡಿ ಬೆಂಗಳೂರಿನ ಸೆನ್ (ಸೈಬರ್, ಎಕನಾಮಿಕ್ ಅಂಡ್ ನಾರ್ಕೋಟಿಕ್) ಕ್ರೈಂ ಪೊಲೀಸ್ ಠಾಣೆಯಲ್ಲಿ ಐ.ಟಿ ಕಾಯ್ದೆ 67 ಬಿ ಅಡಿಯಲ್ಲಿ ಪ್ರಕರಣ ದಾಖಲಿಸಿಕೊಳ್ಳಲಾಗಿತ್ತು.

‘ಪ್ರಕರಣಕ್ಕೆ ಸಂಬಂಧಿಸಿದಂತೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಮುಖ್ಯ ಜ್ಯುಡಿಷಿಯಲ್ ಮ್ಯಾಜಿಸ್ಟ್ರೇಟ್ ಕೋರ್ಟ್‌ನಲ್ಲಿರುವ ಪ್ರಕರಣ ರದ್ದುಪಡಿಸಬೇಕು’ ಎಂದು ಕೋರಿ ಇನಾಯತ್‌ಉಲ್ಲಾ ಹೈಕೋರ್ಟ್ ಮೆಟ್ಟಿಲೇರಿದ್ದರು. ಈ ಅರ್ಜಿ ವಿಚಾರಣೆ ನಡೆಸಿದ್ದ ನ್ಯಾಯಪೀಠವು, ಇನಾಯತುಲ್ಲಾ ವಿರುದ್ಧದ ಪ್ರಕರಣ ರದ್ದುಪಡಿಸಿತ್ತು.

> **ಮಾಡಿದ ತಪ್ಪನ್ನೇ ಶಾಶ್ವತಗೊಳಿಸುವ ಪರಿ ಅರ್ಥಹೀನ. ತಪ್ಪಾಗಿದೆ ಎಂದು ತಿಳಿದು ನಂತರ ಅದನ್ನು ತಿದ್ದಿಕೊಳ್ಳಬೇಕು. ಅದನ್ನೇ ಮುಂದುವರಿಸಿಕೊಂಡು ಹೋಗುವುದು ವೀರೋಚಿತವಲ್ಲ.**
> **ಎಂ.ನಾಗಪ್ರಸನ್ನ,** ನ್ಯಾಯಮೂರ್ತಿ

ಶಿಕ್ಷಕಿಯರ ವರ್ಗಾವಣೆ ರದ್ದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಐವತ್ತು ವರ್ಷ ಮೇಲ್ಪಟ್ಟ ಶಿಕ್ಷಕರ ವರ್ಗಾವಣೆಗೆ ವಿನಾಯಿತಿ ಇದ್ದರೂ ರಾಜ್ಯ ಸರ್ಕಾರ 55 ವರ್ಷ ಹಾಗೂ 58 ವರ್ಷದ ಇಬ್ಬರು ಮಹಿಳಾ ಶಿಕ್ಷಕಿಯರನ್ನು ಹೆಚ್ಚುವರಿ ಶಿಕ್ಷಕರು ಎಂದು ವರ್ಗಾವಣೆ ಮಾಡಿದ್ದ ಆದೇಶ ರದ್ದುಗೊಳಿಸಿದ್ದ ಕೆಎಟಿ ಆದೇಶವನ್ನು ಎತ್ತಿಹಿಡಿದಿರುವ ಹೈಕೋರ್ಟ್, ‘ನಿಯಮಗಳಲ್ಲಿ ವರ್ಗಾವಣೆ ಮಾಡುವುದಕ್ಕೆ ವಿನಾಯಿತಿ ಇದ್ದಾಗ ನೌಕರರು ಅರ್ಜಿ ಸಲ್ಲಿಸಲಿ ಅಥವಾ ಬಿಡಲಿ, ಚಾಲ್ತಿಯಲ್ಲಿ ಇರುವಂತಹ ನಿಯಮವನ್ನು ಅಧಿಕಾರಿಗಳು ಜಾರಿಗೊಳಿಸಬೇಕು’ ಎಂದು ಕಟ್ಟುನಿಟ್ಟಾಗಿ ಆದೇಶಿಸಿದೆ.

ಬಾಗಲಕೋಟೆ ಜಿಲ್ಲೆಯ ಬೀಳಗಿ ತಾಲ್ಲೂಕಿನ ಬೂದಿಹಾಳದಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಉಮಾದೇವಿ ಹುಂಡೇಕರ್ (55) ಮತ್ತು ಬೀಳಗಿ ತಾಲ್ಲೂಕಿನ ತೆಗ್ಗಿ ಗ್ರಾಮದ ಪ್ರಭಾವತಿ ರೋಣದ (58) ಅವರನ್ನು ಹೆಚ್ಚುವರಿ ಶಿಕ್ಷಕರೆಂದು ಸರ್ಕಾರ ವರ್ಗಾವಣೆ ಮಾಡಿತ್ತು. ಇದನ್ನು ಪ್ರಶ್ನಿಸಿ ಇಬ್ಬರೂ ಕೆಎಟಿ (ಕರ್ನಾಟಕ ಆಡಳಿತಾತ್ಮಕ ನ್ಯಾಯಮಂಡಳಿ) ಮೊರೆ ಹೋಗಿದ್ದರು. ಕೆಎಟಿಯು ಅರ್ಜಿ ಮಾನ್ಯ ಮಾಡುವ ಮೂಲಕ ವರ್ಗಾವಣೆ ಆದೇಶವನ್ನು ಎತ್ತಿ ಹಿಡಿದಿತ್ತು.

ಕೆಎಟಿ ಆದೇಶ ಪ್ರಶ್ನಿಸಿ ಸರ್ಕಾರ ಮೇಲ್ಮನವಿ ಸಲ್ಲಿಸಿತ್ತು. ಇದೀಗ ಸರ್ಕಾರ ಮೇಲ್ಮನವಿ ವಜಾಗೊಳಿಸಿರುವ ಮುಖ್ಯ ನ್ಯಾಯಮೂರ್ತಿ ಎನ್.ವಿ.ಅಂಜಾರಿಯಾ ಮತ್ತು ನ್ಯಾಯಮೂರ್ತಿ ಎಸ್.ಜಿ.ಪಂಡಿತ್ ಅವರಿದ್ದ ವಿಭಾಗೀಯ ನ್ಯಾಯಪೀಠ, ‘ಶಾಸನದಲ್ಲಿ ಅನುಕೂಲಕರ ಅಂಶಗಳನ್ನು ಅಳವಡಿಸಿದಾಗ, ಅದನ್ನು ಫಲಾನುಭವಿಗಳ ಪರವಾಗಿ ಜಾರಿಗೊಳಿಸಬೇಕು. ಅದು ಬಿಟ್ಟು ಫಲಾನುಭವಿ ಅರ್ಜಿ ಸಲ್ಲಿಸಿದ್ದಾರೆಯೇ ಇಲ್ಲವೇ ಎಂಬುದನ್ನು ನೋಡಬಾರದು’ ಎಂದು ಕುಟುಕಿದೆ.

‘ಇಬ್ಬರೂ ಮಹಿಳಾ ಶಿಕ್ಷಕಿಯರಿದ್ದಾರೆ. ಅವರಿಬ್ಬರಿಗೂ 50 ವರ್ಷದ ಮೇಲಾಗಿದೆ. ಇಂತಹವರನ್ನು ಹೆಚ್ಚುವರಿ ಶಿಕ್ಷಕರೆಂದು ಘೋಷಿಸಿ, ವರ್ಗಾವಣೆ ಮಾಡಬಾರದಿತ್ತು. ಕರ್ನಾಟಕ ರಾಜ್ಯ ನಾಗರಿಕ ಸೇವಾ ಕಾಯ್ದೆ–2020ರ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ಕಲಂ 10(1)(6) ಅನ್ವಯ ಇಂತಹವರ ವರ್ಗಾವಣೆಗೆ ವಿನಾಯಿತಿ ಇದೆ. ಆದರೂ ಅವರನ್ನು ಹೆಚ್ಚುವರಿ ಶಿಕ್ಷಕರು ಎಂದು ಘೋಷಿಸಿರುವುದು ಸರಿಯಲ್ಲ’ ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

ಪ್ರಕರಣವೇನು?

ಉಮಾದೇವಿ ಹುಂಡೇಕರ್ ಮತ್ತು ಪ್ರಭಾವತಿ ರೋಣದ ಅವರನ್ನು ಸರ್ಕಾರಿ ಪ್ರಾಥಮಿಕ ಶಾಲೆ ಮತ್ತು ಪ್ರೌಢಶಾಲೆಯಲ್ಲಿ ಹೆಚ್ಚುವರಿ ಶಿಕ್ಷಕರು ಎಂದು ಪರಿಗಣಿಸಿ ಸಾರ್ವಜನಿಕ ಶಿಕ್ಷಣ ಇಲಾಖೆ 2022ರ ಡಿಸೆಂಬರ್ 26ರಂದು ಆದೇಶ ಹೊರಡಿಸಿತ್ತು. ಆದರೆ ಇಬ್ಬರೂ ಶಿಕ್ಷಕಿಯರು, ‘ನಿಯಮದ ಪ್ರಕಾರ ನಮಗೆ 50 ವರ್ಷಕ್ಕೂ ಹೆಚ್ಚು ವಯಸ್ಸಾಗಿದೆ. ಹೀಗಾಗಿ, ನಮ್ಮನ್ನು ವರ್ಗಾವಣೆ ಮಾಡುವುದಕ್ಕೆ ವಿನಾಯಿತಿ ಇದೆ’ ಎಂದು ಆಕ್ಷೇಪಣೆ ಸಲ್ಲಿಸಿದ್ದರು. ಆದರೆ, ಈ ಆಕ್ಷೇಪಣೆಯನ್ನು ಪರಿಗಣಿಸದೆ ಇಬ್ಬರನ್ನೂ ವರ್ಗಾವಣೆ ಮಾಡಲಾಗಿತ್ತು. ಇದನ್ನು ಪ್ರಶ್ನಿಸಿ ಇಬ್ಬರೂ ಕೆಎಟಿ ಮೊರೆ ಹೋಗಿದ್ದರು. ವರ್ಗಾವಣೆ ಆದೇಶವನ್ನುಕೆಎಟಿ ರದ್ದುಪಡಿಸಿತ್ತು. ಈ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ಹೈಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಿತ್ತು.

‘ಗ್ರೇಟರ್ ಬೆಂಗಳೂರು’ ಮಸೂದೆಗೆ ಸರ್ಕಾರ ಸಮ್ಮತಿ

ಒಂದನೇ ಪುಟದಿಂದ...

ರಾಜ್ಯ ಸರ್ಕಾರದಿಂದ ಬಿಡುಗಡೆಯಾಗುವ ಅನುದಾನವನ್ನು ಪಾಲಿಕೆಗಳಿಗೆ ಹಂಚುವ ಜವಾಬ್ದಾರಿ ಪ್ರಾಧಿಕಾರದ್ದಾಗಿದ್ದು, ಅಂತರ್ ಇಲಾಖೆಗಳ ಕೆಲಸಗಳು, ಯೋಜನೆಗಳ ಮೇಲುಸ್ತುವಾರಿಯನ್ನು ಹೊಂದಿರುತ್ತದೆ. ಮೇಲ್ಸೇತುವೆ, ಸುರಂಗ ರಸ್ತೆಯಂತಹ ಬೃಹತ್ ಯೋಜನೆಗಳನ್ನು ಕೂಡ ಪ್ರಾಧಿಕಾರವೇ ನಿರ್ವಹಿಸಲಿದೆ.

ನಗರ ಪಾಲಿಕೆಗಳ ವ್ಯಾಪ್ತಿ ಹಾಗೂ ಅವುಗಳ ವಾರ್ಡ್‌ಗಳನ್ನು ವಿಂಗಡಿಸುವ ಕಾರ್ಯ, ವಾರ್ಡ್‌ಗಳ ಸಂಖ್ಯೆ, ಅವುಗಳ ಮೀಸಲಾತಿಯನ್ನು ರಾಜ್ಯ ಸರ್ಕಾರ ಅಧಿಸೂಚನೆ ಮೂಲಕ ನಿರ್ಧರಿಸಬಹುದು. ಗ್ರೇಟರ್ ಬೆಂಗಳೂರು ವ್ಯಾಪ್ತಿಯನ್ನು ರಾಜ್ಯ ಸರ್ಕಾರ ಅಧಿಸೂಚನೆ ಮೂಲಕ ಕಾಲಕಾಲಕ್ಕೆ ನಿರ್ಧರಿಸಬಹುದಾಗಿದೆ.

ನಗರ ಪಾಲಿಕೆಗಳಲ್ಲಿ ಮೇಯರ್, ಉಪ ಮೇಯರ್, ಜಂಟಿ ಆಯುಕ್ತರು, ಸ್ಥಾಯಿ ಸಮಿತಿ, ವಲಯ ಸಮಿತಿ, ವಾರ್ಡ್ ಸಮಿತಿಗಳು ಮತ್ತು ಪ್ರದೇಶ ಸಭಾಗಳು ಇರಲಿವೆ.

ಪ್ರತಿ ವಾರ್ಡ್‌ಗೆ ಒಂದು ಸಮಿತಿ ರಚನೆಯಾಗಲಿದ್ದು, ಆಯಾ ಕಾರ್ಪೊರೇಟರ್ ಅದಕ್ಕೆ ಅಧ್ಯಕ್ಷರಾಗಿರುತ್ತಾರೆ. ಪಾಲಿಕೆಯಿಂದ 10 ಸದಸ್ಯರನ್ನು ಈ ಸಮಿತಿಗೆ ನಾಮ ನಿರ್ದೇಶನ ಮಾಡಬೇಕು. ಇದರಲ್ಲಿ ಎಸ್‌ಸಿ, ಎಸ್‌ಟಿಯ ಇಬ್ಬರು, ಮೂವರು ಮಹಿಳೆಯರು, ನಿವಾಸಿಗಳ ಸಂಘದ ಇಬ್ಬರು ಪ್ರತಿನಿಧಿಗಳು ಇರಲಿದ್ದಾರೆ. ಈ ಸಮಿತಿಯಲ್ಲಿ ಆಯಾ ವಾರ್ಡ್‌ಗೆ ಸಂಬಂಧಿಸಿದ ಅಭಿವೃದ್ಧಿ ಕಾರ್ಯಗಳ ಕ್ರಿಯಾಯೋಜನೆಯನ್ನು ಪಾಲಿಕೆಗೆ ಸಲ್ಲಿಸಲಿವೆ.

‘ಗ್ರಾಮ ಸ್ವರಾಜ್ ಕಾಯ್ದೆ ಅನುಷ್ಠಾನ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯ್ದೆಯ ಅನುಷ್ಠಾನಕ್ಕೆ ಕ್ರಮ ಕೈಗೊಳ್ಳಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಕಾಂಗ್ರೆಸ್‌ನ ಪ್ರಕಾಶ್ ರಾಥೋಡ್ ಅವರ ಪ್ರಶ್ನೆಗೆ ಉತ್ತರಿಸಿದ ಅವರು, ‘ರಾಜ್ಯದಲ್ಲಿ ನಾನೇ ಮುಖ್ಯಮಂತ್ರಿಯಾಗಿದ್ದಾಗ 2016ರಲ್ಲಿ ಕರ್ನಾಟಕ ರಾಜ್ಯ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯ್ದೆ ತಿದ್ದುಪಡಿ ತರಲಾಗಿತ್ತು. ಗ್ರಾಮ ಸರ್ಕಾರದ ಆಶಯದ ಜತೆಗೆ, ಸ್ಥಳೀಯ ಸಂಸ್ಥೆಗಳಲ್ಲಿ ಪರಿಶಿಷ್ಟರು, ಹಿಂದುಳಿದ ವರ್ಗಗಳು, ಮಹಿಳೆಯರಿಗೆ ನೀಡಿದ್ದ ಮೀಸಲಾತಿ ಬಳಸಿಕೊಂಡು ರಾಜ್ಯದ ನೂರಾರು ಸಣ್ಣಪುಟ್ಟ ಸಮುದಾಯಗಳ ಜನರು ಗ್ರಾಮ ಗದ್ದುಗೆಯ ಮೇಲೆ ಕುಳಿತಿದ್ದಾರೆ. ಅವರಿಗೆ ಸಮರ್ಪಕ ಅಧಿಕಾರ ಹಂಚಿಕೆಯ ಸೂತ್ರಗಳನ್ನು ರಚಿಸಲು ಕಾಯ್ದೆಗೆ ತಿದ್ದುಪಡಿ ತರಲಾಗಿತ್ತು. ಆದಷ್ಟು ಶೀಘ್ರ ಕಾರ್ಯರೂಪಕ್ಕೆ ತರಲಾಗುವುದು’ ಎಂದರು.

1995ಕ್ಕಿಂತಲೂ ಹಿಂದಿನ ಶಾಲೆಗಳಲ್ಲಿ ಏಳು ಶಾಲೆಗಳಿಗೆ ಅನುದಾನ ದೊರಕಿಸುವಂತೆ, ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಅನುಮತಿ ನೀಡುವಂತೆ ಕಾಂಗ್ರೆಸ್‌ನ ಐವನ್ ಡಿಸೋಜ, ಪುಟ್ಟಣ, ಬಿಜೆಪಿಯ ಎಸ್‌.ವಿ. ಸಂಕನೂರ, ಎಸ್‌.ಎಲ್. ಬೋಜೇಗೌಡ ಅವರು ಒತ್ತಾಯಿಸಿದರು.

ಶಿಕ್ಷಣಕ್ಕೆ ಸಂಬಂಧಿಸಿದ ಎಲ್ಲ ಸಮಸ್ಯೆಗಳಿಗೆ ಪ್ರತ್ಯೇಕ ಸಭೆ ಕರೆದು ಸಮಸ್ಯೆ ಇತ್ಯರ್ಥಪಡಿಸುವುದಾಗಿ ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಭರವಸೆ ನೀಡಿದರು..

ಸಹಕಾರ ಮಸೂದೆ ಅಂಗೀಕಾರ: ಕರ್ನಾಟಕ ಸೌಹಾರ್ದ ಸಹಕಾರಿ ತಿದ್ದುಪಡಿ ಮಸೂದೆ, ಕರ್ನಾಟಕ ಸಹಕಾರ ಸಂಘಗಳ ಮಸೂದೆಗಳಿಗೆ ವಿಧಾನ ಪರಿಷತ್ ಸೋಮವಾರ ಅಂಗೀಕಾರ ನೀಡಿತು. ಹಿಂದಿನ ಅಧಿವೇಶನದಲ್ಲಿ ಮಂಡಿಸಿದ್ದ ಕರ್ನಾಟಕ ಸಹಕಾರ ಸಂಘಗಳ ಮಸೂದೆಯ ಕೆಲ ಅಂಶಗಳಿಗೆ ಬಿಜೆಪಿ–ಜೆಡಿಎಸ್ ಸದಸ್ಯರು ವಿರೋಧ ವ್ಯಕ್ತಪಡಿಸಿದ್ದರಿಂದ ಮಸೂದೆಯನ್ನು ಸಭಾಪತಿ ಬಸವರಾಜ ಹೊರಟ್ಟಿ ಪರಿಶೀಲನಾ ಸಮಿತಿಗೆ ವಹಿಸಿದ್ದರು.

GRT ಜ್ಯುವೆಲರ್ಸ್‌ನಲ್ಲಿ ‘ಆಷಾಢ ಆಶ್ಚರ್ಯ’ ಶಾಪಿಂಗ್

ಬೆಂಗಳೂರು: ಕಳೆದ ಆರು ದಶಕಗಳಿಂದ ಆಭರಣ ಮಾರುಕಟ್ಟೆಯಲ್ಲಿ ಅಪಾರ ನಂಬಿಕೆ ಗಳಿಸಿರುವ ಜಿಆರ್‌ಟಿ ಜ್ಯುವೆಲರ್ಸ್ ‘ಆಷಾಢ ಆಶ್ಚರ್ಯ’ ಎಂಬ ಮರೆಲಾಗದ ಕ್ಷಣಗಳನ್ನು ಗ್ರಾಹಕರಿಗೆ ಸಮರ್ಪಿಸುತ್ತಿದೆ.

ಗುಣಮಟ್ಟ ಮತ್ತು ಕರಕುಶಲತೆಗೆ ಖ್ಯಾತವಾಗಿರುವ ಜಿಆರ್‌ಟಿ ಜ್ಯುವೆಲರ್ಸ್ ಚಿನ್ನ, ವಜ್ರ, ಪ್ಲಾಟಿನಂ, ಬೆಳ್ಳಿ ಮತ್ತು ಅಮೂಲ್ಯ ರತ್ನದ ಹರಳುಗಳ ಆಭರಣಗಳನ್ನು ಹೊರತಂದಿದೆ.

ಅತ್ಯಂತ ವಿಶ್ವಾಸಾರ್ಹ ‘ಕೈರಾಸಿ’ ಆಭರಣ ತಾಣವಾದ ಜಿಆರ್‌ಟಿ ಜ್ಯುವೆಲರ್ಸ್‌ನಲ್ಲಿ ಗ್ರಾಹಕರು ತಮ್ಮ ನೆಚ್ಚಿನ ಆಭರಣಗಳನ್ನು ಖರೀದಿಸದೆ ಆಷಾಢ ಎಂದಿಗೂ ಪೂರ್ಣಗೊಳ್ಳುವುದಿಲ್ಲ. ಈ ವಿಶೇಷ ಋತುವನ್ನು ವಿಶಿಷ್ಟ ಆಭರಣಗಳಿಂದ ಅನಾವರಣಗೊಳಿಸಲು ಜಿಆರ್‌ಟಿ ಸಂತೋಷಿಸುತ್ತದೆ. ಈ ಸಂದರ್ಭದಲ್ಲಿ ಗ್ರಾಹಕರು ಹೆಚ್ಚುವರಿ ಶಾಪಿಂಗ್ ಮಾಡಲು ಪ್ರೋತ್ಸಾಹ ನೀಡಲಾಗುತ್ತಿದೆ.

ಪ್ರಸ್ತುತಿ: ಪಿವಿ ಬ್ರ್ಯಾಂಡ್ ಸ್ಪಾಟ್

ಪ್ರತಿ ಖರೀದಿ ಮೇಲೆ ಗ್ರಾಹಕರು ಖಚಿತವಾದ ಉಡುಗೊರೆ ಸ್ವೀಕರಿಸಲಿದ್ದಾರೆ. ಆಷಾಢ ಮಾಸದಲ್ಲಿ ಹಳೆ ಚಿನ್ನಾಭರಣಗಳನ್ನು ವಿನಿಮಯ ಮಾಡಿಕೊಳ್ಳುವ ಗ್ರಾಹಕರಿಗೆ ಪ್ರತಿ ಗ್ರಾಂಗೆ ಹೆಚ್ಚುವರಿ ₹50 ದೊರೆಯಲಿದೆ.

ಜಿಆರ್‌ಟಿ ಜ್ಯುವೆಲರ್ಸ್‌ನ ವ್ಯವಸ್ಥಾಪಕ ನಿರ್ದೇಶಕ ಜಿ.ಆರ್. ಆನಂದ್ ಅನಂತಪದ್ಮನಾಭನ್ ಮಾತನಾಡಿ, ನಮ್ಮ ‘ಪ್ರಾಥಮಿಕ ಆದ್ಯತೆ ಸದಾ ನಮ್ಮ ಗ್ರಾಹಕರ ಅಗತ್ಯಗಳನ್ನು ಅರ್ಥ ಮಾಡಿಕೊಳ್ಳುವುದಾಗಿದೆ. ಪ್ರತಿ ವರ್ಷ ಆಷಾಢದಲ್ಲಿ ಗ್ರಾಹಕರು ಆಭರಣಗಳನ್ನು ಖರೀದಿಸಿ ಶೋರೂಂನಿಂದ ಹೊರಡುವಾಗ ಅವರು ಸಂತೋಷವಾಗಿರುವಂತೆ ನೋಡಿಕೊಳ್ಳಲು ಉಡುಗೊರೆಗಳನ್ನು ನೀಡಲಾಗುತ್ತದೆ. ನಮ್ಮಲ್ಲಿ ಶಾಪಿಂಗ್ ಮಾಡಿದ ನಂತರ ಗ್ರಾಹಕರು ಅನುಭವಿಸುವ ತೃಪ್ತಿಯೇ ನಮ್ಮ ಏಕೈಕ ಉದ್ದೇಶ’ ಎಂದು ಹೇಳಿದರು.

ಜಿಆರ್‌ಟಿ ಜ್ಯುವೆಲರ್ಸ್‌ನ ಮತ್ತೊಬ್ಬ ವ್ಯವಸ್ಥಾಪಕ ನಿರ್ದೇಶಕ ರಾಧಾಕೃಷ್ಣನ್ ಅವರು ‘ನಮ್ಮ ಅತಿದೊಡ್ಡ ಕಲೆಕ್ಷನ್‌ಗಳಲ್ಲಿ ಒಂದನ್ನು ಪ್ರಸ್ತುತಪಡಿಸಲು ನಾವು ಉತ್ಸುಕರಾಗಿದ್ದೇವೆ. ಆಷಾಢ ಆಶ್ಚರ್ಯ ಕುಟುಂಬಗಳು ಒಟ್ಟಾಗಿ ಸೇರಲು, ಶಾಪಿಂಗ್ ಮಾಡಲು ಮತ್ತು ಉಡುಗೊರೆಗಳನ್ನು ಪರಸ್ಪರ ಹಂಚಿಕೊಂಡು ಸಂತೋಷ ಪಡುವ ಸಮಯವಾಗಿದೆ. ಉಡುಗೊರೆಗಳು ನಮ್ಮ ಗ್ರಾಹಕರು ನಮ್ಮ ಮೇಲೆ ಇಟ್ಟಿರುವ ನಿರಂತರ ನಂಬಿಕೆಗೆ ಕೃತಜ್ಞತೆ ವ್ಯಕ್ತಪಡಿಸುವ ವಿಧಾನವಾಗಿದೆ’ ಎಂದಿದ್ದಾರೆ.

ಪಿ.ಪಿ.ಪಿ ಮಾದರಿಯಲ್ಲಿ ‘ಮನರಂಜನಾ ಪಾರ್ಕ್’: ₹2,663 ಕೋಟಿ ವೆಚ್ಚದಲ್ಲಿ ಅಭಿವೃದ್ಧಿ ಪ್ರಕ್ರಿಯೆ ಶುರು

ಕೆಆರ್‌ಎಸ್ ಬೃಂದಾವನ ಉದ್ಯಾನ ವಿಶ್ವದರ್ಜೆಗೆ

• ಸಿದ್ದು ಆರ್.ಜಿ.ಹಳ್ಳಿ

ಮಂಡ್ಯ: ಜಿಲ್ಲೆಯ ಶ್ರೀರಂಗಪಟ್ಟಣ ತಾಲ್ಲೂಕಿನ ಕೃಷ್ಣರಾಜಸಾಗರ ಅಣೆಕಟ್ಟೆಯ ವಿಶ್ವವಿಖ್ಯಾತ ಬೃಂದಾವನ ಉದ್ಯಾನವನ್ನು ‘ಸಾರ್ವಜನಿಕ ಖಾಸಗಿ ಸಹಭಾಗಿತ್ವ’ದಲ್ಲಿ ₹2,663 ಕೋಟಿ ವೆಚ್ಚದಲ್ಲಿ ವಿಶ್ವದರ್ಜೆಗೆ ಉನ್ನತೀಕರಿಸಲು ಪ್ರಕ್ರಿಯೆ ಆರಂಭವಾಗಿದೆ.

198 ಎಕರೆ ಪ್ರದೇಶದಲ್ಲಿ ‘ಬೃಂದಾವನ ಮನರಂಜನಾ ಪಾರ್ಕ್’ ನಿರ್ಮಾಣಕ್ಕೆ ಸಂಬಂಧಿಸಿ ರಾಜಸ್ಥಾನದ ಸಿನ್ಸಿಯರ್ ಆರ್ಕಿಟೆಕ್ಟ್ ಎಂಜಿನಿಯರ್ ಸಂಸ್ಥೆಯು ವಿಸ್ತೃತ ಯೋಜನಾ ವರದಿ (ಡಿ.ಪಿ.ಆರ್) ತಯಾರಿಸಿ, ಕಾವೇರಿ ನೀರಾವರಿ ನಿಗಮಕ್ಕೆ ಸಲ್ಲಿಸಿದೆ.

ಈ ವರದಿಗೆ ರಾಜ್ಯ ಮಟ್ಟದ ‘ಸಿಂಗಲ್ ವಿಂಡೋ ಏಜೆನ್ಸಿ’ (ಎಸ್.ಡಬ್ಲ್ಯು.ಎ)ಯಿಂದ ಮತ್ತು ರಾಜ್ಯ ಮಟ್ಟದ ‘ಎಕ್ಸ್‌ಪರ್ಟ್ ಅಪ್ರೈಸಲ್ ಕಮಿಟಿ’ (ಎಸ್.ಇ.ಎ.ಸಿ)ಯಿಂದ ನಿರಾಕ್ಷೇಪಣಾ ಪತ್ರ ಪಡೆಯಲಾಗಿದೆ. ಸರ್ಕಾರದ ಸಚಿವ ಸಂಪುಟ ಸಮಿತಿಯ ಒಪ್ಪಿಗೆಗಾಗಿ ಆರ್ಥಿಕ ಇಲಾಖೆಗೆ ವರದಿಯನ್ನು ಸಲ್ಲಿಸಲಾಗಿದೆ.

ಮುಖ್ಯಾಂಶಗಳು
- 198 ಎಕರೆಯಲ್ಲಿ ಪಾರ್ಕ್ ನಿರ್ಮಾಣ ಉದ್ದೇಶ
- ರಾಜಸ್ಥಾನದ ಸಂಸ್ಥೆಯಿಂದ ಡಿಪಿಆರ್ ಸಲ್ಲಿಕೆ
- ಸಚಿವ ಸಂಪುಟದ ಅನುಮೋದನೆ ಬಾಕಿ

ಏನೇನು ಇರಲಿದೆ?: ಪಾರ್ಕ್‌ನಲ್ಲಿ ಕಾವೇರಿ ಮಾತೆಯ ಮೂರ್ತಿ, ವಾಟರ್ ಪಾರ್ಕ್, ಪೆಂಗ್ವಿನ್ ಪಾರ್ಕ್, ವಾಟರ್ ಪ್ಲೇನ್ ರೈಡ್, ರೋಲರ್ ಕೋಸ್ಟರ್, ಹಾಟ್ ಏರ್ ಬಲೂನ್ ರೈಡ್, ಪ್ಯಾರಾಸೈಲಿಂಗ್, ಅರೋಮ ಗಾರ್ಡನ್, ಬೊಟಾನಿಕಲ್ ಗಾರ್ಡನ್, ಜಂಗಲ್ ಬೋಟ್ ರೈಡ್, ಸ್ಕೈ ವಾಕ್, ವ್ಯಾಕ್ಸ್ ಮ್ಯೂಸಿಯಂ, ಫುಡ್ ಪ್ಲಾಜಾ ಮತ್ತು ಬಹುಹಂತದ ಕಾರು ಪಾರ್ಕಿಂಗ್ ನಿರ್ಮಿಸಲು ಯೋಜಿಸಲಾಗಿದೆ.

ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ ತಾಲ್ಲೂಕಿನ ಕೃಷ್ಣರಾಜಸಾಗರ ಅಣೆಕಟ್ಟೆಯ ಕೆಳಭಾಗದಲ್ಲಿರುವ ಬೃಂದಾವನ ಉದ್ಯಾನ

ಒಂದು ಜಿಲ್ಲೆ ಒಂದು ತಾಣ: ‘ಒಂದು ಜಿಲ್ಲೆ ಒಂದು ತಾಣ’ ಯೋಜನೆಯಡಿ, ಜಿಲ್ಲೆಯ ಕೃಷ್ಣರಾಜಸಾಗರ ಆಯ್ಕೆಯಾಗಿತ್ತು. ರಾಜ್ಯ ಪ್ರವಾಸೋದ್ಯಮ ನೀತಿ–2020ರಲ್ಲಿ ಉದ್ಯಾನ ಅಭಿವೃದ್ಧಿಪಡಿಸಲು ಗುರುತಿಸಲಾಗಿತ್ತು. ಈ ಎಲ್ಲ ಕಾರಣಗಳಿಂದ ಉದ್ಯಾನಕ್ಕೆ ಹೊಸ ರೂಪ ನೀಡಲು ನಿಗಮ ಮುಂದಾಗಿದೆ.

ಜಾಗ ಖರೀದಿ: ‘1932ರಲ್ಲಿ ಸ್ಥಾಪನೆಯಾಗಿ, 60 ಎಕರೆಯಲ್ಲಿ ಹರಡಿರುವ ಉದ್ಯಾನದ ಅಭಿವೃದ್ಧಿ ಜತೆಗೆ ‘ಮನರಂಜನಾ ಪಾರ್ಕ್’ ನಿರ್ಮಿಸಲು ಒಟ್ಟು 198 ಎಕರೆ ಪ್ರದೇಶ ಬೇಕು. ಇಲ್ಲಿಗೆ ಸುಮಾರು 10 ಸಾವಿರ ಪ್ರವಾಸಿಗರು ಬರುವ ನಿರೀಕ್ಷೆಯಿದ್ದು, ಹೋಟೆಲ್, ಲಾಡ್ಜ್, ವಾಹನ ಪಾರ್ಕಿಂಗ್ ನಿರ್ಮಿಸಬೇಕು. ಅವಶ್ಯವಿರುವೆಡೆ ಜಾಗ ಖರೀದಿಗೆ ಚಿಂತನೆ ನಡೆದಿದೆ. ಪ್ರವಾಸಿಗರನ್ನು ಆಕರ್ಷಿಸಲು ಎಲ್ಲ ಸೌಕರ್ಯಗಳನ್ನು ಕಲ್ಪಿಸಲಾಗುವುದು’ ಎಂದು ನಿಗಮದ ಅಧಿಕಾರಿಗಳು ತಿಳಿಸಿದ್ದಾರೆ.



> **ಬೃಂದಾವನ ಉದ್ಯಾನಕ್ಕೆ ಹೊಸರೂಪ ನೀಡಲು ತಾಂತ್ರಿಕ ವರದಿ ಪಡೆಯಲಾಗಿದೆ. ಬೃಂದಾವನ ಅಮ್ಯೂಸ್‌ಮೆಂಟ್ ಪಾರ್ಕ್‌ನಿಂದ 8 ಸಾವಿರದಿಂದ 10 ಸಾವಿರ ಮಂದಿಗೆ ಉದ್ಯೋಗ ಸಿಗಲಿದೆ**
> **ಡಿ.ಕೆ.ಶಿವಕುಮಾರ್,** ಉಪ ಮುಖ್ಯಮಂತ್ರಿ

ಸೂರಜ್ ರೇವಣ್ಣಗೆ ಜಾಮೀನು ಮಂಜೂರು

ಲೈಂಗಿಕ ಕಿರುಕುಳದ ಆರೋಪ: ಪುನಃ ಇಂತಹ ಅಪರಾಧ ಎಸಗಬಾರದೆಂದು ಕೋರ್ಟ್ ಷರತ್ತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ತಮ್ಮ ಪಕ್ಷದ ಕಾರ್ಯಕರ್ತರೊಬ್ಬರಿಗೆ ಲೈಂಗಿಕ ಕಿರುಕುಳ ನೀಡಿದ ಪ್ರಕರಣದ ಆರೋಪಿಯಾಗಿ ಬಂಧನಕ್ಕೊಳಗಾಗಿರುವ ವಿಧಾನ ಪರಿಷತ್‌ ಜೆಡಿಎಸ್ ಸದಸ್ಯ ಸೂರಜ್ ರೇವಣ್ಣ ಅವರಿಗೆ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಜಾಮೀನು ಮಂಜೂರು ಮಾಡಿದ್ದು, ಪುನಃ ಇಂತಹ ಅಪರಾಧ ಎಸಗಬಾರದು ಎಂಬ ಷರತ್ತು ವಿಧಿಸಿದೆ.

ಇನ್ನೊಂದು ಪ್ರಕರಣದಲ್ಲಿಯೂ ನ್ಯಾಯಾಲಯವು ನಿರೀಕ್ಷಣಾ ಜಾಮೀನು ಮಂಜೂರು ಮಾಡಿರುವುದರಿಂದ ಸೂರಜ್ ರೇವಣ್ಣ ಜೈಲಿನಿಂದ ಬಿಡುಗಡೆಯಾಗಲಿದ್ದಾರೆ.

ಈ ಸಂಬಂಧ ಸೂರಜ್ ಸಲ್ಲಿಸಿದ್ದ ರೆಗ್ಯುಲರ್ ಮತ್ತು ನಿರೀಕ್ಷಣಾ ಜಾಮೀನು ಅರ್ಜಿಗಳನ್ನು, 'ಶಾಸಕರು-ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆಯ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಸಂತೋಷ್ ಗಜಾನನ ಭಟ್ ಸೋಮವಾರ ಪುರಸ್ಕರಿಸಿ ಆದೇಶಿಸಿದರು.

ಷರತ್ತುಗಳು: 'ಸೂರಜ್ ₹2 ಲಕ್ಷ ಮೊತ್ತದ ವೈಯಕ್ತಿಕ ಬಾಂಡ್ ಮತ್ತು ಇಷ್ಟೇ ಮೊತ್ತಕ್ಕೆ ಇಬ್ಬರ ಭದ್ರತೆ ಒದಗಿಸಬೇಕು. ಸಂಬಂಧಿಸಿದ ನ್ಯಾಯಾಲಯದ ಅನುಮತಿ ಪಡೆಯದೆ ದೇಶ ಬಿಟ್ಟು ತೆರಳುವಂತಿಲ್ಲ. ಸಾಕ್ಷಿಗಳ ಮೇಲೆ ಪ್ರಭಾವ ಬೀರಬಾರದು, ದೂರುದಾರ ಮತ್ತು ಸಂತ್ರಸ್ತರಿಗೆ ಬೆದರಿಕೆ ಹಾಕಬಾರದು. ತನಿಖೆಗೆ ಸಹಕರಿಸಬೇಕು. ತನಿಖಾಧಿಕಾರಿ ಸೂಚಿಸಿದಾಗ ವಿಚಾರಣೆಗೆ ಹಾಜರಾಗಬೇಕು. ತಿಂಗಳ ಎರಡನೇ ಭಾನುವಾರ ಬೆಳಿಗ್ಗೆ 9ರಿಂದ ಸಂಜೆ 5ರ ಒಳಗೆ ತನಿಖಾಧಿಕಾರಿ ಮುಂದೆ ಆರು ತಿಂಗಳು ಅಥವಾ ವಿಚಾರಣಾ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸುವವರೆಗೆ ಹಾಜರಾಗಬೇಕು. ಇಂತಹುದೇ ಅಪರಾಧದಲ್ಲಿ ಭಾಗಿಯಾಗಬಾರದು' ಎಂಬ ಷರತ್ತುಗಳನ್ನು ವಿಧಿಸಲಾಗಿದೆ. ಇದೇ ಷರತ್ತುಗಳನ್ನು ನಿರೀಕ್ಷಣಾ ಜಾಮೀನಿಗೂ ಅನ್ವಯಿಸಲಾಗಿದೆ.

ನಾಗೇಂದ್ರಗೆ ನ್ಯಾಯಾಂಗ ಬಂಧನ

ವಾಲ್ಮೀಕಿ ಅಭಿವೃದ್ಧಿ ನಿಗಮದ ಬ್ಯಾಂಕ್ ಖಾತೆಯಿಂದ ₹95 ಕೋಟಿಯನ್ನು ಅಕ್ರಮವಾಗಿ ವರ್ಗಾವಣೆ ಮಾಡಲಾಗಿದೆ ಎನ್ನಲಾದ ಹಗರಣದ ಆರೋಪಿಯಾಗಿ ಜಾರಿ ನಿರ್ದೇಶನಾಲಯದ (ಇ.ಡಿ) ಕಸ್ಟಡಿಯಲ್ಲಿದ್ದ ಮಾಜಿ ಸಚಿವ ಬಿ.ನಾಗೇಂದ್ರ ಅವರನ್ನು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಸೋಮವಾರ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿತು.

ಪ್ರಕರಣಕ್ಕೆ ಸಂಬಂಧಿಸಿದಂತೆ ನಾಗೇಂದ್ರ ಅವರನ್ನು ಬಿಗಿ ಪೊಲೀಸ್ ಭದ್ರತೆಯಲ್ಲಿ, 'ಶಾಸಕರು-ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆಯ ವಿಶೇಷ ನ್ಯಾಯಾಲಯದ (ಸಿಸಿಎಚ್-82) ನ್ಯಾಯಾಧೀಶ ಸಂತೋಷ ಗಜಾನನ ಭಟ್ ಅವರ ಮುಂದೆ ಬೆಳಿಗ್ಗೆ 11.30ಕ್ಕೆ ಹಾಜರುಪಡಿಸಲಾಯಿತು.

ವಿಚಾರಣೆ ವೇಳೆ ಪ್ರಾಸಿಕ್ಯೂಷನ್ ಪರ ಹಾಜರಾದ ಇ.ಡಿ ವಕೀಲ ಪಿ.ಪ್ರಸನ್ನ ಕುಮಾರ್ ಅವರು, ಪ್ರಕರಣದ ಮತ್ತೊಬ್ಬ ಆರೋಪಿಯಾಗಿ ಸದ್ಯ ನ್ಯಾಯಾಂಗ ಬಂಧನದಲ್ಲಿರುವ ಹೈದರಾಬಾದ್‌ನ ಸತ್ಯನಾರಾಯಣ ವರ್ಮ ಅವರನ್ನು ಬಾಡಿ ವಾರಂಟ್ ಮುಖಾಂತರ ವಶಕ್ಕೆ ನೀಡುವಂತೆ ಕೋರಿ ಅರ್ಜಿ ಸಲ್ಲಿಸಿದರು.

ಈ ಅರ್ಜಿಯನ್ನು ಮಾನ್ಯ ಮಾಡಿದ ನ್ಯಾಯಾಧೀಶರು ಆರೋಪಿ ಸತ್ಯನಾರಾಯಣ ವರ್ಮ ಅವರನ್ನು ಮಂಗಳವಾರ (ಜುಲೈ 23) ಕೋರ್ಟ್‌ಗೆ ಹಾಜರುಪಡಿಸುವಂತೆ ಆದೇಶಿಸಿದರು. ಅಂತೆಯೇ, ನಾಗೇಂದ್ರ ಅವರನ್ನು 14 ದಿನಗಳ ಕಾಲ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿ ಆದೇಶಿಸಿದರು.

ಪತ್ರಿಕೋದ್ಯಮ ಪ್ರಶಸ್ತಿ: ನಾಮ ನಿರ್ದೇಶನ ಆಹ್ವಾನ

ಬೆಂಗಳೂರು: ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯಿಂದ 2019 ರಿಂದ 2023ರವರೆಗೆ ಟಿಯೆಸ್ಸಾರ್ ಸ್ಮಾರಕ ಹಾಗೂ ಮೊಹರೆ ಹಣಮಂತರಾಯ ಪತ್ರಿಕೋದ್ಯಮ ಪ್ರಶಸ್ತಿಗಳಿಗೆ ಆಯ್ಕೆ ಸಮಿತಿ ರಚಿಸಲಾಗಿದ್ದು, ಪ್ರಶಸ್ತಿಗೆ ನಾಮ ನಿರ್ದೇಶನಗಳನ್ನು ಆಹ್ವಾನಿಸಲಾಗಿದೆ. ಎರಡೂ ಪ್ರಶಸ್ತಿಗಳ ಮೊತ್ತ ತಲಾ ₹2 ಲಕ್ಷ. ನಾಮನಿರ್ದೇಶನಗಳನ್ನು ಆಯುಕ್ತರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ವಾರ್ತಾ ಸೌಧ, ನಂ. 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು - 560001 ಇಲ್ಲಿಗೆ ಜುಲೈ 25ರೊಳಗೆ ಕಳುಹಿಸಬೇಕು. tsraward@gmail.com ಗೂ ಕಳುಹಿಸಬಹುದು.

ನಿಧನ ವಾರ್ತೆ

ಮಾಜಿ ಶಾಸಕ ಡಾ.ಮುದ್ನಾಳ

ಯಾದಗಿರಿ: ಮಾಜಿ ಶಾಸಕ ಹಾಗೂ ವೈದ್ಯ ಡಾ.ವೀರಬಸವಂತರೆಡ್ಡಿ ಮುದ್ನಾಳ (72) ಸೋಮವಾರ ತಮ್ಮ ಒಡೆತನದ ವಿಬಿಆರ್ ಆಸ್ಪತ್ರೆಯಲ್ಲಿ ಅನಾರೋಗ್ಯದಿಂದ ನಿಧನರಾದರು.

2004ರಲ್ಲಿ ಪಕ್ಷೇತರ ಅಭ್ಯರ್ಥಿಯಾಗಿ ಯಾದಗಿರಿ ಕ್ಷೇತ್ರದಿಂದ ವಿಧಾನ ಸಭೆಗೆ ಆಯ್ಕೆಯಾಗಿದ್ದರು. ಡಾ.ಎ.ಬಿ. ಮಾಲಕ ರೆಡ್ಡಿ ಅವರನ್ನು ಮಣಿಸಿದ್ದರು. ನಂತರ ಜೆಡಿಎಸ್‌ಗೆ ಬೆಂಬಲ ನೀಡಿದ್ದರು. 3 ತಿಂಗಳಿಂದ ಅನಾರೋಗ್ಯದಿಂದ ಬಳಲುತ್ತಿದ್ದರು. ಮೃತರಿಗೆ ಪತ್ನಿ, ಇಬ್ಬರು ಸಹೋದರರು ಇದ್ದಾರೆ.

ಮಂಗಳವಾರ (ಜುಲೈ 23ರಂದು) ಮಧ್ಯಾಹ್ನ 3 ಗಂಟೆಗೆ ಮುದ್ನಾಳ ತೋಟದಲ್ಲಿ ಅಂತ್ಯಕ್ರಿಯೆ ಜರುಗಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಡೆಂಗಿ: ಒಂದೇ ದಿನ 409 ಪ್ರಕರಣ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ 181 ಸೇರಿ ರಾಜ್ಯದಲ್ಲಿ 409 ಡೆಂಗಿ ಪ್ರಕರಣಗಳು ಹೊಸದಾಗಿ ಸೋಮವಾರ ದೃಢಪಟ್ಟಿವೆ. ಇದರಿಂದಾಗಿ ಸಕ್ರಿಯ ಪ್ರಕರಣಗಳ ಸಂಖ್ಯೆ 3,402ಕ್ಕೆ ತಲುಪಿದೆ.

24 ಗಂಟೆಗಳಲ್ಲಿ 2,511 ಪರೀಕ್ಷೆಗಳನ್ನು ನಡೆಸಲಾಗಿದ್ದು, 17 ಜಿಲ್ಲೆಗಳಲ್ಲಿ ಹೊಸದಾಗಿ ಡೆಂಗಿ ಪ್ರಕರಣಗಳು ವರದಿಯಾಗಿವೆ. ಬಿಬಿಎಂಪಿ ವ್ಯಾಪ್ತಿಯಲ್ಲಿ 1,204 ಪರೀಕ್ಷೆಗಳನ್ನು ನಡೆಸಲಾಗಿದ್ದು, 181 ಪ್ರಕರಣಗಳು ದೃಢಪಟ್ಟಿವೆ. ತುಮಕೂರು, ಹಾಸನದಲ್ಲಿ ತಲಾ 55, ಚಿಕ್ಕಬಳ್ಳಾಪುರ, ಮಂಡ್ಯದಲ್ಲಿ ತಲಾ 23 ಹಾಗೂ ಉಡುಪಿಯಲ್ಲಿ 10 ಪ್ರಕರಣಗಳು ಹೊಸದಾಗಿ ದೃಢಪಟ್ಟಿವೆ. ಉಳಿದಂತೆ ಇದಕ್ಕಿಂತ ಕಡಿಮೆ ಸಂಖ್ಯೆಯಲ್ಲಿ ಪ್ರಕರಣಗಳು ವರದಿಯಾಗಿವೆ.

ಯುವತಿ ಸಾವು

ತುಮಕೂರು: ಡೆಂಗಿ ಜ್ವರದಿಂದ ಬಳಲುತ್ತಿದ್ದ ಯುವತಿಯೊಬ್ಬಳು ನಗರದ ಸಿದ್ಧಗಂಗಾ ಆಸ್ಪತ್ರೆಯಲ್ಲಿ ಭಾನುವಾರ ಮೃತಪಟ್ಟಿದ್ದಾರೆ.

ತುಮಕೂರಿನ ಶಾಂತಿನಗರದ ಕುಂಟಯ್ಯನ ಬಡಾವಣೆಯಲ್ಲಿ ಪೋಷಕರ ಜತೆ ವಾಸವಾಗಿದ್ದ ಪಾವಗಡದ ಗುಣಶ್ರೀ(18) ಮೃತ ಯುವತಿ. ಜಿಲ್ಲೆಯಲ್ಲಿ ಈ ವರ್ಷ ಡೆಂಗಿಯಿಂದ ಸಂಭವಿಸಿದ ಮೊದಲ ಸಾವಿನ ಪ್ರಕರಣ ಇದಾಗಿದೆ. ಜಿಲ್ಲೆಯಲ್ಲಿ ಈ ವರ್ಷ ಇದುವರೆಗೆ 365 ಜನರಲ್ಲಿ ಡೆಂಗಿ ಸೋಂಕು ದೃಢಪಟ್ಟಿದೆ. ಸದ್ಯ 103 ಸಕ್ರಿಯ ಪ್ರಕರಣಗಳಿವೆ. ನಾಲ್ಕು ಮಕ್ಕಳು ಸೇರಿ 11 ಮಂದಿ ವಿವಿಧ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಕಾಂಗ್ರೆಸ್ ವಕ್ತಾರ ಎಂ. ಲಕ್ಷ್ಮಣ ಆರೋಪ

'ಮುಡಾ: ಅಕ್ರಮ ನಿವೇಶನ ಬಿಎಸ್‌ವೈ ಸಂಬಂಧಿಯೂ ಭಾಗಿ'

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಬಿಎಸ್‌ವೈ ಸಹೋದರಿಯ ಮಗ ರಾಜೇಶ್ ಹೆಸರಿಗೆ ನಿವೇಶನ ನೋಂದಣಿ
- ಜಮೀನಿನ ಮೂಲ ದಾಖಲೆಗಳೇ ನಾಪತ್ತೆಯಾಗಿವೆ
- 'ಅಕ್ರಮದ ಬಗ್ಗೆ ಬಿಜೆಪಿ ಜತೆ ಚರ್ಚೆಗೆ ಸಿದ್ಧ'

ಎಂ. ಲಕ್ಷ್ಮಣ

ಮೈಸೂರು: 'ಭೂಸಂತ್ರಸ್ತ ಕುಟುಂಬವೊಂದಕ್ಕೆ ಮುಡಾ ವಿಜಯನಗರ ಮೂರನೇ ಹಂತದಲ್ಲಿ ಶೇ 50:50 ಅನುಪಾತದಲ್ಲಿ ಅಕ್ರಮವಾಗಿ ಬದಲಿ ನಿವೇಶನ ಮಂಜೂರು ಮಾಡಿದ್ದು, ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್.ಯಡಿಯೂರಪ್ಪ ಸಹೋದರಿ ಪ್ರೇಮಾ ಅವರ ಮಗ ಎಸ್.ಸಿ. ರಾಜೇಶ್ ಕೆಲವೇ ದಿನದಲ್ಲಿ ಅದನ್ನು ತಮ್ಮ ಹೆಸರಿಗೆ ನೋಂದಣಿ ಮಾಡಿಕೊಂಡಿದ್ದಾರೆ. ಜಮೀನಿಗೆ ಸಂಬಂಧಿಸಿದ ಮೂಲ ದಾಖಲೆಗಳೇ ನಾಪತ್ತೆಯಾಗಿದ್ದು, ತನಿಖೆ ನಡೆಸಬೇಕು' ಎಂದು ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ ಒತ್ತಾಯಿಸಿದರು.

'ಮೈಸೂರು ತಾಲ್ಲೂಕಿನ ಹಿನಕಲ್ ಗ್ರಾಮದ ಸರ್ವೆ ಸಂಖ್ಯೆ 255/3ರಲ್ಲಿ ಕಮಲಮ್ಮ ಎಂಬವರಿಗೆ ಸೇರಿದ 33 ಗುಂಟೆ ಜಾಗವನ್ನು ಮುಡಾ 1984ರಲ್ಲಿ ಸ್ವಾಧೀನಪಡಿಸಿಕೊಂಡು ಬಡಾವಣೆ ನಿರ್ಮಿಸಿತ್ತು. ನಂತರ ಜಮೀನಿಗೆ ಸಂಬಂಧಿಸಿದ ಮೂಲ ದಾಖಲೆಗಳು ಹಾಗೂ ಭೂ ಪರಿಹಾರದ ದಾಖಲೆಗಳೇ ಮಾಯವಾಗಿವೆ. ಹೀಗಿದ್ದೂ ಮುಡಾ ಆಯುಕ್ತರು ಅವರಿಗೆ ಶೇ 50:50 ಅನುಪಾತದಲ್ಲಿ ಒಟ್ಟು 8,984 ಚದರ ಅಡಿ ನಿವೇಶನವನ್ನು ಮಂಜೂರು ಮಾಡಿರುವುದು ಅಕ್ರಮ' ಎಂದು ಸೋಮವಾರ ಸುದ್ದಿಗೋಷ್ಠಿಯಲ್ಲಿ ದೂರಿದರು.

'ಪ್ರಕರಣವು ನ್ಯಾಯಾಲಯದಲ್ಲಿ ವಿಚಾರಣೆ ಹಂತದಲ್ಲಿ ಇದ್ದಾಗ್ಯೂ ಆಯುಕ್ತರು ಭೂಸಂತ್ರಸ್ತರಿಗೆ ಭಾರಿ ಮೌಲ್ಯದ ನಿವೇಶನ ಮಂಜೂರು ಮಾಡಿರುವುದು ಮೊದಲ ಅಕ್ರಮ. ಹಳೆಯ ಪ್ರಕರಣವನ್ನು ಶೇ 50:50 ಅನುಪಾತಕ್ಕೆ ಪರಿಗಣಿಸಿರುವುದು ಮತ್ತೊಂದು ಲೋಪ. ಕಮಲಮ್ಮ ಪುತ್ರ ಶಿವಾನಂದ ಅವರಿಗೆ ಮಂಜೂರಾದ ನಿವೇಶನವನ್ನು ಪ್ರೇಮ ಅವರ ಪುತ್ರ ರಾಜೇಶ್ ಕೆಲವೇ ದಿನದಲ್ಲಿ ತಮ್ಮ ಹೆಸರಿಗೆ ನೋಂದಣಿ ಹಾಗೂ ಖಾತೆ ಮಾಡಿಸಿಕೊಂಡಿದ್ದಾರೆ. ಎಲ್ಲವನ್ನೂ ಸಮಗ್ರವಾಗಿ ತನಿಖೆಗೆ ಒಳಪಡಿಸಬೇಕು' ಎಂದು ಆಗ್ರಹಿಸಿದರು.

'ಇದೇ ರೀತಿ, ವಿಜಯನಗರ ಮೂರನೇ ಹಂತದ 'ಸಿ' ಬ್ಲಾಕ್‌ನಲ್ಲಿ ಮಹೇಂದ್ರ ಎಂಬವರಿಗೆ ಪರಿಹಾರದ ರೂಪದಲ್ಲಿ 19 ನಿವೇಶನಗಳನ್ನು ಮಂಜೂರು ಮಾಡಲಾಗಿದೆ. ಇದೆಲ್ಲವೂ ಬಿಜೆಪಿ ಸರ್ಕಾರದ ಆಡಳಿತದ ಅವಧಿಯಲ್ಲಿ ನಡೆದಿದ್ದು, ಪಕ್ಷದ ನಾಯಕರು ಉತ್ತರಿಸಬೇಕು' ಎಂದು ಒತ್ತಾಯಿಸಿದರು.

'ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿಯವರು ಕೈಗಾರಿಕೆ ಮೀಸಲಾದ ಜಾಗದಲ್ಲಿ ಅಕ್ರಮವಾಗಿ ಸೈಟ್ ಪಡೆದಿದ್ದು, ಆ ಬಗ್ಗೆ ಬೆಂಗಳೂರಿನಲ್ಲಿ ಮಂಗಳವಾರ ದಾಖಲೆ ಬಿಡುಗಡೆ ಮಾಡುವೆ. ಬಿಜೆಪಿ ಹಾಗೂ ಜೆಡಿಎಸ್ ನಾಯಕರ ವಿರುದ್ಧ ಇಷ್ಟೆಲ್ಲ ಆರೋಪಗಳಿದ್ದರೂ, ಕಾನೂನಾತ್ಮಕವಾಗಿ ನಿವೇಶನ ಪಡೆದ ಮುಖ್ಯಮಂತ್ರಿ ಸಿದ್ದರಾಮಯ್ಯ ಕುಟುಂಬವನ್ನು ತೇಜೋವಧೆ ಮಾಡುತ್ತಿರುವುದು ಖಂಡನೀಯ' ಎಂದರು.

'ಕೆಸರೆ ಗ್ರಾಮದ ಭೂಮಿಯನ್ನು ಸಿದ್ದರಾಮಯ್ಯ ಭಾಮೈದ ಮಲ್ಲಿಕಾರ್ಜುನ ಸ್ವಾಮಿ ಅವರಿಗೆ ಮಾರಲು ದೇವರಾಜು ಹಾಗೂ ಅವರ ಸಹೋದರರ ಮಲ್ಲಯ್ಯ, ಮೈಲಾರಯ್ಯ ಮತ್ತು ಕುಟುಂಬ ಒಪ್ಪಿಗೆ ಸೂಚಿಸಿರುವ ದಾಖಲೆಗಳಿವೆ. ಬಿಜೆಪಿ ನಾಯಕರು ದಾಖಲೆಯೊಂದಿಗೆ ಮಾತನಾಡಲಿ, ನಾನು ಅವರ ಕಚೇರಿಗೆ ಬಂದು ಚರ್ಚಿಸಲೂ ಸಿದ್ಧ' ಎಂದರು.

ಕಾಂಗ್ರೆಸ್ ನಗರ ಕಾಂಗ್ರೆಸ್ ಸಮಿತಿಯ ಅಧ್ಯಕ್ಷ ಆರ್.ಮೂರ್ತಿ, ಮುಖಂಡರಾದ ಶಿವಣ್ಣ, ಮಹೇಶ್ ಇದ್ದರು.

ಕರ್ನಾಟಕ ಸರ್ಕಾರ ಜಿಲ್ಲಾ ಪಂಚಾಯತ್, ದಾವಣಗೆರೆ.
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಛೇರಿ, ದಾವಣಗೆರೆ ಜಿಲ್ಲೆ, ಎಸ್.ಎಸ್.ಹೈಟೆಕ್ ಆಸ್ಪತ್ರೆ ಹತ್ತಿರ, ಶ್ರೀರಾಮನಗರ ರಸ್ತೆ, ಎನ್.ಸಿ.ಸಿ ಕಛೇರಿ ಪಕ್ಕ ದಾವಣಗೆರೆ-577005 ದೂರವಾಣಿ : 08192 237833 ಫ್ಯಾಕ್ಸ್ : 08192 230919 e mail : dhodavangere@gmail.com
ಸಂಖ್ಯೆ:ಜಿಸಘ/ದಾ/ಎನ್‌ಹೆಚ್‌ಎಂ/ನೇಮಕಾತಿ/60/2024-25 ದಿನಾಂಕ:22.07.2024

ಪ್ರಕಟಣೆ

ರಾಷ್ಟ್ರೀಯ ಆರೋಗ್ಯ ಅಭಿಯಾನದ ವಿವಿಧ ಉಪ ಕಾರ್ಯಕ್ರಮಗಳ ಅಡಿ ಈ ಕೆಳಕಂಡ ತಾತ್ಕಾಲಿಕವಾಗಿ ಗುತ್ತಿಗೆ ಆಧಾರದಲ್ಲಿ 31.03.2025 ರವರೆಗೆ ಹಾಗೂ 2024-25ನೇ ಸಾಲಿನ ಪಿ.ಐ.ಪಿ. ಅನುಮೋದನೆ ನಿರೀಕ್ಷಿಸಿ ಹುದ್ದೆ ಮುಂದುವರೆಸುವ ಎನ್.ಹೆಚ್.ಎಂ. ಷರತ್ತಿಗೆ ಒಳಪಟ್ಟು ನಿಯಮಾನುಸಾರ ರೋಸ್ಟರ್ ಕಂ. ಮೆರಿಟ್ ಆಧಾರದಲ್ಲಿ ನೇಮಕ ಮಾಡಲು ಆಸಕ್ತರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.
ಹುದ್ದೆಗಳ ವಿವರ:- (1) **Block Epidemiologist (1DSP) Channagiri, Honnali Jagaluru (01 post each)** ವಿದ್ಯಾರ್ಹತೆ ಹಾಗೂ ವಯೋಮಿತಿ:- Any Medical Graduate with 2 years in Public Health (Desirable) Or M.Sc., in life science with 2 years Masters in Public Health With compurer knowledge Age limit 40 years ಮಾಸಿಕ ಸಂಚಿತ ಸಂಭಾವನೆ:- ರೂ. 30,000/- ಒಟ್ಟು ಹುದ್ದೆಗಳ ಸಂಖ್ಯೆ:- 03 ಮೀಸಲಾತಿ:- ಪ.ಜಾತಿ-ಇತರೆ. ಸಾ.ಅ (ಮಹಿಳೆ) ಪ.ಪಂ.-ಗ್ರಾಮೀಣ.
(2) **DHW Co-Ordinator (DIIWC)** ವಿದ್ಯಾರ್ಹತೆ ಹಾಗೂ ವಯೋಮಿತಿ:- BDS/ BAMS/BHMS/BUMS/BYNS/M.Sc Nursing/M.Sc Life sciences/B.Sc Nusing with MPH and MBA. Age limit 40 years ಮಾಸಿಕ ಸಂಚಿತ ಸಂಭಾವನೆ:- ರೂ. 30,000/- ಒಟ್ಟು ಹುದ್ದೆಗಳ ಸಂಖ್ಯೆ:- 01 ಮೀಸಲಾತಿ:- ಸಾ.ಅ.
(3) **Social Worker (NTCP)** ವಿದ್ಯಾರ್ಹತೆ ಹಾಗೂ ವಯೋಮಿತಿ:- Post graduate degree in Sociology 2 Years of filied experience. Age limit 40 years ಮಾಸಿಕ ಸಂಚಿತ ಸಂಭಾವನೆ:- ರೂ. 25,000/- ಒಟ್ಟು ಹುದ್ದೆಗಳ ಸಂಖ್ಯೆ:- 01 ಮೀಸಲಾತಿ:- ಸಾ.ಅ.
ಆಸಕ್ತರು ಅರ್ಜಿಗಳನ್ನು ದಿನಾಂಕ 29.07.2024 ರಂದು ಬೆಳಗ್ಗೆ 10.30 ರಿಂದ 3.00 ಗಂಟೆವರೆಗೆ ಜಿಲ್ಲಾ ಸರ್ವೇಕ್ಷಣಾಧಿಕಾರಿಗಳ ಕಚೇರಿ, ಚಿಗಟೇರಿ ಜಿಲ್ಲಾ ಆಸ್ಪತ್ರೆ ಆವರಣ, ದಾವಣಗೆರೆ ಇಲ್ಲಿ ಅರ್ಜಿಗಳನ್ನು ವಿತರಿಸಲಾಗುವುದು. ಅರ್ಜಿದಾರರು ಸೂಕ್ತ ಅರ್ಜಿಗಳನ್ನು ಪಡೆದು ಸರಿಯಾದ ವಿವರಗಳನ್ನು ತುಂಬಿ ವಿದ್ಯಾರ್ಹತೆ, ಮೀಸಲಾತಿ ಮತ್ತು ಅನುಭವಕ್ಕೆ ಸಂಬಂಧಿಸಿದಂತೆ 2 ಭಾವ ಚಿತ್ರದೊಂದಿಗೆ ಒಂದು ಸೆಟ್ ಸ್ವಯಂ ದೃಢೀಕೃತ ದಾಖಲೆಗಳನ್ನು ಲಗತ್ತಿಸಿ ಅದೇ ದಿನ ಸಂಜೆ 5.00 ಗಂಟೆಯೊಳಗೆ ಭರ್ತಿ ಮಾಡಿದ ಅರ್ಜಿಗಳನ್ನು ಹಿಂದಿರುಗಿಸತಕ್ಕದ್ದು, ನಂತರ ಬಂದ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ. ರಾಷ್ಟ್ರೀಯ ಆರೋಗ್ಯ ಅಭಿಯಾನ / ಗ್ರಾಮೀಣ ಆರೋಗ್ಯ ಅಭಿಯಾನದಲ್ಲಿ ಅನುಭವವುಳ್ಳವರಿಗೆ ಆಧ್ಯತೆ ನೀಡಲಾಗುವುದು. ಸ್ಥಾನಿಕರಿಗೆ ಆಧ್ಯತೆ ಹಾಗೂ ಸರ್ಕಾರದ/ ಇಲಾಖೆಯ ನಿಯಮಾವಳಿಗಳಂತೆ ವಯೋಮಿತಿ ಮತ್ತು ಮೀಸಲಾತಿ ನಿಗದಿಪಡಿಸಲಾಗಿದೆ. ಹೆಚ್ಚಿನ ಮಾಹಿತಿಯನ್ನು ಕಚೇರಿಯ ಪ್ರಕಟಣಾ ಫಲಕದಲ್ಲಿ ಪ್ರಕಟಿಸಲಾಗಿದೆ.
ವಾಸಾಇ/ಡಿವಿಜಿ/169/ ಕೆಎಸ್‌ಎಂಸಿಎ/2024-25 ಸಹಿ/- ಜಿಲ್ಲಾ ಸರ್ವೇಕ್ಷಣಾಧಿಕಾರಿಗಳು, ದಾವಣಗೆರೆ.

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ
(ಸಿಐಎನ್: ಯು40109ಕೆಎ1999ಎಸ್‌ಜಿಸಿ025521)
ಸಂ: ಅಇಂ(ವಿ)/ಉಲೆನಿ/ಹಿಸ/2023-24/1835-36 ದಿನಾಂಕ: 22.07.2024

ಪ್ರಕಟಣೆ

ಶ್ರೀ ವಡ್ಡಲಪ್ಪ.ಬಿ.ಎ. ಸ್ಟೇಷನ್ ಮೇಕ್ಯಾನಿಕ್ ದರ್ಜೆ-1, 66/11ಕೆವಿ ವಿದ್ಯುತ್ ವಿತರಣಾ ಕೇಂದ್ರ, ಕವಿಪ್ರನಿನಿ, ಹರಿಹರಪುರ(66/11ಕೆವಿ ವಿದ್ಯುತ್ ವಿತರಣಾ ಕೇಂದ್ರ, ಕವಿಪ್ರನಿನಿ, ಹೊಳೆನರಸೀಪುರಕ್ಕೆ ನಿಯೋಜಿಸಲಾಗಿದೆ) ಆದ ನೀವು ದಿನಾಂಕ: 21.12.2016 ರಿಂದ ಜನವರಿ 2017 ರವರೆಗೂ ಹಾಗೂ ದಿನಾಂಕ: 03.12.2018 ರಿಂದ 15.01.2019 ರವರೆಗೆ ವಿವಿಧ ರಜೆಗಳನ್ನು ಪಡೆದಿರುತ್ತೀರಿ ನಂತರ ದಿನಾಂಕ: 16.01.2019 ರಿಂದ ಇಲ್ಲಿಯವರೆಗೂ ಕರ್ತವ್ಯಕ್ಕೆ ಗೈರುಹಾಜರಾಗಿ ನಿಗಮದ ಸೇವಾ ನಿಯಮಾವಳಿಗಳ ಪ್ರಕಾರ ಮೇಲಾಧಿಕಾರಿಗಳ ಪೂರ್ವಾನುಮತಿ ಪಡೆದು ಹೋಗಬೇಕಾಗಿದ್ದು ಅದನ್ನು ನೀವು ಉಲ್ಲಂಘಿಸಿರುತ್ತೀರಿ. ಸಹಾಯಕ ಇಂಜಿನಿಯರ್(ವಿ), 66/11ಕೆವಿ ವಿದ್ಯುತ್ ವಿತರಣಾ ಕೇಂದ್ರ, ಕವಿಪ್ರನಿನಿ, ಹೊಳೆನರಸೀಪುರ, ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ನೋಡಲ್ ಕೇಂದ್ರ, ಹೊಳೆನರಸೀಪುರ ಮತ್ತು ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಟಿಎಲ್ ಅಂಡ್ ಎಸ್‌ಎಸ್ ವಿಭಾಗ, ಕವಿಪ್ರನಿನಿ, ಹೊಳೆನರಸೀಪುರರವರು ತಮ್ಮ ಅನಧಿಕೃತ ಗೈರುಹಾಜರಾಗಿರುವ ಬಗ್ಗೆ ತಮ್ಮ ಖಾಯಂ ವಿಳಾಸಕ್ಕೆ ಕಾರಣ ಕೇಳಿ ನೋಟಿಸ್ ಜಾರಿಮಾಡಿದ್ದರೂ ತಮ್ಮ ಖಾಯಂ ವಿಳಾಸದಲ್ಲಿ ನಿಮ್ಮ ತಂದೆ ತಾಯಿ ಇದ್ದು, ಸದರಿಯವರು ನಮ್ಮ ಒಡನಾಟದಲ್ಲಿರುವುದಿಲ್ಲವೆಂದು ತಿಳಿಸಿರುತ್ತಾರೆ. ಆದರೆ ತಾವು ಇದುವರೆಗೂ ಯಾವುದಕ್ಕೂ ಸಮಂಜಸ ಉತ್ತರ ನೀಡದೇ ಅಂಚೆ ಮೂಲಕ ದಿನಾಂಕ: 03.03.2020 ರಿಂದ 31.05.2021 ರವರೆಗೆ ವೇತನ ರಹಿತ ರಜೆಯನ್ನು ಸಲ್ಲಿಸಿದ್ದು ನಂತರ ದಿನಾಂಕ: 01.06.2021 ರಿಂದ ಕರ್ತವ್ಯಕ್ಕೆ ಹಾಜರಾಗಬೇಕಿದ್ದು ಇಲ್ಲಿಯವರೆಗೂ ತಾವು ಕರ್ತವ್ಯಕ್ಕೆ ಹಾಜರಾಗದ ಕಾರಣ ಈ ಕಛೇರಿಯಿಂದ ಕಾರಣ ಕೇಳಿ ನೋಟಿಸ್ ಅನ್ನು ಹಲವಾರು ಬಾರಿ ಜಾರಿ ಮಾಡಿದ್ದು, ಅಂತಿಮ ನೋಟಸ್ ತಲುಪಿದ 15 ದಿನಗಳೊಳಗೆ ತಪ್ಪದೆ ಖುದ್ದಾಗಿ ಟಿಎಲ್ ಅಂಡ್ ಎಸ್‌ಎಸ್ ವಿಭಾಗ, ಕವಿಪ್ರನಿನಿ, ಹೊಳೆನರಸೀಪುರ ವಿಭಾಗಕ್ಕೆ ನೋಟಿಸಿಗೆ ಉತ್ತರ ಸಮೇತವಾಗಿ ಹಾಜರಾಗಲು ತಿಳಿಸಿದ್ದರೂ ಸಹ ತಾವು ಇದುವರೆಗೂ ಯಾವುದೇ ಪ್ರತಿಕ್ರಿಯೆ ನೀಡಿರುವುದಿಲ್ಲ. ತಾವು ಅಂತಿಮ ನೋಟಿಸ್ ಜಾರಿಗೊಳಿಸಿದ ನಂತರವೂ ಕರ್ತವ್ಯಕ್ಕೆ ಹಾಜರಾಗದ ಕಾರಣ ಅಂತಿಮ ಕರೆ ನೋಟಿಸನ್ನು ಪ್ರತಿಕಾ ಪ್ರಕಟಣೆ ಮೂಲಕ ಜಾರಿಗೊಳಿಸಲಾಗಿದ್ದು, ಈ ಪ್ರಕಟಣೆಯ ದಿನಾಂಕದಿಂದ **15 ದಿನಗಳೊಳಗಾಗಿ** ಕೆಳ ಸಹಿದಾರರ ಸಮ್ಮುಖದಲ್ಲಿ ಹಾಜರಾಗಿ ನಿಮ್ಮ ಅನಧಿಕೃತ ಗೈರುಹಾಜರಿಗೆ ಸೂಕ್ತ ಸಮಜಾಯಿಸಿ ನೀಡುವುದು, ತಪ್ಪಿದಲ್ಲಿ ನಿಗಮ ಕಛೇರಿ ಸುತ್ತೋಲೆ ಕ್ರಮಾಂಕ: ಕವಿಪ್ರನಿನಿ/ಬಿ81/26057/2011-12 ದಿನಾಂಕ:14.09.2011ರ ನಿಯಮಾವಳಿಗಳ ಪ್ರಕಾರ ನಿಮ್ಮನ್ನು ಸೇವೆಯಿಂದ ವಜಾಗೊಳಿಸಲಾಗುವುದು.
ಸಹಿ/- ಅಧೀಕ್ಷಕ ಇಂಜಿನೀಯರ್(ವಿ), ಪ್ರಸರಣ (ಕಾ & ನಿ) ವೃತ್ತ, ಕವಿಪ್ರನಿನಿ, ಪ್ರಸರಣ ಭವನ, 2ನೇ ಮಹಡಿ, ಸಂತೇಪೇಟೆ, ಬಿ.ಎಂ. ರಸ್ತೆ, ಹಾಸನ-573201. ದೂ.ಸಂಖ್ಯೆ: 08172-250765.

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಇಂಜಿನೀಯರ್‌ರವರ ಕಛೇರಿ, ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ, ಹೊಸಪೇಟೆ.ವಿಜಯನಗರ ಜಿಲ್ಲೆ
ಸಂಖ್ಯೆ: EE/RWS&SD/VJNR/e-tender/Tech/2024-25/329 ದಿನಾಂಕ:19-07-2024

ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ ಸಂಖ್ಯೆ-06/2024-25.

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ, ಹೊಸಪೇಟೆರವರು ತಮ್ಮ ವಿಭಾಗದಡಿಯಲ್ಲಿ ಬರುವ 5 ತಾಲ್ಲೂಕುಗಳ ಜಲ ಜೀವನ್ ಮಿಷನ್ ಯೋಜನೆಯಡಿಯ ಕುಡಿಯುವ ನೀರಿನ ಕಾಮಗಾರಿ **(In- Village Distribution Works)** ಗಳನ್ನು 3ನೇ ತಂಡದ ತಪಾಸಣಾ ಮಾಡಿ, ವರದಿಗಳನ್ನು ಸಿದ್ಧಪಡಿಸಲು ಹಾಗೂ ಸದರಿ ಯೋಜನೆಯ ಕಾಮಗಾರಿಗಳನ್ನು ಚಾರ್ಟೆಡ್ ಅಕೌಂಟೆಂಟ್‌ಗಳಿಂದ ಲೆಕ್ಕ ಪರಿಶೋಧನೆ ಮಾಡುವುದಕ್ಕಾಗಿ ಜಿಲ್ಲಾ ಮಟ್ಟದಲ್ಲಿ ಟೆಂಡರ್ ಮೂಲಕ ನುರಿತ ತಾಂತ್ರಿಕ ಸಂಸ್ಥೆಗಳನ್ನು ಆಯ್ಕೆ ಮಾಡಿ ಎಂಪ್ಯಾನೆಲ್‌ಮೆಂಟ್ ಮಾಡಿಕೊಳ್ಳಲು ಸ್ಪರ್ಧಾತ್ಮಕ ಟೆಂಡರುಗಳನ್ನು ಇ-ಪ್ರೋಕ್ಯೂರ್‌ಮೆಂಟ್ ಮೂಲಕ ಕರೆಯಲಾಗಿದೆ. ಅರ್ಜಿ ಸಲ್ಲಿಸಲು ಹಾಗೂ ಭರ್ತಿ ಮಾಡಿದ ಟೆಂಡರ್‌ಗಳನ್ನು ಸಲ್ಲಿಸಲು ನಿಗದಿತ ಅವಧಿ 19-07-2024 ರಿಂದ 02-08-2024ರ ಸಾಯಂಕಾಲ 05.00 ಗಂಟೆಯವರೆಗೆ ನಿಗದಿಪಡಿಸಲಾಗಿದೆ ಮತ್ತು ಇ-ಪ್ರಕ್ಯೂರ್‌ಮೆಂಟ್ ಟೆಂಡರ್ ತೆರೆಯುವ ದಿನಾಂಕ:03-08-2024ರಂದು ಸಂಜೆ 05.05 ಗಂಟೆಗೆ ಹೆಚ್ಚಿನ ವಿವರಗಳಿಗೆ ಕರ್ನಾಟಕ ಸರ್ಕಾರದ ವಿದ್ಯುನ್ಮಾನ ಸಂಗ್ರಹಣೆ ವೇದಿಕೆ ವೆಬ್‌ಸೈಟ್‌ನಲ್ಲಿ ಪಡೆಯಬಹುದು. **(www.kppp.karnataka.gov.in)** ಈ ಬಗ್ಗೆ ಇನ್ನು ಹೆಚ್ಚಿನ ವಿವರಗಳಿಗಾಗಿ ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ, ಹೊಸಪೇಟೆರವರ ಕಛೇರಿಯ ವೇಳೆಯಲ್ಲಿ ಪಡೆಯಬಹುದು.
ಸಹಿ/- ಕಾರ್ಯಪಾಲಕ ಇಂಜಿನೀಯರ್, ಗ್ರಾ.ನೀ.ಸ&ನೈ. ವಿಭಾಗ, ಹೊಸಪೇಟೆ.ವಿಜಯನಗರ ಜಿಲ್ಲೆ
ವಾ.ಸಾ.ಸಂ.ಇ/ವಿಜಯನಗರ/2024-25/ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ/125

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ ಕೊಪ್ಪಳ
ಜಿಲ್ಲಾ ಅಲ್ಪಸಂಖ್ಯಾತರ ಕಲ್ಯಾಣ ಅಧಿಕಾರಿಗಳ ಕಛೇರಿ, ಮೌಲಾನಾ ಆಜಾದ್ ಭವನ, ಹೊಸಪೇಟೆ ರಸ್ತೆ ಕೊಪ್ಪಳ-583231
ದೂ.ಸಂಖ್ಯೆ :08539-225070 e-mail: domwkoppal@gmail.com
website:-dom.karnataka.gov.in/koppal/public domwkoppal@karnataka.gov.in
ಸಂ:ಅಸಂಕಇ/ಕೊ/ಅ.ಟೆ/ಹೊರಸಂಪನ್ಮೂಲ/ಸಿ.ಆರ್-/2024-25/716 ದಿನಾಂಕ :22.07.2024

ಅಲ್ಪಾವಧಿ ಟೆಂಡರ್

2024-25ನೇ ಸಾಲಿಗಾಗಿ ಜಿಲ್ಲಾ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಅಧೀನದಲ್ಲಿ ಸಂಸ್ಥೆಗಳಲ್ಲಿ ಅಗತ್ಯವಿರುವ ಸಿಬ್ಬಂದಿಗಳ ಸೇವೆಯನ್ನು ಹೊರಗುತ್ತಿಗೆ ಆಧಾರದ ಮೇಲೆ ಮಾನವ ಸಂಪನ್ಮೂಲ ಸೇವೆಯನ್ನು ಇ-ಪ್ರಕ್ಯೂರ್‌ಮೆಂಟ್ ಮೂಲಕ ಅಲ್ಪಾವಧಿ ಟೆಂಡರ್ ಕರೆಯಲಾಗಿದ್ದು, ಆಸಕ್ತಿಯುಳ್ಳ ಟೆಂಡರ್‌ದಾರರು https://kppp.karnataka.gov.in ವೆಬ್‌ಸೈಟನ್ನು ಸಂಪರ್ಕಿಸಲು ಕೋರಲಾಗಿದೆ.
(1) ಟೆಂಡರ್ ಹೊರಡಿಸಿದ ಪ್ರಾಧಿಕಾರ: ಜಿಲ್ಲಾ ಅಧಿಕಾರಿಗಳು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಕೊಪ್ಪಳ (2) ಟೆಂಡರ್ ಉದ್ದೇಶ: ಹೊರಸಂಪನ್ಮೂಲ ಸಂಸ್ಥೆಯ ಮೂಲಕ ಮಾನವ ಸಂಪನ್ಮೂಲ ಸೇವೆ ಪಡೆಯಲು (3) ಅಗತ್ಯವಿರುವ ಮಾನವ ಸಂಪನ್ಮೂಲ (1) ಡಾಟಾ ಎಂಟ್ರಿ ಆಪರೇಟರ್-5 (2) ವಾಹನ ಚಾಲಕರು-01 (3) ಪ್ರ.ದ.ಸ-6 (4) ಸ್ಟಾಫ್‌ನರ್ಸ್-8 (5) ಅಡುಗೆಯವರು-73 (6) ಅಡುಗೆ ಸಹಾಯಕರು-56 (7) ರಾತ್ರಿ ಕಾವಲುಗಾರ-26 (8) ಸ್ವಚ್ಛತಾ ಸಿಬ್ಬಂದಿ-21 (9) ಗ್ರೂಪ್-ಡಿ-35 (4) ಅಂದಾಜು **ಮೊತ್ತ 4,31,55,502.00** ರೂಪಾಯಿಗಳು (5) ಇಎಂಡಿ **ಮೊತ್ತ 10,78,888.00** ರೂಪಾಯಿಗಳು (6) ಟೆಂಡರ್ ಸಲ್ಲಿಸಲು ಆರಂಭ **ದಿನಾಂಕ: 22.07.2024** (7) ಸ್ಪಷ್ಟೀಕರಣ (Queries/Clarification) **25.07.2024** (8) ಟೆಂಡರ್ ಸಲ್ಲಿಸಲು ಅಂತಿಮ **ದಿನಾಂಕ 30.07.2024** (9) ತಾಂತ್ರಿಕ ಬಿಡ್ ತೆರೆಯುವ **ದಿನಾಂಕ 31.07.2024.** (10) ಆರ್ಥಿಕ ಬಿಡ್ ತೆರೆಯುವ **ದಿನಾಂಕ: 06.08.2024** (11) ಟೆಂಡರ್ ಸ್ವೀಕರಿಸುವ ಪ್ರಾಧಿಕಾರ ಜಿಲ್ಲಾ ಅಧಿಕಾರಿಗಳು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಕೊಪ್ಪಳ
ಸಹಿ/- ಜಿಲ್ಲಾ ಅಧಿಕಾರಿಗಳು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಕೊಪ್ಪಳ
ವಾ.ಸಾ.ಇ/ಕೊಪ್ಪಳ/189/ದೇಶಪಾಂಡೆಪಬ್ಲಿಸಿಟಿ/2024-25

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯಿತಿ ಬಳ್ಳಾರಿ.
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಕಾರ್ಯಾಲಯ, ಜಿಲ್ಲಾ ಪಂಚಾಯಿತಿ ಬಳ್ಳಾರಿ. ದೂ.9480855002
eMail ID: projectdirectorzp@gmail.com

ಸಿದ್ದಮ್ಮನಹಳ್ಳಿ ಗ್ರಾಮದಲ್ಲಿ ಘನತ್ಯಾಜ್ಯ ವಿಲೇವಾರಿ ಕಟ್ಟಡ ನಿರ್ಮಾಣ ಕಾಮಗಾರಿ ಇ-ಪ್ರೊಕ್ಯೂರ್‌ಮೆಂಟ್ ಮೂಲಕ 2024-25ನೇ ಸಾಲಿನ ನರೇಗಾ ಯೋಜನೆಯಡಿ ಸಾಮಗ್ರಿಗಳ ಪೂರೈಕೆ.

02ನೇ ಕರೆ ಟೆಂಡರ್ ಆಹ್ವಾನಿಸುವ ಸೂಚನೆ ದ್ವಿ-ಲಕೋಟೆ ಪದ್ಧತಿ (ಇ-ಪ್ರೊಕ್ಯೂರ್‌ಮೆಂಟ್ ಮೂಲಕ)

ಸಿದ್ದಮ್ಮನಹಳ್ಳಿ ಗ್ರಾಮದಲ್ಲಿ ಘನತ್ಯಾಜ್ಯ ವಿಲೇವಾರಿ ಕಟ್ಟಡ ನಿರ್ಮಾಣ ಕಾಮಗಾರಿಗೆ ಸಾಮಗ್ರಿಗಳನ್ನು ಪೂರೈಸಲು ಇ-ಟೆಂಡರ್ ದಾಖಲೆಯಲ್ಲಿ ನಿಗದಿಪಡಿಸಿದಂತೆ ಅರ್ಹ ಪೂರೈಕೆದಾರರಿಂದ ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪ್ಲಾಟ್‌ಫಾರ್ಮ್‌ನಲ್ಲಿ ದ್ವಿ-ಲಕೋಟೆ ಪದ್ಧತಿಯಡಿ ಟೆಂಡರ್ ಆಹ್ವಾನಿಸಲಾಗಿದೆ.
ಟೆಂಡರ್ ಆಹ್ವಾನಪ್ರಾಧಿಕಾರ (ಟಿಐಎ): **ಪಂಚಾಯಿತಿ ಅಭಿವೃದ್ಧಿಅಧಿಕಾರಿ ಗ್ರಾಮ ಪಂಚಾಯಿತಿ ಸಿದ್ದಮ್ಮನಹಳ್ಳಿ,** ಟೆಂಡರ್ ಅನುಮೋದನೆ ಪ್ರಾಧಿಕಾರ (ಟಿಎ): **ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲೂಕು ಪಂಚಾಯಿತಿ, ಕುರುಗೋಡು.** KPPPಪೋರ್ಟಲ್ ವಿಳಾಸ: **https://kppp.karnataka.gov.in.** ಟೆಂಡರ್‌ಮೊತ್ತ: **Rs. 20,94,782/-.** ಇ.ಎಂ.ಡಿಮೊತ್ತ (2.5%): **Rs.52,370/-.** ಟೆಂಡರ್ ಡಾಕ್ಯುಮೆಂಟ್ ಡೌನ್‌ಲೋಡ್ ಮಾಡಲು ಆರಂಭದ ದಿನಾಂಕ: **19.07.2024.** ಬಿಡ್‌ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: **02.08.2024 @ 5.00 PM.** ಬಿಡ್ ತೆರೆಯುವ ಸಮಯ ಮತ್ತು ದಿನಾಂಕ ಎಲೆಕ್ಟ್ರಾನಿಕ್ ಡಾಕ್ಯುಮೆಂಟ್, ಮೊದಲ (ತಾಂತ್ರಿಕಬಿಡ್): **03.08.2024 @ 5.10 AM.** ಬಿಡ್ ತೆರೆಯುವ ಸಮಯ ಮತ್ತು ದಿನಾಂಕ ಎಲೆಕ್ಟ್ರಾನಿಕ್ ಡಾಕ್ಯುಮೆಂಟ್, ಎರಡನೇ (ಹಣಕಾಸುಬಿಡ್): **05.08.2024 @ 11.00 AM.** ಟೆಂಡರ್ ತೆರೆಯುವ ಸ್ಥಳ: **ಗ್ರಾಮ ಪಂಚಾಯಿತಿ ಸಿದ್ದಮ್ಮನಹಳ್ಳಿ,** ಸಂವಹನಕ್ಕಾಗಿ ವಿಳಾಸ: ದೂರವಾಣಿ ಸಂಖ್ಯೆ ಮತ್ತು ಇಮೇಲ್ ವಿಳಾಸ: ಗ್ರಾಮ ಪಂಚಾಯಿತಿ ಸಿದ್ದಮ್ಮನಹಳ್ಳಿ. ದೂ-9060172345. **Siddammanahalli009@gmail.com**
ಸಹಿ/-ಟೆಂಡರ್ ಆಹ್ವಾನಿಸುವ ಪ್ರಾಧಿಕಾರ
ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಗ್ರಾಮ ಪಂಚಾಯಿತಿ ಸಿದ್ದಮ್ಮನಹಳ್ಳಿ.
ಡಿಐಪಿಆರ್/ಬಳ್ಳಾರಿ/256/ಕೆಎಸ್‌ಎಂಸಿಎ/2024-25

ಮಂಗಳೂರು ಮಹಾನಗರಪಾಲಿಕೆ
DMA/2024-25/WORK INDENT NO.21808, 21991, 22065, 22068, 22073, 22081, 22086, 22091, 22096, 22100, 22107, 22112, 22174, 22176, 22177, 22180, 22182, 22246, 22250, 22254 ದಿನಾಂಕ: 20-07-2024

ಅಲ್ಪಾವಧಿ ಟೆಂಡರ್ ಪ್ರಕಟಣೆ E-PROCUREMENT OF KARNATAKA

ಮಂಗಳೂರು ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ **2023-24ನೇ ಸಾಲಿನ ಮಹಾನಗರಪಾಲಿಕೆ ಅನುದಾನ** ಮತ್ತು **2024-25ನೇ ಸಾಲಿನ 15ನೇ ಹಣಕಾಸು ಯೋಜನೆಯಲ್ಲಿ** DMA/2024-25/WORK INDENT NO.21808, 21991, 22065, 22068, 22073, 22081, 22086, 22091, 22096, 22100, 22107, 22112, 22174, 22176, 22177, 22180, 22182, 22246, 22250, 22254 ಗಳಿಗೆ ಅಲ್ಪಾವಧಿ ಟೆಂಡರ್ ಆಹ್ವಾನಿಸಲಾಗಿದೆ. 20 ಕಾಮಗಾರಿಗಳ ಒಟ್ಟು ಮೊತ್ತ **ರೂಪಾಯಿ 194.42 ಲಕ್ಷ** ಗಳಾಗಿರುತ್ತದೆ. ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ: 31-07-2024, ಅಪರಾಹ್ನ 4.00 ಗಂಟೆ.** ಹೆಚ್ಚಿನ ವಿವರವನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **kppp.karnataka.gov.in** ಮುಖಾಂತರ ಪಡೆಯಬಹುದು.
ಸಹಿ/- ಕಾರ್ಯಪಾಲಕ ಅಭಿಯಂತರರು ಮಹಾನಗರಪಾಲಿಕೆ ಮಂಗಳೂರು.
DIPR/MNG/KSMCA/290/24-25 dt: 22.07.2024

ಪಂಚಾಯತ್ ರಾಜ್ ಇಂಜಿನೀಯರಿಂಗ್ ಇಲಾಖೆ
ಕಾರ್ಯನಿರ್ವಾಹಕ ಅಭಿಯಂತರರವರ ಕಾರ್ಯಾಲಯ, ಪಂಚಾಯತ್ ರಾಜ್ ಇಂಜೀನೀಯರಿಂಗ್ ವಿಭಾಗ,ವಿಜಯಪುರ
ದೂರವಾಣಿ ಸಂ:08352-277816, ಫ್ಯಾಕ್ಸ್:08352-277817
ಇ-ಮೇಲ್:zpebjp9@yahoo.co.in
ಸಂಖ್ಯೆ:ಕಾಇಂ/ಪಂ.ರಾ.ಇಂ.ವಿ/ವಿಜ/ಇಪ್ರಾ/ಟೆಂಡರ್/2024-25/1051 ದಿನಾಂಕ:20.07.2024

ಇ-ಪ್ರೊಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ

ಕಾರ್ಯನಿರ್ವಾಹಕ ಇಂಜೀನೀಯರರು, ಪಂ.ರಾ.ಇಂ. ವಿಭಾಗ, ವಿಜಯಪುರ ಇವರು 2024-25 ನೇ ಸಾಲಿನ ಈ ಕಚೇರಿಯ ಟೆಂಡರ್ ಪ್ರಕಟಣೆ ಸಂಖ್ಯೆ 1051 ದಿನಾಂಕ: 20.07.2024 ರಂತೆ ರೂ. 20.00 ಲಕ್ಷಗಳಿಗೆ ಸರ್ವಿಸಸ್‌ನಲ್ಲಿ ಇ-ಟೆಂಡರ್‌ನ್ನು ಆಹ್ವಾನಿಸಿದ್ದು, ಟೆಂಡರಿನ ಹೆಚ್ಚಿನ ಮಾಹಿತಿಗಾಗಿ ವೆಬ್‌ಸೈಟ್ www.kppp.karnataka. gov.in ನಲ್ಲಿ ಅಥವಾ ಕಚೇರಿ ಸಮಯದಲ್ಲಿ ಸದರಿ ವಿಭಾಗ ಕಾರ್ಯಾಲಯಕ್ಕೆ ಭೇಟಿ ನೀಡಿ ಮಾಹಿತಿ ಸಂಗ್ರಹಿಸಬಹುದು.
ಸಹಿ/- ಕಾರ್ಯನಿರ್ವಾಹಕ ಇಂಜೀನೀಯರರು, ಪಂ.ರಾ.ಇಂ. ವಿಭಾಗ, ವಿಜಯಪುರ.
ವಾಸಾಸಂಇ/ವಿಜಯಪುರ/123/ಕೆಎಸ್‌ಎಂಸಿಎ/2024-25

ರಾಷ್ಟ್ರೀಯ ಆರೋಗ್ಯ ಅಭಿಯಾನ
ಜಿಲ್ಲಾ ಪಂಚಾಯತ್, ಬೆಂಗಳೂರು ನಗರ ಜಿಲ್ಲೆ
ಜಿಲ್ಲಾ ಆರೋಗ್ಯ ಮತ್ತು ಕು.ಕ. ಕಾರ್ಯಾಲಯ, ಬೆಂಗಳೂರು ನಗರ ಜಿಲ್ಲೆ
ಹಳೇ ಟಿ.ಬಿ. ಆಸ್ಪತ್ರೆ ಆವರಣ, ಹಳೇ ಮದ್ರಾಸ್ ರಸ್ತೆ, ಇಂದಿರಾನಗರ, ಬೆಂಗಳೂರು-560 038.
ಸಂ:ಡಿಹೆಚ್‌ಎಸ್/ಬೆಂ.ನ.ಜಿ/15ನೇ ಹಣಕಾಸು/ಎನ್‌ಕ್ಯೂಎಎಸ್/01/2024-25 ದಿನಾಂಕ:22.07.2024

ಇ-ಟೆಂಡರ್ ಪ್ರಕಟಣೆ

ಬೆಂಗಳೂರು ನಗರ ಜಿಲ್ಲೆಗೆ 15ನೇ ಹಣಕಾಸು ಆಯೋಗದಡಿ ಎನ್.ಕ್ಯೂ.ಎ.ಎಸ್. ಕಾರ್ಯಕ್ರಮದಡಿಯಲ್ಲಿ ಜಿಲ್ಲೆಯಲ್ಲಿನ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಅವಶ್ಯಕತೆ ಇರುವ ವೈದ್ಯಕೀಯ ಉಪಕರಣಗಳನ್ನು ಖರೀದಿಸಲು ಕೆಟಿಪಿಪಿ ನಿಯಮಾನುಸಾರ ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ಟೆಂಡರನ್ನು ಕರೆದಿದ್ದು, https://kppp.karnataka.gov.in ಇ-ಪೋರ್ಟಲ್ ಮುಖಾಂತರ ಆಸಕ್ತಿಯುಳ್ಳ ಸಂಸ್ಥೆಯವರು ಟೆಂಡರ್‌ನಲ್ಲಿ ಭಾಗವಹಿಸಬಹುದು. ಟೆಂಡರನ್ನು ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ದಿನಾಂಕ: **22.07.2024ರಿಂದ 03.08.2024 ರಂದು ಸಂಜೆ 5.30 ಗಂಟೆಯವರೆಗೂ** ಅರ್ಜಿ ಸಲ್ಲಿಸಬಹುದಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ, ಹಳೇ ಟಿ.ಬಿ. ಆಸ್ಪತ್ರೆ ಆವರಣ, ಹಳೇ ಮದ್ರಾಸ್ ರಸ್ತೆ, ಇಂದಿರಾನಗರ, ಬೆಂಗಳೂರು-560 038 ಇಲ್ಲಿ ಕಛೇರಿ ವೇಳೆಯಲ್ಲಿ ಸಂಪರ್ಕಿಸುವುದು.
ಸಹಿ/- ಜಿಲ್ಲಾ ಆರೋಗ್ಯ & ಕುಟುಂಬ ಕಲ್ಯಾಣಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ
ವಾಸಾಸಂಇ/ವಾಪ್ರ/ಜಿಎ/1037/2024-25

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಛೇರಿ, ಚಾಮರಾಜಪೇಟೆ ವಿಭಾಗ, ಬಿಬಿಎಂಪಿ ಅಂಗನವಾಡಿ ಕೇಂದ್ರ, 2ನೇ ಮಹಡಿ, ಟಿ.ಆರ್. ಮಿಲ್ ರಸ್ತೆ, ಬೆಂಗಳೂರು-560018
ನಂ.: ಕಾಪಾಅ/ಚಾಪೇ/ಟೆಂಡರ್/ಇ-ಪ್ರೊಕ್/03/2024-25 ದಿನಾಂಕ: 20.07.2024

ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)

(ಅಲ್ಪಾವಧಿ ಟೆಂಡರ್ ಪ್ರಕಟಣೆ: ದ್ವಿ ಲಕೋಟೆ ಪದ್ಧತಿ)
(ಜಿಒಕೆ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, ಚಾಮರಾಜಪೇಟೆ ವಿಭಾಗ, ಬಿಬಿಎಂಪಿ ಇವರು ಬಿಬಿಎಂಪಿ / ಕೆಪಿಡಬ್ಲ್ಯೂಡಿ / ಸಿಪಿಡಬ್ಲ್ಯೂಡಿ / ರೈಲ್ವೇಸ್ / ಎಂಇಎಸ್ / ರಾಷ್ಟ್ರೀಯ ಹೆದ್ದಾರಿ ಅಥವಾ ಯಾವುದೇ ರಾಜ್ಯ ಸರ್ಕಾರಿ ಸಂಸ್ಥೆಗಳಲ್ಲಿ ನೋಂದಾಯಿತ ದರ್ಜೆ-1 ಗುತ್ತಿಗೆದಾರರಿಂದ ಈ ಕೆಳಗಿನ ಕಾಮಗಾರಿಗಳಿಗೆ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ. **(ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಕೆಡಬ್ಲ್ಯೂ-4)**

ಕ್ರ.ಸಂ.	ಕಾಮಗಾರಿಯ ಹೆಸರು
1	ಪ್ಯಾಕೇಜ್-1: ಚಾಮರಾಜಪೇಟೆ ವಿಧಾನಸಭಾ ಕ್ಷೇತ್ರದಲ್ಲಿ ವಿವಿಧ ಬಿಬಿಎಂಪಿ ಕಛೇರಿಗಳು, ಆಸ್ಪತ್ರೆಗಳು, ಡಯಾಲಿಸ್ ಕೇಂದ್ರ, ಸಮುದಾಯ ಭವನ ಕಟ್ಟಡ ಮತ್ತು ಜಿಮ್ ಕಟ್ಟಡಗಳ ನಿರ್ಮಾಣ. **(ಕರೆ-3) ಪ್ಯಾಕೇಜ್ ಮೊತ್ತ ಲಕ್ಷಗಳಲ್ಲಿ:** 4040.00, **ಇಎಂಡಿ (ರೂ. ಲಕ್ಷಗಳಲ್ಲಿ):** 40.40 (ರೂ. 1.00 ಲಕ್ಷ ಆನ್‌ಲೈನ್ ಮೂಲಕ ಉಳಿದ ಮೊತ್ತ ಬ್ಯಾಂಕ್ ಗ್ಯಾರಂಟಿ/ಎಫ್‌ಡಿಆರ್).

ವೇಳಾಪಟ್ಟಿ: (1) ಟೆಂಡರ್ ದಸ್ತಾವೇಜುಗಳನ್ನು **ದಿನಾಂಕ 23.07.2024**ರಿಂದ ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ಪೂರ್ವಭಾವಿ ಸಭೆಯು ಮುಖ್ಯ ಕಾರ್ಯಪಾಲಕ ಅಭಿಯಂತರರು (ಪಶ್ಚಿಮ) ರವರ ಕಛೇರಿ, ಭಾಷ್ಯಂ ಪಾರ್ಕ್, ಶೇಷಾದ್ರಿಪುರಂ, ಬೆಂಗಳೂರು ಇಲ್ಲಿ ದಿನಾಂಕ: **05.08.2024**ರ **ಬೆಳಗ್ಗೆ 11:00 ಗಂಟೆಗೆ** ನಡೆಯಲಿದೆ. (3) ಟೆಂಡರ್ ದಸ್ತಾವೇಜುಗಳನ್ನು ಆನ್‌ಲೈನ್ ಮೂಲಕ **12.08.2024**ರ **ಸಂಜೆ 4:00 ಗಂಟೆಗೆ** ಮುಂಚಿತವಾಗಿ ಸಲ್ಲಿಸತಕ್ಕದು ಮತ್ತು ಟೆಂಡರನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮಾರ್ಗದರ್ಶನದಂತೆ ತೆರೆಯಲಾಗುವುದು. (4) ತಾಂತ್ರಿಕ ಬಿಡ್‌ಗಳನ್ನು ಕಾರ್ಯಪಾಲಕ ಅಭಿಯಂತರರ ಕಛೇರಿ, ಚಾಮರಾಜಪೇಟೆ ವಿಭಾಗದಲ್ಲಿ ವೆಬ್‌ಸೈಟ್ **https://kppp.karnataka.gov.in** ಮೂಲಕ ದಿನಾಂಕ **14.08.2024**ರ **ಬೆಳಿಗ್ಗೆ 11:30 ಗಂಟೆಗೆ** ತೆರೆಯಲಾಗುವುದು. ಹೆಚ್ಚಿನ ಮಾಹಿತಿಯನ್ನು ಮೇಲಿನ ಕಛೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ವೆಬ್‌ಸೈಟ್ **https://kppp.karnataka.gov.in** ನಿಂದ ಪಡೆದುಕೊಳ್ಳಬಹುದು.
ಸಹಿ/- ಕಾರ್ಯಪಾಲಕ ಅಭಿಯಂತರರು, ಚಾಮರಾಜಪೇಟೆ ವಿಭಾಗ, ಬಿಬಿಎಂಪಿ

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇಂಜಿನಿಯರಿಂಗ್ ಘಟಕ
ಮುಖ್ಯ ಇಂಜಿನಿಯರ್‌ರವರ ಕಛೇರಿ, ಆರೋಗ್ಯ ಸೌಧ, 3ನೇ ಮಹಡಿ, ಕುಷ್ಠರೋಗ ಆಸ್ಪತ್ರೆ ಆವರಣ, 1ನೇ ಅಡ್ಡರಸ್ತೆ, ಮಾಗಡಿ ರಸ್ತೆ, ಬೆಂಗಳೂರು-560 023.
ದೂ: 080-29557023, ಇ-ಮೇಲ್: **cekhsdrp@gmail.com**
ಸಂಖ್ಯೆ:ಆಕುಕ/ಇಂಘ/ಮುಇಂ/ತಾಸ-3/ಸಇಂ-8/ಟೆಂಡರ್/2024-25/962 ದಿ:22.07.2024

ಟೆಂಡರ್ ಪ್ರಕಟಣೆ

ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ 2ನೇ ದರ್ಜೆ ಮತ್ತು ಮೇಲ್ಪಟ್ಟ ನೋಂದಾಯಿತ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಗೆ ದ್ವಿ-ಟೆಂಡರ್ ದಸ್ತಾವೇಜು ಪದ್ಧತಿಯಲ್ಲಿ ವಿದ್ಯುನ್ಮಾನ ಸಂಗ್ರಹಣೆ ವೇದಿಕೆ (KPPP) ಮೂಲಕ ಟೆಂಡರ್ ಅನ್ನು ಆಹ್ವಾನಿಸಲಾಗಿದೆ. ಕಾಮಗಾರಿಯ ಹೆಸರು:**Providing Fire Exit Doors to GF, FF, SF, TF & Fourth Floor and Renovation of existing sanitary ducts and Supply & Installation of VRF System at 500 bedded GIMS Hospital at Kalaburagi.** ಅಂದಾಜು ಮೊತ್ತ: **ರೂ.400.00 ಲಕ್ಷಗಳು.** (3) ಇಎಂಡಿ ಮೊತ್ತ: **ರೂ. 6.00 ಲಕ್ಷಗಳು. ಕಾಲಾವಧಿ** (ಮಳೆಗಾಲ ಸೇರಿದಂತೆ): **9 ತಿಂಗಳು. ಟೆಂಡರ್ ಪ್ರಕ್ರಿಯೆಗಳ ದಿನಾಂಕಗಳು:** (1) ಟೆಂಡರ್‌ಗಳನ್ನು ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಮೂಲಕ ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ಸಮಯ: **22.08.2024 ರಂದು 16.00 ಗಂಟೆಯವರೆಗೆ** (2) ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ: **23.08.2024 ರಂದು 16.00 ಗಂಟೆಗೆ. ಟೆಂಡರ್** ವಿವರಗಳನ್ನು ವಿದ್ಯುನ್ಮಾನ **ಸಂಗ್ರಹಣೆ ವೇದಿಕೆ ಮೂಲಕ** (Through Karnataka Public Procurement Portal) **www.kppp.karnataka.gov.in** ದಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಟೆಂಡರ್ ಪ್ರಕ್ರಿಯೆ ಶುಲ್ಕವನ್ನು **www.kppp.karnataka.gov.in** ನಲ್ಲಿ ವಿದ್ಯುನ್ಮಾನ **(Electronic)** ವಿಧಾನದಲ್ಲಿ ಪಾವತಿಸಬಹುದಾಗಿರುತ್ತದೆ. ಆಸಕ್ತಿಯುಳ್ಳ ಗುತ್ತಿಗೆದಾರರು ಸದರಿ ಟೆಂಡರ್‌ನಲ್ಲಿ ಭಾಗವಹಿಸಲು ವಿದ್ಯುನ್ಮಾನ ಸಂಗ್ರಹಣೆ ವೇದಿಕೆಯಲ್ಲಿ (Through Karnataka Public Procurement Portal) ನೋಂದಾಯಿಸುವ ಅಗತ್ಯ ಇದೆ.
ಟಿಪ್ಪಣಿ: 1. ಈ ಕೆಳಗೆ ಸಹಿ ಮಾಡಿರುವವರು ಯಾವುದೇ ಕಾರಣಗಳನ್ನು ನೀಡದೆ ಟೆಂಡರ್ ಪ್ರಕ್ರಿಯೆಯನ್ನು ಮುಂದೂಡುವ/ಸಂಪೂರ್ಣವಾಗಿ ಟೆಂಡರ್ ರದ್ದುಗೊಳಿಸುವ/ಟೆಂಡರ್ ನಿರಾಕರಿಸುವ ಹಕ್ಕನ್ನು ಹೊಂದಿರುತ್ತಾರೆ. 2. ಇನ್ನು ಮುಂದೆ ಟೆಂಡರ್ ಪ್ರಕ್ರಿಯೆಯಲ್ಲಿ ಯಾವುದೇ ಬದಲಾವಣೆಗಳು ಇದ್ದಲ್ಲಿ ದಿನ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ, ಬದಲಾಗಿ ವಿದ್ಯುನ್ಮಾನ ಸಂಗ್ರಹಣೆ ವೇದಿಕೆಯಲ್ಲಿ ಮಾತ್ರ ಬದಲಾವಣೆಗಳನ್ನು ಪ್ರಕಟಿಸಲಾಗುವುದು.
ಸಹಿ/- ಮುಖ್ಯ ಇಂಜಿನಿಯರ್, ಆ&ಕುಕಇ, ಇಂಜಿನಿಯರಿಂಗ್ ಘಟಕ, ಬೆಂಗಳೂರು

ಕರ್ನಾಟಕ ರಾಜ್ಯ ಪೋಲಿಸ್ ವಸತಿ ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
#59, ರಿಚ್‌ಮಂಡ್ ರಸ್ತೆ, ಜನರಲ್ ಕೆ.ಎಸ್.ತಿಮ್ಮಯ್ಯ ರಸ್ತೆ, ಬೆಂಗಳೂರು - 560025.
ದೂರವಾಣಿ ಸಂಖ್ಯೆ: 080-25584102/25594893 ವೆಬ್‌ಸೈಟ್: www.ksphc.org
ಇ-ಮೇಲ್: eecontractksphc@gmail.com
ಸಂಖ್ಯೆ: ಇಇ/ಕೆಎಸ್‌ಪಿಹೆಚ್&ಐಡಿಸಿಎಲ್/ಸಿಎನ್‌ಟಿ/ಟಿಎನ್‌ಡಿ/04/2024-25/154
ದಿನಾಂಕ: 22.07.2024

ಟೆಂಡರ್ ಪ್ರಕಟಣೆ

ಕೆಎಸ್‌ಪಿಹೆಚ್ & ಐಡಿಸಿಎಲ್ ಕೆಟಿಪಿಪಿ 2000 ಕಾಯ್ದೆಯ ಪ್ರಕಾರ ಮತ್ತು ಸ್ಟ್ಯಾಂಡರ್ಡ್ ಟೆಂಡರ್ ದಸ್ತಾವೇಜು ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ **https://kppp.karnataka.gov.in** ಮೂಲಕ ಈ ಕೆಳಕಂಡ ಕಾಮಗಾರಿಗಾಗಿ ಆನ್‌ಲೈನ್ ಟೆಂಡರ್ ಅನ್ನು ಆಹ್ವಾನಿಸಿದೆ.
1. **ಶಿವಮೊಗ್ಗದಲ್ಲಿ ಅತ್ಯುನ್ನತ ಭದ್ರತಾ ಕಾರಾಗೃಹ ಮತ್ತು ವಸತಿ ಗೃಹಗಳ ನಿರ್ಮಾಣ (2ನೇ ಕರೆ).** (ಕೆಡಬ್ಲ್ಯೂ-4) (ದ್ವಿ ಟೆಂಡರ್ ದಸ್ತಾವೇಜು ಪದ್ಧತಿ) (ಟೆಂಡರ್‌ಗಿಟ್ಟ ಮೊತ್ತ: ರೂ.7316.70 ಲಕ್ಷಗಳು. ಜಿಎಸ್‌ಟಿ ಒಳಗೊಂಡಂತೆ).
ಇಚ್ಛೆಯುಳ್ಳ ಮತ್ತು ಅರ್ಹತೆವುಳ್ಳ ಗುತ್ತಿಗೆದಾರರು ಇ-ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸಬಹುದು. ಟೆಂಡರ್ ಶುಲ್ಕ, ಇಎಂಡಿ, ಟೆಂಡರ್ ದಾಖಲೆಗಳು ಮತ್ತು ಇತ್ಯಾದಿ ವಿವರಗಳು ದಿನಾಂಕ: **24.07.2024** ರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ (ಕೆ.ಪಿ.ಪಿ.ಪಿ) ನಲ್ಲಿ ಲಭ್ಯವಿರುತ್ತದೆ.
"ಕೆಎಸ್‌ಪಿಹೆಚ್ & ಐಡಿಸಿಎಲ್ ಯಾವುದೇ ಅಥವಾ ಎಲ್ಲಾ ಬಿಡ್‌ಗಳನ್ನು ಯಾವುದೇ ಕಾರಣ ನೀಡದೆ ಅಂಗೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಿಕೊಂಡಿರುತ್ತದೆ."
ಸೂಚನೆ: ಯಾವುದೇ ಬದಲಾವಣೆ/ತಿದ್ದುಪಡಿಗಳಿದ್ದಲ್ಲಿ ಕೆ.ಪಿ.ಪಿ ಪೋರ್ಟಲ್‌ನಲ್ಲಿ ಮಾತ್ರ ಅಪ್‌ಡೇಟ್ ಮಾಡಲಾಗುವುದು.
ಸಹಿ/- ಕಾರ್ಯಪಾಲಕ ಅಭಿಯಂತರರು-ಗುತ್ತಿಗೆ
ವಾಸಾಸಂಇ/ವಾಪ್ರ/1047/ಸ್ಕ್ಯಾನ್/2024-25

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ
ನಂ. 16 ಸಿ-1, ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ, ಬೆಂಗಳೂರು-560052. ಫೋನ್: 080-22268677/78/79 ಫ್ಯಾಕ್ಸ್: 080-22268667
ಇ-ಮೇಲ್: kerc-ka@nic.in ವೆಬ್‌ಸೈಟ್: https://kerc.karnataka.gov.in
ಸಂಖ್ಯೆ: ಕವಿನಿಆ/N/49/2024/463 ದಿನಾಂಕ: 22-07-2024

ಸಾರ್ವಜನಿಕ ವಿಚಾರಣಾ ಸೂಚನಾ ಪತ್ರ

ವಿಷಯ : ದಿನಾಂಕ: 28-02-2024ರ ಜಕಾತಿ ಆದೇಶ-2024ಕ್ಕೆ ಸಂಬಂಧಿಸಿದಂತೆ RP No. 03/2024ರಲ್ಲಿ ಕೋರಿರುವ ಪರಿಹಾರದ ಮಟ್ಟಿಗೆ Cross Subsidy Surcharge ನ್ನು ನಿರ್ಧರಿಸುವ ಬಗ್ಗೆ ಸಾರ್ವಜನಿಕರ ವಿಚಾರಣೆ.
ಉಲ್ಲೇಖ: **RP No. 03/2024 - BESCOM & Others Vs NIL.**
ದಿನಾಂಕ: 28-02-2024ರ ಜಕಾತಿ ಆದೇಶ-2024ಕ್ಕ ಸಂಬಂಧಿಸಿದಂತೆ ಉಲ್ಲೇಖದಲ್ಲಿ ತಿಳಿಸಿರುವ ಅರ್ಜಿಯಲ್ಲಿ BESCOM, MESCOM, HESCOM, CESC and GESCOM ರವರು ಮರು ಪರಿಶೀಲನೆಗಾಗಿ ಅರ್ಜಿ ಸಲ್ಲಿಸಿರುತ್ತಾರೆ. ಸದರಿ ಪ್ರಕರಣದ ವಿಚಾರಣಾ ಸಂದರ್ಭದಲ್ಲಿ, ಆಯೋಗವು ಎಸ್ಕಾಂಗಳು ಕೋರಿರುವ ಪರಿಹಾರವನ್ನು ಸಾರ್ವಜನಿಕ ವಿಚಾರಣೆಯ ನಂತರ ತೀರ್ಮಾನಿಸುವ ಅವಶ್ಯಕತೆಯನ್ನು ತಿಳಿದು, ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಸಾರ್ವಜನಿಕ ವಿಚಾರಣೆಯನ್ನು ನಡಸುವ ಸಲುವಾಗಿ ಆದೇಶ ಮಾಡಲಾಗಿದೆ. ESCOMs ಸಲ್ಲಿಸಿರುವ RP No. 03/2024ರ ವಾದಪತ್ರ ಮತ್ತು ಅಡಕಗಳನ್ನು ಆಯೋಗದ ವೆಬ್‌ಸೈಟ್ / ಜಾಲತಾಣ **https://kerc.karnataka.gov.in** ನಲ್ಲಿ ಲಭ್ಯಪಡಿಸಲಾಗಿದೆ.
ಆಯೋಗವು ವಿಷಯ ಕಂಡಿಕೆಯಲ್ಲಿ ತಿಳಿಸಿರುವ ವಿಷಯಕ್ಕೆ ಸಂಬಂಧಿಸಿದಂತೆ ಸಾರ್ವಜನಿಕ ವಿಚಾರಣೆಯನ್ನು ದಿನಾಂಕ: **21-08-2024 ರಂದು ಆಯೋಗದ ಕೋರ್ಟ್ ಹಾಲ್‌ನಲ್ಲಿ ಸಂಜೆ 4.00 ಗಂಟೆಗೆ** ನಿಗದಿಪಡಿಸಿದೆ. ಭಾಗೀದಾರರು / ಆಸಕ್ತರು / ಭಾದಿತ ವ್ಯಕ್ತಿಗಳು ತಮ್ಮ ಆಕ್ಷೇಪಣೆ, ಅಭಿಪ್ರಾಯ ಅಥವಾ ಸಲಹೆಗಳನ್ನು ಲಿಖಿತವಾಗಿ ದಿನಾಂಕ: **14-08-2024ರ ಸಂಜೆ 5.00 ಗಂಟೆಯೊಳಗೆ ಅಥವಾ ಅದಕ್ಕೂ ಮೊದಲು ಕಾರ್ಯದರ್ಶಿ, KERC,** ನಂ. 16 **C-1,** ಮಿಲ್ಲರ್ ಟ್ಯಾಂಕ್ ಬೆಡ್ **ಏರಿಯಾ, ವಸಂತನಗರ, ಬೆಂಗಳೂರು- 560052** ಇವರಿಗೆ ಸಲ್ಲಿಸಬಹುದಾಗಿದೆ. ಭಾಗೀದಾರರು / ಆಸಕ್ತರು ಸಾರ್ವಜನಿಕ ವಿಚಾರಣೆಯಲ್ಲಿ ಭಾಗವಹಿಸಿ, ಆಯೋಗದ ಮುಂದೆ ವೈಯಕ್ತಿಕವಾಗಿ ತಮ್ಮ ಅಭಿಪ್ರಾಯಗಳನ್ನು ಸಲ್ಲಿಸಬಹುದಾಗಿದೆ ಎಂದು ತಿಳಿಸಲಾಗಿದೆ.
ಸಹಿ/- ಕಾರ್ಯದರ್ಶಿ
ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಪರವಾಗಿ
ವಾಸಾಸಂಇ/ವಾ.ಪ್ರ/1035/2024-25

ಕ್ಷೇಮ ಕುಶಲ



ನಿಮ್ಮ ಸುಸ್ತಿಗೆ ನೀವೇ ಕಾರಣ

ಡಾ. ವೀಣಾ ಎನ್‌. ಸುಳ್ಯ

ಸಹಜವಾಗಿ ದಿನನಿತ್ಯದ ಕೆಲಸಕಾರ್ಯಗಳಲ್ಲಿ ತೊಡಗಿರುವ ಯಾವುದೇ ವ್ಯಕ್ತಿಯಾದರೂ ತನ್ನ ನಿತ್ಯದ ಚಟುವಟಿಕೆಗಳನ್ನು ಮಾಡಲು ಸಾಧ್ಯವಾಗದೇ ಹೋದಾಗ ಅಥವಾ ಆ ಕೆಲಸವನ್ನು ಸಮರ್ಪಕವಾಗಿ ಮಾಡಲು ಸಾಧ್ಯವಾಗುತ್ತಿಲ್ಲವೆಂದು ಅನ್ನಿಸಿದಾಗ ಅಥವಾ ಸ್ವಲ್ಪವೂ ಆ ಕೆಲಸದಲ್ಲಿ ತೊಡಗಿಸಿಕೊಳ್ಳಲು ದೇಹ ಸಹಕರಿಸುತ್ತಿಲ್ಲ ಎಂದು ಭಾಸವಾದಾಗ 'ತನಗೆ ಸುಸ್ತು ಆಗಿದೆ' ಎಂದು ಹೇಳುವುದನ್ನು ಕಾಣುತ್ತೇವೆ.

ಸುಸ್ತಿನ ಹಂತಗಳು

ಪ್ರಥಮ ಹಂತ: ದಿನನಿತ್ಯದ ಚಟುವಟಿಕೆಯ ಜೊತೆಗೇ ಹೆಚ್ಚಿನ ಕೆಲಸ ಕಾರ್ಯಗಳಲ್ಲಿ ತೊಡಗಿದಾಗ ಸುಸ್ತು ಕಾಣಿಸಿಕೊಳ್ಳುವುದು.
ದ್ವಿತೀಯ ಹಂತ: ದಿನನಿತ್ಯದ ಚಟುವಟಿಕೆಗಳನ್ನು ಮಾಡಿದಾಗ ಸುಸ್ತು ಕಾಣಿಸಿಕೊಳ್ಳುವುದು.
ತೃತೀಯ ಹಂತ: ದಿನನಿತ್ಯದ ಚಟುವಟಿಕೆಗಳನ್ನು ಕಡಿಮೆ ಮಾಡಿಕೊಂಡರೂ ಸುಸ್ತಾಗುವುದು.
ನಾಲ್ಕನೇ ಹಂತ: ಸುಮ್ಮನೆ ಕುಳಿತಿದ್ದರೂ ಸುಸ್ತಾಗುವುದು.

ಸುಸ್ತು ಎಷ್ಟು ಸಮಯದಿಂದ ಇದೆ ಎನ್ನುವ ಆಧಾರದಮೇಲೆ ಸುಸ್ತಿನ ಕಾರಣಗಳನ್ನೂ, ಅದಕ್ಕೆ ಕೊಡಬೇಕಾದ ಕಾಳಜಿಯನ್ನೂ ಗುರುತಿಸಬಹುದು. ತಾತ್ಕಾಲಿಕ (ಸುಸ್ತು ಒಂದು ವಾರದ ಅವಧಿಯಾಗಿದ್ದಾಗ), ದೀರ್ಘವಾದ (ಒಂದು ತಿಂಗಳಿಂದ ಕಾಡುತ್ತಿದ್ದಾಗ), ದೀರ್ಘಕಾಲದ (ಆರು ತಿಂಗಳಿಗಿಂತಲೂ ಹೆಚ್ಚು ಸಮಯದಿಂದ ಇದ್ದಾಗ) – ಹೀಗೆ ಸುಸ್ತಿನ ತೀವ್ರತೆಯ ಆಧಾರದಿಂದ ವರ್ಗೀಕರಿಸಬಹುದು.

ಸುಸ್ತು ಯಾವುದೇ ವಯಸ್ಸಿನಲ್ಲಿ ಕಾಣಿಸಿಕೊಳ್ಳಬಹುದಾದರೂ, ಸಣ್ಣಮಕ್ಕಳಲ್ಲಿ ಸುಸ್ತು ಎಂದಾಗ ಹೆಚ್ಚಾಗಿ ದೈಹಿಕ ಸಮಸ್ಯೆಗಳು ಇರುವ ಸಾಧ್ಯತೆ ಹೆಚ್ಚಾಗಿರುತ್ತದೆ. ಜೊತೆಗೆ ಮಾನಸಿಕ ಸಮಸ್ಯೆಗಳನ್ನೂ ಅಲ್ಲಗಳೆಯುವಂತಿಲ್ಲ.

ಹೆಂಗಸರಲ್ಲಿ ಸುಸ್ತು ಎನ್ನುವ ಸಮಸ್ಯೆ ಹೆಚ್ಚಾಗಿ ಕಾಣಿಸುವುದಾದರೂ, ಗಂಡಸರು ಸುಸ್ತು ಎಂದಾಗ ದೈಹಿಕ ಸಮಸ್ಯೆಯೇ ಕಾರಣವಾಗಿರುವ ಸಾಧ್ಯತೆ ಹೆಚ್ಚು.

ಲಕ್ಷಣಗಳು

ನಿದ್ರೆ ಬರುವಂತೆ ಅನ್ನಿಸುವುದು; ಮೈಕೈ ಚಾಚಿಕೊಂಡು ನೆಲದಲ್ಲಿ ಬಿದ್ದುಕೊಳ್ಳೋಣ, ಮಲಗೋಣ ಅನಿಸುವುದು; ನಿತ್ಯದ ಚಟುವಟಿಕೆಗಳನ್ನು ನಡೆಸಲು ಉತ್ಸಾಹವಿಲ್ಲದಿರುವುದು; ಒಳ್ಳೆಯ ನಿದ್ರೆಯ ನಂತರವೂ ಉಲ್ಲಾಸವಿಲ್ಲದಿರುವುದು;

ಸಹಜ ಕೆಲಸಗಳಿಗೂ ಶಕ್ತಿ ಇಲ್ಲದ ಭಾವ ಮೂಡುವುದು. ನಂತರದ ದಿನಗಳಲ್ಲಿ ತಲೆಸುತ್ತು ತಲೆನೋವು, ಗಲಿಬಿಲಿ, ಉಸಿರಾಟದಲ್ಲಿ ಏರುಪೇರು, ಉಸಿರು ಸಿಕ್ಕಿಹಾಕಿಕೊಂಡಂತೆ ಅನ್ನಿಸುವುದು, ಮಾಂಸಖಂಡಗಳಲ್ಲಿ ಸೆಳೆತ–ನೋವು, ನಡೆಯಲು ಕಷ್ಟವಾಗುವುದು, ಹೃದಯಬಡಿತ ಹೆಚ್ಚುವುದು, ಮಾನಸಿಕವಾಗಿಯೂ ಬೇಸರ–ಖಿನ್ನತೆ, ಸುಮ್ಮನೆ ಅಳುವುದು, ಕಾರಣವೇ ಇಲ್ಲದೆ ಕೋಪ ಮಾಡಿಕೊಳ್ಳುವುದು ಇಂತಹ ಭಾವಪ್ರಕ್ರಿಯೆಗಳನ್ನು ಕಾಣಬಹುದು.

ಕಾರಣಗಳು

1. ಸಹಜ ಕಾರಣಗಳು (ತಾತ್ಕಾಲಿಕ)
ದೀರ್ಘ ಪ್ರಯಾಣ, ಸರಿಯಾದ ಆಹಾರವನ್ನು ಸೇವಿಸದಿರುವುದು, ಕಳಪೆ ಆಹಾರವನ್ನು ಸೇವಿಸಿರುವುದು, ಸರಿಯಾದ ಪ್ರಮಾಣದಲ್ಲಿ ನೀರು ಕುಡಿಯದಿರುವುದು, ಹೆಚ್ಚಿನ ದೈಹಿಕ ಶ್ರಮ, ಅತಿಯಾದ ವ್ಯಾಯಾಮಗಳು ಸುಸ್ತಿಗೆ ಕಾರಣವಾಗಬಹುದು,

2. ಮಾನಸಿಕ ಕಾರಣಗಳು
ದೇಹದ ಅವ್ಯಕ್ತ ರೂಪವೇ ಮನಸ್ಸು. ಆದುದರಿಂದ ಮನಸ್ಸಿನಲ್ಲಿ ಏನೇ ಏರುಪೇರು ಅದು ಪ್ರಕಟವಾಗುವುದು ದೇಹದ ಮೂಲಕವೇ. ಹೀಗಾಗಿ ಮನಸ್ಥಿತಿಯನ್ನು ಸರಿಯಾಗಿ ಇಟ್ಟುಕೊಳ್ಳದೇ ಇದ್ದಾಗ ಅದು ಸುಸ್ತಿನ ರೂಪದಲ್ಲಿ ಕಾಡುವ ಸಾಧ್ಯತೆ ಇದೆ.

ಮನಸ್ಸಿನ ಯಾವುದೇ ಆತಂಕ, ಒತ್ತಡಗಳು ಸುಸ್ತಿಗೆ ಕಾರಣವಾಗಬಹುದು. ಮಾನಸಿಕ ಆರೋಗ್ಯದ ಏರುಪೇರಿಗೆ ಹಲವು ಕಾರಣಗಳು ಕೆಲಸಮಾಡುತ್ತವೆ. ಉದ್ಯೋಗ, ಸಂಸಾರ, ಸ್ನೇಹಿತರ ವಲಯ, ವ್ಯವಹಾರ – ಹೀಗೆ ನಮ್ಮ ಜೀವನದ ಹಲವು ವಿದ್ಯಮಾನಗಳಲ್ಲಿನ ಏರುಪೇರುಗಳು ನಮ್ಮ ಮನಸ್ಸನ್ನು ಆಯಾಸಗೊಳಿಸಬಹುದು.

3. ದೈಹಿಕ ಸಮಸ್ಯೆಗಳು
ದೇಹದ ಅನೇಕ ಕಾಯಿಲೆಗಳ ಪ್ರಥಮ ಸೂಚನೆಯಾಗಿ ಸುಸ್ತು ಕಾಣಿಸಿಕೊಳ್ಳಬಹುದು. ರಕ್ತಹೀನತೆ, ಮಧುಮೇಹ, ಥೈರಾಯ್ಡ್‌, ಹೃದಯದ ಕಾಯಿಲೆ, ಜೀರ್ಣಾಂಗ ಸಮಸ್ಯೆ, ರಕ್ತದ ಕ್ಯಾನ್ಸರ್‌, ಕಿಮೋಥೆರಪಿ–ರೇಡಿಯೋಥೆರಪಿಗಳ ಬಳಿಕ, ದೊಡ್ಡ ಶಸ್ತ್ರಚಿಕಿತ್ಸೆಯ ಬಳಿಕ, ಜ್ವರ ಬಂದಾಗ, ಯಾವುದೇ ಸೋಂಕು/ ನಂಜು ಆದ ಬಳಿಕ, ಟೈಫಾಯಿಡ್‌–ಮಲೇರಿಯಾ–ಹೆಪಟೈಟಿಸ್‌ ಇತ್ಯಾದಿ ಕಾಯಿಲೆಗಳು ಸೂಚನೆಗಳು ಕಂಡು ಬರುವ ಮೊದಲು – ಇಂತಹ ಸಮಯದಲ್ಲಿ ಸುಸ್ತು ಒಂದು ಮುಖ್ಯ ತೊಂದರೆಯಾಗಿ ಕಾಣಿಸಿಕೊಳ್ಳುತ್ತದೆ. ಕಾಯಿಲೆ ತಹಬಂದಿಗೆ ಬಂದನಂತರವೂ ಕೆಲವು ವಾರಗಳ ಕಾಲ ಸುಸ್ತಿನ ಸಮಸ್ಯೆ ಕಾಡಬಹುದು. ನರಸಂಬಂಧಿತ ಕಾಯಿಲೆಗಳು, ಶ್ವಾಸಕೋಶ ಸಂಬಂಧ ಕಾಯಿಲೆಗಳು, ರಕ್ತದೊತ್ತಡ, ಅಲರ್ಜಿ, ಕೆಮ್ಮು ಇವುಗಳಿಗೆ ತೆಗೆದುಕೊಳ್ಳುವ ಔಷಧಗಳು ಸುಸ್ತಿಗೆ ಕಾರಣವಾಗಬಹುದು. ಗರ್ಭಿಣಿ ಮತ್ತು ಎದೆ ಹಾಲು ಉಣಿಸುವ ತಾಯಂದಿರಲ್ಲಿಯೂ ಸುಸ್ತು ಕಾಣಿಸಿಕೊಳ್ಳಬಹುದು. ಸುಸ್ತು ಎಷ್ಟು ಸಮಯದಿಂದ ಇದೆ ಎನ್ನುವುದರ ಆಧಾರದ ಮೇಲೆ ಮತ್ತು ಅದರ ಕಾರಣವನ್ನು ಪತ್ತೆ ಹಚ್ಚುವುದು ತುಂಬಾ ಮುಖ್ಯ. ಆದರೆ ಹೆಚ್ಚಿನ ಸಂದರ್ಭಗಳಲ್ಲಿ ಕಾರಣ ಪತ್ತೆಯಾಗುವುದೇ ಇಲ್ಲ. ವ್ಯಕ್ತಿಯ ಮಾನಸಿಕ ಸ್ಥಿತಿ, ನಿದ್ದೆಯ ಕ್ರಮಗಳ ಆಧಾರಮೇಲೆ ಕಾರಣಗಳನ್ನು ಕಂಡುಕೊಳ್ಳಬೇಕಾಗಿಬರಬಹುದು. ದಿನನಿತ್ಯದ ಚಟುವಟಿಕೆಗಳು, ಆಹಾರಸೇವನೆ, ಜೀರ್ಣಪ್ರಕ್ರಿಯೆಗಳ ಬಗ್ಗೆ ವಿಚಾರಿಸಿಕೊಳ್ಳುವುದೂ ಅಗತ್ಯ. ಉದ್ಯೋಗದಲ್ಲಿಯ ಒತ್ತಡದ ಬಗ್ಗೆಯೂ ಗಮನಿಸಬೇಕಾಗುತ್ತದೆ.ರಕ್ತದೊತ್ತಡ, ರಕ್ತಪರೀಕ್ಷೆ, ಹೃದಯದ ಪರೀಕ್ಷೆಯಂತಹವುಗಳ ಜೊತೆಗೆ ಹಲವು ದೈಹಿಕ ಪರೀಕ್ಷೆಗಳನ್ನೂ ಮಾಡಬೇಕಾಗಬಹುದು.

ಪರಿಹಾರ

ದೇಹಕ್ಕೆ ಉಂಟಾದ ಕಾಯಿಲೆಯನ್ನು ಗುರುತಿಸಿ ಅದಕ್ಕೆ ಸೂಕ್ತ ಚಿಕಿತ್ಸೆ ನೀಡುವುದು. ಮಾನಸಿಕ ಸಮಸ್ಯೆ ಕಂಡುಬಂದಾಗ ಮಾನಸಿಕ ತಜ್ಞರಿಂದ ಸೂಕ್ತ ಚಿಕಿತ್ಸೆ, ಆಪ್ತ ಸಮಾಲೋಚನೆ, ಔಷಧಗಳ ಸಹಾಯವನ್ನು ಕೊಡಬಹುದು. ಜೀವನಶೈಲಿಯ ಬದಲಾವಣೆಯೂ ಸುಸ್ತಿನ ಉಪಶಮನಕ್ಕೆ ನೆರವಾಗಬಹುದು. ಒಳ್ಳೆಯ ಆಹಾರಸೇವನೆ, ನಿಯಮಿತ ವ್ಯಾಯಾಮ, ಸರಿಯಾದ ನಿದ್ರಾಕ್ರಮಗಳು, ಮಾನಸಿಕ ನೆಮ್ಮದಿ ನಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳಲು ಬಹಳ ಮುಖ್ಯವಾದವು. ❖

ಡಾಕ್ಟರ್ ಶಾಪ್ಪಿಂಗ್

ಡಾ. ಕೆ. ಎಸ್‌. ಪವಿತ್ರ

ಆರೋಗ್ಯದ ಒಂದೇ ರೀತಿಯ ಸಮಸ್ಯೆಗಾಗಿ ವೈದ್ಯರಿಂದ ವೈದ್ಯರಿಗೆ ರೋಗಿ ಓಡಾಡುವುದು, ಚಿಕಿತ್ಸೆಯನ್ನು ಪಡೆಯುವುದನ್ನು 'ಡಾಕ್ಟರ್ ಶಾಪ್ಪಿಂಗ್' ಎಂದು ವೈದ್ಯವಿಜ್ಞಾನ ಗುರುತಿಸುತ್ತದೆ.

ಹೀಗೆ ವೈದ್ಯರನ್ನು ಮತ್ತೆ ಮತ್ತೆ ಬದಲಾಯಿಸುವುದಕ್ಕೆ ಕಾರಣಗಳನ್ನೂ ವೈದ್ಯಕೀಯ ಕ್ಷೇತ್ರ ಅಧ್ಯಯನ ಮಾಡಿದೆ. ಅಂತಹ ಕಾರಣಗಳನ್ನು ಪ್ರಮುಖವಾಗಿ ಎರಡು ವಿಭಾಗಗಳಲ್ಲಿ ಗುರುತಿಸಬಹುದು. ಮೊದಲನೆಯದು ವೈದ್ಯನಿಗೆ ಸಂಬಂಧಿಸಿದ್ದು; ಎರಡನೆಯದು ರೋಗಿಯ ಆರೋಗ್ಯ ಸಮಸ್ಯೆಗೆ, ಆತನ ವ್ಯಕ್ತಿತ್ವ, ಕೌಟುಂಬಿಕ ಪರಿಸರಗಳಿಗೆ ಸಂಬಂಧಪಟ್ಟದ್ದು.

ವೈದ್ಯಕೀಯ ಕ್ಷೇತ್ರ ವಿಜ್ಞಾನ ಕ್ಷೇತ್ರವೇ ಆದರೂ ದೇಹದೊಳಗಿನ ಲಕ್ಷಾಂತರ ಜೀವಕೋಶಗಳು ಕರಾರುವಾಕ್ಕಾಗಿ, ನಿರ್ದಿಷ್ಟವಾಗಿ ಹೀಗೆಯೇ, ಇಂತಿಷ್ಟೇ ಎಂಬಂತೆ ನಡೆದುಕೊಳ್ಳುತ್ತವೆ ಎಂದೇನೂ ಇಲ್ಲ. ಹೀಗಿರುವಾಗ 'ರೋಗ' ಎಷ್ಟೇ ಸಾಮಾನ್ಯವಾದ್ದು, ಸಾದಾ ನೆಗಡಿಯಷ್ಟೇ ನಿರಾಪಾಯಕಾರಿ ಎಂದರೂ, ಅದರ ಬಗೆಗೆ ಬೇಕಾದಷ್ಟು ಸಂಶೋಧನೆ-ಔಷಧಿಗಳಿವೆ ಎಂದರೂ, ಒಮ್ಮೆಲೇ ಕಾಯಿಲೆಯನ್ನು ನಿರ್ಧರಿಸುವುದು, ಚಿಕಿತ್ಸೆ ನೀಡುವುದು ನಾವು ಅಂದುಕೊಂಡಷ್ಟು ಸುಲಭ-ಸರಳವಲ್ಲ. ಇಂದಿನ ದಿನಗಳಲ್ಲಂತೂ 'ಗೂಗಲ್ ಡಾಕ್ಟರ್'ರಿಂದ ಸಲಹೆ ಪಡೆದೇ ರೋಗಿ ಬರುವ ಇಂದಿನ ಪರಿಸ್ಥಿತಿಯಲ್ಲಿ ವೈದ್ಯನೆಂದರೆ ಆತ 'ಸರ್ವಶಕ್ತ' ಎಂಬ ಅತಿ ನಿರೀಕ್ಷೆಯ ಜೊತೆಗೆ ತದ್ವಿರುದ್ಧವಾಗಿ ಆತ ದುರುದ್ದೇಶ-ನಿರ್ಲಕ್ಷ್ಯಗಳಿಂದಲೇ ಕೆಲಸ ಮಾಡಬಹುದು ಎಂಬ ಸಂದೇಹ – ಎರಡೂ ಸೇರಿ 'ಡಾಕ್ಟರ್ ಶಾಪ್ಪಿಂಗ್' ಹೆಚ್ಚುವಂತೆ ಮಾಡಿದೆ.

ಒಬ್ಬ ವ್ಯಕ್ತಿಯ ವ್ಯಕ್ತಿತ್ವದ ವಿಧ, ಕೆಲವು ಮಾನಸಿಕ ಸಮಸ್ಯೆಗಳು ಒಂದೇ ರೀತಿಯ ಕಾಯಿಲೆಗಾಗಿ ವೈದ್ಯರನ್ನು ಮೇಲಿಂದ ಮೇಲೆ ಬದಲಾಯಿಸುವಂತೆ ಪ್ರೇರೇಪಿಸಬಹುದು. ಮನೋದೈಹಿಕ ಕಾಯಿಲೆ, 'ಸೊಮಟೈಸೇಷನ್ ಡಿಸಾರ್ಡರ್' ಎಂಬ ಸಮಸ್ಯೆಯಲ್ಲಿ ಮಿದುಳಿನ ರಾಸಾಯನಿಕಗಳ ಏರುಪೇರು ದೇಹದ ವಿವಿಧೆಡೆಗಳಲ್ಲಿ ನೋವು, ವಿವಿಧ ಸಂವೇದನೆಗಳನ್ನು ಉಂಟುಮಾಡಲು ಸಾಧ್ಯವಿದೆ. ಉದಾಹರಣೆಗೆ, ಮಧ್ಯವಯಸ್ಕ ಮಹಿಳೆಯರಲ್ಲಿ ಕಾಣಿಸುವ ವಿವಿಧ ರೀತಿಯ ನೋವುಗಳು ಒಬ್ಬ ಮಹಿಳೆ ಕೈಕಾಲು ನೋವಿನಿಂದ ಒಬ್ಬ ವೈದ್ಯರ ಬಳಿ ಹೋದರೆ, ಅವರು ಕೈಕಾಲು ನೋವಿಗೆ ಬೇಕಾದ ಪರೀಕ್ಷೆಗಳನ್ನು ಮಾಡಿ, ಅವುಗಳಲ್ಲಿ ಸಹಜ - 'ನಾರ್ಮಲ್' ಆಗಿವೆ ಎಂದು ಹೇಳುತ್ತಾರೆ ಎನ್ನಿ; ಆಗ ರೋಗಿ ಅದನ್ನು ಅರ್ಥ ಮಾಡಿಕೊಳ್ಳುವ ಬಗೆ - 'ನನಗೆ ಯಾವ ಕಾಯಿಲೆಯೂ ಇಲ್ಲ'. ಆದರೆ ಮೈ–ಕೈನೋವುಗಳು ಮುಂದುವರಿಯುತ್ತವೆ! ಪರಿಣಾಮ ಸ್ವಲ್ಪ ದಿನಗಳ ನಂತರ ಮತ್ತೊಬ್ಬ ವೈದ್ಯರ ಬಳಿ ಅದೇ ಕೈಕಾಲು ನೋವಿಗೆಂದು ಆ ಮಹಿಳೆ ಮತ್ತೆ ಹೋಗುತ್ತಾರೆ! ಇಲ್ಲಿ ವೈದ್ಯರು ಹೇಳಬೇಕಿರುವುದೂ, ಸ್ವತಃ ಮಹಿಳೆ ಕೇಳಿ-ಅರ್ಥ ಮಾಡಿಕೊಳ್ಳಬೇಕಾದ್ದೂ, ಎಲ್ಲ ಪರೀಕ್ಷೆಗಳೂ 'ನಾರ್ಮಲ್'' ಎನ್ನಿಸಿಯೂ ಸಮಸ್ಯೆ ಇರಲು ಸಾಧ್ಯವಿದೆ; ನೋವು-ಸಂವೇದನೆ ಎನ್ನುವುದು ವೈಯಕ್ತಿಕವಾದದ್ದು – ಎಂಬ ವೈಜ್ಞಾನಿಕ ಸತ್ಯವನ್ನು!

ಎಂದರೆ ರೋಗಿಯ ಮನೆಯವರಾಗಲೀ ಸ್ವತಃ ವೈದ್ಯ-ವೈದ್ಯಕೀಯ ಸಿಬ್ಬಂದಿಯಾಗಲಿ 'ಇವರ ಟೆಸ್ಟ್‌ಗಳೆಲ್ಲ ನಾರ್ಮಲ್ ಬಂದಿರಬೇಕಾದರೆ ಇವರಿಗೆ ಏನು ಕಾಯಿಲೆಯಿರಲು ಸಾಧ್ಯ?' ಎಂದು ಅಚ್ಚರಿ ಪಡುವ ಅವಶ್ಯಕತೆಯಿಲ್ಲ! ಸ್ವತಃ ರೋಗಿಯೂ ಇದನ್ನು ಒಂದು ಸರಳ ಉದಾಹರಣೆಯಿಂದ ಅರ್ಥ ಮಾಡಿಕೊಳ್ಳಲು ಸಾಧ್ಯ. ಕೋಣೆಯೊಂದರಲ್ಲಿ ಟ್ಯೂಬ್‌ಲೈಟ್ ಹತ್ತುತ್ತಿಲ್ಲ ಅಂದುಕೊಳ್ಳಿ, ಮೊದಲಿಗೆ `ಟ್ಯೂಬ್' ಸರಿಯಿದೆಯೇ ಎಂದು ನೋಡುತ್ತೇವೆ, ಟ್ಯೂಬನ್ನು ಬದಲಾಯಿಸುತ್ತೇವ., ಆಗಲೂ ದೀಪ ಹತ್ತಲಿಲ್ಲ. ಮತ್ತೆ ಮತ್ತೆ ಟ್ಯೂಬನ್ನೇ ಸರಿಪಡಿಸಲು ಪ್ರಯತ್ನಿಸಿದರೆ ದೀಪ ಹತ್ತೀತೆ?! ಆಗ ನಾವು ಮಾಡಬೇಕಾದ್ದು 'ವೈರಿಂಗ್' ವ್ಯವಸ್ಥೆಯಲ್ಲಿ, ವಿದ್ಯುತ್ ವ್ಯವಸ್ಥೆಯಲ್ಲಿ ಏನಾದರೂ ದೋಷವಿರಬಹುದೆ ಎಂಬುದನ್ನು ಗುರುತಿಸಿ, ಸರಿಪಡಿಸುವುದು. ದೇಹವೂ ಅಂತಹ ಒಂದು ವ್ಯವಸ್ಥೆ. ಅದರ ಆರೋಗ್ಯ ಹದಗೆಡುವುದಕ್ಕೆ ಹಲವು ಕಾರಣಗಳು. 'ಗ್ಯಾಸ್ಟ್ರಿಕ್' ಎಂದು ವೈದ್ಯರಿಂದ ವೈದ್ಯರಿಗೆ ಓಡುವವರಲ್ಲಿ, ಚೀಲಗಟ್ಟಲೆ ಗ್ಯಾಸ್ಟ್ರಿಕ್ ಮಾತ್ರೆಗಳನ್ನು ನುಂಗುವವರು, ಮತ್ತೆ ಮತ್ತೆ 'ಎಂಡೋಸ್ಕೋಪ್ ಮಾಡಿಸಿ 'ಎಲ್ಲಾ ನಾರ್ಮಲ್ ಇದೆಯಲ್ಲಾ?!' ಎಂದು ಆಶ್ಚರ್ಯ ಪಡೆಯುವವರು ಮೊದಲು ಮಾಡಬೇಕಾದ್ದು ಪ್ರತಿ ವೈದ್ಯರೂ ಮೇಲಿಂದ ಮೇಲೆ ಹೇಳುವ 'ಸರಿಯಾದ ಸಮಯಕ್ಕೆ ಊಟ-ತಿಂಡಿ ಮಾಡುವ; ಕಾಫಿ/ ಟೀ ಗಳನ್ನು ಪ್ರತಿದಿನ ಎರಡು ಬಾರಿಗೆ ಸೀಮಿತಗೊಳಿಸುವ' ಜೀವನಶೈಲಿಯ ತಂತ್ರ.

ಆತಂಕಕ್ಕೆ ಸಂಬಂಧಿಸಿದ ಹಲವು ನಿರ್ದಿಷ್ಟ ಕಾಯಿಲೆಗಳು 'ಡಾಕ್ಟರ್ ಶಾಪ್ಪಿಂಗ್' ಅನ್ನು ವರ್ಷಗಟ್ಟಲೆ ಮುಂದುವರಿಸುವಂತೆ ಮಾಡಬಹುದು. ಕಾಯಿಲೆ ಬಂದೀತೆಂಬ ಭಯವೇ ಸಮಸ್ಯೆಯಾಗುವ ಆತಂಕ, ತನಗೆ ಮಾರಕವಾದ ಕಾಯಿಲೆ ಇದ್ದೇ ಇದೆಯೆಂಬ ನಂಬಿಕೆಯ 'ಹೈಪೋಕಾಂಡ್ರಿಯಾಸಿಸ್', ಹಿನ್ನೆಲೆಯಲ್ಲಿರುವ ಆತಂಕದಿಂದ ಉಂಟಾಗುವ ತಲೆನೋವು, ವಿವಿಧ ಮೈ–ಕೈನೋವುಗಳು, ಯಾವಾಗಲೂ ಇರುವ ಆತಂಕದ ಕಾಯಿಲೆ (Generalized anxiety disorder) – ಇವು 'ಡಾಕ್ಟರ್ ಶಾಪ್ಪಿಂಗ್'ಗೆ ಕಾರಣವಾಗಬಹುದು. ತಾತ್ಕಾಲಿಕ ಉಪಶಮನ ನೀಡುವ ಔಷಧಗಳು, ವಿವಿಧ ಪರೀಕ್ಷೆಗಳು ನಿಜವಾದ ಆತಂಕ-ಖಿನ್ನತೆಗಳ ಉಪಶಮನಕಾರಿ ಚಿಕಿತ್ಸೆಗಳಿಗೆ ಅಡ್ಡಿಯಾಗಬಹುದು.

'ಡಾಕ್ಟರ್ ಶಾಪ್ಪಿಂಗ್'ಗೆ ಕುಟುಂಬದವರೂ ತಮ್ಮ ಕೊಡುಗೆ ನೀಡಬಹುದು! ಒಂದೋ ರೋಗಿಯ ಜೊತೆಯಲ್ಲಿ ತಾವೂ ಮುಂದಾಗಿ ವಿವಿಧ ವೈದ್ಯರ ಬಳಿ ಕರೆದೊಯ್ಯುವುದು, 'ಗೂಗಲ್ ಡಾಕ್ಟರ್' ಬಳಿ ಹುಡುಕಿ ವೈದ್ಯಕೀಯ ಚಿಕಿತ್ಸೆಯನ್ನು ಮತ್ತಷ್ಟು ಗೊಂದಲಮಯವಾಗಿಸುವುದು, ಅಥವಾ ರೋಗಿಯ ಸಮಸ್ಯೆಗಳು 'ನಿಜವಲ್ಲ', 'ಕೆಲಸದಿಂದ ತಪ್ಪಿಸಿಕೊಳ್ಳುವ ಕಾಯಿಲೆಯ ನಾಟಕ', 'ಯಾವ ವೈದ್ಯಕೀಯ ಸಲಹೆಯ ಅಗತ್ಯವೂ ಇಲ್ಲ' ಎಂಬಂತೆ ದೂಷಿಸಬಹುದು. ರೋಗಿಯ ಸಮಸ್ಯೆಗಳನ್ನು 'ನಿಜ' ಎಂದು ಒಪ್ಪುವುದು, ಅದು 'ಅಪಾಯಕರ'ವಲ್ಲ ಎಂದು ತಜ್ಞವೈದ್ಯರು ನಿರ್ಧರಿಸಿದ ನಂತರ ರೋಗಿ ಆ ಸಮಸ್ಯೆ ಮೇಲೆಯೇ ಗಮನ ಕೇಂದ್ರೀಕರಿಸದೆ ನಿತ್ಯದ ಚಟುವಟಿಕೆಗಳಲ್ಲಿ ತೊಡಗುವಂತೆ ಮೃದುವಾಗಿ, ದೃಢವಾಗಿ ಪ್ರೇರೇಪಿಸುವುದು ಅತ್ಯಗತ್ಯ.

'ಡಾಕ್ಟರ್ ಶಾಪ್ಪಿಂಗ್'ನಲ್ಲಿ ತೊಡಗುವ ಬಹು ಜನರಿಗೆ ಖಿನ್ನತೆ, ಆತಂಕಗಳಿಗೆ ಸಂಬಂಧಿಸಿದ ಸಮಸ್ಯೆಗಳಿರುತ್ತವೆ ಎಂಬುದು ಗಮನಾರ್ಹ ಸಂಗತಿ. ❖

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ – ಗಣಿತ

ಸಮಾಂತರ ಶ್ರೇಢಿ

ಅಭ್ಯಾಸ – 5.3

3) ಸಮಾಂತರ ಶ್ರೇಢಿಯಲ್ಲಿ

i) $a = 5$, $d = 3$, $a_n = 50$ ಆದರೆ n ಮತ್ತು S_n ಕಂಡುಹಿಡಿಯಿರಿ

ಪರಿಹಾರ: *i)* a = 5, d = 3, an = 50 ಆದರೆ n ಮತ್ತು Sn ಕಂಡುಹಿಡಿಯಿರಿ

ಇಲ್ಲಿ $a = 5$, $d = 3$, $a_n = 50$

(..........ಹಿಂದಿನ ಸಂಚಿಕೆಯಿಂದ)

$$Sn = 8[10+45]$$
$$= 8(55)$$
$$= 440$$

(ii) $a = 7$, $a_{13} = 35$ ಆದರೆ d ಮತ್ತು S_{13}ಗಳನ್ನು ಕಂಡುಹಿಡಿಯಿರಿ

ಪರಿಹಾರ: $a = 7$, $a_{13} = 35$

ನಮಗೆ ಗೊತ್ತಿರುವಂತೆ

$a_n = a + (n-1)d$
$a_{13} = a + (13-1)(d)$
$a_{13} = a + (12)(d)$
$35 = 7 + 12d$
$12d = 28$
$d = 28/12$
$d = 7/3$

ನಮಗೆ ಗೊತ್ತಿರುವಂತೆ

$$S_n = \frac{n}{2}[2a+(n-1)d]$$
$$S_{13} = \frac{13}{2}[2(a)+(13-1)(d)]$$
$$S_{13} = \frac{13}{2}[2a+(12)(d)]$$
$$S_{13} = \frac{13}{2}\left[2(7)+(12)(\frac{7}{3})\right]$$
$$S_{13} = \frac{13}{2}[14+28]$$
$$S_{13} = \frac{13}{2}[42]$$
$$S_{13} = (13)(21)$$
$$S_{13} = 273$$

iii) $a_{12} = 37$, $d = 3$ ಆದರೆ a ಮತ್ತು S_{12} ಗಳನ್ನು ಕಂಡುಹಿಡಿಯಿರಿ

ಪರಿಹಾರ: $a_{12} = 37$, $d = 3$

ನಮಗೆ ಗೊತ್ತಿರುವಂತೆ

$a_n = a + (n-1)d$
$a_{12} = a + (12-1)(d)$
$a_{12} = a + (11)(d)$
$37 = a + 11d$
$37 = a + 11 \times 3$
$a = 37-33 = 4$

ನಮಗೆ ಗೊತ್ತಿರುವಂತೆ

$$S_n = \frac{n}{2}[2a+(n-1)d]$$
$$S_{12} = \frac{12}{2}[2a+(12-1)d]$$
$$S_{12} = 6(2a+11d)$$
$$S_{12} = 6(2x4+11x3)$$
$$S_{12} = 6(8+33)$$
$$S_{12} = 6x41$$
$$S_{12} = 246$$

iv) $a_3 = 15$, $S_{10} = 125$ ಆದರೆ d ಮತ್ತು a_{10} ಕಂಡುಹಿಡಿಯಿರಿ

ಪರಿಹಾರ: $a_3 = 15$, $n=10$ $d=?$ $S_{10} = 125$,

$a_3 = 15$
$a + 2d = 15$.............(1)
$S_{10} = 125$,

$$S_n = \frac{n}{2}[2a+(n-1)d]$$
$$= \frac{10}{2}[2a+(n-1)d]$$
$$= \frac{10}{2}[2a+(10-1)d] = 125$$
$$= 5(2a+9d) = 125$$
$$= 2a+9d = \frac{125}{5}$$
$$2a+9d = 25 \text{..............(2)}$$

2ರಿಂದ ಸಮೀಕರಣ 1 ಮತ್ತು 2ದಲ್ಲಿ ಗುಣಿಸಿದಾಗ

$a + 2d = 15 \times 2$
$2a + 9d = 25 \times 2$

$2a + 4d = 30$
$(-)\ 2a + 9d = 25$
$(-)\quad(-)$
$-5d = 5$

$d = -5/5$ $d = -1$

a ಕಂಡುಹಿಡಿಯುವುದು

$a + 2d = 15$
$a+2x -1 = 15$
$a = 15+2$
$a = 17$

a_{10} ಕಂಡುಹಿಡಿಯುವುದು

$a_n = a + (n-1)d$
$a_{10} = a + 9d$
$= 17+9x(-1)$
$= 17-9$
$a_{10} = 8$

3(v) $d = 5$, $S_9 = 75$ ಆದರೆ a ಮತ್ತು a_9 ಕಂಡುಹಿಡಿಯಿರಿ

ಪರಿಹಾರ: $S_9 = 75$ $d = 5$

ನಮಗೆ ಗೊತ್ತಿರುವಂತೆ

(ಮುಂದುವರಿಯುವುದು)

ಎಸ್ಸೆಸ್ಸೆಲ್ಸಿ ಸಮಾಜ ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ, ಕೇಂದ್ರ

II PUC PHYSICS

CURRENT ELECTRICITY

7. Define the temperature coefficient of resistance?

Ans:- The temperature coefficient of resistance is defined as the ratio of the change in resistance per degree rise of the temperature to the resistance at 0^0C.

8. How does the resistance vary due to the dimensions of the conductor?

Ans:- The resistance is directly proportional to the length of the conductor and it is inversely proportional to the area of the conductor.

$$R \alpha \frac{l}{A}$$

9. Give the expression for the temperature coefficient of resistance?

Ans:-

$$\text{Ans}:- \ R_t = R_0 + \alpha(R\,t_0)$$

where, R_t – resistance at temperature t^0C, R_0 – resistance at 0^0C, α – constant for the given material and is the temperature coefficient of resistance of the material of the conductor.

10. Why are the substance like nichrome, magnanin etc., are used in making the standard resistance coils?

Ans:- Because they have high resistivity.

11. Give the expression for α .

Ans:- $$\alpha = \frac{R_2 - R_1}{R_1 t_2 - R_2 t_1}$$

12. What is a Rheostat?

Ans:- A Rheostat is the variable resistor. Using it the resistance can be varied from zero to maximum.

13. What is a resistance box?

Ans:- The resistance box consists of a standard resistance coils connected in series. Using which the resistance can be varied in steps.

14. What is volt – ampere?

Ans:- Volt – ampere is the unit of power.

15. What is kilowatt hour?

Ans:- The kilowatt hour is the total electrical energy consumed in one hour at the rate of 1000 joule per second. 1 kWhr = 3.6×10^6 J

16. Define e.m.f of a cell.

Ans:- The e.m.f of a cell is the work done by it in transferring unit quantity of charge once all round the circuit in which it is connected.

17. Write the colour code for a resistor of resistance 120 Ω

Ans:- The colour code for a resistor of resistance 120 Ω is brown – red – black.

18. An electrical appliances is marked 220V, 550W. What is the resistance when in use?

$$\text{Ans}:- \ \text{Power}(P) = V(I) = \frac{V^2}{R}$$

$$\left(\text{as } I = \frac{V}{R}\right)$$

$$\therefore R = \frac{V^2}{P} = \frac{220^2}{550} = 88$$

The Resistance when in use is 88Ω.

19. Nichrome has a resistivity of 1.2×10^{-6} Ohm – meter. What is the resistance of 10m wire of cross section 1 sq mm. What is the resistance when the wire is folded on itself and the free ends are joined together thus halving the length?

Ans :– Given, $\rho = 1.2 \times 10^{-6}$ ohm – meter,
length of the wire (L) = 10 m
Area of section (A) = 1 Sq.mm

$$R = \rho\frac{L}{A} = \frac{1.2 \times 10^{-6} \times 10}{1 \times 10^{-6}} = 12\,\text{ohms}$$

20. A piece of copper and another of germanium are cooled from room temperature to 100K. What will happen to their conductivities? Explain.

Ans:- Copper possesses positive temperature coefficient, whereas the germanium possesses negative temperature coefficient. Therefore, if they are cooled from the room temperature to the 100 K, the resistance of copper will decrease and that of germanium will increase. In other words, the conductivity of copper increases but that of germanium decreases.

21. Write a brief note on resistor and its colour codes.

Ans:- A resistor is a circuit element that offers resistance to the flow of the charges through it. They are used in the electrical and electronic devices to limit the strength of the current.

The commercial resistors are of two types –

a) wire – wound & b) composition resistors

Wire – wound resistors consists of a resistance wire made up of constantan, nichrome or manganin wound on a suitable base.

Composition resistors (or) carbon resistors consist of fine graphite powder mixed with suitable binding agent moulded into a cylinder.

The mould is enclosed in a plastic or ceramic jacket and is provided with wire leads for electrical connections.



These resistors are commercially available in various shapes and sizes and they are so small that it is not possible to print their values on them. To know their values a colour code in the form of circular colour bands is followed. In the colour band generally we see four colour bands on one end of the resistor.

(Contd…..)

ವಾಲ್ಮೀಕಿ ನಿಗಮದ ಹಗರಣ: ಪ್ರತಿಪಕ್ಷಗಳ ಪ್ರತಿಭಟನೆ ನಡುವೆಯೇ ಸಿದ್ದರಾಮಯ್ಯ ಉತ್ತರ

ನಾನ್ಯಾಕೆ ರಾಜೀನಾಮೆ ನೀಡಲಿ: ಸಿ.ಎಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದಲ್ಲಿ ಹಣ ದುರುಪಯೋಗದ ಬಗ್ಗೆ ವಿಧಾನ ಪರಿಷತ್‌ನಲ್ಲಿ ನಡೆದ ಚರ್ಚೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸೋಮವಾರ ಗೊಂದಲ, ಪ್ರತಿಭಟನೆಯ ನಡುವೆಯೇ ಉತ್ತರ ಮಂಡಿಸಿದರು.

ನಿಯಮ 68ರ ಮೇರೆಗೆ ನಡೆದ ಚರ್ಚೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಉತ್ತರ ನೀಡಲು ಆರಂಭಿಸುತ್ತಿದ್ದಂತೆಯೇ, ಬಿಜೆಪಿ ಹಾಗೂ ಜೆಡಿಎಸ್ ಸದಸ್ಯರು ಆಕ್ರೋಶ ವ್ಯಕ್ತಪಡಿಸಿದರು. 'ಬಿಜೆಪಿಯವರು ಮಾಡಿರುವ ಆರೋಪ ಸತ್ಯಕ್ಕೆ ದೂರ, ಸುಳ್ಳು' ಎಂದು ಸಿದ್ದರಾಮಯ್ಯ ಹೇಳಿದಾಗ, ಬಿಜೆಪಿ ಸಿ.ಟಿ. ರವಿ, ರವಿಕುಮಾರ್ ಅವರು 'ಸುಳ್ಳಲ್ಲ, ಸುಳ್ಳಲ್ಲ' ಎಂದು ಕೂಗಿದರು.

'ಅಕ್ರಮ ನಡೆದೇ ಇಲ್ಲ ಎಂದು ನಾನು ಹೇಳಲ್ಲ. ಆದರೆ, ಈ ಅಕ್ರಮಕ್ಕೆ ಸರ್ಕಾರ, ಹಣಕಾಸು ಇಲಾಖೆ, ಸಿದ್ದರಾಮಯ್ಯ ಕಾರಣ ಅಲ್ಲ, ನಾನೇಕೆ ರಾಜೀನಾಮೆ ನೀಡಬೇಕು' ಎಂದು ಮುಖ್ಯಮಂತ್ರಿ ಪ್ರಶ್ನಿಸಿದರು. ಈ ಸಂದರ್ಭದಲ್ಲಿ ಆಡಳಿತ ಹಾಗೂ ಪ್ರತಿಪಕ್ಷಗಳ ಸದಸ್ಯರ ಮಧ್ಯೆ ವಾಗ್ವಾದ ನಡೆಯಿತು.

'ಮುಖ್ಯಮಂತ್ರಿಯವರಲ್ಲದೆ ಬೇರೆ ಯಾರು ಮಾತನಾಡಿದರೂ ಅದನ್ನು ಕಡತಕ್ಕೆ ಹೋಗಬಾರದು' ಎಂದು ಸಭಾಪತಿ ಬಸವರಾಜ ಹೊರಟ್ಟಿ ಅವರು ಹಲವು ಬಾರಿ ಹೇಳಿದರು.

'ಹಿಟ್ಲರ್ ಸಂಪುಟದಲ್ಲಿ ಗೊಬೆಲ್ಸ್ ಅವರನ್ನು ಸುಳ್ಳು ಹೇಳಲೆಂದೇ ಸಚಿವರನ್ನಾಗಿ ಮಾಡಿಕೊಳ್ಳಲಾಗಿತ್ತು. ಅವರಂತೆಯೇ ಬಿಜೆಪಿಯವರು ಸುಳ್ಳನ್ನು ನೂರು, ಸಾವಿರ ಬಾರಿ ಹೇಳಿ ಸತ್ಯ ಎಂದು ಹೇಳುವ ಕುಟಿಲತಂತ್ರ ಮಾಡುತ್ತಿದ್ದಾರೆ' ಎಂದು ಸಿದ್ದರಾಮಯ್ಯ ಆಕ್ರೋಶ ವ್ಯಕ್ತಪಡಿಸಿದರು.

'ವಿಧಾನ ಪರಿಷತ್‌ನಲ್ಲಿ ಪ್ರತಿಪಕ್ಷ ನಾಯಕನನ್ನು ನೇಮಿಸದೆ ಬಿಜೆಪಿ ರಾಜಕೀಯವಾಗಿ ದಿವಾಳಿಯಾಗಿದೆ. ಪ್ರತಿಪಕ್ಷ ನಾಯಕನ ಸ್ಥಾನಕ್ಕಾಗಿ ಸಿ.ಟಿ. ರವಿ ಹಾಗೂ ರವಿಕುಮಾರ್ ಪೈಪೋಟಿ ನಡೆಸುತ್ತಿದ್ದಾರೆ. ಅದಕ್ಕಾಗಿಯೇ ನಿಮಿಷ, ನಿಮಿಷಕ್ಕೂ ಅಡ್ಡಿಪಡಿಸುತ್ತಿದ್ದಾರೆ' ಎಂದು ದೂರಿದರು.

ಈ ಸಂದರ್ಭದಲ್ಲಿ ಪ್ರತಿಪಕ್ಷದ ಸದಸ್ಯರು ಮುಖ್ಯಮಂತ್ರಿಯವರ ಉತ್ತರಕ್ಕೆ ಆಕ್ರೋಶ ವ್ಯಕ್ತಪಡಿಸಿ, ಸಭಾಪತಿ ಪೀಠದ ಮುಂದೆ ಪ್ರತಿಭಟನೆ ನಡೆಸಿ, ಧಿಕ್ಕಾರ, ಘೋಷಣೆಗಳನ್ನು ಕೂಗಿದರು. ಆಡಳಿತ ಪಕ್ಷ ಸದಸ್ಯರು ಬಿಜೆಪಿ ಆಡಳಿತ ದಲ್ಲಾಗಿರುವ ಭ್ರಷ್ಟಾಚಾರ ಆರೋಪದ ಫಲಕಗಳನ್ನು ಪ್ರದರ್ಶಿಸಿದರು.

'ಲಿಖಿತ ಉತ್ತರವನ್ನು ಓದುತ್ತೇನೆ, ದಾಖಲಾಗಲಿ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಓದಲು ಆರಂಭಿಸಿದರು. ಪ್ರತಿಪಕ್ಷಗಳ ಪ್ರತಿಭಟನೆ, ಆಡಳಿತ ಪಕ್ಷದ ಸದಸ್ಯ ಪ್ರತ್ಯಾರೋಪಗಳಿಂದ ಸದನ ಗೊಂದಲಯವಾಗಿದ್ದರಿಂದ ಉತ್ತರವನ್ನು ಸಿದ್ದರಾಮಯ್ಯ ಮಂಡಿಸಿದರು. ಸಭಾಪತಿಯವರು ಕಲಾಪವನ್ನು ಮುಂದೂಡಿದರು.

ಆಡಿಷನ್, ಪ್ಲೀಸಿಂಗ್...

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ವಿಧಾನ ಪರಿಷತ್‌ನಲ್ಲಿ ಉತ್ತರ ಹೇಳುವ ಸಂದರ್ಭದಲ್ಲಿ 'ಆಡಿಷನ್ ಹಾಗೂ ಪ್ಲೀಸಿಂಗ್' ಎಂಬ ಮಾತುಗಳು ಸಾಕಷ್ಟು ಬಾರಿ ಕೇಳಿಬಂದವು.

'ವಿಧಾನಪರಿಷತ್‌ನಲ್ಲಿ ಪ್ರತಿಪಕ್ಷದ ನಾಯಕ ಇಲ್ಲದಿರುವುದಕ್ಕೆ ಹಲವರು 'ಆಡಿಷನ್' ನೀಡಲು ಆಗಾಗ್ಗೆ ಮಾತನಾಡುತ್ತಿದ್ದಾರೆ. ಸಭಾಪತಿ ಬೇಡ ಎಂದರೂ ನಿಮಿಷ, ನಿಮಿಷಕ್ಕೂ ಮುಖ್ಯಮಂತ್ರಿಯವರ ಭಾಷಣಕ್ಕೆ ಅಡ್ಡಿಪಡಿಸುತ್ತಿದ್ದಾರೆ. ಪ್ರತಿಪಕ್ಷದ ನಾಯಕರಾಗಲೂ ಈ ಪ್ರದರ್ಶನ ಮಾಡುತ್ತಿದ್ದಾರೆ' ಎಂದು ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು. ಆಡಳಿತ ಪಕ್ಷದ ಕೆಲವು ಸದಸ್ಯರು ಈ ಮಾತನ್ನು ಹಲವು ಬಾರಿ ಪುನರುಚ್ಚರಿಸಿದರು.

'ಮುಖ್ಯಮಂತ್ರಿಯವರೇ ನೀವಿದ್ದೀರಾ ಎಂದು ನಾಗರಾಜ್ ಯಾದವ್, ಐವನ್ ಡಿಸೋಜ ಸೇರಿದಂತೆ ಕೆಲವರು ನಿಮ್ಮನ್ನು 'ಪ್ಲೀಸ್' ಮಾಡಲು ಸಾಕಷ್ಟು ಮಾತನಾಡುತ್ತಿದ್ದಾರೆ' ಎಂದು ಸಭಾಪತಿ ಬಸವರಾಜ ಹೊರಟ್ಟಿ ಹೇಳಿದರು.

ಸದನದಲ್ಲಿ ಮಾತುಕತೆ

ವಿಧಾನ ಪರಿಷತ್ ಕಲಾಪದ ವೇಳೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಂದ ಕಡತಗಳಿಗೆ ಸಹಿ ಮಾಡಿಸಿಕೊಳ್ಳಲು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮಿ ಹೆಬ್ಬಾಳಕರ ಮತ್ತು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಮುಂದಾದರು. ಸಚಿವ ಎನ್.ಎಸ್ ಬೋಸರಾಜು, ಮುಖ್ಯ ಸಚೇತಕ ಸಲೀಂ ಅಹಮದ್ ಇದ್ದರು – ಪ್ರಜಾವಾಣಿ ಚಿತ್ರ

'ಅಕ್ರಮ ಬಡಾವಣೆ: ದಿನಕ್ಕೆ ₹35 ಲಕ್ಷ ಲಂಚ'

ಬೆಂಗಳೂರು: 'ಒಂದು ಅಕ್ರಮ ಬಡಾವಣೆ ನೋಂದಣಿಗೆ ₹35 ಸಾವಿರ ಲಂಚ ಪಡೆಯಲಾಗುತ್ತಿದೆ. ದಿನಕ್ಕೆ 100 ಬಡಾವಣೆಗಳು ನೋಂದಣಿಯಾಗುತ್ತಿದ್ದು, ₹35 ಲಕ್ಷದವರೆಗೂ ವಹಿವಾಟು ನಡೆಯುತ್ತಿದೆ' ಎಂದು ಬಿಜೆಪಿ ಸದಸ್ಯ ಎಸ್.ಆರ್. ವಿಶ್ವನಾಥ್ ಆರೋಪಿಸಿದರು.

ಅಕ್ರಮ ಬಡಾವಣೆಗಳ ನೋಂದಣಿ ಕುರಿತು ಸೋಮವಾರ ವಿಧಾನಸಭೆಯಲ್ಲಿ ವಿಷಯ ಪ್ರಸ್ತಾಪಿಸಿದ ಅವರು, 'ಕೃಷಿ ಭೂಮಿಯನ್ನು ಅಕ್ರಮವಾಗಿ ಬಡಾವಣೆಗಳಾಗಿ ಪರಿವರ್ತಿಸಿ ನೋಂದಣಿ ಮಾಡಲಾಗುತ್ತಿದೆ. ಈ ಬಗ್ಗೆ ಉಪ ನೋಂದಣಾಧಿಕಾರಿಗಳ ಬಳಿ ವಿಚಾರಿಸಿದರೆ ಮೇಲಿನವರಿಗೆ ಮಾಮೂಲಿ ನೀಡಬೇಕು. ಪ್ರತಿ ತಿಂಗಳು ₹ 8 ಕೋಟಿ ವಸೂಲಿ ಮಾಡುತ್ತಿದ್ದೇವೆಂದು ಹೇಳುತ್ತಿದ್ದಾರೆ. ಕಂದಾಯ ಸಚಿವರು ಲಂಚ ಪಡೆಯುವುದಿಲ್ಲವೆಂದು ಭಾವಿಸಿದ್ದೇನೆ. ಹಾಗಿದ್ದರೆ, ಹಣ ಯಾರಿಗೆ ತಲುಪುತ್ತಿದೆ' ಎಂದು ಪ್ರಶ್ನಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಸಚಿವ ಕೃಷ್ಣ ಬೈರೇಗೌಡ, 'ಹಣ ವಸೂಲಿ ಹೊರತು ಪಡಿಸಿ, ಉಳಿದ ಎಲ್ಲ ವಿಚಾರಗಳಿಗೆ ನನ್ನ ಸಹಮತ ಇದೆ. ಅಕ್ರಮ ಬಡಾವಣೆಗಳ ನೋಂದಣಿಗೆ ತಡೆಗಟ್ಟುತ್ತೇನೆ' ಎಂದು ಭರವಸೆ ನೀಡಿದರು.

ಧರಣಿ ವಾಪಸ್ ಪಡೆದು ಸುಗಮ ಕಲಾಪಕ್ಕೆ ಸಹಕರಿಸಲು ಸ್ಪೀಕರ್ ಮನವಿ

ನಿಗಮದ ಹಗರಣ: ಬಿಜೆಪಿ ಧರಣಿ ವಾಪಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜೀನಾಮೆ ನೀಡಬೇಕೆಂದು ಪಟ್ಟುಹಿಡಿದು ಸಭಾಧ್ಯಕ್ಷರ ಪೀಠದ ಎದುರು ನಡೆಸುತ್ತಿದ್ದ ಧರಣಿಯನ್ನು ಬಿಜೆಪಿ– ಜೆಡಿಎಸ್ ಸದಸ್ಯರು ಸೋಮವಾರ ವಾಪಸ್ ಪಡೆದರು.

ಬೆಳಿಗ್ಗೆ ಕಲಾಪ ಆರಂಭವಾಗುತ್ತಿದ್ದಂತೆ ಬಿಜೆಪಿ, ಜೆಡಿಎಸ್ ಸದಸ್ಯರು ಧರಣಿ ಮುಂದುರಿಸಿದರು. ಆಗ ಸಭಾಧ್ಯಕ್ಷ ಯು.ಟಿ. ಖಾದರ್, 'ಈ ವಿಚಾರದಲ್ಲಿ ಮುಖ್ಯಮಂತ್ರಿ ಉತ್ತರ ಕೊಟ್ಟಿದ್ದಾರೆ. ಸದನದ ಕಾರ್ಯಕಲಾಪಗಳ ಪಟ್ಟಿಯಲ್ಲಿ ಪ್ರಶ್ನೋತ್ತರ, ಗಮನ ಸೆಳೆಯುವ ಸೂಚನೆ, ಸಾರ್ವಜನಿಕ ಮಹತ್ವದ ಹಲವು ವಿಚಾರಗಳಿವೆ. ಧರಣಿ ವಾಪಸ್ ಪಡೆದು ಸುಗಮ ಕಲಾಪಕ್ಕೆ ಸಹಕಾರ ನೀಡಬೇಕು' ಎಂದು ಮನವಿ ಮಾಡಿದರು.

ವಿರೋಧ ಪಕ್ಷದ ನಾಯಕ ಆರ್. ಅಶೋಕ, 'ವಾಲ್ಮೀಕಿ ಅಭಿವೃದ್ಧಿ ನಿಗಮದ ಹಣ ಅಕ್ರಮ ವರ್ಗಾವಣೆ ವಿಚಾರವನ್ನು ತಾರ್ಕಿಕ ಹಂತಕ್ಕೆ ಕೊಂಡೊಯ್ಯಬೇಕೆಂಬ ಉದ್ದೇಶದಿಂದ ಮುಖ್ಯಮಂತ್ರಿ ರಾಜೀನಾಮೆಗೆ ಆಗ್ರಹಿಸಿ ಸದನದ ಒಳಗೆ ಮತ್ತು ಹೊರಗೆ ಹೋರಾಟ ಮಾಡಿದ್ದೇವೆ. ಹಗರಣದ ವಿಚಾರ ಬಿಟ್ಟು ಉಳಿದೆಲ್ಲವುಗಳಿಗೆ ಮುಖ್ಯಮಂತ್ರಿ ಉತ್ತರ ಕೊಟ್ಟಿದ್ದಾರೆ' ಎಂದರು.

ಮಾತು ಮುಂದುವರಿಸಿದ ಅಶೋಕ, 'ಮಳೆಹಾನಿ ಪೀಡಿತ ಪ್ರದೇಶಗಳಿಗೆ ನಮ್ಮ ಪಕ್ಷದ ರಾಜ್ಯ ಅಧ್ಯಕ್ಷರಾದ ವಿಜಯೇಂದ್ರ, ನಾನು ಸೇರಿ ಹಲವರು ಭೇಟಿ ನೀಡಿದ್ದೇವೆ. ರಾಜ್ಯದಲ್ಲಿ ಡೆಂಗಿ ಹಾವಳಿ ಹೆಚ್ಚಾಗಿದೆ. ಬೆಂಗಳೂರಿನಲ್ಲಂತೂ ಡೆಂಗಿ ಮರಣ ಮೃದಂಗ ಬಾರಿಸುತ್ತಿದೆ. ಮುಡಾ ಹಗರಣ, ಕೆಲವು ಸಾರ್ವಜನಿಕ ಮಹತ್ವದ ವಿಚಾರಗಳ ಬಗ್ಗೆಯೂ ಚರ್ಚೆ ಆಗಬೇಕಿದೆ. ಸಭಾಧ್ಯಕ್ಷರ ವಿನಂತಿ ಮೇರೆಗೆ ಧರಣಿಯನ್ನು ವಾಪಸ್ ಪಡೆಯುತ್ತೇವೆ. ಆದರೆ, ಮುಖ್ಯಮಂತ್ರಿ ರಾಜೀನಾಮೆ ನೀಡುವವರೆಗೂ ಹೋರಾಟ ಮುಂದುವರೆಸುತ್ತೇವೆ' ಎಂದರು.

'ಜಾಹೀರಾತಿನಿಂದ ಸದನದ ಪಾವಿತ್ರ್ಯಕ್ಕೆ ಧಕ್ಕೆ'

'ವಾಲ್ಮೀಕಿ ಅಭಿವೃದ್ಧಿ ನಿಗಮದ ಹಗರಣದಲ್ಲಿ ಮುಖ್ಯಮಂತ್ರಿಯ ರಾಜೀನಾಮೆಗೆ ಆಗ್ರಹಿಸಿ ವಿಧಾನಸಭೆಯಲ್ಲಿ ಬಿಜೆಪಿ, ಜೆಡಿಎಸ್ ಸದಸ್ಯರು ಶುಕ್ರವಾರ ಧರಣಿ ನಡೆಸುತ್ತಿದ್ದಾಗ ಸದನದಲ್ಲಿ ಮುಖ್ಯಮಂತ್ರಿ ಮಾತನಾಡಿದ್ದ ವಿಚಾರವನ್ನು ಮರುದಿನ (ಜುಲೈ 20) ಪತ್ರಿಕೆಗಳಲ್ಲಿ ಜಾಹೀರಾತು ನೀಡಲಾಗಿದೆ. ಇದರಿಂದ ಸದನದ ಪಾವಿತ್ರ್ಯಕ್ಕೆ ಧಕ್ಕೆ ಆಗಿದೆ' ಎಂದು ವಿರೋಧ ಪಕ್ಷದ ನಾಯಕ ಆರ್. ಅಶೋಕ ಅಸಮಾಧಾನ ವ್ಯಕ್ತಪಡಿಸಿದರು.

ವಿಧಾನಸಭೆಯಲ್ಲಿ ಸೋಮವಾರ ಮಾತನಾಡಿದ ಅವರು, 'ಈ ರೀತಿ ಜಾಹೀರಾತು ನೀಡುವ ನಡವಳಿಕೆಯಿಂದ ಸದನಕ್ಕೆ ಅಗೌರವ ತರುವಂತಾಗಿದೆ' ಎಂದೂ ಬೇಸರ ವ್ಯಕ್ತಪಡಿಸಿದರು.

'ಅನಾರೋಗ್ಯಕರ ಬೆಳವಣಿಗೆ': 'ಸದನದಲ್ಲಿ ಮಾಡಿದ ಭಾಷಣವನ್ನು ಪತ್ರಿಕೆಗಳಲ್ಲಿ ಜಾಹೀರಾತು ನೀಡಿರುವುದು ಅನಾರೋಗ್ಯಕರ ಬೆಳವಣಿಗೆ' ಎಂದು ಬಿಜೆಪಿಯ ಎಸ್. ಸುರೇಶ್ ಕುಮಾರ್ ಅಭಿಪ್ರಾಯಪಟ್ಟಿದ್ದಾರೆ.

'ಈ ವಿಷಯದ ಕುರಿತು ವಿಧಾನಸಭಾಧ್ಯಕ್ಷ ಯು.ಟಿ. ಖಾದರ್ ಜೊತೆ ಮಾತನಾಡಿ ಅಸಮಾಧಾನ, ಆತಂಕವನ್ನು ವ್ಯಕ್ತಪಡಿಸಿದ್ದೇವೆ' ಎಂದಿದ್ದಾರೆ.

'ಇದು ಹೀಗೆಯೇ ಮುಂದುವರಿದರೆ ಆರ್ಥಿಕ ಶಕ್ತಿ ಉಳ್ಳ ಯಾವುದೇ ಸದಸ್ಯರು ಸದನದಲ್ಲಿ ತಾವು ಏನೆಲ್ಲ ಮಾತನಾಡಿ, ತಮ್ಮ (ಒಳ್ಳೆಯ ಅಭಿರುಚಿ ಇಲ್ಲದಿದ್ದರೂ) ಭಾಷಣಗಳನ್ನು ಪತ್ರಿಕೆಗಳಲ್ಲಿ ಜಾಹೀರಾತಿನ ಮೂಲಕ ಪ್ರಕಟಿಸುವ ಸನ್ನಿವೇಶ ಬಂದರೆ ಏನಾಗಬಹುದು ಎಂಬ ಬಗ್ಗೆಯೂ ವಿವರಿಸಿದ್ದೇವೆ. ಈ ನೂತನ ಪ್ರವೃತ್ತಿ ಕುರಿತು ಸಭಾಧ್ಯಕ್ಷರು ಗಂಭೀರ ಅಧ್ಯಯನ ಮಾಡಿ ಕಠಿಣ ಕ್ರಮ ಕೈಗೊಂಡು ಸೂಕ್ತ ನಿರ್ದೇಶನ ನೀಡಬೇಕೆಂದೂ ಆಗ್ರಹಿಸಿದ್ದೇವೆ' ಎಂದಿದ್ದಾರೆ.

'ಕರ್ನಾಟಕ ನೀರಾವರಿ (ತಿದ್ದುಪಡಿ) ಮಸೂದೆ–2024

ನಾಲಾ ನೀರು ಕದ್ದರೆ 2 ವರ್ಷ ಜೈಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನೀರಾವರಿ ನಾಲೆ, ಕಾಲುವೆಗಳಲ್ಲಿ ಕಾನೂನುಬಾಹಿರವಾಗಿ ಪಂಪ್‌ಸೆಟ್, ಕೊಳವೆ ಅಳವಡಿಸಿ ನೀರು ಕಳವು ಮಾಡುವುದನ್ನು ತಡೆಯುವ ಉದ್ದೇಶದ 'ಕರ್ನಾಟಕ ನೀರಾವರಿ (ತಿದ್ದುಪಡಿ) ಮಸೂದೆ–2024' ಅನ್ನು ಜಲಸಂಪನ್ಮೂಲ ಸಚಿವ ಡಿ.ಕೆ. ಶಿವಕುಮಾರ್ ಅವರು ವಿಧಾನಸಭೆಯಲ್ಲಿ ಸೋಮವಾರ ಮಂಡಿಸಿದರು.

ನಿಯಮ ಉಲ್ಲಂಘಿಸಿದರೆ ಎರಡು ವರ್ಷದವರೆಗೆ ವಿಸ್ತರಿಸಬಹುದಾದ ಜೈಲು ಶಿಕ್ಷೆ, ₹50 ಸಾವಿರದಿಂದ ₹2 ಲಕ್ಷವರೆಗೆ ದಂಡ ಅಥವಾ ಎರಡನ್ನೂ ವಿಧಿಸುವ ಅಂಶ ಮಸೂದೆಯಲ್ಲಿದೆ.

ನೀರಾವರಿ ಯೋಜನೆಯ ನಾಲೆ, ಕಾಲುವೆಗಳಲ್ಲಿ ಅಕ್ರಮವಾಗಿ ನೀರು ಕಳವು ನಡೆಯುವುದರಿಂದ ನಾಲೆಗಳ ಕೊನೆಯ ಭಾಗಗಳಿಗೆ ನೀರು ತಲುಪುವುದಿಲ್ಲ ಎಂದು ರೈತರು ಅಳಲು ತೋಡಿಕೊಂಡಿದ್ದರು. ಈ ಕಾರಣಕ್ಕೆ ಕಾಯ್ದೆ ತಿದ್ದುಪಡಿಗೆ ಸರ್ಕಾರ ಮಸೂದೆ ಮಂಡಿಸಿದೆ.

ನೀರಾವರಿ ಕಾಲುವೆಯ ಮಧ್ಯಭಾಗದಿಂದ 500 ಮೀಟರ್ ಒಳಗೆ ಅಂತರ್ಜಲ ಬಳಸಲು ಅನುಮತಿ ಪಡೆಯುವುದನ್ನು ಕಡ್ಡಾಯಗೊಳಿಸಲಾಗಿದೆ. ನಾಲೆಯ ಮಧ್ಯಭಾಗದಿಂದ 500 ಮೀಟರ್‌ವರೆಗೆ ನಾಲೆಯ ಎರಡೂ ಕಡೆ ಬಾವಿ ಕೊರೆಯಲು, ಕೃತಕ ಕೊಳ ನಿರ್ಮಿಸಲು, ನೀರಿನ ಸಂಗ್ರಹ ವ್ಯವಸ್ಥೆ ರಚಿಸಲು ವಲಯ ಮುಖ್ಯ ಎಂಜಿನಿಯರ್ ಸೂಚಿಸಿದಂತೆ ಅರ್ಜಿ ಸಲ್ಲಿಸಬೇಕು. ಅನುಮತಿ ನೀಡಿದರಷ್ಟೇ ಮುಂದುವರಿಯಬೇಕು. ಅಂತರ್ಜಲ ಬಳಸಲು ಅನುಮತಿ ಪಡೆಯುವುದರಿಂದ ಗಂಗಾ ಕಲ್ಯಾಣ ಯೋಜನೆಯ ಫಲಾನುಭವಿಗಳಿಗೆ ವಿನಾಯಿತಿ ನೀಡಿದ್ದರೂ ಆರು ತಿಂಗಳ ಒಳಗೆ ನೀರಾವರಿ ಅಧಿಕಾರಿಯಿಂದ ಕೊಳವೆಬಾವಿ ನೋಂದಣಿ ಮಾಡಿಕೊಳ್ಳಬೇಕು. ಕಾಲುವೆಯ ಮಧ್ಯಭಾಗದಿಂದ 500 ಮೀಟರ್‌ನೊಳಗೆ ಈಗಾಗಲೇ ಅಸ್ತಿತ್ವದಲ್ಲಿರುವ ಅಂತರ್ಜಲ ವ್ಯವಸ್ಥೆ ಬಗ್ಗೆ ಕಾಯ್ದೆ ಜಾರಿಯಾದ ದಿನದಿಂದ ಆರು ತಿಂಗಳ ಒಳಗೆ ನೋಂದಣಿ ಮಂಜೂರಾತಿಗೆ ಅರ್ಜಿ ಸಲ್ಲಿಸಬೇಕು ಎಂದೂ ಮಸೂದೆಯಲ್ಲಿ ವಿವರಿಸಲಾಗಿದೆ.

ಅಪರಾಧಗಳ ನಿಯಂತ್ರಣಕ್ಕೆ ನೀರಾವರಿ ಅಧಿಕಾರಿಯು ಸೂಕ್ತವೆನಿಸಿದ ಪೊಲೀಸ್, ರಾಜ್ಯ ಕೈಗಾರಿಕಾ ಭದ್ರತಾ ದಳ ಅಥವಾ ಯಾವುದೇ ಏಜೆನ್ಸಿ ಅಥವಾ ಕಾರ್ಯಪಡೆಯ ನೆರವು ಪಡೆಯಬಹುದು. ಮೇಲ್ಮನವಿ ಅರ್ಜಿಗಳ ತ್ವರಿತ ವಿಲೇವಾರಿಗೆ ಆರು ತಿಂಗಳ ಕಾಲಾವಧಿ ನಿಗದಿಪಡಿಸುವ ಅಂಶವೂ ಮಸೂದೆಯಲ್ಲಿದೆ.

'ತೆರಿಗೆ ವ್ಯಾಪ್ತಿಗೆ ನಗರ ಪ್ರಾಧಿಕಾರಗಳ ಆಸ್ತಿ'

ನಗರ ಸ್ಥಳೀಯ ಪ್ರಾಧಿಕಾರಗಳ ಅಡಿಯಲ್ಲಿರುವ ಎಲ್ಲ ಆಸ್ತಿಗಳನ್ನು ತೆರಿಗೆ ವ್ಯಾಪ್ತಿಯಲ್ಲಿ ತರುವ ಉದ್ದೇಶದಿಂದ 'ಕರ್ನಾಟಕ ಮುನಿಸಿಪಾಲಿಟಿಗಳ ಮತ್ತು ಕೆಲವು ಇತರ ಕಾನೂನು (ತಿದ್ದುಪಡಿ) ಮಸೂದೆ- 2024'ನ್ನು ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ ಅವರು ವಿಧಾನಸಭೆಯಲ್ಲಿ ಮಂಡಿಸಿದರು.

ಸರ್ಕಾರಿ ಭೂಮಿಯ ಹೊರತಾಗಿ ಅನಧಿಕೃತ ವಸತಿ ಪ್ರದೇಶಗಳಲ್ಲಿನ ಆವರಣಗಳು, ಕಟ್ಟಡಗಳಿಗೆ ಹಾಗೂ ಅಧಿಕೃತ ವಸತಿ ಪ್ರದೇಶಗಳಲ್ಲಿನ ಅನಧಿಕೃತ ಕಟ್ಟಡಗಳಿಗೆ ಸ್ವತ್ತು ತೆರಿಗೆ ವಸೂಲಿಗೂ ಈ ಮಸೂದೆ ಅವಕಾಶ ಕಲ್ಪಿಸಲಿದೆ. ಅಲ್ಲದೆ, ನಿಯಮ ಉಲ್ಲಂಘಿಸಿ ನಿರ್ಮಿಸಿದ ಕಟ್ಟಡಗಳಿಗೆ, ಕಾಮಗಾರಿ ಮುಕ್ತಾಯ ಪ್ರಮಾಣಪತ್ರ ಪಡೆಯದೇ ವಾಸಕ್ಕೆ ಬಳಸುತ್ತಿದ್ದರೆ ಮೊದಲ ವರ್ಷಕ್ಕೆ ಎರಡು ಪಟ್ಟು ಸ್ವತ್ತು ತೆರಿಗೆಯನ್ನು ವಿಧಿಸಲು ಮತ್ತು ನಂತರದ ವರ್ಷಗಳಲ್ಲಿ ಸ್ವತ್ತು ತೆರಿಗೆ ಮಾತ್ರ ವಿಧಿಸುವ ಅಂಶ ಕೂಡಾ ಮಸೂದೆಯಲ್ಲಿದೆ.

'ಗ್ಯಾರಂಟಿ'ಗೆ ಪರಿಶಿಷ್ಟರ ಹಣ : ಸಭಾತ್ಯಾಗ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಿಶಿಷ್ಟ ಜಾತಿ ಮತ್ತು ಪಂಗಡಕ್ಕೆ ಮೀಸಲಾದ ಹಣವನ್ನು (ಎಸ್‌ಸಿಎಸ್‌ಪಿ, ಟಿಎಸ್‌ಪಿ) ಗ್ಯಾರಂಟಿ ಯೋಜನೆಗೆ ಬಳಕೆ ಮಾಡುತ್ತಿರುವ ಸರ್ಕಾರದ ನಡೆ ಖಂಡಿಸಿ ವಿಧಾನ ಪರಿಷತ್‌ನಲ್ಲಿ ಸೋಮವಾರ ಬಿಜೆಪಿ-ಜೆಡಿಎಸ್ ಸದಸ್ಯರು ಸಭಾತ್ಯಾಗ ಮಾಡಿದರು.

ಬಿಜೆಪಿ ಮತ್ತು ಜೆಡಿಎಸ್ ಸದಸ್ಯರು ಸಭಾತ್ಯಾಗ ಮಾಡಿದ್ದರಿಂದ ಮೇಲ್ಮನೆಯಲ್ಲಿ ಪ್ರತಿಪಕ್ಷಗಳ ಸದಸ್ಯರ ಕುರ್ಚಿಗಳು ಸೋಮವಾರ ಖಾಲಿಯಾಗಿದ್ದವು – ಪ್ರಜಾವಾಣಿ ಚಿತ್ರ

ಬಿಜೆಪಿಯ ಛಲವಾದಿ ನಾರಾಯಣಸ್ವಾಮಿ, ಸಿ.ಟಿ. ರವಿ, ಕೇಶವ ಪ್ರಸಾದ್, ಸುನೀಲ್ ವಲ್ಯಾಪುರೆ, ಡಾ.ಧನಂಜಯ ಸರ್ಜಿ ಮಾತನಾಡಿ, ಕಾಂಗ್ರೆಸ್ ಚುನಾವಣಾ ಪ್ರಣಾಳಿಕೆಯಲ್ಲಿ ನೀಡಿದ್ದ ಭರವಸೆಯಂತೆ ಎಲ್ಲ ವರ್ಗದ ಜನರಿಗೂ ಗ್ಯಾರಂಟಿ ಯೋಜನೆ ಅನುಷ್ಠಾನಕ್ಕೆ ತಂದಿದೆ. ಆದರೆ, ಪರಿಶಿಷ್ಟರಿಗೆ ಮೀಸಲಾದ ಅನುದಾನವನ್ನು ಯೋಜನೆಗೆ ಬಳಕೆ ಮಾಡುತ್ತಿರುವುದು ಸರಿಯಲ್ಲ. ಅಷ್ಟು ಹಣವನ್ನು ಪರಿಶಿಷ್ಟರಿಗೆ ಬಳಸಿದರೆ ಸಮುದಾಯದ ಶಿಕ್ಷಣ, ಭೂಮಿ ಖರೀದಿ, ಕೊಳವೆ ಬಾವಿ ಸೇರಿದಂತೆ ಇತರೆ ಸೌಲಭ್ಯಗಳಲ್ಲಿ ಫಲಾನುಭವಿಗಳ ಸಂಖ್ಯೆ ಹೆಚ್ಚಿಸಬಹುದು ಎಂದು ಪ್ರತಿಪಾದಿಸಿದರು. ಎಸ್‌ಸಿಎಸ್‌ಪಿ, ಟಿಎಸ್‌ಪಿ ಹಣ ದುರ್ಬಳಕೆ ಕುರಿತು 'ಪ್ರಜಾವಾಣಿ'ಯಲ್ಲಿ ಈಚೆಗೆ ಪ್ರಕಟವಾಗಿದ್ದ ವರದಿ ಪ್ರದರ್ಶಿಸಿದರು.

ವಿರೋಧ ಪಕ್ಷದ ಸದಸ್ಯರ ಪ್ರಶ್ನೆಗಳಿಗೆ ಉತ್ತರ ನೀಡಿದ ಸಮಾಜಕಲ್ಯಾಣ ಸಚಿವ ಎಚ್.ಸಿ. ಮಹದೇವಪ್ಪ, 'ನಿಯಮದ ಪ್ರಕಾರವೇ ಹಣ ಬಳಕೆ ಮಾಡಲಾಗಿದೆ. ಕೇಂದ್ರದ ನೀತಿ ಆಯೋಗವೂ ಪರಿಶಿಷ್ಟರ ಹಣವನ್ನು ಅವರು ಫಲಾನುಭವಿಗಳಾಗಿರುವ ಯಾವುದೇ ಯೋಜನೆಗೆ ಬಳಕೆ ಮಾಡಬಹುದು ಎಂದು ಹೇಳಿದೆ. ಹಿಂದಿನ ಸರ್ಕಾರ ಬೇರೆ ಉದ್ದೇಶಗಳಿಗೂ ಪರಿಶಿಷ್ಟರಿಗೆ ಮೀಸಲಾದ ಹಣ ಖರ್ಚು ಮಾಡಿತ್ತು. ಅದಕ್ಕಾಗಿ ನಿಯಮಕ್ಕೆ ತಿದ್ದುಪಡಿಯನ್ನೂ ತಂದಿದ್ದೇವೆ. ದುರ್ಬಳಕೆ ತಡೆದಿದ್ದೇವೆ' ಎಂದರು.

ಮಹದೇವಪ್ಪ ಅವರ ಮಾತು ಮುಗಿಯುವ ಮುನ್ನವೇ ಬಿಜೆಪಿ–ಜೆಡಿಎಸ್ ಸದಸ್ಯರು ಸರ್ಕಾರದ ವಿರುದ್ಧ ಧಿಕ್ಕಾರ ಕೂಗುತ್ತಾ ಸಭಾತ್ಯಾಗ ಮಾಡಿದರು.

ಮಳೆ ಹಾನಿ: ವಿಧಾನಸಭೆಯಲ್ಲಿ ಪ್ರತಿಧ್ವನಿ



ಬಿ.ವೈ. ವಿಜಯೇಂದ್ರ

ಬೆಂಗಳೂರು: ರಾಜ್ಯದಲ್ಲಿ ಭಾರಿ ಮಳೆಯಿಂದ ಉಂಟಾಗಿರುವ ಮನೆ ಕುಸಿತ, ಗುಡ್ಡ ಕುಸಿತ, ರಸ್ತೆ ಹಾನಿ ವಿಚಾರಗಳು ವಿಧಾನಸಭೆಯಲ್ಲಿ ಸೋಮವಾರ ಪ್ರತಿಧ್ವನಿಸಿದವು.

ಶೂನ್ಯ ವೇಳೆಯಲ್ಲಿ ವಿಷಯ ಪ್ರಸ್ತಾಪಿಸಿದ ಬಿಜೆಪಿಯ ಬಿ.ವೈ. ವಿಜಯೇಂದ್ರ, 'ಈ ಹಿಂದಿನ ಸರ್ಕಾರದ ಅವಧಿಯಲ್ಲಿ ಮನೆ ಕಳೆದುಕೊಂಡವರಿಗೆ ₹5 ಲಕ್ಷ, ಭಾಗಶಃ ಹಾನಿಗೆ ₹1 ಲಕ್ಷ ಪರಿಹಾರ ನೀಡಲಾಗುತ್ತಿತ್ತು. ಗುಡ್ಡ ಕುಸಿದಿರುವ ಶಿರೂರು ಗ್ರಾಮದಲ್ಲಿ ಹೆಚ್ಚು ಪರಿಹಾರ ನೀಡಬೇಕು' ಎಂದು ಆಗ್ರಹಿಸಿದರು.

ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಸುರೇಶ್‌ಬಾಬು, 'ಶಿರೂರಿನಲ್ಲಿ ಗುಡ್ಡ ಕುಸಿದು ಮಣ್ಣಿನಡಿ ಸಿಲುಕಿರುವ ಟ್ರಕ್ ಅನ್ನು ತೆಗೆಯಲು ಇನ್ನೂ ಸಾಧ್ಯ ಆಗಿಲ್ಲ. ಕೇಂದ್ರ ಸರ್ಕಾರದ ನೆರವು ಬಳಸಿಕೊಳ್ಳಿ' ಎಂದು ಸರ್ಕಾರಕ್ಕೆ ಸಲಹೆ ನೀಡಿದರು.

'ಸಕಲೇಶಪುರದಲ್ಲಿ 50 ಮನೆಗಳಿಗೆ ಹಾನಿಯಾಗಿದೆ. ಕಾಫಿ ತೋಟಗಳಿಗೂ ಹೆಚ್ಚಿನ ಪ್ರಮಾಣದಲ್ಲಿ ಹಾನಿಯಾಗಿದೆ. ಸರ್ಕಾರ ಸೂಕ್ತ ಪರಿಹಾರ ನೀಡಬೇಕು' ಎಂದು ಬಿಜೆಪಿಯ ಸಿಮೆಂಟ್ ಮಂಜು ಒತ್ತಾಯಿಸಿದರು. ಬಿಜೆಪಿಯ ಸಿದ್ದು ಸವದಿ ಸೇರಿದಂತೆ ಇತರ ಸದಸ್ಯರೂ ದನಿಗೂಡಿಸಿದರು.

ಆಗ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, 'ಈ ಬಗ್ಗೆ ವಿಸ್ತೃತ ವರದಿ ಪಡೆದು ಸದನದಲ್ಲಿ ಉತ್ತರ ನೀಡಲಾಗುವುದು' ಎಂದರು.

ಮಾಲ್ ಪ್ರವೇಶಕ್ಕೆ ಮಾರ್ಗಸೂಚಿ ಶೀಘ್ರ: ಡಿಕೆಶಿ

ಒಂದನೇ ಪುಟದಿಂದ...

ಡಿ.ಕೆ. ಶಿವಕುಮಾರ್

'ಮಾಲ್‌ಗೆ ಪಂಚೆ ಧರಿಸಿ ಬಂದ ರೈತನನ್ನು ತಡೆದ ವಿಚಾರವಾಗಿ ವಿಧಾನಸಭೆಯಲ್ಲಿ ಶುಕ್ರವಾರ (ಜುಲೈ 19) ಚರ್ಚೆ ನಡೆದಿತ್ತು. ಇಡೀ ರಾಜ್ಯದಲ್ಲಿ ಯಾವುದೇ ಕಾರಣಕ್ಕೂ ಈ ರೀತಿಯ ಘಟನೆಗಳು ಮರುಕಳಿಸದಂತೆ ಸರ್ಕಾರದಿಂದಲೇ ನಿಯಮ ರೂಪಿಸಲಾಗುವುದು' ಎಂದರು.

'ಜಿ.ಟಿ. ಮಾಲ್‌ಗೆ ಪಂಚೆ ಉಟ್ಟುಕೊಂಡು ಬಂದ ರೈತನಿಗೆ ಪ್ರವೇಶ ನೀಡದ ಕಾರಣ ಮಾಲ್ ಮಾಲೀಕರಿಗೆ ಕಾರಣ ಕೇಳಿ ನೋಟಿಸ್ ನೀಡಲಾಗಿತ್ತು. ಅಲ್ಲದೆ, ತೆರಿಗೆ ಬಾಕಿ ಉಳಿಸಿಕೊಂಡಿದ್ದ ಕಾರಣಕ್ಕೆ ಬೀಗ ಹಾಕಲಾಗಿತ್ತು. ಮಾಲ್‌ನವರು ತಪ್ಪೊಪ್ಪಿಗೆ ಪತ್ರ ಬರೆದುಕೊಟ್ಟಿದ್ದಾರೆ. ತೆರಿಗೆ ಬಾಕಿ ಪಾವತಿಗೆ ಚೆಕ್ ಪಡೆದು ಮಾಲ್ ತೆರೆಯಲು ಅನುಮತಿ ನೀಡಲಾಗಿದೆ' ಎಂದರು.

'ಪಂಚೆ ಹಾಕಿದ್ದರೆ, ಶೂ ಹಾಕದೆ ಇದ್ದರೆ ಕೆಲವು ಕ್ಲಬ್‌ಗಳಲ್ಲಿ ಒಳಗೆ ಬಿಡುವುದಿಲ್ಲ. ಆ ಬಗ್ಗೆಯೂ ಗಮನಹರಿಸಬೇಕು' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಸುರೇಶ್ ಬಾಬು ಮನವಿ ಮಾಡಿದರು.

ಅದಕ್ಕೆ, ಕಾನೂನು ಸಚಿವ ಎಚ್.ಕೆ. ಪಾಟೀಲ, 'ಕ್ಲಬ್ ವಿಚಾರವನ್ನು ಮಾಲ್‌ಗಳ ಜೊತೆ ಸೇರಿಸುವುದು ಬೇಡ' ಎಂದರು.

ವಿರೋಧ ಪಕ್ಷದ ನಾಯಕ ಆರ್. ಅಶೋಕ, 'ಮಾಲ್‌ಗಳಿಗೆ ಪರವಾನಗಿ ಕೊಡುವಾಗಲೇ ಗ್ರಾಮೀಣ ಭಾಗದ ಉಡುಪು ಧರಿಸಿದವರಿಗೆ ಅವಕಾಶ ನಿರಾಕರಿಸಬಾರದೆಂಬ ಷರತ್ತು ವಿಧಿಸಬೇಕು. ಸರ್ಕಾರ ಜಮೀನು ನೀಡಿರುವ ಕ್ಲಬ್‌ಗಳಿಗೂ ಮಾರ್ಗಸೂಚಿ ಅನ್ವಯವಾಗಬೇಕು. ಈ ಸಂಬಂಧ ಎನ್.ಎ. ಹ್ಯಾರಿಸ್ ನೇತೃತ್ವದ ಸದನ ಸಮಿತಿ ನೀಡಿರುವ ವರದಿಯ ಶಿಫಾರಸುಗಳನ್ನು ಜಾರಿಗೆ ತರಬೇಕು' ಎಂದು ಆಗ್ರಹಿಸಿದರು. ಅಶೋಕ ಮಾತಿಗೆ ಕಾಂಗ್ರೆಸ್‌ನ ಬಸವರಾಜ ರಾಯರಡ್ಡಿ ಕೂಡಾ ದನಿಗೂಡಿಸಿದರು.

ಇ.ಡಿ ವಿರುದ್ಧವೇ ಎಫ್‌ಐಆರ್

ಒಂದನೇ ಪುಟದಿಂದ...

ಪ್ರಕರಣದ ತನಿಖೆಯು ಚುರುಕುಗೊಂಡ ಬೆನ್ನಲ್ಲೇ ಇ.ಡಿಯ ಇಬ್ಬರು ಅಧಿಕಾರಿಗಳ ವಿರುದ್ಧ ಎಫ್‌ಐಆರ್ ದಾಖಲಾಗಿದೆ. ಶೇಷಾದ್ರಿಪುರ ಪೊಲೀಸ್ ಠಾಣೆಯಲ್ಲಿ ದಾಖಲಾಗಿದ್ದ ಎನ್‌ಸಿಆರ್ ಪ್ರಕರಣವನ್ನು ವಿಲ್ಸನ್‌ಗಾರ್ಡನ್ ಪೊಲೀಸ್ ಠಾಣೆಗೆ ವರ್ಗಾವಣೆ ಮಾಡಲಾಗಿದೆ. ಅಲ್ಲಿ ಎಫ್‌ಐಆರ್ ದಾಖಲಾಗಿದೆ. ಇ.ಡಿ ಅಧಿಕಾರಿಗಳ ವಿರುದ್ಧ ದೂರು ನೀಡಿರುವ ಕಲ್ಲೇಶ್, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ನಿರ್ದೇಶಕರಾಗಿದ್ದ ಅವಧಿಯಲ್ಲಿ ಅನುದಾನ ದುರ್ಬಳಕೆ ಮಾಡಿಕೊಂಡ ಆರೋಪದಡಿ ಸದ್ಯ ಅಮಾನತಿನಲ್ಲಿದ್ದಾರೆ. 'ಇದು ಇ.ಡಿ ಅಧಿಕಾರಿಗಳ ವಿರುದ್ಧ ರಾಜ್ಯ ಪೊಲೀಸರು ದಾಖಲಿಸಿರುವ ಮೊದಲ ಎಫ್‌ಐಆರ್' ಎಂದು ಮೂಲಗಳು ಹೇಳಿವೆ.

ಷರತ್ತು ಬದ್ಧ ಆದೇಶ ಇಲ್ಲ: ಸುಧಾಕರ್

ಬೆಂಗಳೂರು: ಸಹಾಯಕ ಪ್ರಾಧ್ಯಾಪಕರ ನೇಮಕಾತಿಗೆ ಸಂಬಂಧಿಸಿದ ಪ್ರಕರಣ ಹೈಕೋರ್ಟ್‌ನಲ್ಲಿದ್ದು, ನ್ಯಾಯಾಲಯ ತೀರ್ಪು ನೀಡಿದ ನಂತರವಷ್ಟೇ ನೇಮಕಾತಿ ಆದೇಶಗಳನ್ನು ನೀಡಲಾಗುತ್ತದೆ ಎಂದು ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ. ಸುಧಾಕರ್ ತಿಳಿಸಿದರು. ವಿಧಾನ ಪರಿಷತ್‌ನಲ್ಲಿ ಬಿಜೆಪಿ ಚಿದಾನಂದ ಗೌಡ ಅವರ ಪ್ರಶ್ನೆಗೆ ಉತ್ತರಿಸಿದ ಅವರು, '2023ರ ಮಾರ್ಚ್‌ನಲ್ಲಿ 1,208 ಅಭ್ಯರ್ಥಿಗಳ ಅಂತಿಮ ಆಯ್ಕೆ ಪಟ್ಟಿಯನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಪ್ರಕಟಿಸಿದೆ. ಈ ಪಟ್ಟಿಯಿಂದ ಬಾಧಿತರಾದ ಅಭ್ಯರ್ಥಿಗಳು ಕೆಎಟಿ ಮೊರೆ ಹೋಗಿದ್ದರು. ಅಲ್ಲಿ ಅರ್ಜಿ ವಜಾಗೊಂಡಿತ್ತು. ಅದನ್ನು ಪ್ರಶ್ನಿಸಿ ಹೈಕೋರ್ಟ್ ಮೊರೆ ಹೋಗಿದ್ದಾರೆ. ಅಲ್ಲಿನ ಆದೇಶದ ಮೇರೆಗೆ ನಾವು ಮುಂದುವರಿಯಬೇಕಾಗುತ್ತದೆ. ಷರತ್ತು ಬದ್ಧ ನೇಮಕಾತಿ ಆದೇಶ ನೀಡಲು ಸಾಧ್ಯವಿಲ್ಲ' ಎಂದರು.

ಉಪಮುಖ್ಯಮಂತ್ರಿ ಕ್ಷೇತ್ರದಲ್ಲಿ ದಲಿತ ಯುವಕನ ಕೈ ಕಡಿದರು

ಒಂದನೇ ಪುಟದಿಂದ...

ಒಕ್ಕಲಿಗ ಸಮುದಾಯದ ಹರ್ಷ ಅಲಿಯಾಸ್ ಕೈಮ, ಕರುಣೇಶ, ರಾಹುಲ್, ಶಿವ, ಶಶಾಂಕ, ಸುಬ್ಬ, ದರ್ಶನ್ ಹಾಗೂ ಇತರರ ವಿರುದ್ಧ ಎಸ್‌ಸಿ/ಎಸ್‌ಟಿ ಮೇಲಿನ ದೌರ್ಜನ್ಯ ತಡೆ ಕಾಯ್ದೆ ಹಾಗೂ ಕೊಲೆ ಯತ್ನ ಆರೋಪದಡಿ ಕನಕಪುರ ಟೌನ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಆದರೆ, ಘಟನೆಗೆ ಸಂಬಂಧಿಸಿದಂತೆ ಇದುವರೆಗೆ ಯಾರನ್ನೂ ಬಂಧಿಸಿಲ್ಲ. ಕೆಲವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಘಟನೆ ನಡೆದ ಮಾಳಗಾಳು, ವಿಧಾನ ಪರಿಷತ್ ಸದಸ್ಯ ಎಸ್. ರವಿ ಅವರ ಸ್ವಗ್ರಾಮವಾಗಿದೆ. ಗ್ರಾಮದಲ್ಲಿ ಆತಂಕ ಮನೆ ಮಾಡಿದ್ದು ಮುನ್ನೆಚ್ಚರಿಕೆ ಕ್ರಮವಾಗಿ ಬಿಗಿ ಪೊಲೀಸ್ ಬಂದೋಬಸ್ತ್ ಮಾಡಲಾಗಿದೆ. ಪೊಲೀಸ್ ವರಿಷ್ಠಾಧಿಕಾರಿ ಕಾರ್ತಿಕ್ ರೆಡ್ಡಿ ಗ್ರಾಮಕ್ಕೆ ಭೇಟಿ ನೀಡಿ ಮಾಹಿತಿ ಪಡೆದರು.

ಮಾರಕಾಸ್ತ್ರಗಳಿಂದ ಹಲ್ಲೆ: ದಲಿತ ಸಮುದಾಯದ ಯುವಕರಿಬ್ಬರು ರಸ್ತೆಯಲ್ಲಿ ಮಾತನಾಡುತ್ತಾ ನಿಂತಿದ್ದರು. ಅದೇ ರಸ್ತೆಯಲ್ಲಿ ಹೊರಟಿದ್ದ ಒಕ್ಕಲಿಗ ಸಮುದಾಯದ ಯುವಕರ ಗುಂಪು ರಸ್ತೆಯಲ್ಲಿ ಏಕೆ ನಿಂತಿರುವಿರಿ ಎಂದು ಜಗಳ ತೆಗೆದಿದೆ.

ಭಾನುವಾರ ರಾತ್ರಿ ದಲಿತರ ಕಾಲೊನಿಗೆ (ಎನ್.ಕೆ. ಕಾಲೊನಿ) ನುಗ್ಗಿದ ಒಕ್ಕಲಿಗ ಸಮುದಾಯದ ಯುವಕರ ಗುಂಪು ಮಾರಕಾಸ್ತ್ರಗಳಿಂದ ಹಲ್ಲೆ ನಡೆಸಿದೆ.

ಪ್ರಮುಖ ಆರೋಪಿ ಹರ್ಷ ರೌಡಿಶೀಟರ್ ಆಗಿದ್ದು, ಲೋಕಸಭಾ ಚುನಾವಣೆ ಸಂದರ್ಭದಲ್ಲಿ ಜಿಲ್ಲೆಯಿಂದ ಆತನನ್ನು ತುಮಕೂರಿಗೆ ಗಡಿಪಾರು ಮಾಡಲಾಗಿತ್ತು. ಆದರೂ, ಆಗಾಗ ಊರಿಗೆ ಬಂದು ಹೋಗುತ್ತಿದ್ದ ಆತನೇ ತನ್ನ ಸಹಚರರೊಂದಿಗೆ ಈ ಕೃತ್ಯ ಎಸಗಿದ್ದಾನೆ ಎಂದು ಲಕ್ಷ್ಮಣ್ ಎಂಬವರು ದೂರಿನಲ್ಲಿ ತಿಳಿಸಿದ್ದಾರೆ.

ಲಾಂಗ್‌ನಿಂದ ನಡೆಸಿದ ಹಲ್ಲೆಯಿಂದಾಗಿ ಮಾಳಗಾಳು ಗ್ರಾಮದ ಎನ್.ಕೆ. ಕಾಲೊನಿಯ ಅನೀಶ್ ಅವರ ಎಡಗೈ ತುಂಡಾಗಿದೆ

ದಲಿತರ ಕಾಲೊನಿಯಲ್ಲಿ ಆತಂಕ: ಕಾಲೊನಿ ನಿವಾಸಿಗಳು ಹಾಗೂ ಪರಿಶಿಷ್ಟ ಸಮುದಾಯದ ಕುಟುಂಬಗಳು ಈ ಹಲ್ಲೆಯಿಂದಾಗಿ ಆತಂಕದಲ್ಲಿವೆ. ನಗರಸಭೆಗೆ ಭೇಟಿ ನೀಡಿದ್ದ ಜಿಲ್ಲಾಧಿಕಾರಿ ಯಶವಂತ್ ವಿ. ಗುರುಕರ್ ಬಳಿ ತೆರಳಿದ ದಲಿತ ಮುಖಂಡರು 'ದಲಿತರಿಗೆ ರಕ್ಷಣೆ ಕೊಡಿ' ಎಂದು ಮನವಿ ಮಾಡಿದರು.

ಕೂಡಲೇ ಆರೋಪಿಗಳನ್ನು ಬಂಧಿಸಬೇಕು ಎಂದು ಒತ್ತಾಯಿಸಿ ನಗರಸಭೆ ಎದುರು ಕೆಲ ಹೊತ್ತು ಪ್ರತಿಭಟನೆ ನಡೆಸಿದರು. ಸ್ಥಳದಲ್ಲೇ ಪೊಲೀಸರಿಗೆ ಕರೆ ಮಾಡಿದ ಜಿಲ್ಲಾಧಿಕಾರಿ ಕೂಡಲೇ ತಪ್ಪಿತಸ್ಥರನ್ನು ಬಂಧಿಸಿ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವಂತೆ ಪೊಲೀಸರಿಗೆ ಸೂಚಿಸಿದರು.

ವಾರದ ಹಿಂದೆ (ಜುಲೈ 17) ತಾಲ್ಲೂಕಿನ ತಾಮಸಂದ್ರ ವೃತ್ತದಲ್ಲಿ ಮನೆ ಮುಂದೆ ಶಾಮಿಯಾನ ಹಾಕಿದ್ದ ವಿಷಯಕ್ಕೆ ಸಂಬಂಧಿಸಿದಂತೆ ಭೋವಿ ಸಮುದಾಯದವರ ಮನೆಗಳಿಗೆ ನುಗ್ಗಿದ್ದ ತಿಗಳ ಸಮುದಾಯದವರು ಸಿಕ್ಕ ಸಿಕ್ಕವರ ಮೇಲೆ ಹಲ್ಲೆ ನಡೆಸಿದ್ದರು.

ಮಾಳಗಾಳು ಎನ್.ಕೆ. ಕಾಲೊನಿಯಲ್ಲಿ ಪೊಲೀಸ್ ಬಂದೋಬಸ್ತ್ ಮಾಡುವ ಜೊತೆಗೆ ದೌರ್ಜನ್ಯ ತಡೆಗೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವಂತೆ ಸೂಚಿಸಿದ್ದೇನೆ
ಲಾಬೂ ರಾಮ್, ಐಜಿಪಿ, ಕೇಂದ್ರ ವಲಯ

ಕನಕಪುರದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಸಂಪೂರ್ಣ ಹದಗೆಟ್ಟಿದೆ. ಪೊಲೀಸರು ಕೈ ಕಟ್ಟಿ ಕುಳಿತಿದ್ದಾರೆ. ಇದೇ ಕಾರಣಕ್ಕೆ ಜಾತಿ ದೌರ್ಜನ್ಯ ಪ್ರಕರಣ ಹೆಚ್ಚಾಗಿವೆ
ಮಲ್ಲಿಕಾರ್ಜುನ್, ಅಧ್ಯಕ್ಷ, ಧಮ್ಮ ದೀವಿಗೆ ಟ್ರಸ್ಟ್, ಕನಕಪುರ

ನಾಲ್ಕು ತಂಡ ರಚಿಸಲಾಗಿದೆ. ಜಿಲ್ಲೆಯಿಂದ ತುಮಕೂರಿಗೆ ಗಡಿಪಾರಾಗಿದ್ದ ರೌಡಿಯೊಬ್ಬ ಕೃತ್ಯದಲ್ಲಿ ಭಾಗಿಯಾಗಿರುವ ಕುರಿತು ಮಾಹಿತಿ ಕಲೆ ಹಾಕಲಾಗುತ್ತಿದೆ
ಕಾರ್ತಿಕ್ ರೆಡ್ಡಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ

ವಿಧಾನಸಭೆಯಲ್ಲಿ ಕಂದಾಯ ಸಚಿವ ಕೃಷ್ಣ ಬೈರೇಗೌಡ ಮಾಹಿತಿ

'625 ಪ್ರಸ್ತಾವಗಳಲ್ಲಿ 408ಕ್ಕೆ ಅನುಮೋದನೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸರ್ಕಾರದಿಂದ ಮಂಜೂರಾಗಿದ್ದ ಜಮೀನುಗಳನ್ನು ಪರಭಾರೆ ಮಾಡಲು ಅನುಮತಿ ಕೋರಿ ಪರಿಶಿಷ್ಟ ಜಾತಿ ಮತ್ತು ಪಂಗಡದವರು ಮೂರು ವರ್ಷಗಳಿಂದ ಈವರೆಗೆ ಸಲ್ಲಿಸಿರುವ 625 ಪ್ರಸ್ತಾವಗಳಲ್ಲಿ 408ಕ್ಕೆ ಅನುಮೋದನೆ ನೀಡಲಾಗಿದೆ' ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಹೇಳಿದರು.

ವಿಧಾನಸಭೆಯಲ್ಲಿ ಕಾಂಗ್ರೆಸ್‌ನ ಎಸ್.ಎನ್. ನಾರಾಯಣ ಸ್ವಾಮಿ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, '217 ಪ್ರಸ್ತಾವಗಳನ್ನು ವಿವರಣೆ ಕೋರಿ ಜಿಲ್ಲಾಧಿಕಾರಿಗಳಿಗೆ ಹಿಂದಿರುಗಿಸಲಾಗಿದೆ. ವಿವಿಧ ಟ್ರಸ್ಟ್, ಶಾಲೆಗಳಿಗೆ ಹಾಗೂ ಇತರೆ ಉದ್ದೇಶಕ್ಕಾಗಿ ಜಮೀನು ಮಂಜೂರಾತಿ ಕೋರಿ ಸರ್ಕಾರಕ್ಕೆ 131 ಪ್ರಸ್ತಾವಗಳು ಬಂದಿವೆ. ಈ ಪೈಕಿ, 62 ಪ್ರಸ್ತಾವಗಳಿಗೆ ಮಂಜೂರಾತಿ ನೀಡಲಾಗಿದೆ. 25 ಪ್ರಸ್ತಾವಗಳನ್ನು ತಿರಸ್ಕರಿಸಲಾಗಿದೆ. ವಿವರಣೆ ಕೋರಿ 44 ಪ್ರಸ್ತಾವಗಳನ್ನು ಜಿಲ್ಲಾಧಿಕಾರಿಗಳಿಗೆ ವಾಪಸು ಕಳುಹಿಸಲಾಗಿದೆ' ಎಂದರು.

ಕೃಷ್ಣ ಬೈರೇಗೌಡ

ಪರಭಾರೆಗೆ ಅನುಮತಿ ಕೋರಿ ಸಲ್ಲಿಕೆಯಾದ ಪ್ರಸ್ತಾವಗಳನ್ನು ವಾಪಸು ಮಾಡುತ್ತಿರುವುದಕ್ಕೆ ಕಂದಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿ ಮೇಲೆ ಗರಂ ಆದ ನಾರಾಯಣಸ್ವಾಮಿ, ಜಿಲ್ಲಾಧಿಕಾರಿಯಿಂದ ಶಿಫಾರಸು ಆದ ಪ್ರಸ್ತಾವಗಳನ್ನು ತಿರಸ್ಕರಿಸುವುದು ಏಕೆ? ಜಿಲ್ಲಾಧಿಕಾರಿ, ಪ್ರಾದೇಶಿಕ ವಲಯ ಅಧಿಕಾರಿಯಿಂದ ಶಿಫಾರಸು ಮಾಡಿರುತ್ತಾರೆ. ಅವರೂ ಐಎಎಸ್ ಅಧಿಕಾರಿಗಳಲ್ಲವೇ? ಪ್ರಸ್ತಾವಗಳು ಅರ್ಹವಾಗಿ ಇಲ್ಲದೇ ಇದ್ದರೆ ಕೆಳಹಂತದಲ್ಲೇ ವಜಾ ಮಾಡಲಿ. ಸಚಿವರನ್ನು ಅಧಿಕಾರಿಗಳು ದಿಕ್ಕು ತಪ್ಪಿಸುತ್ತಿದ್ದಾರೆ' ಎಂದರು.

'ಪರಭಾರೆಗೆ ಅನುಮತಿ ಪಡೆಯಲು, ಮೂಲ ಮಂಜೂರುದಾರರ ಪರ ಇನ್ಯಾರೊ ಅನುಮತಿ ಕೋರುತ್ತಾರೆ. ನಿಯಮಬದ್ಧವಾಗಿ ಪರಭಾರೆ ಆಗಬೇಕೆಂಬುದಷ್ಟೇ ಉದ್ದೇಶ. ಕೆಲವು ಕಡತಗಳಲ್ಲಿ ಮೂಲ ಮಂಜೂರಾತಿ ದಾಖಲಾತಿ ಇರುವುದಿಲ್ಲ. ಕೆಲವು ಪ್ರಸ್ತಾವಗಳಿಗೆ ಸಂಬಂಧಿಸಿದಂತೆ ಕೋರ್ಟ್ ಪ್ರಕರಣಗಳು ಬಾಕಿ ಇರುತ್ತವೆ. ವಂಶವೃಕ್ಷ ಇಲ್ಲದ ಪ್ರಸ್ತಾವಗಳೂ ಬರುತ್ತವೆ. ಈ ರೀತಿಯ ಕಡತಗಳನ್ನು ಹಿಂದಿರುಗಿಸಲಾಗುತ್ತದೆ' ಎಂದು ಸಚಿವರು ಸ್ಪಷ್ಟನೆ ನೀಡಿದರು.

'ಸ್ಮಶಾನಕ್ಕೂ ಜಾಗ ಇಲ್ಲದೆ ಖರೀದಿ ಸ್ಥಿತಿ': 'ಸರ್ಕಾರದ ಜಾಗಗಳನ್ನೆಲ್ಲ ಮಂಜೂರು ಮಾಡಿದ ಪರಿಣಾಮ, ಸ್ಮಶಾನಕ್ಕೂ ಜಾಗ ಇಲ್ಲದೆ ಸರ್ಕಾರವೇ ಭೂಮಿ ಖರೀದಿಸಬೇಕಾದ ಪರಿಸ್ಥಿತಿ ಎದುರಾಗಿದೆ' ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಅಸಮಾಧಾನ ವ್ಯಕ್ತಪಡಿಸಿದರು.

ವಿಧಾನಸಭೆಯಲ್ಲಿ ಬಿಜೆಪಿಯ ಬಿ.ಪಿ. ಹರೀಶ್ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, 'ಕಳೆದ ವರ್ಷ ₹ 50 ಕೋಟಿಯನ್ನು ಸ್ಮಶಾನಕ್ಕೆ ಭೂಮಿ ಖರೀದಿಗಾಗಿ ವೆಚ್ಚ ಮಾಡಲಾಗಿದೆ' ಎಂದರು.

'ಅಂಗನವಾಡಿಗಳಿಗೆ ಜಾಗ ನೀಡುವಂತೆ 12 ಸಾವಿರ ಅರ್ಜಿಗಳು ಬಂದಿವೆ.ಇತ್ತೀಚೆಗೆ ನಡೆದ ಡಿಸಿ, ಸಿಇಒಗಳ ಸಭೆಯಲ್ಲಿ, ಇಷ್ಟು ಅರ್ಜಿಗಳಿದ್ದರೂ ಏಕೆ ಜಾಗ ನೀಡಿಲ್ಲ ಎಂದು ನನ್ನನ್ನು ಮುಖ್ಯಮಂತ್ರಿ ತರಾಟೆಗೆ ತೆಗೆದುಕೊಂಡರು' ಎಂದರು.

ಅನುದಾನ ತಾರತಮ್ಯ ಆರೋಪ; ವಾಗ್ವಾದ

ಬೆಂಗಳೂರು: 'ಲೋಕೋಪಯೋಗಿ ಇಲಾಖೆ ಅಡಿ ಅನುದಾನ ಹಂಚಿಕೆಯಲ್ಲಿ ತಾರತಮ್ಯ ಮಾಡಲಾಗುತ್ತಿದೆ' ಎಂದು ಬಿಜೆಪಿ, ಜೆಡಿಎಸ್ ಸದಸ್ಯರು ಮಾಡಿದ ಆರೋಪ ವಿಧಾನಸಭೆಯಲ್ಲಿ ಮಾತಿನ ಚಕಮಕಿಗೆ ಕಾರಣವಾಯಿತು.

ಬಿಜೆಪಿಯ ಹರೀಶ್ ಪೂಂಜಾ, 'ಹೆಚ್ಚು ಮಳೆಯಿಂದಾಗಿ ರಸ್ತೆ ಹಾಳಾಗುವ ಕರಾವಳಿ ಭಾಗಕ್ಕೂ ವಿಶೇಷ ಪ್ಯಾಕೇಜ್ ನೀಡಬೇಕು' ಎಂದು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಅವರನ್ನು ಒತ್ತಾಯಿಸಿದರು. ಆಗ ಮಧ್ಯಪ್ರವೇಶಿಸಿದ ಬಿಜೆಪಿಯ ಸುರೇಶ್ ಗೌಡ, 'ಒಂದು ಪಕ್ಷದ ಶಾಸಕರಿಗೆ ಹೆಚ್ಚು ಅನುದಾನ ನೀಡಲಾಗುತ್ತಿದೆ. ಬಿಜೆಪಿ-ಜೆಡಿಎಸ್‌ನವರಿಗೆ ತಾರತಮ್ಯವಾಗುತ್ತಿದೆ. ಇದನ್ನು ಸರಿಪಡಿಸದೇ ಇದ್ದರೆ ನಾವು ಧರಣಿ ನಡೆಸಬೇಕಾಗುತ್ತದೆ' ಎಂದರು.

ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿದ ಕಾಂಗ್ರೆಸ್ ಸದಸ್ಯರು, 'ಬಿಜೆಪಿ ಆಡಳಿತದ ಅವಧಿಯಲ್ಲಿ ಕಾಂಗ್ರೆಸ್ ಶಾಸಕರಿಗೆ ಕಡಿಮೆ ಅನುದಾನ ನೀಡಲಾಗುತ್ತಿತ್ತು' ಎಂದರು. ಆಗ ಆಡಳಿತ ಮತ್ತು ವಿರೋಧ ಪಕ್ಷದ ಸದಸ್ಯರ ನಡುವೆ ಮಾತಿನ ಚಕಮಕಿ ನಡೆಯಿತು.



ಸುಭಾಷಿತ

ಇಂದು ಇಲ್ಲದ್ದು ನಾಳೆ ಇರಬಹುದು. ಆದ್ದರಿಂದ, ಇಲ್ಲದುದಕ್ಕೆ ಚಿಂತಿಸದೆ ಜೀವನವನ್ನು ಸಾಗಿಸುವುದೇ ಉತ್ತಮ ಮಾರ್ಗ.

-ದ.ರಾ.ಬೇಂದ್ರೆ

ಸುವ್ಯವಸ್ಥೆ ಸೋಗಲ್ಲಿ ಧಾರ್ಮಿಕ ಅಸಹನೆ ಸುಪ್ರೀಂ ಕೋರ್ಟ್ ತಡೆ ಸ್ವಾಗತಾರ್ಹ

ಅಂಗಡಿಗಳ ಮುಂದೆ ಮಾಲೀಕರ ಹೆಸರು, ಮೊಬೈಲ್ ಫೋನ್ ಸಂಖ್ಯೆ ಪ್ರದರ್ಶಿಸುವುದನ್ನು ಕಡ್ಡಾಯಗೊಳಿಸಿ ಉತ್ತರಪ್ರದೇಶ ಸರ್ಕಾರ ಹೊರಡಿಸಿದ್ದ ಆದೇಶಕ್ಕೆ ಸುಪ್ರೀಂ ಕೋರ್ಟ್ ಮಧ್ಯಂತರ ತಡೆ ನೀಡಿರುವುದು ಸ್ವಾಗತಾರ್ಹ. ವ್ಯಾಪಾರಿಗಳು ತಮ್ಮ ಹೆಸರು ಪ್ರಕಟಿಸುವುದನ್ನು ಕಡ್ಡಾಯಪಡಿಸಿ ಉತ್ತರ ಪ್ರದೇಶ ಸರ್ಕಾರ ಹಾಗೂ ಮಧ್ಯಪ್ರದೇಶದ ಸ್ಥಳೀಯ ಸಂಸ್ಥೆಯೊಂದು ಹೊರಡಿಸಿರುವ ಆದೇಶಗಳು ಕೋಮು ಧ್ರುವೀಕರಣಕ್ಕೆ ಅವಕಾಶ ಕಲ್ಪಿಸುವ ಧಾರ್ಮಿಕ ಅಸಹನೆಯ ಕೆಟ್ಟ ಮಾದರಿಗಳಾಗಿವೆ ಹಾಗೂ ಸಂವಿಧಾನದ ಮೂಲ ಆಶಯಗಳಿಗೆ ವಿರುದ್ಧವಾಗಿವೆ. ಕಾವಡ್ ಯಾತ್ರೆಯ ಮಾರ್ಗದುದ್ದಕ್ಕೂ ಇರುವ ಅಂಗಡಿ, ಹೋಟೆಲ್, ಡಾಬಾಗಳ ಮಾಲೀಕರು ತಮ್ಮ ಹೆಸರನ್ನು ಮಳಿಗೆಗಳ ಮುಂದೆ ಪ್ರದರ್ಶಿಸಬೇಕು ಎಂದು ಉತ್ತರಪ್ರದೇಶ ಸರ್ಕಾರ ಆದೇಶ ಹೊರಡಿಸಿತ್ತು. ಅದರ ಬೆನ್ನಿಗೇ ಉಜ್ಜಯಿನಿಯಲ್ಲಿನ ಅಂಗಡಿಗಳ ಮುಂದೆ ಮಾಲೀಕರ ಹೆಸರಿನ ಪ್ರಕಟಣೆಯನ್ನು ಮಧ್ಯಪ್ರದೇಶದ ನಗರಪಾಲಿಕೆ ಕಡ್ಡಾಯಗೊಳಿಸಿದೆ. ಕಾನೂನು ಮತ್ತು ಸುವ್ಯವಸ್ಥೆ ಹೆಸರಿನಲ್ಲಿ ಜಾರಿಗೊಂಡಿರುವ ಈ ಆದೇಶಗಳು ಸುರಕ್ಷತೆಯ ಹೆಸರಿನಲ್ಲಿ ಅಲ್ಪಸಂಖ್ಯಾತರನ್ನು ಸಂಕಷ್ಟಕ್ಕೆ ದೂಡುವ ರಾಜಕೀಯಪ್ರೇರಿತ ಕ್ರಮಗಳಾಗಿವೆ. ಮುಸ್ಲಿಂ ವ್ಯಾಪಾರಿಗಳನ್ನು ಗುರಿಯಾಗಿಸಿಕೊಂಡು ಹೊರಡಿಸಿರುವ ಈ ಆದೇಶಗಳು, ಹಿಂದೂ ವೋಟ್ ಬ್ಯಾಂಕನ್ನು ಗಟ್ಟಿಗೊಳಿಸುವ ದಿಸೆಯಲ್ಲಿ ನಡೆಸಿರುವ ಪ್ರಯತ್ನಗಳಾಗಿವೆ; ಮುಸ್ಲಿಂ ವ್ಯಾಪಾರಿಗಳ ಆರ್ಥಿಕತೆಗೆ ಪೆಟ್ಟು ಕೊಡುವ ಉದ್ದೇಶ ಹೊಂದಿವೆ. ಎರಡೂ ರಾಜ್ಯಗಳಲ್ಲಿ ಆಡಳಿತದ ಚುಕ್ಕಾಣಿ ಬಿಜೆಪಿ ಕೈಯಲ್ಲಿದೆ. ಉಜ್ಜಯಿನಿಯ ಮಹಾಕಾಳ್ ಮಂದಿರದ ಶ್ರಾವಣ ಮಾಸದ ಉತ್ಸವ ಹಾಗೂ ಹರಿದ್ವಾರವನ್ನು ಕೇಂದ್ರವನ್ನಾಗಿಸಿಕೊಂಡು ನಡೆಯುವ ಕಾವಡ್ ಯಾತ್ರೆ ಸಂದರ್ಭದಲ್ಲಿ ವ್ಯಾಪಾರಿಗಳ ಧರ್ಮವನ್ನು ಯಾತ್ರಿಗಳ ಗಮನಕ್ಕೆ ತರುವ ಪ್ರಯತ್ನಗಳು ಈ ಮೊದಲು ನಡೆದಿರಲಿಲ್ಲ. ಈಗ ಇದ್ದಕ್ಕಿದ್ದಂತೆ ವ್ಯಾಪಾರಿಗಳ ಧರ್ಮದ ಬಗ್ಗೆ ಆಸಕ್ತಿ ವ್ಯಕ್ತಪಡಿಸಿರುವ ಆಡಳಿತಾರೂಢರ ನಡವಳಿಕೆಗಳು ನಿರ್ಲಜ್ಜೆಯಿಂದ ಕೂಡಿದ ಕೋಮುರಾಜಕಾರಣದ ಭಾಗವಾಗಿವೆ. ಮುಸ್ಲಿಂ ವ್ಯಾಪಾರಿಗಳ ದುಡಿಮೆಯ ಹಕ್ಕನ್ನು ಕಸಿದುಕೊಳ್ಳುವ ಪ್ರಯತ್ನಗಳು ಎರಡು ವರ್ಷಗಳ ಹಿಂದೆ ಕರ್ನಾಟಕದಲ್ಲೂ ನಡೆದಿದ್ದವು. ಶಿವಮೊಗ್ಗದ ಮಾರಿಕಾಂಬಾ ಜಾತ್ರೆ ಹಾಗೂ ಉಡುಪಿ ಜಿಲ್ಲೆಯ ಕಾಪುವಿನ ಮಾರಿಗುಡಿಗಳಲ್ಲಿನ ಸುಗ್ಗಿ ಮಾರಿ ಪೂಜೆ ಸಂದರ್ಭದಲ್ಲಿ ಮುಸ್ಲಿಂ ವ್ಯಾಪಾರಿಗಳ ವಹಿವಾಟಿಗೆ ಅವಕಾಶ ನಿರಾಕರಿಸುವ ಪ್ರಯತ್ನಗಳು ಹಿಂದೂ ಸಂಘಟನೆಗಳಿಂದ ನಡೆದಿದ್ದವು. ಆ ಪ್ರಯತ್ನಗಳ ಮುಂದುವರಿಕೆಯಾಗಿ, ಮುಸ್ಲಿಮರ ಜೀವನೋಪಾಯದ ಹಕ್ಕನ್ನು ಕಸಿದುಕೊಳ್ಳುವ ಪ್ರಯತ್ನಗಳಿಗೆ ಕಾನೂನು ಮಾನ್ಯತೆ ತಂದುಕೊಡುವ ಪ್ರಯತ್ನ ಉತ್ತರಪ್ರದೇಶ ಹಾಗೂ ಮಧ್ಯಪ್ರದೇಶದಲ್ಲಿ ನಡೆದಿದೆ. ಉತ್ತರಪ್ರದೇಶ ಸರ್ಕಾರದ ಈ ಕ್ರಮದಿಂದಾಗಿ, ಕಾವಡ್ ಯಾತ್ರೆಯ ಮಾರ್ಗದಲ್ಲಿ ಹಿಂದೂಗಳು ನಡೆಸುವ ಹೋಟೆಲ್‌ಗಳಲ್ಲಿ ಕಾರ್ಯ ನಿರ್ವಹಿಸುವ ಮುಸ್ಲಿಂ ಕೆಲಸಗಾರರಿಗೆ ರಜೆಯ ಮೇಲೆ ಹೋಗುವಂತೆ ತಿಳಿಸಲಾಗಿದೆ ಎಂದು ವರದಿಯಾಗಿದೆ.

> ಕೋಮು ಧ್ರುವೀಕರಣವನ್ನು ಉತ್ತೇಜಿಸುವ ಸರ್ಕಾರದ ಯಾವುದೇ ನಡೆ ಸಂವಿಧಾನ ಹಾಗೂ ಪ್ರಜಾಪ್ರಭುತ್ವದ ಆಶಯಗಳಿಗೆ ವಿರುದ್ಧವಾದುದು

ಮುಸ್ಲಿಂ ಸಮುದಾಯದವರಿಗೆ ವ್ಯಾಪಾರ ಮಾಡಲು ಅವಕಾಶ ಕೊಡುವುದಿಲ್ಲ ಎನ್ನುವ ಯೋಚನೆ ನಂಜಿನಿಂದ ಕೂಡಿದೆ ಹಾಗೂ ಅಲ್ಪಸಂಖ್ಯಾತರಲ್ಲಿ ಅಸುರಕ್ಷತೆಯನ್ನು ಮೂಡಿಸುವಂತಿದೆ. ದಿನದ ದುಡಿಮೆಯನ್ನು ನೆಚ್ಚಿಕೊಂಡು ಬದುಕುವ ವ್ಯಾಪಾರಿಗಳನ್ನು ಧರ್ಮದ ಹೆಸರಿನಲ್ಲಿ ಗುರುತಿಸಿ, ವ್ಯಾಪಾರದ ಅವಕಾಶಗಳಿಂದ ವಂಚಿಸುವುದು ಅಮಾನವೀಯ ಹಾಗೂ ಪ್ರಜಾಸತ್ತಾತ್ಮಕ ಮೌಲ್ಯಗಳಿಗೆ ಎಸಗುವ ಅಪಚಾರ. ಹತ್ತು ವಿಧಾನಸಭಾ ಕ್ಷೇತ್ರಗಳಿಗೆ ಉಪಚುನಾವಣೆ ನಡೆಯಬೇಕಿದೆ. ಇದನ್ನು ಗಮನದಲ್ಲಿಟ್ಟು ಕೊಂಡು ಉತ್ತರಪ್ರದೇಶ ಸರ್ಕಾರವು ಕಾವಡ್ ಯಾತ್ರೆಯನ್ನು ಬಳಸಿಕೊಳ್ಳುತ್ತಿದೆ ಎನ್ನುವ ವಿಶ್ಲೇಷಣೆಗಳಿವೆ. ಕಳೆದ ಲೋಕಸಭಾ ಚುನಾವಣೆಯಲ್ಲಿನ ಹಿನ್ನಡೆಯಿಂದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು ಪಕ್ಷದೊಳಗೇ ಟೀಕೆಗಳನ್ನು ಎದುರಿಸುತ್ತಿದ್ದಾರೆ. ಆಂತರಿಕ ಭಿನ್ನಮತಕ್ಕೆ ಉತ್ತರ ರೂಪದಲ್ಲಿ ವಿಧಾನಸಭಾ ಕ್ಷೇತ್ರಗಳ ಮುಂಬರುವ ಉಪಚುನಾವಣೆಯನ್ನು ಆದಿತ್ಯನಾಥ ಪ್ರತಿಷ್ಠೆಯಾಗಿ ತೆಗೆದುಕೊಂಡಿದ್ದು, ಕಟು ಹಿಂದುತ್ವವಾದಿಗಳು ಪಕ್ಷದಿಂದ ದೂರ ಸರಿದಿಲ್ಲ ಎನ್ನುವ ಸಂದೇಶವನ್ನು ತಮ್ಮ ಟೀಕಾಕಾರರಿಗೆ ರವಾನಿಸುವ ಪ್ರಯತ್ನದಲ್ಲಿದ್ದಾರೆ. ತಮ್ಮ ಮೇಲಿನ ಟೀಕೆಗಳಿಂದ ಜನಸಾಮಾನ್ಯರ ಗಮನವನ್ನು ಬೇರೆಡೆ ಸೆಳೆಯುವ ಉದ್ದೇಶದಿಂದಲೂ ಅವರು ಕಾವಡ್ ಯಾತ್ರೆಯ ವಾಣಿಜ್ಯ ಚಟುವಟಿಕೆಗಳಿಗೆ ಧರ್ಮದ ಬಣ್ಣ ನೀಡುವ ಪ್ರಯತ್ನ ನಡೆಸಿದ್ದಾರೆ ಎಂದು ಹೇಳಲಾಗುತ್ತಿದೆ. ಬಿಜೆಪಿಯ ಈ ವಿಭಜಕ ರಾಜಕೀಯವು ಇತರ ರಾಜ್ಯಗಳಿಗೆ ಒಂದು ಕೆಟ್ಟ ಸಂಪ್ರದಾಯ ಹಾಕಿಕೊಡುವಂತಿದೆ. ಸರ್ಕಾರಗಳ ಕೆಲಸ ಯಾತ್ರಾರ್ಥಿಗಳಿಗೆ ಮೂಲ ಸೌಕರ್ಯಗಳನ್ನು ಕಲ್ಪಿಸಿಕೊಡುವುದೇ ವಿನಾ ಆ ಸೌಕರ್ಯಗಳನ್ನು ಒದಗಿಸುವವರು ಯಾವ ಜಾತಿ–ಧರ್ಮಕ್ಕೆ ಸೇರಿದವರೆಂದು ನಿರ್ಣಯಿಸುವುದಲ್ಲ. ಕೋಮು ಧ್ರುವೀಕರಣವನ್ನು ಉತ್ತೇಜಿಸುವ ಸರ್ಕಾರದ ಯಾವುದೇ ನಡೆ ಸಂವಿಧಾನ ಹಾಗೂ ಪ್ರಜಾಪ್ರಭುತ್ವದ ಆಶಯಗಳಿಗೆ ವಿರುದ್ಧವಾದುದು. ಉತ್ತರ ಪ್ರದೇಶ ಸರ್ಕಾರದ ನಿರ್ದೇಶನಕ್ಕೆ ಸುಪ್ರೀಂ ಕೋರ್ಟ್ ನೀಡಿರುವ ಮಧ್ಯಂತರ ತಡೆ, ಕೋಮು ರಾಜಕಾರಣ ಕುರಿತ ವ್ಯಾಪಕ ಚರ್ಚೆಗೆ ಅವಕಾಶ ಕಲ್ಪಿಸಬೇಕು. ಧಾರ್ಮಿಕ ಯಾತ್ರೆಗಳು ಸಾಮಾಜಿಕ ಸಾಮರಸ್ಯಕ್ಕೆ ಪೂರಕವಾಗಿರಬೇಕೇ ವಿನಾ ಸಮಾಜವನ್ನು ವಿಭಜಿಸುವಂತಾಗಬಾರದು.

ದಿನದ ಟ್ವೀಟ್

ಕಹಿ ವಾಸ್ತವ

ಇಂದಿನ ಆರ್ಥಿಕ ಸಮೀಕ್ಷೆಯು ಕೆಲವು ಕಠಿಣ ಸತ್ಯ ಸಂಗತಿಗಳನ್ನು ಪ್ರಸ್ತಾಪಿಸಿದೆ. ಷೇರು ಮಾರುಕಟ್ಟೆ ಕುರಿತಾದ ಊಹಾಪೋಹಗಳ ಬಗೆಗಷ್ಟೇ ನಾನು ಹೇಳುತ್ತಿಲ್ಲ. ಭಾರತದ ಶೇ 50ರಷ್ಟು ಯುವಜನರಿಗೆ ಉದ್ಯೋಗ ಹೊಂದುವ ಸಾಮರ್ಥ್ಯ ಇಲ್ಲ, 35 ವರ್ಷದ ಒಳಗಿನವರಲ್ಲಿ ಶೇ 65ರಷ್ಟು ಮಂದಿ ಯಾವ ಕೌಶಲವನ್ನೂ ಹೊಂದಿಲ್ಲ ಎಂದು ಸಮೀಕ್ಷೆ ಹೇಳಿದೆ. ಸಾಮಾಜಿಕ ಮಾಧ್ಯಮ ಮತ್ತು ಅನಾರೋಗ್ಯಕರ ಆಹಾರಕ್ರಮವು ದೇಶದ ಆರ್ಥಿಕ ಸಾಮರ್ಥ್ಯವನ್ನು ಹಾಳುಮಾಡುತ್ತಿವೆ ಎಂದು ಸಹ ಅದು ತಿಳಿಸಿದೆ...

ಡಿ.ಮುತ್ತುಕೃಷ್ಣನ್, ಹೂಡಿಕೆದಾರ

ಕಿಡಿನುಡಿ

ತಪ್ಪು ಮಾರ್ಗದಲ್ಲಿ ಚಾಲನೆ– ಬೆಂಗಳೂರು ನಗರ ವ್ಯಾಪ್ತಿಯಲ್ಲಿ ಸಹ ಇದೊಂದು ಪಿಡುಗೇ ಆಗಿದೆ. ದ್ವಿಚಕ್ರ ವಾಹನಗಳು, ಆಟೊಗಳು ಮಾತ್ರವಲ್ಲದೆ ಕಾರುಗಳು ಮತ್ತು ಕೆಲವೊಮ್ಮೆ ನೀರಿನ ಟ್ಯಾಂಕರ್‌ಗಳು, ಲಾರಿಗಳು ಸಹ ಹೀಗೇ ಮಾಡುತ್ತವೆ. ಕೆಲವು ಬಾರಿ ಅತಿ ಹೆಚ್ಚು ಪ್ರಕಾಶಮಾನವಾದ ಎಲ್‌ಇಡಿ ದೀಪಗಳು, ಡಿಪ್ಪರ್‌ಗಳೊಂದಿಗೆ ತಪ್ಪು ಮಾರ್ಗದಲ್ಲಿ ಸಂಚರಿಸುವುದು ಕಣ್ಣುಗಳು ಕಾಣದಂತೆ ಮಾಡುತ್ತದೆ.

(ಗಾಜಿಯಾಬಾದ್‌ನ 'ಎಕ್ಸ್‌ಪ್ರೆಸ್ ವೇ'ಯಲ್ಲಿ ತಪ್ಪು ಮಾರ್ಗದಲ್ಲಿ ಬಂದ ಕಾರೊಂದು ಸ್ಕೂಟರ್‌ಗೆ ಡಿಕ್ಕಿ ಹೊಡೆದದ್ದರಿಂದ, ಅದರಲ್ಲಿದ್ದ ತಾಯಿ–ಮಗ ಮೃತಪಟ್ಟಿರುವ ಅಪಘಾತಕ್ಕೆ ಪ್ರತಿಕ್ರಿಯೆ)

ನೀರಜ್ ಶರ್ಮಾ

25 ವರ್ಷಗಳ ಹಿಂದೆ

ಶುಕ್ರವಾರ, 23-7-1999

- **ಎಂಟು ಸಚಿವರ ವಜಾ ವಿಧಾನಸಭೆ ವಿಸರ್ಜನೆ**

ಬೆಂಗಳೂರು, ಜುಲೈ 22– ಆಡಳಿತಾರೂಢ ಜನತಾದಳ ಇಬ್ಭಾಗವಾಗಿ ರಾಜಕೀಯ ಬಿಕ್ಕಟ್ಟು ಉದ್ಭವಿಸಿದ ಹಿನ್ನೆಲೆಯಲ್ಲಿ ಇಂದು ನಡೆದ ಕ್ಷಿಪ್ರ ರಾಜಕೀಯ ಬೆಳವಣಿಗೆಯಲ್ಲಿ ಮಾಜಿ ಪ್ರಧಾನಿ ಎಚ್‌.ಡಿ. ದೇವೇಗೌಡರ ಬಣದಲ್ಲಿ ಉಳಿದಿರುವ ಉಪಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿದಂತೆ ಎಂಟು ಮಂದಿ ಸಚಿವರು ಸಂಪುಟದಿಂದ ವಜಾ ಆಗಿದ್ದು, ರಾಜ್ಯ ವಿಧಾನಸಭೆಯನ್ನು ವಿಸರ್ಜಿಸಲಾಗಿದೆ.

ರಾಜ್ಯ ವಿಧಾನಸಭೆಯನ್ನು ವಿಸರ್ಜನೆ ಮಾಡುವಂತೆ ಮುಖ್ಯಮಂತ್ರಿ ಜೆ.ಎಚ್. ಪಟೇಲ್ ಅವರ ಅಧ್ಯಕ್ಷತೆಯಲ್ಲಿ ಇಂದು ನಡೆದ ಸಚಿವ ಸಂಪುಟದ ತುರ್ತು ಸಭೆ ಮಾಡಿದ ಶಿಫಾರಸನ್ನು ರಾಜ್ಯಪಾಲ ಖುರ್ಷಿದ್ ಆಲಂ ಖಾನ್ ಅವರು ಅಂಗೀಕರಿಸಿದ್ದಾರೆ.

ಇದಕ್ಕೆ ಮುನ್ನ ಮುಖ್ಯಮಂತ್ರಿ ಪಟೇಲ್ ಅವರ ಶಿಫಾರಸಿನ ಮೇರೆಗೆ ರಾಜ್ಯಪಾಲರು ಉಪಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿದಂತೆ ಎಂಟು ಮಂದಿ ಸಚಿವರನ್ನು ಸಂಪುಟದಿಂದ ವಜಾ ಮಾಡಿದರು.

50 ವರ್ಷಗಳ ಹಿಂದೆ

ಮಂಗಳವಾರ, 23-7-1974

- **ವರ್ಷದಲ್ಲಿ ಎರಡನೇ ಬಾರಿ ಜನತೆಗೆ ಮತ್ತಷ್ಟು ಕರಭಾರ**

ನವದೆಹಲಿ, ಜುಲೈ 22– ಕೇಂದ್ರ ಸರ್ಕಾರವು ಈ ವರ್ಷ ಎರಡನೇ ಬಾರಿಗೆ ಮತ್ತಷ್ಟು ತೆರಿಗೆ ವಿಧಿಸಿದೆ.

ಈ ಬಗ್ಗೆ ಹೆಚ್ಚುವರಿ ಮುಂಗಡಪತ್ರವನ್ನು ಈ ತಿಂಗಳ 30ರಂದು ಮಂಡಿಸಲಾಗುವುದು ಎಂದು ಕೇಂದ್ರ ಸಂಸತ್ ವ್ಯವಹಾರ ಖಾತೆ ಸಚಿವ ಕೆ. ರಘುರಾಮಯ್ಯ ಅವರು ಇಂದು ಲೋಕಸಭೆಗೆ ತಿಳಿಸಿದರು.

ಹಣದುಬ್ಬರವನ್ನು ತಡೆಗಟ್ಟಲು ಮತ್ತಷ್ಟು ಕ್ರಮಗಳನ್ನು ಕೈಗೊಳ್ಳುವುದಕ್ಕೆ ಈ ವಿಧೇಯಕ ಅನುವು ಮಾಡಿಕೊಡುತ್ತದೆಂದೂ ರಘುರಾಮಯ್ಯ ಅವರು ತಿಳಿಸಿದರು.

- **ಗಡಿ ತಂಟೆ ಮಾಡಿದರೆ ಪಾಕ್‌ಗೆ ತಕ್ಕ ಶಾಸ್ತಿ: ರಾಂ ಎಚ್ಚರಿಕೆ**

ನವದೆಹಲಿ, ಜುಲೈ 22– ಪಾಕಿಸ್ತಾನವು ಗಡಿಯಲ್ಲೇನಾದರೂ ತಂಟೆ ಮಾಡಿದರೆ ಭಾರತವು ಅದರ ವಿರುದ್ಧ ಕ್ರಮ ಕೈಗೊಳ್ಳಬೇಕಾಗುತ್ತದೆ ಎಂದು ರಕ್ಷಣಾ ಸಚಿವ ಜಗಜೀವನ ರಾಂ ಅವರು ಇಂದು ಎಚ್ಚರಿಕೆ ನೀಡಿದರು.

'ಸಶಸ್ತ್ರ ಪಡೆಗಳು ಜಾಗರೂಕವಾಗಿವೆ. ಯಾವುದೇ ಪರಿಸ್ಥಿತಿ ಎದುರಿಸಲು ಸನ್ನದ್ಧವಾಗಿವೆ' ಎಂದು ರಾಜ್ಯಸಭೆಯಲ್ಲಿ ಹೇಳಿದರು.

ಬಡ ಮಹಿಳೆಯರ ಮೇಲಿನ ಆರ್ಥಿಕ ಒತ್ತಡ ತಗ್ಗಿಸುವ ತುರ್ತು ಅವಶ್ಯಕತೆ ಇದೆ

ಪರೋಕ್ಷ ತೆರಿಗೆ: 'ಹೊರೆ' ತಗ್ಗೀತೆ?

ವಿಶ್ಲೇಷಣೆ

ಸುಲೋಚನ ಕೆ.ಎಂ.

ದೇಶದಲ್ಲಿ ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ವ್ಯವಸ್ಥೆ ಜಾರಿಯಾಗಿ ಈ ಜುಲೈಗೆ ಏಳು ವರ್ಷಗಳು ತುಂಬಿವೆ. ಏಪ್ರಿಲ್‌ನಲ್ಲಿ ಜಿಎಸ್‌ಟಿ ಸಂಗ್ರಹವು ದಾಖಲೆಯ ₹ 2.10 ಲಕ್ಷ ಕೋಟಿ ಆಗಿತ್ತು, ವಾರ್ಷಿಕ ಸರಾಸರಿ ಶೇಕಡ 10ರಷ್ಟು ಪ್ರಮಾಣದಲ್ಲಿ ಇದು ಏರಿಕೆಯಾಗುತ್ತಿದೆ.

ಜಿಎಸ್‌ಟಿ ಉತ್ತಮ ತೆರಿಗೆ ಪದ್ಧತಿ. ಇದು ಪರೋಕ್ಷ ತೆರಿಗೆಯಾಗಿರುವುದರಿಂದ, ಭಿಕ್ಷುಕರು ಕೂಡ ತಾವು ಖರೀದಿಸುವ ವಸ್ತುಗಳಿಗೆ ತೆರಿಗೆ ಕಟ್ಟುತ್ತಾರೆ. ಜಿಎಸ್‌ಟಿ ಕಾಯ್ದೆಯು ಲಿಂಗತಟಸ್ಥವಾಗಿದೆ. ಇದರ ಅನುಷ್ಠಾನದ ಪ್ರಾರಂಭಿಕ ದಿನಗಳಲ್ಲಿ, ಮಹಿಳೆಯರು ಮತ್ತು ಸಣ್ಣ ವ್ಯಾಪಾರಿಗಳನ್ನು ಒಳಗೊಂಡಂತೆ ಸರ್ವಜನರ ಪರೋಕ್ಷ ತೆರಿಗೆ ಹೊರೆಯನ್ನು ತಗ್ಗಿಸುವುದರ ಜೊತೆಗೆ ಒಟ್ಟಾರೆ ಬೆಳವಣಿಗೆಗೆ ಇದು ಕಾರಣವಾಗುತ್ತದೆ, ತೆರಿಗೆ ವ್ಯವಸ್ಥೆಯಲ್ಲಿ ಸಮತೋಲನವೊಂದು ಸೃಷ್ಟಿಯಾಗುತ್ತದೆ ಎಂದು ನಿರೀಕ್ಷಿಸಲಾಗಿತ್ತು.

ಆದರೆ ಪರೋಕ್ಷ ತೆರಿಗೆಗಳನ್ನು ಎಲ್ಲರಿಗೂ ಒಂದೇ ಪ್ರಮಾಣದಲ್ಲಿ ವಿಧಿಸಲಾಗುತ್ತದೆ. ಅಂದರೆ, ಶ್ರೀಮಂತರು ಮತ್ತು ಬಡವರು ಸರಕು ಮತ್ತು ಸೇವೆಗಳ ಮೇಲೆ ಸಮಾನ ಪ್ರಮಾಣದಲ್ಲಿ ತೆರಿಗೆಯನ್ನು ಪಾವತಿಸುತ್ತಾರೆ. ಆದರೆ, ಈ ವ್ಯವಸ್ಥೆಯಡಿ ಅಸಮಾನತೆಯೂ ಇದೆ. ಪರೋಕ್ಷ ತೆರಿಗೆಯು ಹೊರೆಯಾಗಿ ಕಾಣಿಸುವುದು ಕಡಿಮೆ ಆದಾಯದ ಗುಂಪಿನ ಜನರಿಗೇ. ಶ್ರೀಮಂತರು ದಿನನಿತ್ಯದ ಬಳಕೆಗಾಗಿ ಖರೀದಿಸುವ ಸರಕು ಹಾಗೂ ಪಡೆಯುವ ಸೇವೆಗಳಿಗೆ ತಮ್ಮ ಒಟ್ಟು ಆದಾಯದ ಒಂದು ಸಣ್ಣ ಪ್ರಮಾಣವನ್ನು ವ್ಯಯಿಸುತ್ತಾರೆ, ಅದಕ್ಕೆ ಅನ್ವಯಿಸುವ ತೆರಿಗೆಯನ್ನು ಪಾವತಿಸುತ್ತಾರೆ. ಅದೇ ಸೇವೆ ಹಾಗೂ ಸರಕುಗಳನ್ನು ಪಡೆಯಲು ಬಡವರು ತಮ್ಮ ಆದಾಯದ ಹೆಚ್ಚಿನ ಪ್ರಮಾಣವನ್ನು ವ್ಯಯಿಸಬೇಕಾಗುತ್ತದೆ. ಅದರೊಂದಿಗೆ ಪರೋಕ್ಷ ತೆರಿಗೆಯನ್ನೂ ಪಾವತಿಸುತ್ತಾರೆ. ಆಗ ಅವರ ಕೈಯಲ್ಲಿ ಉಳಿಯುವ ಹಣ ಕಡಿಮೆಯಾಗುತ್ತದೆ. ಪರೋಕ್ಷ ತೆರಿಗೆಯ ಪ್ರಮಾಣವನ್ನು ಕುಟುಂಬದ ಆದಾಯದ ಜೊತೆ ಹೋಲಿಸಿ ನೋಡಿದಾಗ, ಶ್ರೀಮಂತರು ಶೇಕಡಾವಾರು ಕಡಿಮೆ ಪ್ರಮಾಣದಲ್ಲಿ ಹಾಗೂ ಬಡವರು ಹೆಚ್ಚಿನ ಪ್ರಮಾಣದಲ್ಲಿ ಪಾವತಿಸುತ್ತಿರುತ್ತಾರೆ.

ಪ್ರಸಕ್ತ ಸನ್ನಿವೇಶದಲ್ಲಿ ಸರ್ಕಾರವು ಸಂಗ್ರಹಿಸಲು ಸುಲಭವಾಗಿರುವ ಪರೋಕ್ಷ ತೆರಿಗೆಗಳ ಮೇಲೆ ಹೆಚ್ಚು ಅವಲಂಬಿತವಾಗಿದೆ. ಇದರಿಂದಾಗಿ ಬಡವರು ಮತ್ತು ಕೂಲಿಕಾರ್ಮಿಕರಿಗೆ ಹೆಚ್ಚು ಹೊರೆಯಾಗುತ್ತದೆ. ಈ ಕಾರಣಕ್ಕಾಗಿ, ಆರ್ಥಿಕ ಸಹಕಾರ ಮತ್ತು ಅಭಿವೃದ್ಧಿ ಸಂಸ್ಥೆಯ (ಒಇಸಿಡಿ) ಸದಸ್ಯ ರಾಷ್ಟ್ರಗಳಲ್ಲಿ ತೆರಿಗೆ ಮತ್ತು ಲಿಂಗಸಮಾನತೆಯ ಬಗ್ಗೆ ಚರ್ಚೆಗಳು ನಡೆಯುತ್ತಿವೆ. ಪರೋಕ್ಷ ತೆರಿಗೆಯ ಮೇಲೆ ಕೇಂದ್ರೀಕೃತವಾದ ತೆರಿಗೆ ನೀತಿಯು ಮನೆ ಖರ್ಚುಗಳನ್ನು ನಿರ್ವಹಿಸುವ ಬಡ ಮಹಿಳೆಯರಿಗೆ ಹೊರೆಯಾಗುತ್ತಿದೆ ಎಂಬ ವಾದವನ್ನು ಮಹಿಳೆಯರು ಮಂಡಿಸುತ್ತಲೇ ಬಂದಿದ್ದಾರೆ.

ಇಂತಹ ಸನ್ನಿವೇಶದಲ್ಲಿ ನಮ್ಮ ದೇಶದಲ್ಲೂ ಬಡವರ, ವಿಶೇಷವಾಗಿ ಆರ್ಥಿಕವಾಗಿ ದುರ್ಬಲರಾಗಿರುವ ಮತ್ತು ಸದಾ ದುಡಿಯುತ್ತಾ ಕುಟುಂಬದ ಮಕ್ಕಳು ಮತ್ತು ವೃದ್ಧರ ಕಾಳಜಿ ವಹಿಸಿ ಸಂಸಾರವನ್ನು ತೂಗಿಸಿಕೊಂಡು ಹೋಗುವ ಮಹಿಳೆಯರ ಮೇಲಿನ ಆರ್ಥಿಕ ಒತ್ತಡವನ್ನು ತಗ್ಗಿಸುವ ತುರ್ತು ಅವಶ್ಯಕತೆ ಇದೆ.

ಮನೆಯ ಎಲ್ಲ ಕೆಲಸಗಳಲ್ಲಿ ತೊಡಗುವ ಮಹಿಳೆಯರು ರಾಷ್ಟ್ರದ ಜಿಡಿಪಿಗೆ ಕೊಡುಗೆ ನೀಡುತ್ತಿರುತ್ತಾರೆ. ಅಲ್ಲದೆ, ಹೊರಗಡೆ ಹೋಗಿ ದುಡಿಯುವ ಪುರುಷರನ್ನು ಪೋಷಿಸುವ ಕೆಲಸವನ್ನು ಮಾಡುವುದು ಮಹಿಳೆಯೇ. ಇವೆಲ್ಲವೂ ಜಿಡಿಪಿಗೆ ಕೊಡುಗೆಯಾಗಿ ಪರಿವರ್ತನೆ ಆಗುತ್ತವೆ. ಇನ್ನು ಕೆಲವರು ಸಂಸಾರ ನಿಭಾಯಿಸುವುದರ ಜೊತೆಗೆ ವಿವಿಧೆಡೆಗಳಲ್ಲಿ ದುಡಿದು ದೇಶದ ಜಿಡಿಪಿಗೆ ಪರೋಕ್ಷವಾಗಿ ಮತ್ತು ನೇರವಾಗಿ ಕೊಡುಗೆಯನ್ನು ನೀಡುತ್ತಿದ್ದಾರೆ. ಆದರೂ ಪರೋಕ್ಷ ತೆರಿಗೆಯಡಿ ಬಡ ಮಹಿಳೆಯರಿಗೆ ಸಹಾಯವಾಗುವ ಯಾವುದೇ ವಿಶೇಷ ಸವಲತ್ತುಗಳು ಕಂಡುಬಂದಿಲ್ಲ.

ನಮ್ಮ ಸಂವಿಧಾನದ ಪೀಠಿಕೆಯು ಘನತೆಯ ಬದುಕನ್ನು ಖಾತರಿಪಡಿಸುತ್ತದೆ. ಹಾಗೆಯೇ, ಪೌಷ್ಟಿಕ ಆಹಾರ, ಗುಣಮಟ್ಟದ ಶಿಕ್ಷಣದಂತಹ ಸಾಮಾಜಿಕ ಭದ್ರತೆಯನ್ನು ರಾಜ್ಯ ನಿರ್ದೇಶಕ ತತ್ವಗಳಲ್ಲಿ ಅಳವಡಿಸಲಾಗಿದೆ. ಅಂತರರಾಷ್ಟ್ರೀಯ ಮಟ್ಟದಲ್ಲಿ, 'ಯಾರನ್ನೂ ಹಿಂದೆ ಬಿಡಬೇಡಿ' ಎಂಬ ಮೂಲ ತತ್ವದ ಮೇಲೆ, ಸುಸ್ಥಿರ ಅಭಿವೃದ್ಧಿಗಾಗಿ 2030ರ ಕಾರ್ಯಸೂಚಿ ಮತ್ತು 17 ಸುಸ್ಥಿರ ಅಭಿವೃದ್ಧಿ ಗುರಿಗಳು (ಎಸ್‌ಡಿಜಿ) ಕೇಂದ್ರೀಕೃತವಾಗಿವೆ. ಗುರಿ ಸಂಖ್ಯೆ 1 ಎಲ್ಲಾ ಆಯಾಮಗಳಲ್ಲಿ ಬಡತನವನ್ನು ನಿರ್ಮೂಲನೆ ಮಾಡುವ ಉದ್ದೇಶ ಹೊಂದಿದ್ದು, ಇದಕ್ಕೆ ಭಾರತವೂ ಸಹಮತ ನೀಡಿದೆ. ಆದಾಗ್ಯೂ, ಬಡ ಮಹಿಳೆಯರ ಬಗ್ಗೆ, ವಿಶೇಷವಾಗಿ ಹಳ್ಳಿಗಳಲ್ಲಿ ಕೆಲಸವಿಲ್ಲದೆ ನಗರಗಳಿಗೆ ಬಂದು ನೆಲಸಿರುವ ಕಡಿಮೆ ಆದಾಯದ ಮಹಿಳೆಯರ ಕಡೆಗೆ ಗಮನಹರಿಸಬೇಕಾದ ಅಗತ್ಯ ಇದೆ.

ಈ ವರ್ಷದ ಮಹಿಳಾ ದಿನಾಚರಣೆಗೆ ವಿಶ್ವಸಂಸ್ಥೆ ನೀಡಿದ ಘೋಷವಾಕ್ಯ 'ಮಹಿಳೆಯರ ಸಲುವಾಗಿ ಹೂಡಿಕೆ ಮಾಡಿ: ಪ್ರಗತಿಗೆ ವೇಗ ನೀಡಿ' ಎಂಬುದಾಗಿದೆ. ಈ ಕಾರಣದಿಂದಲೂ, ಕಡಿಮೆ ಆದಾಯ ಇರುವ ಮಹಿಳೆಯರಿಗೆ ಆಗುವ ಬೆಲೆ ಏರಿಕೆಯ ಹೊರೆ ಮತ್ತು ಅದರೊಂದಿಗೆ ಸೇರಿಕೊಂಡು ಬರುವ ಪರೋಕ್ಷ ತೆರಿಗೆಯ ಭಾರವನ್ನು ಇಳಿಸಬೇಕಾಗಿದೆ. ಇಂತಹ ಸಂದರ್ಭದಲ್ಲಿ ಕರ್ನಾಟಕದಲ್ಲಿ ಬಡವರ ಸಹಾಯಕ್ಕೆ ಬಂದದ್ದು ಗ್ಯಾರಂಟಿ ಯೋಜನೆಗಳು. ಗೃಹಲಕ್ಷ್ಮಿ ಯೋಜನೆಯಡಿ ₹ 2,000 ನೀಡುತ್ತಿರುವುದು ಮನೆಯೊಡತಿಗೆ ಅವಳ ಒಟ್ಟಾರೆ ಆರ್ಥಿಕ ಹೊರೆಯನ್ನು ತಗ್ಗಿಸುವ ಉಪಕ್ರಮವಾಗಿದೆ. ರಾಜ್ಯ ಸರ್ಕಾರವು ಶಕ್ತಿ, ಗೃಹಜ್ಯೋತಿ, ಅನ್ನಭಾಗ್ಯ, ಗೃಹಲಕ್ಷ್ಮಿ ಹಾಗೂ ಯುವನಿಧಿ ಯೋಜನೆಗಳನ್ನು ಜಾರಿಗೆ ತಂದು, ಬದುಕನ್ನು ನಿಭಾಯಿಸಲು ಜನರಿಗೆ ಸಹಕರಿಸುತ್ತಿದೆ.

ಇಂದು ಮಂಡನೆಯಾಗಲಿರುವ ಕೇಂದ್ರ ಬಜೆಟ್, ಭಾರತವನ್ನು 5 ಟ್ರಿಲಿಯನ್ ಡಾಲರ್ ಆರ್ಥಿಕತೆಯನ್ನಾಗಿ ಪರಿವರ್ತಿಸುವ ಗುರಿಯನ್ನು ಹೊಂದಿರಬಹುದೇನೊ. ಈ ಸಂದರ್ಭದಲ್ಲಿ, ಸುಪ್ರೀಂ ಕೋರ್ಟ್‌ನ ನ್ಯಾಯಮೂರ್ತಿ ಬಿ.ವಿ.ನಾಗರತ್ನ ಅವರು ಅಭಿಪ್ರಾಯಪಟ್ಟಂತೆ, ಗೃಹಿಣಿಯರಿಗೆ ಆರ್ಥಿಕ ಸ್ಥಿರತೆ ಒದಗಿಸಬೇಕಾಗಿದೆ. ಈ ದಿಸೆಯಲ್ಲಿ, ಬಿಪಿಎಲ್ ಕಾರ್ಡ್ ಹೊಂದಿರುವವರಿಗೆ ಕೆಲವು ಪಾಶ್ಚಾತ್ಯ ದೇಶಗಳಲ್ಲಿ ನೀಡಿದಂತೆ ಸ್ಮಾರ್ಟ್‌ಕಾರ್ಡ್‌ಗಳನ್ನು ನೀಡಿ, ಉತ್ತಮ ಗುಣಮಟ್ಟದ ಸಿರಿಧಾನ್ಯ, ಬೇಳೆಕಾಳು, ಸಕ್ಕರೆ, ಅಡುಗೆಎಣ್ಣೆ, ಎಲ್‌ಪಿಜಿ, ಶುದ್ಧಕಾರಕಗಳನ್ನು (ಕ್ಲೀನಿಂಗ್ ಏಜೆಂಟ್) ಪರೋಕ್ಷ ತೆರಿಗೆ ಇಲ್ಲದೆ ಅಥವಾ ರಿಯಾಯಿತಿ ದರದಲ್ಲಿ ಒದಗಿಸುವ ಕುರಿತು ಚಿಂತಿಸಬೇಕು. ಇವುಗಳನ್ನು, ಯಾವುದೇ ರೀತಿಯ ಶೋಷಣೆಗೆ ಅವಕಾಶ ಮಾಡಿಕೊಡದೆ, ಮಾನ್ಯತೆ ಪಡೆದ ಪಡಿತರ ಅಂಗಡಿಗಳಲ್ಲಿ ಅಥವಾ ಮಾಲ್‌ಗಳಲ್ಲಿ ಒದಗಿಸುವ ಮೂಲಕ ಮನೆಯ ಖರ್ಚುಗಳನ್ನು ನಿರ್ವಹಿಸಲು ಗೃಹಿಣಿಯರಿಗೆ ಸಹಕಾರ ನೀಡಬಹುದು. ಅವರ ಆರ್ಥಿಕ ಹೊರೆಯನ್ನು ಕಡಿಮೆ ಮಾಡಲು ರಾಜ್ಯವು ಆಡಳಿತಾತ್ಮಕ ಕಾರ್ಯವಿಧಾನದಲ್ಲಿ ವಿಶೇಷ ವಿಧಾನಗಳನ್ನು ರೂಪಿಸಬೇಕು.

ಇಂತಹ ಯೋಜನೆಯು ದುರ್ಬಳಕೆಯಾಗಿ ತೆರಿಗೆ ಸೋರಿಕೆಯಾಗದಂತೆ ಸೂಕ್ತ ತಾಂತ್ರಿಕ ಮುನ್ನೆಚ್ಚರಿಕೆ ಕೈಗೊಳ್ಳಬೇಕು. ಇನ್ನೂ ಪಡಿತರ ಚೀಟಿ ಸಿಗದವರಿಗೆ ಅದನ್ನು ಒದಗಿಸುವ ಜೊತೆಗೆ ಕೋವಿಡ್ ವಿಧವೆಯರು, ಕೋವಿಡ್ ತಬ್ಬಲಿ ಮಕ್ಕಳ ಸಮಸ್ಯೆಗಳಿಗೆ ಪರಿಹಾರವನ್ನು ಒಳಗೊಂಡ ಯೋಜನೆಯನ್ನು ರೂಪಿಸಬೇಕು.

ಮಹಿಳೆಯರ ಗೃಹಬಳಕೆ ಖರ್ಚಿಗಾಗಿ ನೀಡಲಾಗುವ ₹ 2,000 ಮೊತ್ತವನ್ನು ಎಲ್ಲ ಅರ್ಹ ಮಹಿಳೆಯರೂ ಅಡಚಣೆಯಿಲ್ಲದೆ ನಿರಂತರವಾಗಿ ಪಡೆಯುವಂತೆ ಆಗಬೇಕು. ವಿಧವಾ, ವೃದ್ಧಾಪ್ಯ ಹಾಗೂ ಇತರ ಪಿಂಚಣಿಗಳನ್ನು ಅಡಚಣೆಯಿಲ್ಲದೆ ಪಡೆಯುವಂತೆ ಆಗಬೇಕು. ಜಿಎಸ್‌ಟಿ ಜಾರಿಗೆ ತಂದ ನಂತರದಲ್ಲಿ ಸಾಮಾನ್ಯ ಗ್ರಾಹಕರಿಗೆ ಅದರಲ್ಲೂ ಬಡವರಿಗೆ ಇದರಿಂದ ಅನುಕೂಲವಾಗಿದೆಯೇ ಎಂಬ ಬಗ್ಗೆ ಮೌಲ್ಯಮಾಪನ ನಡೆಯಬೇಕು. ಈಗಿನ ಪರಿಸ್ಥಿತಿಗೆ ಅನುಗುಣವಾಗಿ ಮಹಿಳಾ ಗೃಹ ಕಾರ್ಮಿಕರು ಅಥವಾ ಮನೆಕೆಲಸ ಮಾಡುವ ಮಹಿಳೆಯರನ್ನು ಒಳಗೊಂಡಂತೆ ಅಸಂಘಟಿತ ವಲಯವನ್ನು ಕಾರ್ಮಿಕ ಕಾಯ್ದೆಯಡಿ ತರಬೇಕು. ಈ ಮೂಲಕ ಅವರಿಗೆ ಭವಿಷ್ಯನಿಧಿ ಮತ್ತು ಇಎಸ್‌ಐ ಸೌಲಭ್ಯಗಳೊಂದಿಗೆ ಕನಿಷ್ಠ ವೇತನದ ಬದಲಾಗಿ ಜೀವನ ಮಾಡಲು ಯೋಗ್ಯವಾದ ಪ್ರಮಾಣದಲ್ಲಿ ವೇತನ ಸಿಗುವಂತೆ ಸದರಿ ಕಾನೂನಿಗೆ ಸೂಕ್ತ ತಿದ್ದುಪಡಿ ತರಬೇಕು.

ದೇಶದ ಒಟ್ಟಾರೆ ತೆರಿಗೆ ಕೊರತೆ ನೀಗಿಸಿಕೊಳ್ಳಲು ಪ್ರತಿ ವಲಯದಿಂದಲೂ ಸರಿಯಾಗಿ ಆದಾಯ ತೆರಿಗೆ ಪಾವತಿ ಆಗುತ್ತಿದೆಯೇ ಎಂಬುದನ್ನು ಖಾತರಿಗೊಳಿಸಿ ತೆರಿಗೆ ಕಳ್ಳತನದ ಹಗರಣಗಳನ್ನು ಭೇದಿಸಿ ಕ್ರಮ ಕೈಗೊಳ್ಳಬೇಕು. ಈಗಿರುವ ಪರೋಕ್ಷ ತೆರಿಗೆಯು ಕನಿಷ್ಠಪಕ್ಷ ಬಡ ಮಹಿಳೆಯರಿಗೆ ಸಂಬಂಧಿಸಿದಂತೆ ಪರಿವರ್ತನೆ ಕಾಣಬೇಕು. ಈ ಬಾರಿಯ ಬಜೆಟ್‌ನಲ್ಲಿ ಇದಕ್ಕೆ ಪೂರಕವಾದ ಕ್ರಮಗಳು ಇರಬಹುದೆಂದು ಆಶಿಸೋಣವೇ?

ಲೇಖಕಿ: ವಾಣಿಜ್ಯ ತೆರಿಗೆ ನಿವೃತ್ತ ಹೆಚ್ಚುವರಿ ಆಯುಕ್ತೆ

ಚುರುಮುರಿ

ಆ್ಯಕ್ಟ್ ಆಫ್ ಫ್ರಾಡ್!

• ಡಿ.ಎಸ್.ಲಿಂಗರಾಜು

'ಅಣೈ, ಪರಿಸರ ಯಂಗೆ ಬದಲಾಯ್ತದೆ ಅದಕ್ಕೆ ತಕ್ಕಂಗೆ ನಾವು ಜೀವನಶೈಲಿಯನ್ನ ಬದಲಾಯಿಸಿಗ್ಯಬಕು ಅಂತ ಪೇಪರಲ್ಲಿ ಬರೆದವ್ರೆ. ಆದ್ರೆ ಪ್ರವಾಹ, ಭೂಕುಸಿತ, ಮಳೆ ನಮ್ಮನ್ನ ರೋಸ್ತಾವಲ್ಲ' ಚಂದ್ರು ಕ್ಯಾತೆ ತೆಗೆದ.

'ಇವೆಲ್ಲಾ ಆ್ಯಕ್ಟ್ ಆಫ್ ಗಾಡ್ ಕನ್ರೋ. ಮನುಷ್ಯರ ಅಹಂಕಾರಕ್ಕೆ ದೇವರು ಹಾಕ್ತಿರೋ ಪೆನಾಲ್ಟಿ. ಅದಕ್ಕೆ ದಂಡ ತೆತ್ತ ಮೇಲೆ ನಮ್ಮ ಲೈಫ್‌ಸ್ಟೈಲ್ ಬದಲಾಗಬೇಕು' ತುರೇಮಣೆ ಒಪ್ಪಿಕ್ಯಂದರು.

'ಆ್ಯಕ್ಟ್ ಆಫ್ ಗಾಡ್‌ಗೆ ಪರಿಹಾರ ಇಲ್ಲ ದಿಟ. ದಿನಾ ಪೇಪರಲ್ಲಿ ಹಗರಣ, ಅಕ್ರಮ, ಆರೋಪ, ಅಪಘಾತ, ಪ್ರತಿಭಟನೆ, ಭ್ರಷ್ಟಾಚಾರದ ವರದಿಗಳೇ ಎದ್ದು ಕಾಣ್ತವೆ. ಇದುಕ್ಕೆ ಯಾರು ಕಾರಣ?' ಅಂತ ಕೇಳಿದೆ.

'ರಾಜಕೀಯದ ಫ್ರಾಡ್ ಜನರ ಮ್ಯಾಲೆ ಹೇರಿಕ್ಯಳದು ಹಿಂಗೀಯೆ, ತಿಳಕಳಿ!' ತುರೇಮಣೆ ಒಳ ವಿಚಾರ ಕೆದಕಿದರು.

'ಸಿಎಂ ಸಯಾಬ್ರು 'ಅವರ ಕಾಲದಲ್ಲಿ ಕೋಟಿ ಕೋಟಿ ಹಗರಣ ಆಗಿರಲಿಲ್ವೇ? ನಮ್ಮವರು ಯಾರೂ ಯಾವ ಹಗರಣದಲ್ಲೂ ಇಲ್ಲ' ಅಂತ ಬಾರಾನಮೂನೆ ಲೆಕ್ಕ ಕೊಡ್ತಾವ್ರಲ್ಲಾ ಇದನ್ನೆಲ್ಲಾ ಯಾಕೆ ತನಿಖೆ ಮಾಡಿಸಬಾರದು?' ಅರಾಜಕೀಯ ಪ್ರಶ್ನೆ ಕೇಳಿದೆ.

'ಇದು ನಿಂದಾಣೆಕೆ ರಾಜಕೀಯ ಕನೋ. ನಾಳೆ ಬಹುಮತ ಬರದೇ ಇದ್ರೆ ಇವರೆಲ್ಲಾ ಅವರ ಬಡ್ಡೇಗೆ ಹೋಗಿ ಹೊಂದಾಣಿಕೆ ಒಪ್ಪೀಲ್ಯ ಮಾಡಬೇಕಾಯ್ತದೆ. ಅದುಕ್ಕೆ 'ನಾನು ಹೊಡೆದಂಗೆ ಮಾಡ್ತೀನಿ. ನೀನು ಅತ್ತಂಗೆ ಮಾಡು' ಅಂತ ರಾಜಿಕಬೂಲು ಮಾಡಿಕ್ಯತ್ತರೆ!' ತುರೇಮಣೆ ಸಿಡಿಗುಟ್ಟಿದರು.

'ಇವರು ಹಿಂಗೆ ಮಾಡಿದ್ರೆ ಯಾವ ತನಿಖೇನೂ ಬರ್ಕತ್ತಾಗಲ್ಲ ಬುಡಿ. ನಮ್ಮ ಕತೆ ಯಂಗೆ?' ಅಂತಂದೆ ಬೇಸರದಲ್ಲಿ.

'ಇದೇ ಕನೋ ಆ್ಯಕ್ಟ್ ಆಫ್ ಫ್ರಾಡ್ ಅಂದ್ರೆ! ಫ್ರಾಡ್ ರಾಜಕಾರಣಿಗಳಿಗೆ ಮಾತ್ರ ಬರೋ ಜಡ್ಡು. ಇದರ ದುಷ್ಪರಿಣಾಮಕ್ಕೆ ನಾವು ಬಲಿಯಾಗದೇ ದಿನಕ್ಕೆ ಎರಡು ಬೂವಕ್ಕೆ ದಾರಿ ಮಾಡಿಕ್ಯಂಡ್ರೆ ಸಾಕು'.

ತುರೇಮಣೆ ಮಾತಿಗೆ ನಾವೆಲ್ಲರೂ ಕಿಸಕ್ಕನೆ ನಕ್ಕು ಎದ್ದೋದೊ.

ಸಂಗತ

ಅಶರೀರವಾಣಿಗೆ ಕಿವಿಗೊಡಿ

ಕೇಳುಗರ ಅಭಿರುಚಿಗೆ ತಕ್ಕಂತೆ ಕಾಲಕಾಲಕ್ಕೆ ಅಪ್‌ಡೇಟ್ ಆಗುತ್ತಾ ಹೊಸ ನಮೂನೆಯಲ್ಲಿ ಕಾರ್ಯಕ್ರಮಗಳ ಪ್ರಸಾರ ಮಾಡುತ್ತಿರುವುದು ಎಫ್‌.ಎಂ. ಚಾನೆಲ್‌ಗಳ ವಿಶೇಷ

• ಡಾ. ಮುರಳೀಧರ ಕಿರಣಕೆರೆ

ಆ ರೈತರ ಮನೆಯಲ್ಲಿನ ಕರುವನ್ನು ನೋಡುತ್ತಿದ್ದಂತೆ 'ವ್ಹಾ...' ಎಂಬ ಉದ್ಗಾರ ಅರಿವಿಲ್ಲದಂತೆ ಹೊರಬಿದ್ದಿತ್ತು! 'ತುಂಬಾ ಚೆನ್ನಾಗಿ ಸಾಕಿದ್ದೀರಿ. ಇದಕ್ಕೆ ಇನ್ನೂ ಆರು ತಿಂಗಳು ಅಂದ್ರೆ ನಂಬಕ್ಕೇ ಆಗಲ್ಲ. ವರ್ಷದೊಳಗೆ ಬೆದೆಗೆ ಬರೋದು ಗ್ಯಾರಂಟಿ' ಎಂದು ಅವರನ್ನು ಪ್ರಶಂಸಿಸಿದೆ. 'ಸಲಹೆ ಪ್ರಕಾರನೇ ಕರೂನ ಸಾಕ್ತಿದ್ದೀನಿ ಸಾರ್. ಹಂಗಾಗಿ ಒಳ್ಳೆ ಬೆಳವಣಿಗೆ ಬಂತು' ಎಂದರು ಆ ಕೃಷಿಕರು ಖುಷಿಯಿಂದ. 'ಎಲ್ಲಿಂದ ಸಲಹೆಗಳನ್ನು ಕೇಳ್ತಿದ್ದೀರಿ?' ಎಂದು ಕುತೂಹಲದಿಂದ ಕೇಳಿದೆ.

'ಬೆಳಿಗ್ಗೆ ರೇಡಿಯೊದಲ್ಲಿ ಒಳ್ಳೆ ಮಾಹಿತಿ ಕೊಡ್ತಾರೆ. ಕರುವಿಗೆ ಎಷ್ಟು ಹಾಲು ಬಿಡ್ಬೇಕು, ಹೊಟ್ಟೆಹುಳಕ್ಕೆ ಯಾವಾಗ್ಯಾವಾಗ ಔಷಧ ಹಾಕ್ಬೇಕು, ಹಿಂಡಿ, ಹುಲ್ಲು ಯಾವ ಪ್ರಮಾಣದಲ್ಲಿ ನೀಡ್ಬೇಕು ಅಂತೆಲ್ಲಾ ನಾ ರೇಡಿಯೊದಿಂದ್ಲೇ ಕೇಳಿ ಕಲಿತಿದ್ದು. ಈಗಂತೂ ಮೊಬೈಲ್ ಫೋನಲ್ಲೇ ಆಕಾಶವಾಣಿ ಎಫ್‌.ಎಂ. ಬರುತ್ತೆ. ಇದರಿಂದಲೇ ಜಾನುವಾರು ಸಾಕಣೆ, ಕೃಷಿ, ನಮ್ಮ ಆರೋಗ್ಯದ ಬಗ್ಗೆ ಅಗತ್ಯ ವಿಷಯಗಳೆಲ್ಲಾ ಗೊತ್ತಾಗುತ್ತಿವೆ' ಎಂದರು ಹೆಮ್ಮೆಯಿಂದ!

ಹೌದು, ರೇಡಿಯೊ ಪುನಃ ಪ್ರಾಮುಖ್ಯ ಪಡೆಯುತ್ತಿದೆ. ಇತ್ತೀಚಿನ ವರ್ಷಗಳಲ್ಲಿ ರೇಡಿಯೊ ತಂತ್ರಜ್ಞಾನ, ಪ್ರಸಾರದಲ್ಲಿ ಕ್ರಾಂತಿಕಾರಿ ಬದಲಾವಣೆಗಳಾಗಿವೆ. ಹಿಂದೆ ಎ.ಎಂ. ಬ್ಯಾಂಡ್‌ನಲ್ಲಿ ಪ್ರಸಾರವಾಗುತ್ತಿದ್ದ ಧ್ವನಿಯ ಗುಣಮಟ್ಟ ತೃಪ್ತಿಕರವಾಗಿರಲಿಲ್ಲ, ಮಾತು ಸ್ಪಷ್ಟವಾಗಿ ಕೇಳುತ್ತಿರಲಿಲ್ಲ. ಪ್ರಸಾರದ ವ್ಯಾಪ್ತಿಯೂ ಸೀಮಿತವಾಗಿತ್ತು. ಜೊತೆಗೆ ಧ್ವನಿ ತರಂಗಗಳ ಹರಿವಿಗೆ ವಿದ್ಯುದಲೆಗಳ ಅಡಚಣೆ ಬೇರೆ. ಈ ಗೊರ ಗೊರ ಸದ್ದು, ಅಸ್ಪಷ್ಟತೆಯ ಕಾರಣ ಹಲವರು ರೇಡಿಯೊ ಆಲಿಸುವಿಕೆಯಿಂದ ದೂರ ಸರಿದಿದ್ದರು.

ಈ ಸ್ಥಿತಿ ಈಗ ಬದಲಾಗುತ್ತಿದೆ. ಎ.ಎಂ. ಜೊತೆಗೆ ಎಫ್‌.ಎಂ. ಬ್ಯಾಂಡ್ ಬಂದಿದೆ. ಎಫ್‌.ಎಂನಲ್ಲಿ ಧ್ವನಿ ಸ್ಪಷ್ಟವಾಗಿದ್ದು, ಆಲಿಸುವುದಕ್ಕೆ ಹಿತವಾಗಿರುತ್ತದೆ. ಕೇಳುವುದಕ್ಕೆ ರೇಡಿಯೊ, ಟ್ರಾನ್ಸಿಸ್ಟರ್‌ನಂತಹ ಸಾಧನವೇ ಬೇಕೆಂದಿಲ್ಲ. ಸ್ಮಾರ್ಟ್‌ಫೋನ್‌ಗಳಲ್ಲೇ ಆ್ಯಪ್ ಬಳಸಿಕೊಂಡು ಬಾನುಲಿಗೆ ಕಿವಿಯಾಗಬಹುದು. ಅಂತರ್ಜಾಲದ ಸಂಪರ್ಕವಿದ್ದರೆ ಸಾಕು.

ಸರ್ಕಾರಿ ಸ್ವಾಮ್ಯದ ಆಕಾಶವಾಣಿಯ ಜೊತೆಗೆ ನೂರಾರು ಖಾಸಗಿ ಎಫ್‌.ಎಂ. ವಾಹಿನಿಗಳೂ ಶ್ರೋತೃಗಳನ್ನು ಸೆಳೆಯುವ ಪೈಪೋಟಿಯಲ್ಲಿವೆ. ಮನೆ ಮನೆಯಲ್ಲೂ ಬೇರೂರಿರುವ ಟಿ.ವಿ. ಪ್ರಭಾವಲಯದಲ್ಲಿ ಮಂಕಾಗಿದ್ದ ರೇಡಿಯೊ ನಿಧಾನವಾಗಿ ಹೊಳೆಯತೊಡಗಿದೆ. ಮೊಬೈಲ್ ನೆಟ್‌ವರ್ಕ್, ವೈಫೈ ಸಂಪರ್ಕಜಾಲ ಹಳ್ಳಿ ಹಳ್ಳಿಗೂ ವಿಸ್ತರಿಸುತ್ತಿರುವುದರಿಂದ ಮೊಬೈಲ್ ಬಾನುಲಿ ಜನಪ್ರಿಯವಾಗುತ್ತಿದೆ!

ಎಫ್‌.ಎಂ. ವಾಹಿನಿಗಳ ಕಾರ್ಯಕ್ರಮಗಳು ವೈವಿಧ್ಯಮಯ. ಆರೋಗ್ಯ, ಕೃಷಿ, ಪಶುಸಂಗೋಪನೆ ಕುರಿತಾದ ಮಾಹಿತಿಗಳು, ತಾಜಾ ಸುದ್ದಿ, ಮನೆಮದ್ದು, ಹೊಸರುಚಿ, ಚಿಂತನ, ಸಂದರ್ಶನ, ಭಾಷಣ, ಯಶೋಗಾಥೆ, ಪದಬಂಧ, ರಸಪ್ರಶ್ನೆ, ಒಗಟು, ಪ್ರಚಲಿತ ವಿದ್ಯಮಾನ, ಶಿಕ್ಷಣ, ಸಂಗೀತ, ಕಥೆ, ನಾಟಕದಂತಹ ಮನರಂಜನಾ ಕಾರ್ಯಕ್ರಮಗಳು, ವಾರ್ತೆ, ಹವಾಮಾನ ವರದಿ... ಹೌದು, ಬಾನುಲಿಯ ಮೆನುಕಾರ್ಡ್ ತುಂಬಾ ಉದ್ದವಿದೆ.

ಕೇಳುಗರ ಅಭಿರುಚಿಗೆ ತಕ್ಕಂತೆ ಕಾಲಕಾಲಕ್ಕೆ ಅಪ್‌ಡೇಟ್ ಆಗುತ್ತಾ ಹೊಸ ನಮೂನೆಯಲ್ಲಿ ಕಾರ್ಯಕ್ರಮಗಳ ಪ್ರಸಾರ ಎಫ್‌.ಎಂ. ಚಾನೆಲ್‌ಗಳ ವಿಶೇಷ. ದೈನಂದಿನ ಕಾರ್ಯಗಳಿಗೆ ಒಂದಿನಿತೂ ವ್ಯತ್ಯಯವಾಗದಂತೆ ಇಷ್ಟದ ಕಾರ್ಯಕ್ರಮಗಳನ್ನು ಕೆಲಸ ಮಾಡುತ್ತಲೇ ಆಲಿಸುವ ಅನುಕೂಲ ಒದಗಿಸುವುದು ಈ ಮಾಧ್ಯಮದ ಹೆಗ್ಗಳಿಕೆ. ಅದರಲ್ಲೂ ಬೆಳಗಿನ ವೇಳೆಯ ರೇಡಿಯೊ ಮಾಹಿತಿಗಳು ತುಂಬಾ ಉಪಯುಕ್ತ. ಆದರೆ, ಈ ಹೊತ್ತಿನಲ್ಲಿ ಟಿ.ವಿ. ವಾಹಿನಿಗಳ ಜ್ಯೋತಿಷದಲ್ಲಿ ಕಳೆದುಹೋಗುವವರು ಹಲವರು. ಆರೋಗ್ಯದ ಸಮಸ್ಯೆಗಳು, ಕೌಟುಂಬಿಕ ತೊಂದರೆ, ತಾಪತ್ರಯಗಳಿಗೆ ಜ್ಯೋತಿಷಿಗಳಲ್ಲಿ ಪರಿಹಾರ ಹುಡುಕುವ ಚಾಳಿಯಿಂದಾಗಿ ಮನಸ್ಸು ಮತ್ತಷ್ಟು ಕೆಡುತ್ತಿದೆ. ಇಂತಹ ಮೌಢ್ಯದ ಕಾರ್ಯಕ್ರಮಗಳನ್ನು ವೀಕ್ಷಿಸುತ್ತಾ ಮನಃಶಾಂತಿ ಕಳೆದುಕೊಳ್ಳುವುದಕ್ಕಿಂತ ಬಗೆ ಬಗೆಯ ವಿಚಾರಗಳನ್ನು ತಿಳಿಸುವ, ಮಾನಸಿಕ, ದೈಹಿಕ ಸ್ವಾಸ್ಥ್ಯಕ್ಕೆ ಅಗತ್ಯ ಸೂತ್ರಗಳನ್ನು ಬಿತ್ತರಿಸುವ, ಮೆದುಳನ್ನು ಚುರುಕಾಗಿಸುವ ರೇಡಿಯೊ ಕಾರ್ಯಕ್ರಮಗಳನ್ನು ಹೆಚ್ಚು ಆಲಿಸುವುದು ಸೂಕ್ತ.

'ರೇಡಿಯೊ ನಿಜಕ್ಕೂ ಅತ್ಯುತ್ತಮ ಸಂಗಾತಿ. ಕೇಳುತ್ತಾ ಕೆಲಸ ಮಾಡುತ್ತಿದ್ದರೆ ಆಯಾಸವೇ ಆಗದು, ಒತ್ತಡವೂ ಇರದು. ಮನಸ್ಸು ಹಗುರಾಗುತ್ತದೆ' ಎಂಬ ಗೃಹಿಣಿಯೊಬ್ಬರ ಮಾತು ರೇಡಿಯೊವನ್ನು ಒಪ್ಪುವ, ಅಪ್ಪುವ ಎಲ್ಲಾ ಶ್ರೋತೃಗಳ ಅಭಿಪ್ರಾಯವೂ ಹೌದು.

ಮಕ್ಕಳ ಮುಖ್ಯ ಪರೀಕ್ಷೆಗಳ ಸಂದರ್ಭದಲ್ಲಿ ಬಿತ್ತರವಾಗುವ ಪರಿಣತರ ಸಲಹೆಗಳು, ವಿಷಯವಾರು ಮಾಹಿತಿಗಳು ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸ ತುಂಬಿ ಧೈರ್ಯದಿಂದ ಪರೀಕ್ಷೆ ಎದುರಿಸಲು ಸಹಕಾರಿ. ಈಗಿನ ಬಹುತೇಕ ಮಕ್ಕಳು ವರ್ತಮಾನ ಪತ್ರಿಕೆ ಓದುವುದಿಲ್ಲ. ಸಾಮಾಜಿಕ ಜಾಲತಾಣಗಳಲ್ಲಿ ಮುಳುಗಿರುವ ಎಳೆಯರ ಸಾಮಾನ್ಯ ಜ್ಞಾನದ ಮಟ್ಟ ತೀವ್ರವಾಗಿ ಕುಸಿಯುತ್ತಿದೆ. ಬೌದ್ಧಿಕ ಬೆಳವಣಿಗೆಯೂ ಆಗುತ್ತಿಲ್ಲ. ಇಂತಹ ಪರಿಸ್ಥಿತಿಯಲ್ಲಿ, ವ್ಯಕ್ತಿತ್ವ ವಿಕಸನದ ದೃಷ್ಟಿಯಿಂದ ಮಕ್ಕಳಲ್ಲಿ ರೇಡಿಯೊ ಆಲಿಸುವ ಅಭಿರುಚಿ ಬೆಳೆಸುವುದು ಅಪೇಕ್ಷಣೀಯ. ಮನೆಯಲ್ಲಿ ಹಿರಿಯರಿಗೆ ಇಂತಹ ಹವ್ಯಾಸ ಇದ್ದಾಗ ಮಾತ್ರ ಕಿರಿಯರು ಅವರನ್ನು ಅನುಕರಿಸಿಯಾರು.

ಜಗತ್ತಿನಲ್ಲೇ ಬೃಹತ್ ಜಾಲ ಹೊಂದಿರುವ ಸರ್ಕಾರಿ ಸ್ವಾಮ್ಯದ ಆಕಾಶವಾಣಿ (ಎಐಆರ್) ಮಾಹಿತಿ, ಶಿಕ್ಷಣ, ಮನರಂಜನೆಯಲ್ಲಿ ಮುಂಚೂಣಿಯಲ್ಲಿರುವ ಮಾಧ್ಯಮ. 'ಬಹುಜನ ಹಿತಾಯ ಬಹುಜನ ಸುಖಾಯ' ಎಂಬ ಧ್ಯೇಯದೊಂದಿಗೆ ಕಾರ್ಯನಿರತವಾಗಿರುವ ಈ ಪ್ರಸಾರಾಂಗದ ಆಶಯ ಸಾಕಾರಗೊಳ್ಳಬೇಕಾದರೆ ನಾವೆಲ್ಲರೂ ಬಾನುಲಿಯ ಅಶರೀರವಾಣಿಗೆ ಕಿವಿಗೊಡಬೇಕಿದೆ.

ವಾಚಕರ ವಾಣಿ

ಭೂಸ್ವಾಧೀನಕ್ಕೆ ಇರಲಿ ಮಿತಿ

ಬೆಂಗಳೂರಿನ ಮೇಲಿನ ಒತ್ತಡ ತಗ್ಗಿಸಲು ನಗರದಿಂದ 50-60 ಕಿ.ಮೀ. ದೂರದ ದಾಬಸ್‌ಪೇಟೆಯಲ್ಲಿ ಕೈಗಾರಿಕಾ ಪ್ರದೇಶವನ್ನು ಅಭಿವೃದ್ಧಿಪಡಿಸಲಾಯಿತು. ಆದರೆ, ಪ್ರಸ್ತುತ ದಾಬಸ್‌ಪೇಟೆಯೇ ಬೆಂಗಳೂರಿನ ಕಡೆಗೆ ಓಡಿ ಬರುತ್ತಿದೆಯೇನೋ ಎನ್ನುವಷ್ಟರ ಮಟ್ಟಿಗೆ ಫಲವತ್ತಾದ ಕೃಷಿ ಯೋಗ್ಯ ಹಾಗೂ ಹಸಿರು ವಲಯದ ಪ್ರದೇಶವನ್ನು ಕೈಗಾರಿಕಾ ಪ್ರದೇಶದ ವಿಸ್ತರಣೆಗಾಗಿ ಸ್ವಾಧೀನ ಮಾಡಿಕೊಳ್ಳಲಾಗುತ್ತಿದೆ. ನೆಲಮಂಗಲ ತಾಲ್ಲೂಕಿನ ಓಬಳಾಪುರ ಕೈಗಾರಿಕಾ ಪ್ರದೇಶ ಸ್ಥಾಪನೆಗೆ ಸಾವಿರಾರು ಎಕರೆ ಕೃಷಿಭೂಮಿಯನ್ನು ವಶಪಡಿಸಿಕೊಳ್ಳಲಾಯಿತಾದರೂ ಅದು ಇನ್ನೂ ಅಭಿವೃದ್ಧಿ ಕಾಣುತ್ತಿಲ್ಲ. ಇದೀಗ, ಕೊಡಿಗೇಹಳ್ಳಿ, ಕೆಂಚನಪುರ ಮತ್ತು ಬಳ್ಳಗೆರೆ ಗ್ರಾಮಗಳ ಕೆಲವು ಜಮೀನುಗಳನ್ನು ಸ್ವಾಧೀನಪಡಿಸಿಕೊಳ್ಳುವ ಪ್ರಸ್ತಾವ ಇದೆ ಎಂಬ ಮಾಹಿತಿ ಹರಿದಾಡುತ್ತಿದೆ. ಭೂಮಿ ಕಳೆದುಕೊಳ್ಳುವ ಆತಂಕದಿಂದ ರೈತರು ಭೀತರಾಗಿದ್ದಾರೆ. ಜನಪ್ರತಿನಿಧಿಗಳು ಹಾಗೂ ಕೆಐಎಡಿಬಿ ಅಧಿಕಾರಿಗಳು ವಾಸ್ತವ ಸ್ಥಿತಿಯನ್ನು ತಿಳಿಸಿ ರೈತರ ನೆರವಿಗೆ ಬಾರದಿದ್ದರೆ, ಈ ಅವಕಾಶಕ್ಕಾಗಿ ದಲ್ಲಾಳಿಗಳು ಸೃಷ್ಟಿಯಾಗುತ್ತಾರೆ.

ಕೈಗಾರಿಕಾ ವಲಯ ಸ್ಥಾಪನೆಗೆ ರೈತರಿಂದ ಸರ್ಕಾರ ಕೃಷಿ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವುದರಿಂದ ಮುಂದಿನ ದಿನಗಳಲ್ಲಿ ಆರೋಗ್ಯ, ಪರಿಸರದ ಮೇಲೆ ಪರಿಣಾಮ ಬೀರುತ್ತದೆ. ಮನುಕುಲ ಇದಕ್ಕೆ ದೊಡ್ಡ ಬೆಲೆ ತೆರಬೇಕಾಗುತ್ತದೆ. ಕೃಷಿ ಬಳಕೆಗೆ ಫಲವತ್ತಾಗಿರದೆ, ಬೆಳೆಗೆ ತಕ್ಕ ಪ್ರಮಾಣದಲ್ಲಿ ಮಳೆ ಬೀಳದೇ ಇರುವ ಅನೇಕ ಪ್ರದೇಶಗಳು ರಾಜ್ಯದಲ್ಲಿವೆ. ಅಂತಲ್ಲಿ ಉದ್ದಿಮೆದಾರರಿಗೆ ಬೇಕಾದ ಮೂಲ ಸೌಕರ್ಯಗಳನ್ನು ಒದಗಿಸಿ, ಕೈಗಾರಿಕೆಗಳನ್ನು ಸ್ಥಾಪಿಸುವ ಬಗ್ಗೆ ಸರ್ಕಾರ ಚಿಂತನೆ ಮಾಡಲಿ.

ಜಿ.ಬೈರೇಗೌಡ, ಕೊಡಿಗೇಹಳ್ಳಿ, ನೆಲಮಂಗಲ

ಹಿರಿಯ ನಾಗರಿಕರ ಅಲೆದಾಟ ತಪ್ಪಿಸಿ

ವೃದ್ಧಾಪ್ಯ ವೇತನ ಮತ್ತು ಇತರ ಯೋಜನೆಗಳಡಿ ಮಾಸಿಕ ಪಿಂಚಣಿ ಪಡೆಯುತ್ತಿರುವ ಫಲಾನುಭವಿಗಳು 65 ವರ್ಷದ ನಂತರ ಪಿಂಚಣಿ ಪಡೆಯುವ ಕುರಿತು ನಿರ್ವಹಣಾ ವ್ಯವಸ್ಥೆ ತಂತ್ರಾಂಶದಲ್ಲಿ ದಾಖಲೀಕರಣ ಕಾರ್ಯ ನಡೆದಿದೆ. ಇದಕ್ಕಾಗಿ, ಈವರೆಗಿನಂತೆ ಆಧಾರ್ ಕಾರ್ಡ್‌ನಲ್ಲಿರುವ ವ್ಯಕ್ತಿಯ ಜನ್ಮದಿನಾಂಕ ಆಧಾರಿತ ವಯಸ್ಸನ್ನು ಪರಿಗಣಿಸದೆ, ಜಿಲ್ಲಾ ಶಸ್ತ್ರಚಿಕಿತ್ಸಕರಿಂದ ವಯಸ್ಸಿನ ದೃಢೀಕರಣ ಬಯಸಲಾಗುತ್ತಿದೆ. ಇದರಿಂದ, 65 ವರ್ಷ ಮೀರಿದ ಲಕ್ಷಾಂತರ ಫಲಾನುಭವಿಗಳು ಜಿಲ್ಲಾ ಶಸ್ತ್ರಚಿಕಿತ್ಸಕರ ಬಳಿ ಅಲೆದಾಡುವಂತಾಗಿದೆ.

ಇಂತಹ ದೃಢೀಕರಣ ಬಯಸುತ್ತಿರುವುದರ ಹಿಂದಿನ ಉದ್ದೇಶ ತಿಳಿಯುತ್ತಿಲ್ಲ. ಫಲಾನುಭವಿಗಳ ನಿರ್ವಹಣಾ ವ್ಯವಸ್ಥೆ ತಂತ್ರಾಂಶದಲ್ಲಿ ಆಧಾರ್‌ನಡಿ ನಮೂದಿಸಲಾದ ಜನ್ಮದಿನಾಂಕ ಆಧಾರಿತ ವಯಸ್ಸನ್ನು ಪರಿಗಣಿಸುವ ಮೂಲಕ ವಯೋವೃದ್ಧರು ಜಿಲ್ಲಾ ಶಸ್ತ್ರಚಿಕಿತ್ಸಕರ ಬಳಿ ಅಲೆದಾಡುವುದನ್ನು ತಪ್ಪಿಸಬೇಕಾಗಿದೆ.

ಜಿ.ನಾಗೇಂದ್ರ ಕಾವೂರು, ಸಂಡೂರು

ಸುರಕ್ಷತಾ ಭಾವ ಮೂಡಿಸುವ ಗಸ್ತು

ರಾಜ್ಯದ ಸಾರ್ವಜನಿಕ ಪ್ರದೇಶಗಳಲ್ಲಿ ಪೊಲೀಸರ ಗೋಚರತೆ ತೀರಾ ಕಡಿಮೆಯಾಗಿರುವುದರಿಂದ, ಪ್ರತಿದಿನ ಬೆಳಿಗ್ಗೆ ಹಾಗೂ ಸಂಜೆ ಪೊಲೀಸರು ಸಮವಸ್ತ್ರದಲ್ಲಿ ಕಡ್ಡಾಯವಾಗಿ ಗಸ್ತು ತಿರುಗಬೇಕು ಎಂದು ರಾಜ್ಯ ಪೊಲೀಸ್ ಮಹಾನಿರ್ದೇಶಕ ಅಲೋಕ್ ಮೋಹನ್ ಅವರು ನೀಡಿರುವ ಆದೇಶ ಸಮಂಜಸ ಹಾಗೂ ಸಕಾಲಿಕ.

40 ವರ್ಷಗಳ ಹಿಂದೆ ನಾನು ದಕ್ಷಿಣ ಕನ್ನಡದ ಸಣ್ಣ ಪಟ್ಟಣವೊಂದರಲ್ಲಿ ವಾಸವಿದ್ದಾಗ, ಅಲ್ಲಿಯ ಪೊಲೀಸ್ ಠಾಣೆಯ ಸಬ್‌ಇನ್‌ಸ್ಪೆಕ್ಟರ್ ಬೆಳಿಗ್ಗೆ ಮತ್ತು ಸಂಜೆ ತಮ್ಮ ಬುಲೆಟ್ ಬೈಕಿನಲ್ಲಿ ಪೇಟೆಯ ಪ್ರಮುಖ ಬೀದಿಗಳಲ್ಲಿ ಸಂಚರಿಸುತ್ತಿದ್ದರು. ಆಗ ಸಾರ್ವಜನಿಕರಲ್ಲಿ ಒಂದು ರೀತಿಯ ಸುರಕ್ಷತೆಯ ಭಾವನೆ ಬರುತ್ತಿತ್ತು. ಈಗಿನ ಪೊಲೀಸರು ಹೀಗೆ ಗಸ್ತು ತಿರುಗಲು ಪ್ರಾರಂಭಿಸಿದರೆ, ಎಲ್ಲ ಊರುಗಳಲ್ಲೂ ಬಹಳಷ್ಟು ದೌರ್ಜನ್ಯ ಪ್ರಕರಣಗಳು ಕಡಿಮೆಯಾದಾವು.

ಬಿ.ಎಸ್.ಭರತ್, ಬೆಂಗಳೂರು

ರಾಜಕಾರಣದಲ್ಲಿ ಸೇಡಿನ ಯುಗ?

ಬಿಜೆಪಿ ಆಡಳಿತಾವಧಿಯಲ್ಲಿ ನಡೆದಿವೆ ಎನ್ನಲಾದ ಹಗರಣಗಳ ಬಗ್ಗೆ ಪರಿಶೀಲನೆ ಮಾಡುವ ಅನಿವಾರ್ಯ ಈ ಸರ್ಕಾರಕ್ಕೆ ಸೃಷ್ಟಿಯಾದದ್ದು, ವಾಲ್ಮೀಕಿ ನಿಗಮದ ಹಗರಣ ಬೆಳಕಿಗೆ ಬಂದ ಮೇಲೆ. ಕೇಂದ್ರ ಸಚಿವ ಎಚ್‌.ಡಿ.ಕುಮಾರಸ್ವಾಮಿ ಅವರು 'ಇಷ್ಟು ದಿನ ಸುಮ್ಮನಿದ್ದಿರೇಕೆ?' ಎಂದು ಪ್ರಶ್ನಿಸಿದ್ದಾರೆ. 'ಬಿಜೆಪಿ ವಿರುದ್ಧ ಆರೋಪ ಬಂದಾಗ ಬಾರದ ಇ.ಡಿ, ಈಗ ಓಡೋಡಿ ಬಂದದ್ದೇಕೆ?' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಮರುಪ್ರಶ್ನೆ ಮಾಡಿದ್ದಾರೆ. 'ಸಿದ್ದರಾಮಯ್ಯನವರ 40 ವರ್ಷಗಳ ಶುದ್ಧಹಸ್ತದ ಮುಖವಾಡ ಕಳಚಿದೆ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್‌.ಅಶೋಕ ಹೇಳಿದ್ದಾರೆ. ಇವರು ಅವರಿಗೆ, ಅವರು ಇವರಿಗೆ ಮಾತಿನಲ್ಲೇ ಹೀಗೆ ಕೆಸರು ಎರಚುತ್ತಿರುವುದನ್ನು ಕಂಡಾಗ, ಅಭಿವೃದ್ಧಿ ರಾಜಕಾರಣದ ಯುಗ ಮುಗಿದು, ಸೇಡಿನ ರಾಜಕಾರಣದ ಯುಗ ಪ್ರಾರಂಭವಾಗಿದೆಯೇ ಅನ್ನಿಸುತ್ತಿದೆ.

ಈ ಹಿಂದಿನ ಮತ್ತು ಈಗಿನ ರಾಜಕಾರಣಕ್ಕೆ ಎಷ್ಟೊಂದು ಅಂತರವಿದೆ ಎಂಬುದನ್ನು ಅರಿಯಲು ಇಲ್ಲೊಂದು ನಿದರ್ಶನ ಇದೆ. 2003– 04ನೇ ಸಾಲು. ನಾನಾಗ ಕುಣಿಗಲ್ ತಾಲ್ಲೂಕಿನಲ್ಲಿ ಆಹಾರ ಪರಿವೀಕ್ಷಕನಾಗಿದ್ದೆ. ವೈ.ಕೆ.ರಾಮಯ್ಯ ಅಲ್ಲಿನ ಶಾಸಕರಾಗಿದ್ದರು. ತಿಂಗಳಲ್ಲಿ ಎರಡು– ಮೂರು ಗ್ರಾಮ ಸಭೆಗಳು ನಡೆಯುತ್ತಿದ್ದವು. ಸಭೆಯಲ್ಲಿ ತಾಲ್ಲೂಕು ಮಟ್ಟದ ಎಲ್ಲ ಅಧಿಕಾರಿಗಳೂ ಇರುತ್ತಿದ್ದರು. ಗ್ರಾಮ ಸಭೆಯಲ್ಲಿ ಕುಳಿತು ಶಾಲಾ ಕಟ್ಟಡ, ಆಸ್ಪತ್ರೆ, ರಸ್ತೆ, ನೀರು, ವಿದ್ಯುತ್, ಸಿಬ್ಬಂದಿ ಹಾಜರಾತಿಯಂತಹ ಎಲ್ಲ ಸಂಗತಿಗಳ ಬಗ್ಗೆಯೂ ಸಂಬಂಧಿಸಿದ ಅಧಿಕಾರಿಗಳ ಜೊತೆ ಆಮೂಲಾಗ್ರ ಚರ್ಚೆ ನಡೆಸುತ್ತಿದ್ದರು. ಊರಿನ ಜನರಿಂದ ಕುಂದುಕೊರತೆಗಳ ಬಗ್ಗೆ ಕೇಳಿ ತಿಳಿದುಕೊಳ್ಳುತ್ತಿದ್ದರು. ಆದಷ್ಟೂ ಅಲ್ಲೇ ಬಗೆಹರಿಸಲು ಪ್ರಯತ್ನಿಸುತ್ತಿದ್ದರು. 'ನನ್ನ ಮೇಲೆ ಜನ ನಂಬಿಕೆ ಇಟ್ಟು ಮತ ಹಾಕಿದ್ದಾರೆ. ಅವರ ಋಣ ತೀರಿಸಬೇಕು. ಇಲ್ಲದಿದ್ದರೆ ಇನ್ನೊಂದು ಚುನಾವಣೆ ಬಂದಾಗ ಮತದಾರರಿಗೆ ಮುಖ ತೋರಿಸಲು ಆಗೋದಿಲ್ಲ' ಎಂಬ ಮಾತನ್ನು ಹೇಳುತ್ತಿದ್ದರು. ಅವರು ಮಾಡುತ್ತಿದ್ದ ಅಭಿವೃದ್ಧಿ ಕೆಲಸ ಮತ್ತು ಅವರ ಮಾತಿನಲ್ಲಿದ್ದ ಬದ್ಧತೆಯೇ ಅವರ ರಾಜಕಾರಣಕ್ಕೆ ಶಕ್ತಿ ತುಂಬಿದ್ದವು. ಈಗಿನ ರಾಜಕಾರಣದಲ್ಲಿ ಅಭಿವೃದ್ಧಿಯೂ ಇಲ್ಲ, ಬದ್ಧತೆಯೂ ಇಲ್ಲ. ಸೇಡು, ದ್ವೇಷ, ಹಣವೇ ಪ್ರಧಾನವಾಗಿರುವುದು ಬೇಸರ ತರಿಸುತ್ತದೆ.

ತಾ.ಸಿ.ತಿಮ್ಮಯ್ಯ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಆರ್ಥಿಕ ಸಮೀಕ್ಷೆ

ಹವಾಮಾನ ಬದಲಾವಣೆ ನಿಯಂತ್ರಣಕ್ಕೆ ಸುಸ್ಥಿರ ಪರಿಹಾರಗಳ ಅಗತ್ಯದ ಪ್ರತಿಪಾದನೆ

ಪಶ್ಚಿಮದ ಮಾದರಿ ಭಾರತಕ್ಕಲ್ಲ

ದೇಶದ ಅರ್ಥ ವ್ಯವಸ್ಥೆಯ ದಿಕ್ಸೂಚಿಯಾಗಿರುವ ಆರ್ಥಿಕ ಸಮೀಕ್ಷೆ 2023–24ರಲ್ಲಿ ಹಲವು ಪ್ರಮುಖ ಕ್ಷೇತ್ರಗಳಲ್ಲಿ ಆಗಿರುವ ಅಭಿವೃದ್ಧಿಯನ್ನು ಗುರುತಿಸುತ್ತಲೇ, ಮತ್ತಷ್ಟು ಪ್ರಗತಿಯನ್ನು ಸಾಧಿಸಲು ಕೈಗೊಳ್ಳಬೇಕಿರುವ ಉಪಕ್ರಮಗಳ ಬಗ್ಗೆಯೂ ಬೆಳಕು ಚೆಲ್ಲಲಾಗಿದೆ.

ಜಾಗತಿಕ ಮಟ್ಟದಲ್ಲಿ ಅರ್ಥವ್ಯವಸ್ಥೆ ಸೇರಿದಂತೆ ವಿವಿಧ ಕ್ಷೇತ್ರಗಳ ಮೇಲೆ ಪರಿಣಾಮ ಬೀರುತ್ತಿರುವ ಹವಾಮಾನ ಬದಲಾವಣೆಯ ಬಗ್ಗೆಯೂ ಆರ್ಥಿಕ ಮುನ್ನೋಟದಲ್ಲಿ ಪ್ರಸ್ತಾಪಿಸಲಾಗಿದೆ. ಈ ವಿಚಾರವಾಗಿ ದೇಶದಲ್ಲಿ ಆಗಬೇಕಾದ ಕೆಲಸಗಳನ್ನೂ ವಿವರಿಸಲಾಗಿದೆ. ಚಾಲ್ತಿಯಲ್ಲಿರುವ ಜಾಗತಿಕ ಕಾರ್ಯತಂತ್ರಗಳು ದೋಷಪೂರಿತವಾಗಿದ್ದು, ದೇಶವು ಸುಸ್ಥಿರ ಪರಿಹಾರಗಳನ್ನು ಹುಡುಕಿಕೊಳ್ಳಬೇಕಾಗಿದೆ ಎಂದು ಪ್ರತಿಪಾದಿಸಿದೆ. ಹವಾಮಾನ ಬದಲಾವಣೆ (Climate Change) ಮತ್ತು ಇಂಧನ ಪರಿವರ್ತನೆ (Energy Transition) ಇವೆರಡರ ನಡುವೆ ಸಮತೋಲನ ಕಾಯ್ದುಕೊಳ್ಳುವುದರ ಅಗತ್ಯದ ಬಗ್ಗೆ ಸಮೀಕ್ಷೆ ಒತ್ತಿ ಹೇಳಿದೆ.

ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಜಗತ್ತಿನ ಆರ್ಥಿಕತೆಗಳಲ್ಲಿ ಒಂದಾದ ಭಾರತದ ವಾರ್ಷಿಕ ತಲಾ ಇಂಗಾಲದ ಹೊರಸೂಸುವಿಕೆ ಪ್ರಮಾಣ ಜಾಗತಿಕ ಸರಾಸರಿಯ ಮೂರನೇ ಒಂದರಷ್ಟಿದೆ. 2070ರ ಹೊತ್ತಿಗೆ ಇಂಗಾಲ ಹೊರಸೂಸುವಿಕೆ ಪ್ರಮಾಣವನ್ನು ಶೂನ್ಯಕ್ಕೆ ಇಳಿಸುವ ಮೂಲಕ ದೇಶವು ತನ್ನ ಆರ್ಥಿಕ ಬೆಳವಣಿಗೆ ಸಾಧಿಸುವುದಲ್ಲದೇ, ಸುಸ್ಥಿರ ಅಭಿವೃದ್ಧಿಯ ಮಾರ್ಗವನ್ನು ತೋರಿಸಿಕೊಡಲಿದೆ ಎಂದು ಸಮೀಕ್ಷೆ ಅಭಿಪ್ರಾಯಪಟ್ಟಿದೆ.

‘ಐರೋಪ್ಯ ಒಕ್ಕೂಟವು ಇಂಧನ ಆಧಾರಿತ ಉತ್ಪನ್ನಗಳ ಮೇಲೆ ‘ಇಂಗಾಲದ ತೆರಿಗೆ’ ವಿಧಿಸಲು ಮುಂದಾಗಿರುವುದು ಪ್ಯಾರಿಸ್ ಒಪ್ಪಂದದ ಉಲ್ಲಂಘನೆಯಾಗಿದೆ. ಮುಂದುವರಿದ ದೇಶಗಳು ‘ಇಂಗಾಲದ ತೆರಿಗೆ’ ವಿಧಿಸಲು ಮುಂದಾಗುತ್ತಿದ್ದರೂ, ಕೃತಕ ಬುದ್ಧಿಮತ್ತೆಯ ಗೀಳಿನಿಂದಾಗಿ ಅವರ ಇಂಧನ ಬೇಡಿಕೆ ಹಿಂದೆಂದೂ ಕಂಡರಿಯದ ರೀತಿಯಲ್ಲಿ ಹೆಚ್ಚಾಗುತ್ತಿದೆ. ಅಂದರೆ ಭಾರತವು ಹವಾಮಾನ ಬದಲಾವಣೆಯೊಂದಿಗೆ ಸೆಣಸುತ್ತಾ, ಇಂಧನ ಪರಿವರ್ತನೆ ಮಾಡಿಕೊಳ್ಳುವುದರ ಜೊತೆಜೊತೆಯಲ್ಲೇ ಮುಂದುವರಿದ ದೇಶಗಳ ರಕ್ಷಣಾತ್ಮಕ ನೀತಿಗಳ ಜೊತೆಗೂ ಸೆಣಸಬೇಕಾಗಿದೆ’ ಎಂದು ಅದು ಹೇಳಿದೆ.

ಜಾಗತಿಕ ತಾಪಮಾನವು 2 ಡಿಗ್ರಿ ಸೆಲ್ಸಿಯಸ್‌ಗಿಂತ ಕಡಿಮೆ ಇರಬೇಕು ಎನ್ನುವ ಮಿತಿ ಇದೆ. ಜಿ20 ರಾಷ್ಟ್ರಗಳ ಪೈಕಿ ಭಾರತವು ಈ ಮಿತಿಯೊಳಗಿರುವ ಏಕೈಕ ದೇಶವಾಗಿದ್ದು, ಹವಾಮಾನ ಬದಲಾವಣೆ ವಿರುದ್ಧ ತೀವ್ರ ಹೋರಾಟ ನಡೆಸುತ್ತಿದೆ. ದೇಶದ ನವೀಕರಿಸಬಹುದಾದ ಇಂಧನದ ಸಾಮರ್ಥ್ಯದಲ್ಲಿ ಹೆಚ್ಚಳವಾಗಿದ್ದು, ಪಳೆಯುಳಿಕೆ ಇಂಧನ ಮೂಲಗಳಿಂದ ಉತ್ಪಾದಿಸಲಾಗುವ ವಿದ್ಯುಚ್ಛಕ್ತಿಯ ಪ್ರಮಾಣ ಶೇ 45.4ರಷ್ಟು ಇದೆ. 2047ರ ಹೊತ್ತಿಗೆ ದೇಶದ ಇಂಧನ ಅಗತ್ಯವು ಶೇ 2ರಿಂದ ಶೇ 2.5ರಷ್ಟು ಹೆಚ್ಚಾಗಲಿದೆ ಎಂದು ನಿರೀಕ್ಷಿಸಲಾಗಿದೆ.

‘ಹವಾಮಾನ ಬದಲಾವಣೆ ವಿಚಾರದಲ್ಲಿ ಭಾರತವು ಪಶ್ಚಿಮದ ರಾಷ್ಟ್ರಗಳನ್ನು ಅನುಸರಿಸುವ ಅಗತ್ಯವಿಲ್ಲ. ಅಲ್ಲಿನ ಮಾದರಿ ದೇಶದ ಅಗತ್ಯಗಳ ಜೊತೆ ಹೊಂದಾಣಿಕೆಯಾಗದಿರುವುದರಿಂದ ನಾವು ನಮ್ಮದೇ ಮಾರ್ಗ ಕಂಡುಕೊಳ್ಳಬೇಕಿದೆ. ಈ ಸಮಸ್ಯೆ ಎದುರಿಸುವಾಗ ನಮ್ಮ ದೇಶದ ವಿಶಿಷ್ಟ ಸಾಮಾಜಿಕ ಮತ್ತು ಸಾಂಸ್ಕೃತಿಕ ರಚನೆಯನ್ನೂ ಪರಿಗಣಿಸಬೇಕಾಗುತ್ತದೆ’ ಎಂದು ಸಮೀಕ್ಷೆ ವಿವರಿಸಿದೆ.

‘ನವೀಕರಿಸಬಹುದಾದ ಇಂಧನಗಳ ಬಳಕೆ ಜಾಸ್ತಿಯಾದಂತೆ ನೀರು ಮತ್ತು ಭೂಮಿಯ ಅಗತ್ಯವನ್ನು ಹೆಚ್ಚಿಸಲಿದೆ. ಇದು ಸಾಧ್ಯವಾಗಬೇಕು ಎಂದರೆ, ಇಂಧನ ಪರಿವರ್ತನೆಯು ಇತರ ಸಂಪನ್ಮೂಲಗಳ ಬೇಡಿಕೆಯೊಂದಿಗೆ ಸಮನ್ವಯ ಸಾಧಿಸಬೇಕು. ಹವಾಮಾನ ಬದಲಾವಣೆಯನ್ನು ಪರಿಣಾಮಕಾರಿಯಾಗಿ ಎದುರಿಸಬೇಕಾದರೆ, ಇಂಧನ ಪರಿವರ್ತನೆಯ ಸಮತೋಲಿತ ಕ್ರಮವನ್ನು ಅನುಸರಿಸಬೇಕು ಮತ್ತು ಸುಸ್ಥಿರ ಅಭಿವೃದ್ಧಿಯ ಮಹತ್ವವನ್ನು ಅರಿಯಬೇಕು’ ಎಂದು ಸಮೀಕ್ಷೆ ವಿವರಿಸಿದೆ.

ನರೇಗಾ ವೆಚ್ಚ ಗ್ರಾಮೀಣ ಸಂಕಷ್ಟದ ಸೂಚಕವೇ?

ನರೇಗಾ ಯೋಜನೆ ಅನುಷ್ಠಾನದಲ್ಲಿ ರಾಜ್ಯಗಳ ನಡುವೆ ವ್ಯತ್ಯಾಸವಿದೆ. ಈ ವಿಷಯದ ಬಗ್ಗೆ ಹಲವು ಅಧ್ಯಯನಗಳು ನಡೆದಿವೆ. ಆದರೆ, ಯಾವುದರಲ್ಲೂ ತೃಪ್ತಿದಾಯಕ ವಿವರಣೆ ಸಿಕ್ಕಿಲ್ಲ. ಸರ್ಕಾರವು ಖಾತ್ರಿ ಯೋಜನೆಗೆ ಮಾಡುತ್ತಿರುವ ವೆಚ್ಚ ಗ್ರಾಮೀಣ ಸಂಕಷ್ಟವನ್ನು ಪ್ರತಿಬಿಂಬಿಸುತ್ತಿದೆ ಎಂದು ಕೆಲವು ವರದಿಗಳು ಹೇಳುತ್ತವೆ.

‘ಒಂದು ವೇಳೆ ನಿಜವೇ ಆಗಿದ್ದರೆ, ಹೆಚ್ಚು ಬಡತನ ಮತ್ತು ನಿರುದ್ಯೋಗ ಪ್ರಮಾಣ ಹೊಂದಿರುವ ರಾಜ್ಯಗಳು ನರೇಗಾ ಅಡಿ ಹೆಚ್ಚು ಅನುದಾನ ಬಳಸಬೇಕಿತ್ತು ಮತ್ತು ಹೆಚ್ಚು ಉದ್ಯೋಗ ಸೃಷ್ಟಿಯಾಗಬೇಕಿತ್ತು. ಆದರೆ, ಅಂಕಿ ಅಂಶಗಳು ಬೇರೆಯದನ್ನೇ ಹೇಳುತ್ತವೆ’ ಎಂದು ಹೇಳಿರುವ ಆರ್ಥಿಕ ಸಮೀಕ್ಷೆ, ಈ ವಾದವನ್ನು ತಳ್ಳಿಹಾಕಿದೆ.

ನೀತಿ ಆಯೋಗದ ವರದಿಯ ಪ್ರಕಾರ, ದೇಶದಲ್ಲಿರುವ ಬಡ ಜನರಲ್ಲಿ ತಮಿಳುನಾಡಿನಲ್ಲಿ ಶೇ 1ಕ್ಕಿಂತಲೂ ಕಡಿಮೆ ಸಂಖ್ಯೆಯ ಬಡವರಿದ್ದಾರೆ. ಕೇಂದ್ರ ಸರ್ಕಾರ ಬಿಡುಗಡೆ ಮಾಡಿರುವ ನರೇಗಾ ಅನುದಾನದಲ್ಲಿ ಶೇ 15ರಷ್ಟನ್ನು ತಮಿಳುನಾಡು ಬಳಸಿದೆ. ಶೇ 0.1ರಷ್ಟು ಬಡವರನ್ನು ಹೊಂದಿರುವ ಕೇರಳ ರಾಜ್ಯ ಶೇ 4ರಷ್ಟು ನರೇಗಾ ನಿಧಿಯನ್ನು ಪಡೆದಿದೆ. ಈ ಎರಡು ರಾಜ್ಯಗಳು 51 ಕೋಟಿಯಷ್ಟು ಮಾನವ ದಿನಗಳಷ್ಟು ಉದ್ಯೋಗ ಸೃಷ್ಟಿ ಮಾಡಿವೆ. ಇದಕ್ಕೆ ಪ್ರತಿಯಾಗಿ ನೀತಿ ಆಯೋಗದ ವರದಿ ಪ್ರಕಾರ ಶೇ 45ರಷ್ಟು ಬಡಜನಸಂಖ್ಯೆ ಹೊಂದಿರುವ ಬಿಹಾರ ಮತ್ತು ಉತ್ತರ ಪ್ರದೇಶ ರಾಜ್ಯಗಳು (ಕ್ರಮವಾಗಿ ಶೇ 20 ಮತ್ತು ಶೇ 25ರಷ್ಟು) ನರೇಗಾ ಅನುದಾನದ ಶೇ 17ರಷ್ಟು (ಕ್ರಮವಾಗಿ ಶೇ 6 ಮತ್ತು ಶೇ 11) ಮಾತ್ರ ಬಳಸಿವೆ. ಇವೆರಡು ರಾಜ್ಯಗಳು 53 ಕೋಟಿ ಮಾನವ ದಿನಗಳನ್ನು ಸೃಷ್ಟಿಸಿವೆ ಎಂದು ಸಮೀಕ್ಷೆ ಹೇಳಿದೆ.





₹935 ಕೋಟಿ ದುರ್ಬಳಕೆ

ನರೇಗಾ ಯೋಜನೆಯ ಅಡಿಯಲ್ಲಿ ನಾಲ್ಕು ವರ್ಷಗಳಲ್ಲಿ ದೇಶದಾದ್ಯಂತ ₹935 ಕೋಟಿಯಷ್ಟು ಅನುದಾನ ದುರ್ಬಳಕೆ ಆಗಿರುವುದನ್ನು ಯೋಜನೆಯ ಲೆಕ್ಕ ಪರಿಶೋಧನೆ ಪತ್ತೆ ಮಾಡಿದೆ. ಎಲ್ಲ ಪ್ರಯತ್ನಗಳ ಹೊರತಾಗಿಯೂ ಯೋಜನೆಯ ಫಲಾನುಭವಿಗಳಿಗೆ ಹಣ ಸಿಗುತ್ತಿಲ್ಲ. ಜಾಬ್ ಕಾರ್ಡ್ ಹೊಂದಿರುವವರು ಬೇರೆಯವರಿಗೆ ಕಾರ್ಡ್ ನೀಡುವುದು, ಕಾರ್ಮಿಕರು ಗುತ್ತಿಗೆದಾರರಿಗೆ ಪಾವತಿ ಮಾಡುವುದು, ಕಾರ್ಮಿಕರ ಬದಲಾಗಿ ಅಕ್ರಮವಾಗಿ ಯಂತ್ರಗಳನ್ನು ಬಳಸುವುದು, ಕಾರ್ಯ ಸಾಧ್ಯವಲ್ಲದ ಬಜೆಟ್ ನಿಗದಿ, ಅನುದಾನ ಬಿಡುಗಡೆಗೆ ವಿಳಂಬ, ದೃಢಪಡದ ರಸೀದಿಗಳನ್ನು ಸಲ್ಲಿಸುವುದು ಸೇರಿದಂತೆ ಇನ್ನಿತರ ವಿಧಾನಗಳಲ್ಲಿ ಅಕ್ರಮ ನಡೆಯುತ್ತಿದೆ ಎಂದು ಸಮೀಕ್ಷಾ ವರದಿ ಹೇಳಿದೆ.

2018–20ರ ನಡುವೆ ₹658 ಕೋಟಿಯಷ್ಟು ಅನುದಾನ ದುರ್ಬಳಕೆಯಾಗಿದೆ ಎಂದು ಸೋಷಿಯಲ್ ಅಕೌಂಟೆಬಿಲಿಟಿ ಫೋರಂ ತನ್ನ ಲೆಕ್ಕಪರಿಶೋಧನಾ ವರದಿಯಲ್ಲಿ ತಿಳಿಸಿದೆ. ಯೋಜನೆ ಅನುಷ್ಠಾನದ ಸಂದರ್ಭದಲ್ಲಿ ಪಾರದರ್ಶಕತೆ, ಹೊಣೆಗಾರಿಕೆ, ದಾಖಲೆಗಳನ್ನು ಸಂಗ್ರಹಿಸಿಡುವ ಪ್ರಕ್ರಿಯೆಯಲ್ಲಿ ನಿಯಮಗಳನ್ನು ಉಲ್ಲಂಘಿಸಲಾಗುತ್ತಿದೆ ಎಂದು ವರದಿ ವಿವರಿಸಿದೆ.

ಚೀನಾ ಮೇಲಿನ ಅವಲಂಬನೆ ಇಳಿಕೆ

ಕಡ್ಡಾಯ ಗುಣಮಟ್ಟ ನೀತಿ ಮತ್ತು ಸೀಮಾ ಸುಂಕದ ಹೆಚ್ಚಳವು ದೇಶೀಯ ಆಟಿಕೆ ತಯಾರಿಕಾ ಉದ್ಯಮಕ್ಕೆ ನೆರವಾಗಿದ್ದು, ಇದರಿಂದ ರಫ್ತು ಹೆಚ್ಚಾಗಲಿದೆ. ಜತೆಗೆ ಚೀನಾದ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡಲಿದೆ ಎಂದು ಆರ್ಥಿಕ ಸಮೀಕ್ಷೆ ತಿಳಿಸಿದೆ.

ದಶಕದ ಹಿಂದೆ ಭಾರತವು ಚೀನಾದ ಆಮದಿನ ಮೇಲೆ ಶೇ 76ರಷ್ಟು ಅವಲಂಬಿತವಾಗಿತ್ತು. ಜಾಗತಿಕ ಮಾರುಕಟ್ಟೆಯಲ್ಲಿ ಭಾರತದ ಆಟಿಕೆ ತಯಾರಿಕಾ ಉದ್ಯಮವು ಹಲವು ಸವಾಲುಗಳನ್ನು ಎದುರಿಸುತ್ತಿತ್ತು. ಈಗ ದೇಶದ ರಫ್ತು ಹೆಚ್ಚಾಗಿದ್ದು, ಕೊರತೆಯ ದೇಶವಾಗಿದ್ದ ಭಾರತದಲ್ಲಿ ಇಂದು ಹೆಚ್ಚು ಆಟಿಕೆಗಳು ಉತ್ಪಾದನೆಯಾಗುತ್ತಿವೆ ಎಂದು ಸಮೀಕ್ಷೆ ಹೇಳಿದೆ.

ಇದೇ ರೀತಿ, ಭಾರತವು ನಿರ್ಣಾಯಕ ಖನಿಜಗಳಿಗಾಗಿ ಚೀನಾ ಮೇಲೆ ಅವಂಬಿಸಿರುವುದರ ಪರಿಣಾಮಗಳು ಮತ್ತು ಸವಾಲುಗಳ ಬಗ್ಗೆಯೂ ಗಮನ ಹರಿಸಬೇಕಿದೆ ಎಂದು ಸಮೀಕ್ಷೆಯಲ್ಲಿ ಹೇಳಲಾಗಿದೆ.

ಸಮೀಕ್ಷೆಯ ಸಾರ

- ಕೃತಕ ಬುದ್ಧಿಮತ್ತೆಯಂತಹ ತಂತ್ರಜ್ಞಾನಗಳು ಜನರ ಉದ್ಯೋಗ ಮತ್ತು ಆದಾಯಕ್ಕೆ ಕುತ್ತು ತರುವ ಸಾಧ್ಯತೆ ಇದ್ದು, ಮುಂಬರುವ ವರ್ಷಗಳಲ್ಲಿ ಆದಾಯ ಅಸಮಾನತೆಯನ್ನು ಹೋಗಲಾಡಿಸುವಲ್ಲಿ ತೆರಿಗೆ ನೀತಿಗಳು ಪ್ರಮುಖ ಪಾತ್ರ ವಹಿಸಲಿವೆ
- ಗ್ರಾಹಕರ ಮೇಲೆ ಹೊರೆ ಹಾಕಿ ಅಲ್ಪಾವಧಿ ಲಾಭವನ್ನು ಪಡೆಯುವ ಪ್ರವೃತ್ತಿಗೆ ಬ್ಯಾಂಕ್‌ಗಳು ಕಡಿವಾಣ ಹಾಕಬೇಕು
- ದೇಶೀಯ ಉತ್ಪಾದನೆಗೆ ಪ್ರೋತ್ಸಾಹ, ರಫ್ತಿನಲ್ಲಿ ಆಗುತ್ತಿರುವ ಹೆಚ್ಚಳದಿಂದಾಗಿ ಭಾರತದ ವ್ಯಾಪಾರ ಕೊರತೆ ಇನ್ನಷ್ಟು ಕಡಿಮೆಯಾಗಲಿದೆ
- ಡಾಟಾ ಖಾಸಗಿತನ ವಿಚಾರ ಮತ್ತು ಆನ್‌ಲೈನ್ ವಂಚನೆಯು ಇ-ವಾಣಿಜ್ಯದ ಅಭಿವೃದ್ಧಿಗೆ ತೊಡಕಾಗಿವೆ
- ಕೇಂದ್ರದ ಮಹತ್ವಾಕಾಂಕ್ಷೆಯ ಆಯುಷ್ಮಾನ್ ಭಾರತ್ ಆರೋಗ್ಯ ವಿಮಾ ಯೋಜನೆಯಿಂದ ಕುಟುಂಬಗಳಿಗೆ ಚಿಕಿತ್ಸಾ ಹೊರೆ ಕಡಿಮೆಯಾಗಿದೆ. ಚಿಕಿತ್ಸೆಗಾಗಿ ಸಾಲ ಮಾಡುವುದನ್ನು ತಪ್ಪಿಸಿದೆ
- ಹಿಂದಿನ ವರ್ಷಕ್ಕೆ ಹೋಲಿಸಿದರೆ 2023–24ರಲ್ಲಿ ರೈಲಿನಲ್ಲಿ ಪ್ರಯಾಣಿಸಿದವರ ಸಂಖ್ಯೆ ಶೇ 5.2ರಷ್ಟು ಹೆಚ್ಚಾಗಿದೆ. 673ಕೋಟಿ ಮಂದಿ ಪ್ರಯಾಣಕ್ಕೆ ರೈಲುಗಳನ್ನು ಬಳಸಿದ್ದಾರೆ.
- ದೇಶದ ಹಿರಿಯ ನಾಗರಿಕರ ಕಾಳಜಿಗಾಗಿ ರಚನಾತ್ಮಕವಾದ ನೀತಿಗಳ ಅಗತ್ಯವಿದೆ
- ಹೆಚ್ಚುತ್ತಿರುವ ಬೊಜ್ಜು ಆತಂಕಕಾರಿ. ಉತ್ತಮ ಜೀವನ ಶೈಲಿ ಪಾಲನೆಗೆ ಕ್ರಮ ಕೈಗೊಳ್ಳಬೇಕು. ಮಾನಸಿಕ ಆರೋಗ್ಯ ಕಾಪಾಡಲೂ ಕ್ರಮ ಅಗತ್ಯ

ಸಬಲೀಕರಣದತ್ತ ‘ನಾರಿಶಕ್ತಿ’

ದೇಶದ ಮಹಿಳೆಯರು ಆರ್ಥಿಕವಾಗಿ ಸಬಲರಾಗಲು ದಾಪುಗಾಲು ಇಡುತ್ತಿದ್ದಾರೆ ಎಂದು ಹೇಳುತ್ತದೆ ಆರ್ಥಿಕ ಸಮೀಕ್ಷೆ.

ಉದ್ಯೋಗದಲ್ಲಿ ಮಹಿಳೆಯರ ಭಾಗೀದಾರಿಕೆ ಪ್ರಮಾಣ (ಎಲ್‌ಎಫ್‌ಪಿಆರ್) 2017–18ರಲ್ಲಿ ಶೇ 23.3ರಲ್ಲಿತ್ತು, ಅದೀಗ ಶೇ 37ಕ್ಕೆ ಏರಿದೆ. ಗ್ರಾಮೀಣ ಭಾಗದಲ್ಲಿ ನಾಲ್ಕನೇ ಮೂರರಷ್ಟು ಮಹಿಳೆಯರು ಕೃಷಿಗೆ ಸಂಬಂಧಿಸಿದ ಕೆಲಸಗಳಲ್ಲಿ ತೊಡಗಿಕೊಂಡಿದ್ದಾರೆ. ಮಹಿಳೆಯರು ಕುಟುಂಬಕ್ಕೆ ‘ಹೊರೆ’ ಎಂಬ ಭಾವನೆ ಹಿಂದೆ ಇತ್ತು. ಆದರೆ, ಈಗ ಅವರು ಉದ್ಯೋಗ ಪಡೆಯುತ್ತಿರುವುದರಿಂದ ಕುಟುಂಬದ ಆಧಾರವಾಗಿ ಬದಲಾಗಿದ್ದಾರೆ ಎಂದು ಸಮೀಕ್ಷೆ ವಿವರಿಸಿದೆ.

ಕೇಂದ್ರ ಸರ್ಕಾರದ ಹಲವು ಯೋಜನೆಗಳ ದೊಡ್ಡ ಮಟ್ಟಿನ ಲಾಭವನ್ನು ಮಹಿಳೆಯರು ಪಡೆದಿದ್ದಾರೆ. ಪಿಎಂ ಜನಧನ ಯೋಜನೆಯಲ್ಲಿ 52.3 ಕೋಟಿ ಮಂದಿ ಬ್ಯಾಂಕ್ ಖಾತೆ ತೆರೆದಿದ್ದು, ಇದರಲ್ಲಿ ಶೇ 55.6ರಷ್ಟು ಖಾತೆದಾರರು ಮಹಿಳೆಯರು. ಇದರಿಂದಾಗಿ ಈ ಖಾತೆಗಳಲ್ಲಿ ಹಣ ಠೇವಣಿ ಇಟ್ಟಿರುವ ಪ್ರಮಾಣ ನಾಲ್ಕು ಪಟ್ಟು ಹೆಚ್ಚಾಗಿದೆ. ದೀನ ದಯಾಳ್ ಅಂತ್ಯೋದಯ ಯೋಜನೆಯ ಅಡಿಯಲ್ಲಿ ಬರುವ ಸ್ವಸಹಾಯ ಸಂಘಗಳಲ್ಲಿ 8.9 ಕೋಟಿ ಮಹಿಳೆಯರು ತೊಡಗಿಕೊಂಡಿದ್ದಾರೆ.

ಉದ್ಯಮಶೀಲತೆಯಲ್ಲೂ ಮಹಿಳೆಯರು ಮುಂದಿದ್ದಾರೆ. ಸ್ಟಾರ್ಟ್ ಅಪ್ ಮತ್ತು ಸ್ಟ್ಯಾಂಡ್ ಅಪ್ ಇಂಡಿಯಾ ಯೋಜನೆಗಳಲ್ಲಿ ಮಹಿಳೆಯರು ಸಕ್ರಿಯವಾಗಿ ತೊಡಗಿಕೊಂಡಿದ್ದಾರೆ. ಪಿಎಂ ಮುದ್ರಾ ಯೋಜನೆ ಅಡಿಯಲ್ಲಿ ಶೇ 68ರಷ್ಟು ಸಾಲಗಳನ್ನು ಮಹಿಳಾ ಉದ್ಯಮಿಗಳಿಗೆ ನೀಡಲಾಗಿದೆ. ಸ್ಟ್ಯಾಂಡ್ ಅಪ್ ಇಂಡಿಯಾದ ಫಲಾನುಭವಿಗಳಲ್ಲಿ ಶೇ 53ರಷ್ಟು ನಾರಿಯರು. ಬೈನ್ ಅಂಡ್ ಕಂಪನಿ ಪ್ರಕಾರ, 1.35 ಕೋಟಿಯಿಂದ 1.57 ಕೋಟಿಗಳಷ್ಟು ಮಹಿಳಾ ಉದ್ಯಮಿಗಳು ದೇಶದಲ್ಲಿದ್ದಾರೆ. 2030ರ ವೇಳೆಗೆ ಈ ಸಂಖ್ಯೆ 3.15 ಕೋಟಿಗೆ ಹೆಚ್ಚಲಿದೆ ಎಂದು ಅಂದಾಜಿಸಲಾಗಿದೆ.

ಗ್ರಾಮಗಳ ಸುಸ್ಥಿರ ಅಭಿವೃದ್ಧಿಯ ವಾಗ್ದಾನ

ಗ್ರಾಮೀಣ ಜನರ ಬದುಕನ್ನು ಹಸನುಗೊಳಿಸುವುದಕ್ಕಾಗಿ ಗ್ರಾಮೀಣ ಭಾರತದ ಸಮಗ್ರ ಮತ್ತು ಸುಸ್ಥಿರ ಅಭಿವೃದ್ಧಿಯು ಸರ್ಕಾರದ ಆಡಳಿತ ಕಾರ್ಯತಂತ್ರದ ಪ್ರಮುಖ ವಿಚಾರ ಎಂದು ಕೇಂದ್ರ ಸರ್ಕಾರ ಆರ್ಥಿಕ ಸಮೀಕ್ಷೆಯಲ್ಲಿ ಹೇಳಿದೆ.

11.57 ಕೋಟಿ ಸ್ವಚ್ಛಭಾರತ ಮಿಷನ್–ಗ್ರಾಮೀಣ ಅಡಿಯಲ್ಲಿ ನಿರ್ಮಿಸಲಾಗಿರುವ ಶೌಚಾಲಯಗಳು (ಜುಲೈ 10ರವರೆಗೆ)

2.39 ಲಕ್ಷ ನಿರ್ಮಿಸಲಾಗಿರುವ ಸಮುದಾಯ ಶೌಚಾಲಯಗಳು

2.63 ಕೋಟಿ ಪಿಎಂ-ಆವಾಸ್ ಯೋಜನೆ–ಗ್ರಾಮೀಣ ಯೋಜನೆಯಡಿ ನಿರ್ಮಿಸಿರುವ ಮನೆಗಳು

4.29 ಲಕ್ಷ ಗ್ರಾಮೀಣ ಭಾಗದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಾಮಾನ್ಯ ಸೇವಾ ಕೇಂದ್ರಗಳು

15.14 ಲಕ್ಷ ಕಿ.ಮೀ 2014–15ರಿಂದ ಇಲ್ಲಿಯವರೆಗೆ ಗ್ರಾಮ ಸಡಕ್ ಯೋಜನೆಯಡಿ ನಿರ್ಮಿಸಿರುವ ರಸ್ತೆಯ ಉದ್ದ

10.3 ಕೋಟಿ ಪಿಎಂ ಉಜ್ವಲ ಅಡಿ ನೀಡಿರುವ ಅಡುಗೆ ಅನಿಲ ಸಂಪರ್ಕ

ಆ.11ಕ್ಕೆ ತರುಣ್ ಸೋನಲ್ ಮದುವೆ

ಚಂದನವನದಲ್ಲಿ ಮತ್ತೊಂದು ಪ್ರೇಮಕಥೆ ಚಿಗುರೊಡೆದಿದೆ. ‘ಕಾಟೇರ’ ಸಿನಿಮಾ ನಿರ್ದೇಶಕ ತರುಣ್ ಕಿಶೋರ್ ಸುಧೀರ್ ಹಾಗೂ ನಟಿ ಸೋನಲ್ ಮೊಂತೆರೋ ಮದುವೆ ಆಗಸ್ಟ್ 11ರಂದು ನಡೆಯಲಿದೆ. ಸೋಮವಾರ ಅಧಿಕೃತವಾಗಿ ತರುಣ್ ಇನ್‌ಸ್ಟಾಗ್ರಾಂನಲ್ಲಿ ಈ ವಿಷಯ ತಿಳಿಸಿದ್ದಾರೆ.

ವಿಷಯ ತಿಳಿಸಲು ಚಿತ್ರಮಂದಿರದ ಒಳಗೇ ವಿಶೇಷ ವಿಡಿಯೊವೊಂದನ್ನು ತರುಣ್–ಸೋನಲ್ ಚಿತ್ರೀಕರಿಸಿದ್ದು, ‘ತನ್ನ ಅತ್ಯದ್ಭುತ ಪ್ರೇಮಕಥೆಯನ್ನು ಸೋನಲ್ ಜೊತೆ ನಿರ್ದೇಶಿಸುತ್ತಿದ್ದೇನೆ. ನಮ್ಮ ಕಥೆಯ ಶುಭಾರಂಭಕ್ಕೆ ಆಶೀರ್ವಾದವಿರಲಿ’ ಎಂದಿದ್ದಾರೆ ತರುಣ್. ಆಗಸ್ಟ್ 10-11ರಂದು ಬೆಂಗಳೂರಿನಲ್ಲಿ ಹಿಂದೂ ಸಂಪ್ರದಾಯದಂತೆ ಮದುವೆ ಕಾರ್ಯಕ್ರಮಗಳು ನಡೆಯಲಿವೆ.

‘ರ್‍ಯಾಂಬೊ’ ಚಿತ್ರದಲ್ಲಿ ಸಹ–ನಿರ್ದೇಶಕರಾಗಿ ಕೆಲಸ ಮಾಡಿದ್ದ ತರುಣ್, ‘ಚೌಕ’ ಚಿತ್ರದ ಮೂಲಕ ನಿರ್ದೇಶನಕ್ಕೆ ಕಾಲಿಟ್ಟರು. ನಂತರದಲ್ಲಿ ‘ರಾಬರ್ಟ್’ ಹಾಗೂ ‘ಕಾಟೇರ’ ಸಿನಿಮಾ ನಿರ್ದೇಶಿಸಿದ್ದರು. ಇವೆರಡು ಸಿನಿಮಾಗಳು ಬಾಕ್ಸ್ ಆಫೀಸ್‌ನಲ್ಲಿ ದೊಡ್ಡ ಸದ್ದು ಮಾಡಿತ್ತು. ನಟನಾಗಿಯೂ ಕೆಲ ಸಿನಿಮಾಗಳಲ್ಲಿ ತರುಣ್ ನಟಿಸಿದ್ದಾರೆ. ಮಂಗಳೂರಿನ ಪಡೀಲ್‌ನಲ್ಲಿ ಹುಟ್ಟಿದ ಸೋನಲ್ ಕೋಸ್ಟಲ್‌ವುಡ್‌ನಲ್ಲಿ ಮಿಂಚಿ ಸ್ಯಾಂಡಲ್‌ವುಡ್‌ಗೆ ಹೆಜ್ಜೆ ಇಟ್ಟವರು. ಸೋನಲ್ ನಟನೆಯ ತುಳು ಸಿನಿಮಾ ‘ಎಕ್ಕಸಕ’ ಹಿಟ್ ಆಗಿದ್ದೇ ಚಂದನವನದ ಬಾಗಿಲು ತೆರೆದುಕೊಂಡಿತು. ಯೋಗರಾಜ್ ಭಟ್ ನಿರ್ದೇಶನದ ‘ಪಂಚತಂತ್ರ’ ಸೋನಲ್ ಸಿನಿಗ್ರಾಫ್‌ಗೆ ಕಿಕ್‌ಸ್ಟಾರ್ಟ್ ನೀಡಿತು. ನಂತರದಲ್ಲಿ ತರುಣ್ ನಿರ್ದೇಶನದ ‘ರಾಬರ್ಟ್’ ಸಿನಿಮಾದಲ್ಲಿ ‘ನರ್ಸಮ್ಮ’ ಆಗಿ ಮಿಂಚಿದ್ದರು ಸೋನಲ್. ‘ಶುಗರ್ ಫ್ಯಾಕ್ಟರಿ’, ‘ಬನಾರಸ್’, ‘ಗರಡಿ’ ಸೋನಲ್ ನಟಿಸಿರುವ ಸಿನಿಮಾಗಳು. ವಿನೋದ್ ಪ್ರಭಾಕರ್ ಜೊತೆ ನಟಿಸಿದ ‘ಮಾದೇವ’. ‘ರೋಲೆಕ್ಸ್’, ‘ಬುದ್ಧಿವಂತ–2’, ‘ಮಿ.ನಟವರ್‌ಲಾಲ್’, ‘ತಲ್ವಾರ್‌ಪೇಟೆ’, ‘ಮಾರ್ಗರೇಟ್ ಲವರ್ ಆಫ್ ರಾಮಾಚಾರಿ’ ಹಾಗೂ ‘ಭಾರತದ ಕೋಗಿಲೆ’ ಎಂದೇ ಜನಪ್ರಿಯರಾಗಿದ್ದ ಸರೋಜಿನಿ ನಾಯ್ಡು ಅವರ ಬಯೋಪಿಕ್‌ನಲ್ಲಿ ಸೋನಲ್ ನಟಿಸಿದ್ದು, ಇವುಗಳು ಇನ್ನಷ್ಟೇ ಬಿಡುಗಡೆಯಾಗಬೇಕಿದೆ.

ದ್ವಾಪರ ದಾಟುತ ಬಂದ ಕೃಷ್ಣ

ಮಾಳವಿಕ ನಾಯರ್

ನಟ ಗಣೇಶ್ ಅಭಿನಯದ ‘ಕೃಷ್ಣಂ ಪ್ರಣಯ ಸಖಿ’ ಚಿತ್ರದ ಮೂರನೇ ಹಾಡು ಬಿಡುಗಡೆಯಾಗಿದೆ. ‘ದ್ವಾಪರ ದಾಟುತ’ ಎಂಬ ಹಾಡು ರಿಲೀಸ್ ಆಗಿದ್ದು, ಗಣೇಶ್ ಹಾಗೂ ಮಾಳವಿಕ ನಾಯರ್ ಹೆಜ್ಜೆ ಹಾಕಿದ್ದಾರೆ.

ಶ್ರೀನಿವಾಸರಾಜು ನಿರ್ದೇಶನದಲ್ಲಿ ಮೂಡಿಬಂದಿರುವ ಈ ಸಿನಿಮಾ ಆಗಸ್ಟ್ 15ರಂದು ತೆರೆಕಾಣುತ್ತಿದೆ. ಅರ್ಜುನ್ ಜನ್ಯ ಸಂಗೀತ ನೀಡಿರುವ ಆರು ಹಾಡುಗಳು ಈ ಚಿತ್ರದಲ್ಲಿದ್ದು, ಈ ಪೈಕಿ ಈಗಾಗಲೇ ‘ಮೈ ಮ್ಯಾರೇಜ್ ಇಸ್ ಫಿಕ್ಸ್ಡ್’ ಹಾಗೂ ‘ಚಿನ್ನಮ್ಮ’ ರಿಲೀಸ್ ಆಗಿವೆ. ವಿ.ನಾಗೇಂದ್ರಪ್ರಸಾದ್ ಅವರು ಬರೆದಿರುವ ‘ದ್ವಾಪರ ದಾಟುತ’ ಎಂಬ ಹಾಡನ್ನು ‘ಸರಿಗಮಪ’ ಖ್ಯಾತಿಯ ಜಸ್ಕರಣ್ ಸಿಂಗ್ ಹಾಡಿದ್ದಾರೆ. ಕೌಟುಂಬಿಕ ಕಥಾಹಂದರ ಹೊಂದಿರುವ ಈ ಚಿತ್ರವನ್ನು ತ್ರಿಶೂಲ್ ಎಂಟರ್‌ಟೇನ್ಮೆಂಟ್ ಲಾಂಛನದಲ್ಲಿ ಪ್ರಶಾಂತ್ ಜಿ. ರುದ್ರಪ್ಪ ಅವರು ನಿರ್ಮಿಸಿದ್ದಾರೆ.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಗುಂಡಣ್ಣ

ದಿನ ಭವಿಷ್ಯ

ವಿದ್ವಾಂಶಂಕರ ಸೋಮಯಾಜಿ. ಕಮ್ಮರಡಿ — ಮಂಗಳವಾರ ಜುಲೈ 23, 2024

ಶ್ರೀ ಕ್ರೋಧಿ ನಾಮ ಸಂವತ್ಸರ ದಕ್ಷಿಣಾಯನ ಗ್ರೀಷ್ಮ ಋತು ತಿಥಿ: ಆಷಾಢ ಕೃಷ್ಣ ದ್ವಿತೀಯ ಗಂ. 10-24 ನಕ್ಷತ್ರ: ಧನಿಷ್ಠ ಗಂ. 20-18 ಯೋಗ: ಆಯುಷ್ಮಾನ್ ಗಂ. 14-36 ಕರಣ: ಗರ ಗಂ. 10-24, ಕರ್ಕಾಟಕ ಮಾಸದ 07 ನೇ ದಿನ, ಮಳೆನಕ್ಷತ್ರ: ಪುಷ್ಯ 2.

ರಾಹುಕಾಲ: ಮಧ್ಯಾಹ್ನ 03-00 – 04-30

ಸೂರ್ಯೋದಯ: 06-17 **ಸೂರ್ಯಾಸ್ತ:** 06-57

ಮುಸ್ಲಿಂ ದಿನಾಂಕ: 16 ಮೊಹರಮ್

ಅದೃಷ್ಟ ಸಂಖ್ಯೆ: 11, 7

ಮೇಷ: ವೈಯಕ್ತಿಕ ಆಸೆ ಆಕಾಂಕ್ಷೆಗಳು ಪೂರ್ಣಗೊಳ್ಳುವತ್ತ ಸಾಗುವುದು. ವಾಹನದ ವಹಿವಾಟುಗಳನ್ನು ಮಾಡುವವರು ಲಾಭ ಪಡೆಯಬಹುದು. ಚಿಲ್ಲರೆ ವ್ಯಾಪಾರಿಗಳಿಗೆ, ಸಿಹಿ ತಿನಿಸು ಮಾರಾಟಗಾರರಿಗೆ ಹೆಚ್ಚಿನ ಲಾಭ.

ವೃಷಭ: ಷೇರು ವ್ಯವಹಾರ, ಸಿನಿಮಾ ತಯಾರಿಕೆಯಂಥ ಕಾರ್ಯ ಲಾಭ ತರಲಿದೆ. ವೃತ್ತಿ ಜೀವನವನ್ನು ಗಂಭೀರವಾಗಿ ಪರಿಗಣಿಸುವಿರಿ. ಗಣ್ಯ ವ್ಯಕ್ತಿಯೊಬ್ಬರನ್ನು ಭೇಟಿಯಾಗುವ ಸಂದರ್ಭ ಬರುವುದು.

ಮಿಥುನ: ದೈನಂದಿನ ಬದುಕಿನ ವಿಚಾರಗಳಲ್ಲಿ ನಡೆದಿರುವ ಸಣ್ಣಪುಟ್ಟ ಬದಲಾವಣೆಯಿಂದ ಮಾನಸಿಕ ನೆಮ್ಮದಿ ಕಳೆದುಕೊಳ್ಳುವಿರಿ. ಕೆಲಸದ ಒತ್ತಡದಿಂದ ದೇಹಾಯಾಸವಾಗಿ ಆರೋಗ್ಯದ ಮೇಲೆ ಪರಿಣಾಮ ಬೀರಲಿದೆ.

ಕರ್ಕಾಟಕ: ಶೈಕ್ಷಣಿಕ ರಂಗದಲ್ಲಿ ಚಟುವಟಿಕೆಗಳಿಂದ ಉತ್ತಮ ಹೆಸರನ್ನು ಗಳಿಸಿಕೊಳ್ಳಬಹುದು. ರಾಜಕೀಯ ಸೇರ್ಪಡೆಗೆ ಆಹ್ವಾನ ಬರಲಿದೆ. ದೂರ ಉಳಿಯುವುದು ಕ್ಷೇಮ. ಕೆಲಸದ ಒತ್ತಡ ಕಡಿಮೆಯಾಗಲಿದೆ.

ಸಿಂಹ: ವಿದೇಶ ಪ್ರಯಾಣದ ಕನಸು ನೆರವೇರುವ ಅವಕಾಶ ಸಿಗುವುದು. ಧನಾದಾಯಕ್ಕೆ ಯಾವುದೇ ರೀತಿಯ ಅಡ್ಡಿ ಆತಂಕಗಳು ಇರುವುದಿಲ್ಲ. ಆತ್ಮ ವಿಶ್ವಾಸದಿಂದ ಎಲ್ಲವನ್ನೂ ಸಾಧಿಸಲಿದ್ದೀರಿ.

ಕನ್ಯಾ: ಎಲ್ಲಾ ಆಸೆಗಳನ್ನು ಕೈಬಿಟ್ಟು ಜೀವನ ನಡೆಸುವ ಸಮಯದಲ್ಲಿ ಅದೃಷ್ಟ ಕೈ ಬೀಸಿ ಕರೆಯುವುದು. ದೇಹದಲ್ಲಿ ಉತ್ಸಾಹವಿರುವುದರಿಂದ ಎಲ್ಲ ಕೆಲಸ ಕಾರ್ಯಗಳಲ್ಲಿ ಯಶಸ್ಸು ದೊರೆಯುವುದು.

ತುಲಾ: ವೃತ್ತಿಯಲ್ಲಿ ಪರಿಸ್ಥಿತಿಯನ್ನು ಹತೋಟಿಗೆ ತರಲು ನಾಯಕನನ್ನು ಜಾಗೃತಗೊಳಿಸಿ. ಒಪ್ಪಂದ ಹಾಗೂ ಸಹಕಾರಗಳು ಇಂದು ಬಹಳ ಸುಲಭವಾಗುವುದು. ಕಾರ್ಯಕ್ಷೇತ್ರದಲ್ಲಿ ಸ್ಥಾನಮಾನ, ಗೌರವ ತೋರಿಬರುವುದು.

ವೃಶ್ಚಿಕ: ಸ್ವಯಂಕೃತ ಅಪರಾಧದಿಂದ ಜೀವನದಲ್ಲಿ ಉಲ್ಲಾಸ ಕಳೆದುಕೊಳ್ಳುವ ಸಮಯ ಎದುರಾಗಲಿದೆ. ಮಂಗಳಕಾರ್ಯಗಳು ನಡೆಯುವ ಸೂಚನೆ ಕಾಣುತ್ತದೆ. ಸ್ವಂತ ಉದ್ಯೋಗ ಮಾಡುವವರು ಪ್ರಗತಿ ಕಾಣಲಿದ್ದೀರಿ.

ಧನು: ವಾಹನಗಳ ಅಥವಾ ದೊಡ್ಡ ದೊಡ್ಡ ಯಂತ್ರಗಳಲ್ಲಿ ಕೆಲಸ ಮಾಡುವವರಿಗೆ ಜಾಗ್ರತೆ ಅಗತ್ಯ. ಔದ್ಯೋಗಿಕ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಬಡ್ತಿ ದೊರೆಯುವ ಸಂಭವವಿದೆ. ಭೂ ವ್ಯವಹಾರಗಳು ಕೈಗೂಡುವುದು.

ಮಕರ: ಕೃಷಿ ಕ್ಷೇತ್ರದಲ್ಲಿ ಇರುವವರಿಗೆ ಅಧಿಕ ಲಾಭ. ಅದರಲ್ಲೂ ತರಕಾರಿ ಮಾರಾಟಗಾರರಿಗೆ ಕುಬೇರನ ಅನುಗ್ರಹ ಸಿಗಲಿದೆ. ಸಂಗೀತದಲ್ಲಿ ಪರಿಣತಿ ಹೊಂದಿರುವವರಿಗೆ ಉತ್ತಮ ಅವಕಾಶಗಳು ಅರಸಿ ಬರಲಿವೆ.

ಕುಂಭ: ಆಫೀಸಿನ ಕೆಲಸದ ವಿಚಾರದಲ್ಲಿ ಕ್ರಮ ಮತ್ತು ಉತ್ಸಾಹವನ್ನು ಕೈಗೊಳ್ಳಬೇಕಾಗುವುದು. ಸರ್ಕಾರಿ ಅಧಿಕಾರಿಗಳು ಕಾನೂನು ವಿಷಯಗಳತ್ತ ಗಮನ ಹರಿಸಬೇಕಾಗಬಹುದು. ದಿಢೀರ್ ಪ್ರಯಾಣದ ಸಂಭವವಿರಲಿದೆ.

ಮೀನ: ಸೃಜನಶೀಲ ಯೋಜನೆಯನ್ನು ಮುಂದುವರಿಸಲು ಶುಭದಿನ. ಪ್ರಿಯ ವ್ಯಕ್ತಿಯೊಂದಿಗೆ ವಿಚಾರ ವಿನಿಮಯ ಮಾಡಿಕೊಳ್ಳುವುದು ಒಳ್ಳೆಯದು. ಅಬಕಾರಿ ಇಲಾಖೆ ಅಧಿಕಾರಿಗಳಿಗೆ ಕೆಲಸವಿರಲಿದೆ.

ದೇವರೆನ್ನುವುದು ಆತ್ಮಬಲ

ನುಡಿ ಬೆಳಗು

ಪಿ. ಚಂದ್ರಿಕಾ

ಐನ್‌ಸ್ಟೀನ್ ಮಹಾನ್ ವಿಜ್ಞಾನಿಯಾಗಿ ಪ್ರಸಿದ್ಧಿ ಹೊಂದಿದ ದಿವಸಗಳಲ್ಲಿ ಅವರಿಗೆ ಅಪಾರವಾದ ಅಭಿಮಾನಿ ವರ್ಗ ಹುಟ್ಟಿಕೊಂಡಿತ್ತು. ಅವರೆಲ್ಲರೂ ಐನ್‌ಸ್ಟೀನ್‌ನ ಬಗ್ಗೆ ವಿಶೇಷವಾದ ರೀತಿಯಲ್ಲಿ ಯೋಚಿಸುತ್ತಿದ್ದರು. ಅದು ಎಷ್ಟೋ ವೇಳೆ ಐನ್‌ಸ್ಟೀನ್‌ರನ್ನು ಕಿರಿಕಿರಿಗೆ ಒಳಗು ಮಾಡುತ್ತಿದ್ದದ್ದೂ ಹೌದು. ಅವರಿಗೆ ಖ್ಯಾತಿಯೊಂದಿಗೆ ತಾನು ಮುಟ್ಠಾಳನಾಗುತ್ತಿದ್ದೇನೆ ಎನ್ನಿಸಿದ್ದನ್ನು ‘ಒಬ್ಬ ಏನಾಗಿದ್ದಾನೆ ಮತ್ತು ಅವನ ಬಗ್ಗೆ ಇನ್ನೊಬ್ಬ ಏನನ್ನು ಯೋಚನೆ ಮಾಡುತ್ತಿದ್ದಾನೆ ಎನ್ನುವುದರ ನಡುವೆ ಅಂತರ ಅಪಾರವಾಗಿರುತ್ತದೆ’ ಎಂದು ಬರೆದುಕೊಂಡಿದ್ದಾರೆ ಕೂಡ.

ಐನ್‌ಸ್ಟೀನ್‌ರಿಗೆ ತಮ್ಮ ಬಗ್ಗೆ ಅಪಾರವಾದ ವಿಶ್ವಾಸವಿತ್ತು. ಮನುಷ್ಯನ ಪ್ರಯತ್ನಗಳಲ್ಲಿ ಅಪಾರವಾದ ಶ್ರದ್ಧೆ ಇತ್ತು, ಯಾವುದೂ ಮೇಲಿನಿಂದ ಸುಮ್ಮನೆ ಹಾಗೆ ದಕ್ಕುವುದಿಲ್ಲ ಮಳೆ ಬರಬೇಕಾದರೂ ಪ್ರಕೃತಿ ಜತನದಿಂದ ಒಂದಷ್ಟು ಪ್ರಕ್ರಿಯೆಯನ್ನು ನಡೆಸಿರುತ್ತದೆ ಎನ್ನುವ ನಂಬಿಕೆ ಅವರದ್ದಾಗಿತ್ತು.

ಇಂಥ ಐನ್‌ಸ್ಟೀನ್‌ನನ್ನು ಒಬ್ಬ, ‘ನಿಮ್ಮದು ದೈತ್ಯ ಪ್ರತಿಭೆ, ಇದು ನಿಮಗೆ ದಕ್ಕಿದ್ದು ದೈವ ಕೃಪೆ. ಜೊತೆಗೆ ನಿಮ್ಮ ತಂದೆಯ ವಿಜ್ಞಾನ ಪ್ರತಿಭೆ ಮತ್ತು ನಿಮ್ಮ ತಾಯಿಯ ಕಡೆಯಿಂದ ಸಂಗೀತ ಪ್ರತಿಭೆಯಿಂದಲೂ ಬಂದಿರಬಹುದಲ್ಲವೇ. ಇವೆಲ್ಲ ಆನುವಂಶಿಕವಾಗಿ ದೈವದತ್ತವಾಗಿ ಬಾರದೇ ಹೋದರೆ ಹೀಗೆ ನೀವು ಆಗುವುದು ಸಾಧ್ಯವೇ ಇರಲಿಲ್ಲ ಅಲ್ಲವೇ’ ಎಂದು ಪ್ರಶ್ನಿಸಿದ. ಐನ್‌ಸ್ಟೀನ್ ದೀರ್ಘವಾದ ನಿಟ್ಟುಸಿರುಬಿಟ್ಟರು. ಶುದ್ಧ ಆಸ್ತಿಕರಾಗಿದ್ದ ಅವರು ಮಾಗಿದ ಮನಃಸ್ಥಿತಿಯಲ್ಲಿ, ‘ವೈಯಕ್ತಿಕವಾಗಿ ದೇವರ ಬಗೆಗಿನ ಭಾವನೆ ಮನಶಾಸ್ತ್ರೀಯ ಕಲ್ಪನೆ ಅನ್ನಿಸುತ್ತದೆ. ನಾನೇನೂ ಇದನ್ನು ಗಂಭೀರವಾಗಿ ಸ್ವೀಕರಿಸಲಾರೆ. ಮನುಷ್ಯನ ಪ್ರಜ್ಞೆಯ ಆಚೆಗೆ ಯಾವುದೋ ಶಕ್ತಿ ಮತ್ತು ಗುರಿ ಇದೆ ಎಂದು ನಾನು ಭಾವಿಸಲಾರೆ. ವಾಸ್ತವ ಅಥವಾ ಅಸ್ತಿತ್ವದ ಕ್ರಮಬದ್ಧ ಸಾಂಗತ್ಯದಲ್ಲಿ ಪ್ರಕಾಶಿಸುವ ದೇವರನ್ನು ನಾನು ನಂಬುತ್ತೇನೆ. ಜನರ ಅದೃಷ್ಟದ ಬಗ್ಗೆ ಚಿಂತಿಸೋಣ, ದೇವರ ಬಗ್ಗೆ ಅಲ್ಲ. ನನ್ನ ಪಾಲಿಗೆ ದೇವರೆಂದರೆ ಆತ್ಮಬಲ. ನನಗೆ ದಕ್ಕಿರುವ ಈ ಜ್ಞಾನ ನನ್ನ ಪ್ರಯತ್ನದಿಂದ ದಕ್ಕಿದ್ದು. ನೀವೆಲ್ಲ ಅಂದುಕೊಳ್ಳುವ ಹಾಗೆ ನನಗೆ ಯಾವ ವಿಶೇಷ ಪ್ರತಿಭೆಯೂ ಇಲ್ಲ. ನಾನು ಕಲಿಯಬಹುದಾದ ಎಲ್ಲ ಸಂಗತಿಗಳಲ್ಲೂ ಅತ್ಯಂತ ಕುತೂಹಲಿಯಾಗಿದ್ದೇನೆ. ಕಂಡಿದ್ದನ್ನು ಅತ್ಯಂತ ಜತನದಿಂದ ಚಿಂತನೆಗೆ ಹಚ್ಚುತ್ತೇನೆ. ಅಲ್ಲಿರುವ ಅವಕಾಶಗಳಲ್ಲಿ ನನಗೆ ಯಾವ ಸಂಗತಿಯನ್ನು ಬಿಟ್ಟುಕೊಡುತ್ತದೆ ಎನ್ನುವುದನ್ನು ಸೂಕ್ಷ್ಮವಾಗಿ ಗಮನಿಸುತ್ತಾ ಹೋಗುತ್ತೇನೆ. ಮೊದಲನೆಯದಾಗಿ ನಾನು ಕಾಣುತ್ತಿರುವ ಈ ಸಂಗತಿ ಅದ್ಭುತ ಎನ್ನುವುದನ್ನು ನಂಬುತ್ತೇನೆ. ಇದರಲ್ಲಿ ದೈವದತ್ತವಾದದ್ದು ಹಾಗೂ ಆನುವಂಶೀಯವಾದದ್ದು ಏನಿದೆ’ ಎಂದು ಕೇಳುತ್ತಾರೆ.

ಜಗತ್ತಿನ ಜೊತೆಗೆ ಕುತೂಹಲ, ಸ್ವಯಂ ಅನುಭವ ಹಾಗೂ ಸಮೀಪ ದರ್ಶನ ಐನ್‌ಸ್ಟೀನ್‌ರನ್ನು ದೊಡ್ಡವರನ್ನಾಗಿಸಿದ್ದು. ವಿಶ್ವದ ನಿಗೂಢತೆಯ ಎದುರು ಯಾರು ಕಣ್ಣರಳಿಸಿ ನಿಂತು ನೋಡುತ್ತಾರೋ, ಅಲ್ಲಿರುವ ಸಂಗತಿಗಳನ್ನು ಅರ್ಥಮಾಡಿಕೊಳ್ಳಲಿಕ್ಕೆ ಪ್ರಯತ್ನಿಸುತ್ತಾರೋ, ಆ ಸೌಂದರ್ಯಾನುಭೂತಿಯನ್ನು ಅನುಭವಿಸಲು ತೆರೆದ ಕಣ್ಣುಗಳಿಂದ ಕಾದಿರುತ್ತಾರೋ, ಅವರು ನಿಸ್ಸಂಶಯವಾಗಿ ಮಹತ್ತನ್ನು ನೀಡುತ್ತಾರೆ ಎನ್ನುವುದಕ್ಕೆ ಐನ್‌ಸ್ಟೀನ್‌ರಿಗಿಂತ ಬೇರೆ ಸಾಕ್ಷಿ ಬೇಕೇ.

ಪದಬಂಧ 5750

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಅತಿಶಯವಾದ ಮಾತಿದು (3)
2.ಬದ್ಧ ದ್ವೇಷವಿದು (4)
4.ಆಕ್ರೋಶದಿಂದ ಹೀಗೆ ರೇಗು (4)
6.ಕೆಸರು ಗದ್ದೆಯಲ್ಲಿ ಕೋಣಗಳನ್ನು ಓಡಿಸುವ ಸ್ಪರ್ಧೆ (3)
7.ತಿರುಗಿ ನಿಂತಿರುವ ಆಕಳು (2)
9.ಪಾರಿವಾಳ ಇಲ್ಲಿ ಕಾಣುತ್ತಿದೆ (3)
11ಹಮ್ಮೀರನಿಗೆ ಪ್ರತ್ಯಕ್ಷನಾಗಿರುವ ಶಿವ (2)
13. ಅರ್ಧ ತಿಂದುದನ್ನು ಪುನಃ ನುರಿಸಿ ತಿನ್ನುವಿಕೆ (3)
14.ಈತ ಪರೀಕ್ಷೆ ಮಾಡುವವನು (4)
16.ನಯವಿಲ್ಲದೆ ಒರಟಾದುದು (4)
17.ತರಳೆ ಹಿಡಿದಿರುವ ಹತ್ತಿ (3)

ಮೇಲಿಂದ ಕೆಳಕ್ಕೆ

1.ಈ ರೀತಿ ದೃಷ್ಟಾಂತವನ್ನು ಕೊಡು (5)
2.ಸುಖ ದುಃಖಕ್ಕೆ ಕಾರಣವಾದ ಪೂರ್ವ ಜನ್ಮದ ಕೃತ್ಯ (2)
3.ಇದು ಲಲಾಟಲಿಖಿತ (5)
5.ಯೌವ್ವನವನ್ನು ಹೊಂದಿದವನು (3)
8.ಈತ ಬಲು ಠಕ್ಕ (5)
10.ಯಥಾವತ್ತಾದ ರೂಪವಿದು (3)
12.ಯುದ್ಧವನ್ನು ಸಾರುವ ಕಹಳೆ (5)
15.ಭೂಲೋಕದ ಅಮೃತ (2)



5749ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ

1.ಚಿಪ್ಪಿಗ 6.ದಂತಮಂಜನ 6.ಝನಾ 8.ಹಣ 9.ಸಿತಾರ 11.ತ್ತುಕ 12.ಕೆರ 16.ವಾದಸರಣಿ 17.ಗಮಾರ

ಮೇಲಿಂದ ಕೆಳಕ್ಕೆ

1.ಚಿರಂಜೀವಿ 2.ಗಡಿಪಾರು 3.ವದಂತಿ 4.ಆಮಂತ್ರಣ 5.ವನಸ್ಪತಿ 7.ನಾಸಿಕ 8.ಹರಕೆ 10.ಅಹವಾಲು 11.ತ್ತುರಸಕ 13.ರಸಭಂಗ 14.ಬಡಿವಾರ 15.ಹಣಿಗೆ

ಸುಡೊಕು 6135

4	9			2		6		1
		2			5		9	
	4		3		1		7	
1		7		8		4		5
			4		7		1	
	2		5				3	
6		9				5		4
	5				2		8	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6134 ಸುಡೊಕು

3	2	6	5	8	4	9	7	1
7	9	8	1	2	3	5	6	4
5	4	1	9	7	6	3	2	8
6	7	3	8	1	5	2	4	9
4	5	2	7	6	9	1	8	3
8	1	9	3	4	2	6	5	7
9	3	4	2	5	8	7	1	6
1	6	5	4	9	7	8	3	2
2	8	7	6	3	1	4	9	5

ಉಕ್ಕಿ ಹರಿದ ಮಲಪ್ರಭಾ, ಘಟಪ್ರಭಾ ನದಿಗಳು • ಸೋಮವಾರಪೇಟೆಯಲ್ಲಿ ಧಾರಾಕಾರ ಮಳೆ

ಬೆಳಗಾವಿ: 22 ಸೇತುವೆ ಮುಳುಗಡೆ

ಪ್ರಜಾವಾಣಿ ವಾರ್ತೆ

ಬೆಳಗಾವಿ/ ಮಡಿಕೇರಿ: ರಾಜ್ಯದ ಹಲವೆಡೆ ಮಳೆಯ ಅಬ್ಬರ ಕಡಿಮೆಯಾಗಿದೆ. ಮಹಾರಾಷ್ಟ್ರದ ಘಟ್ಟ ಪ್ರದೇಶ ಮತ್ತು ಬೆಳಗಾವಿ ಜಿಲ್ಲೆಯಲ್ಲಿ ಮಳೆ ಮುಂದುವರೆದಿದೆ. ಇದರಿಂದಾಗಿ ಮಲಪ್ರಭಾ, ಘಟಪ್ರಭಾ, ಕೃಷ್ಣಾ, ವೇದಗಂಗಾ, ದೂಧಗಂಗಾ, ಹಿರಣ್ಯಕೇಶಿ ಮತ್ತು ಮಾರ್ಕಂಡೇಯ ನದಿ ಉಕ್ಕಿ ಹರಿಯುತ್ತಿವೆ.

ಖಾನಾಪುರ, ಗೋಕಾಕ, ಮೂಡಲಗಿ, ಹುಕ್ಕೇರಿ, ಚಿಕ್ಕೋಡಿ, ನಿಪ್ಪಾಣಿ ತಾಲ್ಲೂಕುಗಳಲ್ಲಿ 22 ಸೇತುವೆ ಮುಳುಗಡೆಯಾಗಿವೆ.ಮಹಾರಾಷ್ಟ್ರದ ಘಟ್ಟ ಪ್ರದೇಶ ಮತ್ತು ಜಿಲ್ಲೆಯಲ್ಲಿ ಮಳೆ ಮುಂದುವರೆದಿದೆ. ಮಲಪ್ರಭಾ, ಘಟಪ್ರಭಾ, ಕೃಷ್ಣಾ, ವೇದಗಂಗಾ, ದೂಧಗಂಗಾ, ಹಿರಣ್ಯಕೇಶಿ ಮತ್ತು ಮಾರ್ಕಂಡೇಯ ನದಿ ಉಕ್ಕಿ ಹರಿಯುತ್ತಿವೆ. ಖಾನಾಪುರ, ಗೋಕಾಕ, ಮೂಡಲಗಿ, ಹುಕ್ಕೇರಿ, ಚಿಕ್ಕೋಡಿ, ನಿಪ್ಪಾಣಿ ತಾಲ್ಲೂಕುಗಳಲ್ಲಿ 22 ಸೇತುವೆ ಮುಳುಗಡೆಯಾಗಿವೆ.

ದೂಧಗಂಗಾ ನದಿ ಮೇಲಿನ ಭೋಜ– ಕಾರದಗಾ ಸೇತುವೆ ಮೇಲೆ 16 ಅಡಿ, ಮಲ್ಲಿಕವಾಡ– ದಾನವಾಡ ಸೇತುವೆ ಮೇಲೆ 13 ಅಡಿ ಹಾಗೂ ಭೋಜವಾಡ– ನಿಪ್ಪಾಣಿ ಕೆಳಸೇತುವೆ ಮೇಲೆ 12 ಅಡಿಗಿಂತ ಹೆಚ್ಚು ನೀರು ಹರಿಯುತ್ತಿದೆ.

‘ಸದ್ಯ ಕೃಷ್ಣಾ, ಘಟಪ್ರಭಾ ಮತ್ತು ಮಲಪ್ರಭಾ ನದಿಗಳ ದಡದಲ್ಲಿ ಪ್ರವಾಹ ಭೀತಿ ಇಲ್ಲ. ಮುಂಜಾಗ್ರತೆ ವಹಿಸಲಾಗಿದೆ. 124 ಮನೆಗಳಿಗೆ ಹಾನಿಯಾಗಿದ್ದು, ಎರಡು ಮನೆಗಳು ಸಂಪೂರ್ಣ ಕುಸಿದಿವೆ. ರಾಷ್ಟ್ರೀಯ ವಿಪತ್ತು ನಿರ್ವಹಣಾ ಪಡೆ (ಎನ್‌ಡಿಆರ್‌ಎಫ್) ನಿಯಮಾವಳಿಯಂತೆ, ಪರಿಹಾರ ಬಿಡುಗಡೆಗೆ ತಹಶೀಲ್ದಾರ್‌ರಿಗೆ ಸೂಚಿಸಲಾಗಿದೆ’ ಎಂದು ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್ ‘ಪ್ರಜಾವಾಣಿ’ಗೆ ತಿಳಿಸಿದರು.

ಯಾವೆಲ್ಲ ಸೇತುವೆ ಮುಳುಗಡೆ?: ಚಿಕ್ಕಹಟ್ಟಿಹೊಳಿ– ಚಿಕ್ಕಮುನವಳ್ಳಿ, ಚಿಗಡೊಳ್ಳಿ– ನಲ್ಲಾನಟ್ಟಿ, ಗೋಕಾಕ– ಲೋಳಸೂರ, ಮುನ್ಯಾಳ– ಹುಣಶ್ಯಾಳ ಪಿ.ಜಿ, ಪಟಗುಂದಿ– ತಿಗಡಿ, ಸುಣಧೋಳಿ– ಮೂಡಲಗಿ, ಅವರಾದಿ– ಮಹಾಲಿಂಗಪುರ, ಉದಗಟ್ಟಿ– ವಡೇರಹಟ್ಟಿ, ಅರ್ಜುನವಾಡ– ಕೋಚರಿ, ಯರನಾಳ– ಹುಕ್ಕೇರಿ, ಕುರಣಿ– ಕೋಚರಿ, ಭೋಜ– ಕಾರದಗಾ, ಭೋಜವಾಡಿ– ನಿಪ್ಪಾಣಿ, ಮಲ್ಲಿಕವಾಡ– ದಾನವಾಡ, ಸಿದ್ನಾಳ– ಅಕ್ಕೋಳ, ಭಾರವಾಡ– ಕುನ್ನೂರ, ಭೋಜ– ಕುನ್ನೂರ, ಜತ್ರಾಟ– ಭೀವಶಿ, ಬಾವನಸೌಂದತ್ತಿ– ಮಾಂಜರಿ ಮತ್ತಿತರ ಸೇತುವೆಗಳು ಮುಳುಗಿವೆ.

ಕೊಡಗು ಜಿಲ್ಲೆಯಲ್ಲಿ ಮಳೆಯ ಅಬ್ಬರ ಕಡಿಮೆಯಾಗಿದ್ದರೂ ಬಿರುಗಾಳಿ ಮುಂದುವರಿದಿದೆ. ಪ್ರವಾಸಿ ತಾಣ ರಾಜಾಸೀಟ್ ಉದ್ಯಾನಕ್ಕೆ ಅಳವಡಿಸಿದ್ದ ಬೃಹತ್ ನಾಮಫಲಕ ಹಾನಿಯಾಗಿದೆ. ಜನಜೀವನವೂ ಹೈರಣಾಗಿದೆ. 24 ಗಂಟೆಗಳ ಅವಧಿಯಲ್ಲಿ 46 ವಿದ್ಯುತ್ ಕಂಬಗಳು ಬಿದ್ದಿವೆ. 5 ಮನೆಗಳಿಗೆ ಹಾನಿಯಾಗಿದೆ.

ಸೋಮವಾರಪೇಟೆ ಭಾಗದಲ್ಲಿ ಗಾಳಿಯೊಂದಿಗೆ ಮಳೆಯೂ ಬಿರುಸಾಗಿದ್ದು, ಹಲವು ಮರಗಳು ಉರುಳಿ ಇಡೀ ತಾಲ್ಲೂಕಿನಲ್ಲಿ ವಿದ್ಯುತ್ ವ್ಯತ್ಯಯ ಉಂಟಾಗಿದೆ.

12 ರಸ್ತೆ ಸಂಪರ್ಕ ಬಂದ್ (ಹಾವೇರಿ ವರದಿ): ಜಿಲ್ಲೆಯಲ್ಲಿ ವರದಾ, ತುಂಗಭದ್ರಾ, ಧರ್ಮಾ, ಕುಮದ್ವತಿ ನದಿಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ನೀರು ಹರಿಯುತ್ತಿದ್ದು, ಸೇತುವೆ ಹಾಗೂ ರಸ್ತೆಗಳು ಜಲಾವೃತವಾಗಿವೆ. ಇದರಿಂದ 12 ಕಡೆ ರಸ್ತೆ ಮಾರ್ಗದಲ್ಲಿ ಸಂಚಾರ ಬಂದ್ ಆಗಿದೆ.

ನಾಗನೂರು–ಕೊಡಲ, ಕರ್ಜಗಿ–ಚಿಕ್ಕಮಗದೂರು, ಕಳಸೂರು–ಕೋಳೂರ, ಹಿರೇಮರಳಿಹಳ್ಳಿ– ಕೋಣತಂಬಗಿ, ಆಡೂರು–ತುಮರಿಕೊಪ್ಪ, ಬಾಳಂಬೀಡ– ಲಕಮಾಪುರ, ಮುಷ್ಟೂರು– ಹೊಳೆ ಆನ್ವೇರಿ, ಅಂತರಹಳ್ಳಿ– ಲಿಂಗದಹಳ್ಳಿ, ಹಿರೇಮಾಗನೂರು–ಕೋಣನತಲಿ, ರಟ್ಟೀಹಳ್ಳಿ–ಎಲಿವಾಳ ಹಾಗೂ ಇತರೆಡೆ ಸೇತುವೆ–ರಸ್ತೆಗಳು ಜಲಾವೃತಗೊಂಡಿವೆ. ಈ ಭಾಗದ ರಸ್ತೆಗಳಲ್ಲಿ ಜನರ ಓಡಾಟ ಸಂಪೂರ್ಣ ಬಂದ್ ಆಗಿದೆ.

‘12 ರಸ್ತೆಗಳ ಸಂಪರ್ಕ ಕಡಿತಗೊಂಡಿದೆ. ಪರ್ಯಾಯ ರಸ್ತೆಗಳನ್ನು ಬಳಸಲು ಜನರಿಗೆ ಸೂಚಿಸಲಾಗಿದೆ. ನದಿ ಪ್ರವಾಹದಿಂದ ಸೇತುವೆ ಮುಳುಗಡೆಯಾಗಿದ್ದು, ಸೇತುವೆಯ ಎರಡು ಬದಿಯಲ್ಲೂ ಬ್ಯಾರಿಕೇಡ್ ಅಳವಡಿಸಿ ಸಾರ್ವಜನಿಕರು ಓಡಾಡದಂತೆ ಕ್ರಮ ವಹಿಸಲಾಗಿದೆ’ ಎಂದು ಜಿಲ್ಲಾಧಿಕಾರಿ ವಿಜಯ ಮಹಾಂತೇಶ ದಾನಮ್ಮನವರ ‘ಪ್ರಜಾವಾಣಿ’ಗೆ ತಿಳಿಸಿದರು.

ಮುಳ್ಳಯ್ಯನಗಿರಿ: ನಿರ್ಬಂಧ ವಿಸ್ತರಣೆ

ಚಿಕ್ಕಮಗಳೂರು: ಮಳೆ ಕಡಿಮೆಯಾಗಿದ್ದರೂ, ಭೂಕುಸಿತದ ಆತಂಕ ಕಡಿಮೆಯಾಗಿಲ್ಲ. ಹೀಗಾಗಿ ಮುಳ್ಳಯ್ಯನಗಿರಿಗೆ ಪ್ರವಾಸಿಗರ ನಿರ್ಬಂಧವನ್ನು ಇನ್ನೂ ಒಂದು ವಾರ ಮುಂದುವರಿಸಲು ಜಿಲ್ಲಾಡಳಿತ ನಿರ್ಧರಿಸಿದೆ.

‘ಮುಳ್ಳಯ್ಯನಗಿರಿ ಭಾಗದಲ್ಲಿ ಮಳೆ ನಿರಂತರವಾಗಿ ಇರುತ್ತದೆ. ಕಿರಿದಾದ ರಸ್ತೆಯಲ್ಲಿ ಯಾವಾಗ ಬೇಕಾದರೂ ಮಣ್ಣು ಕುಸಿಯುವ ಸಾಧ್ಯತೆ ಇದೆ. ಈಗ ಕುಸಿದಿರುವ ಮಣ್ಣು ತೆಗೆದು ಸರಿಪಡಿಸಲು ಇನ್ನೂ ಕಾಲವಕಾಶ ಬೇಕು. ಸದ್ಯಕ್ಕೆ ಪ್ರವಾಸಿಗರ ವಾಹನಗಳ ಸಂಚಾರ ಸೂಕ್ತವಲ್ಲ ಎಂದು ಲೋಕೋಪಯೋಗಿ ಇಲಾಖೆ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ. ಆದ್ದರಿಂದ ಜುಲೈ 29ರ ವರೆಗೆ ನಿರ್ಬಂಧ ಮುಂದುವರೆಸಿದ್ದೇವೆ’ ಎಂದು ಜಿಲ್ಲಾಧಿಕಾರಿ ಮೀನಾ ನಾಗರಾಜ್ ತಿಳಿಸಿದ್ದಾರೆ.

ಶಿರೂರು: ರೆಡಾರ್ ಬಳಸಿ ಶೋಧ

ಉತ್ತರ ಕನ್ನಡ ಜಿಲ್ಲೆಯ ಅಂಕೋಲಾ ತಾಲ್ಲೂಕಿನ ಶಿರೂರಿನಲ್ಲಿ ಗುಡ್ಡ ಕುಸಿದ ಸ್ಥಳದಲ್ಲಿ ಸೋಮವಾರ ಸೇನಾ ಸಿಬ್ಬಂದಿ ಶೋಧ ಕಾರ್ಯಾಚರಣೆ ನಡೆಸಿದರು

ಪ್ರಜಾವಾಣಿ ವಾರ್ತೆ

ಕಾರವಾರ: ಅಂಕೋಲಾ ತಾಲ್ಲೂಕಿನ ಶಿರೂರಿನಲ್ಲಿ ಗುಡ್ಡ ಕುಸಿತದಲ್ಲಿ ಕಾಣೆಯಾದ ನಾಟಾ ತುಂಬಿದ್ದ ಲಾರಿಯ ಪತ್ತೆಗೆ ಭಾರತೀಯ ಸೇನೆಯ ಮರಾಠಾ ರೆಜಿಮೆಂಟ್ ತಂಡವು ಸೋಮವಾರದಿಂದ ಕಾರ್ಯಾಚರಣೆ ಆರಂಭಿಸಿದೆ.

ಸೇನಾ ಕಮಾಂಡೆಂಟ್ ಅಭಿಷೇಕ ಕಶ್ಯಪ್ ನೇತೃತ್ವದಲ್ಲಿ 44 ಸಿಬ್ಬಂದಿಯ ತಂಡವು ಬೆಳಗಾವಿಯಿಂದ ಭಾನುವಾರ ಶಿರೂರಿಗೆ ತಲುಪಿತ್ತು. ನಿರಂತರ ಮಳೆ, ಮುಖ್ಯಮಂತ್ರಿ ಭೇಟಿ ಹಿನ್ನೆಲೆಯಲ್ಲಿ ಕಾರ್ಯಾಚರಣೆ ಸಾಧ್ಯವಾಗಿರಲಿಲ್ಲ. ಮಣ್ಣಿನ ಮೇಲ್ಮೈನಿಂದ 10 ಮೀಟರ್ ಆಳ ಲೋಹದ ವಸ್ತುಗಳನ್ನು ಶೋಧಿಸಬಲ್ಲ ಸಾಮರ್ಥ್ಯವುಳ್ಳ ಗ್ರೌಂಡ್ ಪೆನೆಟ್ರೇಟಿಂಗ್ ರೆಡಾರ್ (ಜಿಪಿಆರ್) ಬಳಸಿ, ಶೋಧ ಮುಂದುವರೆದಿದೆ.

‘ಗುಡ್ಡದ ಬುಡದಲ್ಲಿನ ಮಣ್ಣಿನ ರಾಶಿಯಲ್ಲಿ ಲಾರಿ ಸಿಲುಕಿರಬಹುದು ಎಂದು ಲಾರಿ ಮಾಲೀಕರು ದೂರಿದ್ದಾರೆ. ಮಣ್ಣು ತೆರವು ವೇಳೆ ಲಾರಿ ಇರುವುದು ದೃಢಪಟ್ಟರೆ, ಅದನ್ನು ಹೊರತೆಗೆಯಲಾಗುವುದು’ ಎಂದು ಅಧಿಕಾರಿಯೊಬ್ಬರು ತಿಳಿಸಿದರು.

‘ಗುಡ್ಡ ಕುಸಿದು ಏಳು ದಿನಗಳಾದರೂ ನಿರೀಕ್ಷಿತ ವೇಗದಲ್ಲಿ ಕಾರ್ಯಾಚರಣೆ ನಡೆದಿಲ್ಲ. ಅಧಿಕಾರಿಗಳಿಂದ ಸ್ಪಂದನೆ ಸಿಗುತ್ತಿಲ್ಲ. ನಿಧಾನಗತಿಯ ಕಾರ್ಯಾಚರಣೆಯಿಂದ ಲಾರಿ ಚಾಲಕ ಅರ್ಜುನ್ ಜೀವದೊಂದಿಗೆ ಚೆಲ್ಲಾಟ ಆಡಲಾಗುತ್ತಿದೆ’ ಎಂದು ಲಾರಿ ಸಮೇತ ಕಾಣೆಯಾಗಿರುವ ಕೇರಳದ ಚಾಲಕ ಅರ್ಜುನ್ ಸಂಬಂಧಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

> **ಗಂಗಾವಳಿ ನದಿಗೆ ಭಾರಿ ಪ್ರಮಾಣದಲ್ಲಿ ಮಣ್ಣು ಬಿದ್ದಿದ್ದು ಅದರಡಿ ವಾಹನ, ಜನ ಸಿಲುಕಿರಬಹುದು. ಮಂಗಳವಾರದಿಂದ ನದಿಗೆ ಬಿದ್ದ ಮಣ್ಣು ತೆರವುಗೊಳಿಸಿ, ಅಲ್ಲಿ ಶೋಧ ನಡೆಸಲಾಗುವುದು**
> **ಸತೀಶ ಸೈಲ್,** ಶಾಸಕ

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು	ಹೊರಹರಿವು
			(ಕ್ಯುಸೆಕ್‌ಗಳಲ್ಲಿ)	
ಕೆ ಆರ್ ಎಸ್ *	124.80	122.75	46,843	51,509
ಹಾರಂಗಿ	2,859	2,855.30	4,940	4,000
ಕಬಿನಿ	2,284	2,283.25	19,963	10,000
ಹೇಮಾವತಿ	2,922	2,920.10	23,769	15,624
ಲಿಂಗನಮಕ್ಕಿ	1,819	1,797.06	44,387	-
ಸೂಪಾ (ಮೀ)	564	544.20	32,596	-
ಮಾಣಿ	595	582.30	2,712	-
ತುಂಗಭದ್ರಾ	1,633	1,627.21	1,13,402	4,798
ಮಲಪ್ರಭಾ	2,079.50	2,063.40	11,328	194
ಘಟಪ್ರಭಾ	2,175	2,158.55	31,201	2,405
ಭದ್ರಾ	186	166.6	25,367	293
ಆಲಮಟ್ಟಿ (ಮೀ)	519.60	517.72	1,15,406	1,44,295
ನಾರಾಯಣಪುರ (ಮೀ)	492.25	491.01	1,45,000	1,44,250

* ನೆಲಮಟ್ಟದಿಂದ

ಕರಾವಳಿ: ಭಾರಿ ಮಳೆ ಸಾಧ್ಯತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉತ್ತರ ಕನ್ನಡ, ದಕ್ಷಿಣ ಕನ್ನಡ ಉಡುಪಿ ಜಿಲ್ಲೆಗಳಲ್ಲಿ ಜುಲೈ 23 ಮತ್ತು 24ರಂದು ಭಾರಿ ಮಳೆಯಾಗುವ ಸಾಧ್ಯತೆ ಇದೆ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

30 ರಿಂದ 40 ಕಿ.ಮೀ ವೇಗದಲ್ಲಿ ಈ ಜಿಲ್ಲೆಗಳಲ್ಲಿ ಗಾಳಿ ಬೀಸಲಿದೆ. ಉತ್ತರ ಕನ್ನಡ, ಶಿವಮೊಗ್ಗ, ಉಡುಪಿ, ಚಿಕ್ಕಮಗಳೂರು ಜಿಲ್ಲೆಗಳಿಗೆ ಯೆಲ್ಲೋ ಅಲರ್ಟ್ ಘೋಷಿಸಲಾಗಿದೆ. ರಾಜ್ಯದ ಉತ್ತರ ಒಳನಾಡು ಮತ್ತು ದಕ್ಷಿಣ ಒಳನಾಡಿನ ಕೆಲವು ಜಿಲ್ಲೆಗಳಲ್ಲಿ ಸಾಧಾರಣ ಮಳೆ ಮುಂದುವರಿಯಲಿದೆ ಎಂದು ಮುನ್ಸೂಚನೆ ನೀಡಲಾಗಿದೆ.

ಸೋಮವಾರ ಬೆಳಿಗ್ಗೆ 8.30ಕ್ಕೆ ಕೊನೆಗೊಂಡಂತೆ ಕಳೆದ 24 ತಾಸುಗಳಲ್ಲಿ ಉತ್ತರ ಕನ್ನಡ ಜಿಲ್ಲೆಯ ಕ್ಯಾಸಲ್ ರಾಕ್ (20 ಸೆಂ.ಮೀ), ಉತ್ತರ ಕನ್ನಡ ಜಿಲ್ಲೆಯ ಗೇರುಸೊಪ್ಪದಲ್ಲಿ (13 ಸೆಂ.ಮೀ) ಹೆಚ್ಚು ಮಳೆ ದಾಖಲಾಗಿದೆ. ಇದೇ ಪ್ರದೇಶದಲ್ಲಿ ಕೆಲವು ದಿನಗಳಿಂದ ಧಾರಾಕಾರ ಮಳೆಯಾಗುತ್ತಿದೆ.

ಹೊನ್ನಾವರ, ಆಗುಂಬೆಯಲ್ಲಿ ತಲಾ 11 ಸೆಂ.ಮೀ ಮಳೆ ಸುರಿದಿದೆ. ಸಿದ್ದಾಪುರ 10, ಉಡುಪಿ, ಧರ್ಮಸ್ಥಳ, ಲಿಂಗನಮಕ್ಕಿ, ಕಮ್ಮರಡಿ, ಹುಂಚದಕಟ್ಟೆ, ಕೊಟ್ಟಿಗೆಹಾರದಲ್ಲಿ ತಲಾ 8 ಸೆಂ.ಮೀ ಹಾಗೂ ಕುಂದಾಪುರ, ಕುಮಟಾ, ಲೋಂಡಾ, ಕೊಪ್ಪದಲ್ಲಿ ತಲಾ 7 ಸೆಂ.ಮೀ ಮಳೆಯಾಗಿದೆ.

ತುಂಗಭದ್ರಾ: ಭರ್ತಿಗೆ 5 ಅಡಿ ಬಾಕಿ

ಹೊಸಪೇಟೆ (ವಿಜಯನಗರ): ತುಂಗಭದ್ರಾ ಅಣೆಕಟ್ಟೆ ಭರ್ತಿಗೆ 5 ಅಡಿಯಷ್ಟೇ ಬೇಕಿದೆ. 1,633 ಅಡಿ ಎತ್ತರದ ಅಣೆಕಟ್ಟೆಯಲ್ಲಿ ನೀರಿನ ಮಟ್ಟ 1,628.09 ಅಡಿ ತಲುಪಿದೆ. 105.78 ಟಿಎಂಸಿ ಅಡಿ ಸಂಗ್ರಹ ಸಾಮರ್ಥ್ಯದ ಜಲಾಶಯದಲ್ಲಿ ಸದ್ಯ 87.06 ಟಿಎಂಸಿ ಅಡಿ ನೀರು ಸಂಗ್ರಹವಾಗಿದೆ.

1. ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲ್ಲೂಕಿನ ಮಾಂಜರಿ ಗ್ರಾಮದ ಬಳಿಯಲ್ಲಿ ಕೃಷ್ಣಾ ನದಿ ತುಂಬಿ ಹರಿದ ನೋಟ – ಪ್ರಜಾವಾಣಿ ಚಿತ್ರ: ಚಂದ್ರಶೇಖರ ಎಸ್ ಚಿನಕೇಕರ 2. ಹಾವೇರಿ ಜಿಲ್ಲೆಯ ಕಲಕೋಟಿ ಬಳಿ ವರದಾ ನದಿ ನೀರಿನಲ್ಲಿ ಈಶ್ವರ ದೇವಸ್ಥಾನ ಭಾಗಶಃ ಮುಳುಗಿದೆ 3. ಹೊಸಪೇಟೆ ಸಮೀಪದ ತುಂಗಭದ್ರಾ ಜಲಾಶಯದಿಂದ ಸೋಮವಾರ ಸಂಜೆ ಮೂರು ಕ್ರಸ್ಟ್‌ಗೇಟ್‌ಗಳನ್ನು ತೆರೆದು ನೀರನ್ನು ನದಿಗೆ ಹರಿಸಲಾಯಿತು ಪ್ರಜಾವಾಣಿ ಚಿತ್ರ:ಲವ ಕೆ.

ಮೇಕೆದಾಟಿಗೆ ತಮಿಳುನಾಡು ಅಡ್ಡಗಾಲು: ಎಚ್‌ಡಿಕೆ ಕಿಡಿ

ಪ್ರಜಾವಾಣಿ ವಾರ್ತೆ

ನವದೆಹಲಿ: ‘ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಅವರು ಸುಖಾಸುಮ್ಮನೆ ಕಾಲು ಕೆರೆದು ಜಗಳಕ್ಕೆ ಬರುವುದಲ್ಲ, ಕರ್ನಾಟಕದ ಬಗ್ಗೆ ನಡವಳಿಕೆಗಳನ್ನು ತಿದ್ದಿಕೊಳ್ಳಬೇಕು’ ಎಂದು ಕೇಂದ್ರ ಭಾರಿ ಕೈಗಾರಿಕೆ ಮತ್ತು ಉಕ್ಕು ಸಚಿವ ಎಚ್.ಡಿ.ಕುಮಾರಸ್ವಾಮಿ ಕಿವಿಮಾತು ಹೇಳಿದರು.

ಸೋಮವಾರ ಇಲ್ಲಿ ಸುದ್ದಿಗಾರರ ಜತೆಗೆ ಮಾತನಾಡಿದ ಅವರು, ‘ಐದಾರು ದಿನಗಳಿಂದ ಕೆಆರ್‌ಎಸ್ ಮತ್ತು ಕಬಿನಿ ಜಲಾಶಯಗಳಿಂದ ಪ್ರತೀದಿನ ಎಂಟರಿಂದ ಹತ್ತು ಟಿಎಂಸಿ ನೀರು ನೆರೆರಾಜ್ಯಕ್ಕೆ ಹರಿದುಹೋಗಿದೆ. ಜೂನ್ ಮತ್ತು ಜುಲೈ ತಿಂಗಳಿನಲ್ಲಿ ಎಷ್ಟೆಲ್ಲಾ ನೀರು ಹರಿಸಬೇಕಾಗಿತ್ತೋ ಅಷ್ಟೂ ನೀರನ್ನು ಈ ತಿಂಗಳಲ್ಲಿ ಸಂಪೂರ್ಣವಾಗಿ ಹರಿಸಲಾಗಿದೆ. ಕಾವೇರಿ ಜಲ ನಿರ್ವಹಣಾ ಸಮಿತಿ ಮತ್ತು ಪ್ರಾಧಿಕಾರ ಹೇಳಿದ್ದಕ್ಕಿಂತ ಹೆಚ್ಚಿನ ಪ್ರಮಾಣದ ನೀರು ತಮಿಳುನಾಡಿಗೆ ಹೋಗಿದೆ. ನೀರು ನಿರಂತರವಾಗಿ ಬಂದಾಗ ನಿಮಗಾಗಲಿ ಅಥವಾ ನಿಮ್ಮ ರೈತರಿಗಾಗಲಿ ಕೊರತೆ ಮಾಡಿಲ್ಲ. ಕೆಲವು ವರ್ಷ ನಿಮಗೆ ಕೊಡಬೇಕಾದ ನೀರಿಗಿಂತ ಮೂರು ಪಟ್ಟು ಹೆಚ್ಚು ನೀರನ್ನು ಕೊಟ್ಟಿದ್ದೇವೆ’ ಎಂದರು.

‘ವ್ಯರ್ಥವಾಗಿ ಸಮುದ್ರಕ್ಕೆ ಸೇರುವ ನೀರನ್ನು ಸದ್ಬಳಕೆ ಮಾಡಿಕೊಳ್ಳುವ ಉದ್ದೇಶದಿಂದ, ಎರಡೂ ರಾಜ್ಯಗಳ ರೈತರಿಗೆ ಹಾಗೂ ಕುಡಿಯುವ ನೀರಿಗೆ ಅನುಕೂಲವಾಗುವಂತೆ ಮೇಕೆದಾಟು ಯೋಜನೆ ನಿರ್ಮಾಣ ಆಗಬೇಕಿದೆ. ಈ ಯೋಜನೆಗೆ ಅನೇಕ ವರ್ಷಗಳಿಂದ ತಮಿಳುನಾಡು ಆಕ್ಷೇಪ ತೆಗೆಯುತ್ತಿದೆ. ಇದರ ಬಗ್ಗೆ ತಮಿಳುನಾಡು ಸರ್ಕಾರ ಅರ್ಥ ಮಾಡಿಕೊಳ್ಳಬೇಕು’ ಎಂದು ಅವರು ಕಿವಿಮಾತು ಹೇಳಿದರು.

ಮರ ಬಿದ್ದು ಹೆಸ್ಕಾಂನ ಇಬ್ಬರು ನೌಕರರು ಸಾವು

ಹನುಮಂತಪ್ಪ

ಮಂಜುನಾಥ

ಪ್ರಜಾವಾಣಿ ವಾರ್ತೆ

ಹಿರೇಕೆರೂರು (ಹಾವೇರಿ ಜಿಲ್ಲೆ): ಇಲ್ಲಿಯ ಎಪಿಎಂಸಿ ಮಾರುಕಟ್ಟೆ ಬಳಿ ಸೋಮವಾರ ಮರ ಉರುಳಿಬಿದ್ದು, ಬೈಕ್ ಮೇಲಿದ್ದ ಇಬ್ಬರು ಸವಾರರು ಮೃತಪಟ್ಟಿದ್ದಾರೆ.

ತಾಲ್ಲೂಕಿನ ಚಿನ್ನಮುಳಗುಂದ ಗ್ರಾಮದ ಮಂಜುನಾಥ ಪುಟ್ಟಲಿಂಗಣ್ಣನವರ (35) ಮತ್ತು ಯತ್ನಳ್ಳಿ ಎಂ.ಎಂ ಗ್ರಾಮದ ಹನುಮಂತಪ್ಪ ನಾಮದೇವ (25) ಮೃತರು. ಹೆಸ್ಕಾಂ ಕಚೇರಿಯಲ್ಲಿ ಇಬ್ಬರೂ ಗುತ್ತಿಗೆ ನೌಕರರಾಗಿದ್ದರು.

‘ಗಂಗಾ ಆರತಿ’ಯಂತೆ ‘ಕಾವೇರಿ ಆರತಿ’: ಡಿಕೆಶಿ

ಪ್ರಜಾವಾಣಿ ವಾರ್ತೆ

ಮಂಡ್ಯ: ‘ವಾರಾಣಸಿಯ ‘ಗಂಗಾ ಆರತಿ’ ಮಾದರಿಯಲ್ಲೇ ‘ಕಾವೇರಿ ಆರತಿ’ಗೆ ವಿಶೇಷ ಕಾರ್ಯಕ್ರಮ ರೂಪಿಸುತ್ತಿದ್ದೇವೆ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದರು.

ಜಿಲ್ಲೆಯ ಶ್ರೀರಂಗಪಟ್ಟಣ ತಾಲ್ಲೂಕಿನ ಕೆ.ಆರ್.ಎಸ್. ಜಲಾಶಯವನ್ನು ಸೋಮವಾರ ವೀಕ್ಷಿಸಿದ ನಂತರ ಮಾಧ್ಯಮಗೋಷ್ಠಿಯಲ್ಲಿ ಮಾತನಾಡಿ, ‘ಮಂಡ್ಯ–ಕೊಡಗಿನ ಸಚಿವರು, ಶಾಸಕರು ಮತ್ತು ಅಧಿಕಾರಿಗಳ ತಂಡವನ್ನು ರಚಿಸಿದ್ದು, ಗಂಗಾ ಆರತಿ ಕಾರ್ಯಕ್ರಮ ಕುರಿತು ಅಧ್ಯಯನ ಮಾಡಿ, ತಿಂಗಳೊಳಗೆ ವರದಿ ನೀಡಲು ಸೂಚಿಸಿದ್ದೇನೆ. ಕಾವೇರಿ ನೀರಾವರಿ ನಿಗಮ ಮತ್ತು ಧಾರ್ಮಿಕ ದತ್ತಿ ಇಲಾಖೆಯಿಂದ ಆಯೋಜಿಸಲಾಗುವುದು’ ಎಂದರು.

‘ಜಲಾಶಯದಲ್ಲಿ ಕಾರ್ಯಕ್ರಮ ನಡೆಸುವುದರಿಂದ ಪ್ರವಾಸೋದ್ಯಮಕ್ಕೂ ಉತ್ತೇಜನ ಸಿಗುತ್ತದೆ. ಮುಖ್ಯಮಂತ್ರಿಯೊಂದಿಗೆ ಚರ್ಚಿಸಿ, ಅಧಿವೇಶನ ಮುಗಿದ ನಂತರ ಕಾವೇರಿ ತಾಯಿಗೆ ಬಾಗಿನ ಅರ್ಪಿಸುತ್ತೇವೆ’ ಎಂದು ಹೇಳಿದರು.

‘ಕಾವೇರಿ ಜಲಾನಯನ ಪ್ರದೇಶದಲ್ಲಿ ಉತ್ತಮ ಮಳೆಯಾಗಿದ್ದು, ಜಲಾಶಯ ಭರ್ತಿಯಾಗಿದೆ. ಕಾವೇರಿ ನೀರು ನಿರ್ವಹಣಾ ಸಮಿತಿಯು ಜುಲೈ 12ರಿಂದ ಜುಲೈ 31ರವರೆಗೆ 1 ಟಿಎಂಸಿಯಂತೆ 20 ಟಿಎಂಸಿ ಅಡಿ ನೀರು ಬಿಡಿ ಎಂದು ಸೂಚಿಸಿತ್ತು. ಇದುವರೆಗೆ ತಮಿಳುನಾಡಿಗೆ ಕೆ.ಆರ್.ಎಸ್, ಕಬಿನಿ, ಹಾರಂಗಿ, ಹೇಮಾವತಿ ಅಣೆಕಟ್ಟೆಯಿಂದ ಬಿಳಿಗುಂಡ್ಲು ಮೂಲಕ ಒಟ್ಟಾರೆ 30 ಟಿಎಂಸಿ ಅಡಿ ನೀರು ಹರಿದಿದೆ. ಬಾಕಿ 10 ಟಿಎಂಸಿ ಅಡಿ ನೀರು ಹರಿಸಿದರೆ ಸಹಜ ಸ್ಥಿತಿಗೆ ಬರಲಿದ್ದೇವೆ. ರಾಜ್ಯದ ರೈತರ ಹಿತ ಕಾಯಲು ಸರ್ಕಾರ ಬದ್ಧವಾಗಿದೆ’ ಎಂದರು.

‘ಜಲಾನಯನ ಪ್ರದೇಶದ ಎಲ್ಲ 1,657 ಕೆರೆಗಳನ್ನು ತುಂಬಿಸಲು ಅಧಿಕಾರಿಗಳಿಗೆ ಸೂಚಿಸಿದ್ದೇನೆ. ಬಿತ್ತನೆ ಬೀಜ ಮತ್ತು ರಸಗೊಬ್ಬರದ ಕೊರತೆಯಿಲ್ಲ. 30 ಲಕ್ಷ ರೈತರಿಗೆ ₹25 ಸಾವಿರ ಕೋಟಿ ಸಾಲ ವಿತರಿಸಲಾಗುವುದು. ಶೂನ್ಯ ಬಡ್ಡಿದರದಲ್ಲಿ ಸಾಲ ನೀಡಲಾಗುವುದು’ ಎಂದರು.

‘ಮೇಕೆದಾಟು ಯೋಜನೆಯ ದಾಖಲೆ, ವರದಿಗಳನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಿದ್ದು, ಯಾವಾಗ ಸಾಕಾರವಾಗುತ್ತದೆ ಎಂದು ಕಾಲವೇ ಉತ್ತರಿಸುತ್ತದೆ’ ಎಂದರು.

‘ಸರ್ವಪಕ್ಷಗಳ ಸಭೆಗೂ ಮೊದಲೇ ಡ್ಯಾಂನಿಂದ ನೀರು ಬಿಡುಗಡೆ’ ಎಂಬ ಎಚ್.ಡಿ.ಕುಮಾರಸ್ವಾಮಿಯವರ ಹೇಳಿಕೆಗೆ ಪ್ರತಿಕ್ರಿಯಿಸಿ, ‘ಕೆಲವರು ಪ್ರಚಾರಕ್ಕಾಗಿ ಮಾತನಾಡುತ್ತಾರೆ. ನನಗೆ ಪ್ರಚಾರ ಬೇಕಿಲ್ಲ. ಯಾರಿಗೋ ಉತ್ತರಿಸುವ ಅಗತ್ಯವೂ ಇಲ್ಲ. ಅವರಿಗೆ (ಎಚ್‌ಡಿಕೆ) ನನ್ನ ನೆನಪಿಸಿಕೊಳ್ಳದಿದ್ದರೆ ನಿದ್ದೆ ಬರಲ್ಲ, ಏನು ಮಾಡೋದು’ ಎಂದು ವ್ಯಂಗ್ಯವಾಡಿದರು.

> **ಗಣಿಗಾರಿಕೆ ಮಾಡಲು ಎಲ್ಲಿ ಬೇಕಾದರೂ ಜಾಗ ಸಿಗುತ್ತದೆ. ಆದರೆ, ನಮಗೆ ಅಣೆಕಟ್ಟೆ ಸಿಗುವುದಿಲ್ಲ. ಕೆಆರ್‌ಎಸ್ ಅಣೆಕಟ್ಟೆ ಸುರಕ್ಷತೆಗೆ ಎಲ್ಲ ಅಗತ್ಯ ಕ್ರಮ ಕೈಗೊಂಡಿದ್ದೇವೆ**
> **ಡಿ.ಕೆ.ಶಿವಕುಮಾರ್,** ಉಪಮುಖ್ಯಮಂತ್ರಿ

ಮಂಡ್ಯ ಜಿಲ್ಲೆ ಶ್ರೀರಂಗಪಟ್ಟಣ ತಾಲ್ಲೂಕಿನ ಕೃಷ್ಣರಾಜಸಾಗರ ಜಲಾಶಯವನ್ನು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸೋಮವಾರ ವೀಕ್ಷಿಸಿದರು. ಕೃಷಿ ಸಚಿವ ಎನ್‌.ಚಲುವರಾಯಸ್ವಾಮಿ, ಶಾಸಕ ದರ್ಶನ್ ಪುಟ್ಟಣಯ್ಯ ಇದ್ದಾರೆ ಪ್ರಜಾವಾಣಿ ಚಿತ್ರ

ಹೈಕೋರ್ಟ್ ಮೆಟ್ಟಿಲೇರಿದ ಪ್ರಕರಣ

ಬೆಕ್ಕಿಗೆ ಚೆಲ್ಲಾಟ, ಅರ್ಜಿದಾರನ ಪ್ರಾಣ ಸಂಕಟ...

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ತೊಂದರೆ ನೀಡುತ್ತಿದೆ ಎಂದು ದೂರಿ ಬೆಕ್ಕನ್ನು ಒತ್ತೆಯಾಳಾಗಿ ಇಟ್ಟುಕೊಂಡಿದ್ದಾರೆ’ ಎಂದು ಆರೋಪಿಸಿ ವ್ಯಕ್ತಿಯೊಬ್ಬರ ವಿರುದ್ಧ ದಾಖಲಾಗಿದ್ದ ಕ್ರಿಮಿನಲ್ ಪ್ರಕರಣವೊಂದರ ವಿಚಾರಣೆಗೆ ಹೈಕೋರ್ಟ್ ತಡೆ ನೀಡಿದೆ.

ಈ ಸಂಬಂಧ ಆನೇಕಲ್ ತಾಲ್ಲೂಕಿನ ಶಿಕಾರಿಪಾಳ್ಯದ ಸಿರಾಜ್ ಲೇಔಟ್ ನಿವಾಸಿ ತಾಹಾ ಹುಸೈನ್ ಬಿನ್ ಖಾಲಿದ್ ಮೆಹಬೂಬ್ (31) ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

ಅರ್ಜಿದಾರರ ಪರ ವಾದ ಮಂಡಿಸಿದ ಹೈಕೋರ್ಟ್ ವಕೀಲ ಜಿ.ದೇವರಾಜ್, ‘ಬೆಕ್ಕುಗಳು ಕಿಟಕಿಯಿಂದ ಮನೆಯ ಒಳಗೆ ಬರುವುದು ಮತ್ತು ಹೋಗುವುದು ಸಹಜ ಪ್ರಕ್ರಿಯೆ. ಇಂತಹ ಕ್ಷುಲ್ಲಕ ಪ್ರಕರಣಕ್ಕೆ ಸಂಬಂಧಿಸಿದ ಆರೋಪದಡಿ ಮುಂದಿನ ವಿಚಾರಣೆಗೆ ಅನುಮತಿ ನೀಡುವುದರಿಂದ ಅಪರಾಧಿಕ ನ್ಯಾಯಿಕ ವ್ಯವಸ್ಥೆಗೆ ಅಡ್ಡಿ ಉಂಟಾಗುತ್ತದೆ. ಆದ್ದರಿಂದ,

ಅರ್ಜಿದಾರರ ವಿರುದ್ಧ ದಾಖಲಾಗಿರುವ ಪ್ರಕರಣದ ಮುಂದಿನ ನ್ಯಾಯಿಕ ಪ್ರಕ್ರಿಯೆಗೆ ತಡೆ ನೀಡಬೇಕು’ ಎಂದು ಮನವಿ ಮಾಡಿದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಮೂರ್ತಿಗಳು, ದೋಷಾರೋಪ ಪಟ್ಟಿ ಸಲ್ಲಿಸಿರುವ ಪೊಲೀಸರ ನಡೆಗೆ ತೀವ್ರ ಅಚ್ಚರಿ ವ್ಯಕ್ತಪಡಿಸಿದರಲ್ಲದೆ, ಅಯ್ಯೋ ದೇವರೇ..! ‘ಪೊಲೀಸರು ನಿಜವಾದ ಅಪರಾಧ ಪ್ರಕರಣಗಳ ಬೆನ್ನಟ್ಟುವುದು ಬಿಟ್ಟು, ಬೆಕ್ಕು ಕಾಣೆಯಾದ ಪ್ರಕರಣದ ಬೆನ್ನುಬಿದ್ದಿದ್ದಾರೆ. ಬೆಕ್ಕು ಎಲ್ಲರ ಮನೆಯ ಒಳಗೆ ಹೋಗಿ ಹೊರಬಂದಿದೆ. ಇದರಿಂದ ಬೆಕ್ಕು ಕಾಣೆಯಾಗಿದೆ ಎಂದು ದೂರು ನೀಡಿದರೆ, ಅದನ್ನು ಪೊಲೀಸರು ತನಿಖೆ ನಡೆಸಿ ದೋಷಾರೋಪ ಪಟ್ಟಿ ಸಲ್ಲಿಸಿರುವುದು ವಿಪರ್ಯಾಸ’ ಎಂದು ಬೇಸರ ವ್ಯಕ್ತಪಡಿಸಿದರು.

ಅಂತೆಯೇ, ಪ್ರಕರಣಕ್ಕೆ ಸಂಬಂಧಿಸಿದಂತೆ 4ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯದ ಮುಂದಿನ ವಿಚಾರಣೆಗೆ ತಡೆ ನೀಡಿ ಆದೇಶಿಸಿದರು.

ಪ್ರಕರಣವೇನು?: ‘ನಾನು ಸಾಕಿದ್ದ ಡೈಸಿ ಬೆಕ್ಕನ್ನು ತಾಹಾ ಹುಸೈನ್ ತಮ್ಮ ಮನೆಯಲ್ಲಿ ಒತ್ತೆಯಾಳಾಗಿ ಇಟ್ಟುಕೊಂಡಿದ್ದಾರೆ. ಅವರು ನನ್ನ ಬೆಕ್ಕನ್ನು ಒತ್ತೆಯಾಳಾಗಿ ಇಟ್ಟುಕೊಂಡಿರುವುದು ನಮ್ಮ ಮನೆಯ ಸಿಸಿಟಿವಿ ಯಲ್ಲಿ ಪತ್ತೆಯಾಗಿದೆ’ ಎಂದು ಆರೋಪಿಸಿ ಬೆಕ್ಕು ಕಳವು ಮಾಡಿದ ಆರೋಪದಡಿ ಸಿರಾಜ್ ಲೇಔಟ್‌ನ ನಿವಾಸಿ ನಿಖಿತಾ ಅಂಜನಾ ಅಯ್ಯರ್ (41) ಹೆಬ್ಬಗೋಡಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದರು.

ದೂರಿನ ಅನ್ವಯ ತಾಹಾ ಹುಸೈನ್ ವಿರುದ್ಧ ಭಾರತೀಯ ದಂಡ ಸಂಹಿತೆ–1860ರ ಕಲಂ 504, 506 ಮತ್ತು 509ರ ಅಡಿಯಲ್ಲಿ ಜೀವ ಬೆದರಿಕೆ, ಶಾಂತಿಭಂಗ ಮತ್ತು ಮಹಿಳೆಯ ಘನತೆಗೆ ಧಕ್ಕೆ ತಂದ ಆರೋಪದ ಕ್ರಿಮಿನಲ್ ಪ್ರಕರಣ ದಾಖಲಿಸಲಾಗಿತ್ತು. ತನಿಖೆ ನಡೆಸಿದ್ದ ಪೊಲೀಸರು ವಿಚಾರಣಾ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು.

ವಿಶೇಷ ಕೋರ್ಟ್ ವಿಳಂಬಕ್ಕೆ ಕಿಡಿ

ಬೆಂಗಳೂರು: ಸಂಶೋಧಕ ಎಂ.ಎಂ.ಕಲಬುರ್ಗಿ ಮತ್ತು ಪತ್ರಕರ್ತೆ ಗೌರಿ ಲಂಕೇಶ್ ಹತ್ಯೆ ಪ್ರಕರಣದ ವಿಚಾರಣೆಯ ಸಂಬಂಧ ತ್ವರಿತಗತಿಯ ವಿಶೇಷ ನ್ಯಾಯಾಲಯ ಸ್ಥಾಪಿಸುವ ಸಂಬಂಧ ವಿಳಂಬ ನೀತಿ ಅನುಸರಿಸುತ್ತಿರುವ ರಾಜ್ಯ ಸರ್ಕಾರದ ವಿರುದ್ಧ ಕರ್ನಾಟಕ ಹೈಕೋರ್ಟ್ ಮೌಖಿಕವಾಗಿ ಅಸಮಾಧಾನ ವ್ಯಕ್ತಪಡಿಸಿದೆ.

ಪ್ರಕರಣದ 4ನೇ ಆರೋಪಿ ವಾಸುದೇವ್ ಭಗವಾನ್ ಸೂರ್ಯವಂಶಿ ಅಲಿಯಾಸ್ ವಾಸು ಅಲಿಯಾಸ್ ಮೆಕ್ಯಾನಿಕ್ ಹಾಗೂ 6ನೇ ಆರೋಪಿ ಅಮಿತ್ ಬಡ್ಡಿ ಅಲಿಯಾಸ್ ಅಮಿತ್ ಅಲಿಯಾಸ್ ಗೋವಿಂದ್ ಸಲ್ಲಿಸಿರುವ ಜಾಮೀನು ಅರ್ಜಿಯ ವಿಚಾರಣೆಯನ್ನು ನ್ಯಾಯಮೂರ್ತಿ ಎಂ.ಜಿ.ಉಮಾ ಅವರಿದ್ದ ಏಕಸದಸ್ಯ ನ್ಯಾಯಪೀಠ ಸೋಮವಾರ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ಹಿರಿಯ ವಕೀಲ ಎಂ.ಅರುಣ್ ಶ್ಯಾಮ್, ‘ಆರೋಪಿಗಳು ಕಳೆದ ಆರು ವರ್ಷಗಳಿಂದ ಜೈಲಿನಲ್ಲಿದ್ದಾರೆ. ಪ್ರಕರಣಕ್ಕೆ ಸಂಬಂಧಿಸಿದಂತೆ ವಿಶೇಷ ನ್ಯಾಯಾಲಯ ಸ್ಥಾಪಿಸುವುದಾಗಿ ರಾಜ್ಯ ಸರ್ಕಾರ ಹೇಳಿತ್ತು. ಆದರೆ, ಈವರೆಗೂ ಆ ಕೆಲಸವಾಗಿಲ್ಲ. ಕಲಬುರ್ಗಿ ಅವರ ಪ್ರಕರಣದಲ್ಲಿ 138 ಸಾಕ್ಷಿಗಳ ಪೈಕಿ ಕೇವಲ 10 ಸಾಕ್ಷಿಗಳ ವಿಚಾರಣೆ ಮಾತ್ರ ಈಗ ಮುಗಿದಿದೆ. ಉಳಿದ ಸಾಕ್ಷಿಗಳ ವಿಚಾರಣೆ ಸದ್ಯಕ್ಕೆ ಮುಗಿಯುವ ಸಾಧ್ಯತೆ ಇಲ್ಲ. ಹೀಗಾಗಿ, ಅರ್ಜಿದಾರರಿಗೆ ಜಾಮೀನು ಮಂಜೂರು ಮಾಡಬೇಕು’ ಎಂದು ಕೋರಿದರು.

ಇದಕ್ಕೆ ಪ್ರತಿಕ್ರಿಯಿಸಿದ ವಿಶೇಷ ಪ್ರಾಸಿಕ್ಯೂಟರ್ ಅಶೋಕ್ ಎನ್. ನಾಯಕ್, ‘ಅಡ್ವೊಕೇಟ್ ಜನರಲ್ ಈ ಕುರಿತಂತೆ ಸಂಬಂಧಿಸಿದವರ ಜೊತೆ ಮಾತುಕತೆ ನಡೆಸಿದ್ದಾರೆ. ಮುಂದಿನ ವಿಚಾರಣೆ ವೇಳೆಗೆ ಈ ವಿಚಾರದ ಬಗೆಗಿನ ಮಾಹಿತಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಲಾಗುವುದು’ ಎಂದರು. ಇದನ್ನು ಮನ್ನಿಸಿದ ಪೀಠವು ವಿಚಾರಣೆಯನ್ನು ಜುಲೈ 23 ಮುಂದೂಡಿತು.

ವೇತನ ಪರಿಷ್ಕರಣೆ: ಅಧಿಕೃತ ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಏಳನೇ ವೇತನ ಆಯೋಗದ ಶಿಫಾರಸಿನಂತೆ ಆ.1ರಿಂದ ಪರಿಷ್ಕೃತ ಪರಿಷ್ಕೃತ ವೇತನ ಶ್ರೇಣಿ ಜಾರಿ ಗೊಳಿಸಲು ಆರ್ಥಿಕ ಇಲಾಖೆ ಸೋಮವಾರ ಆದೇಶ ಹೊರಡಿಸಿದೆ.

ಇದೇ ಜುಲೈ15ರಂದು ನಡೆದ ಸಚಿವ ಸಂಪುಟ ಸಭೆಯಲ್ಲಿ ವೇತನ ಪರಿಷ್ಕರಣೆ ಮಾಡುವ ನಿರ್ಧಾರ ಕೈಗೊಳ್ಳಲಾಗಿತ್ತು.

ವೇತನ ಪರಿಷ್ಕರಣೆಗಾಗಿ ನಿವೃತ್ತ ಮುಖ್ಯ ಕಾರ್ಯದರ್ಶಿ ಸುಧಾಕರ್ ರಾವ್ ನೇತೃತ್ವದ ಏಳನೇ ವೇತನ ಆಯೋಗವನ್ನು ಸರ್ಕಾರ ರಚಿಸಿತ್ತು. ಶೇಕಡ 31ರಷ್ಟು ತುಟ್ಟಿಭತ್ಯೆಯನ್ನು ಮೂಲವೇತನದಲ್ಲಿ ವಿಲೀನಗೊಳಿಸುವ ಜತೆಗೆ, ಶೇ 27.50ರಷ್ಟು ಫಿಟ್‌ಮೆಂಟ್ ನೀಡುವಂತೆ ಆಯೋಗ ಶಿಫಾರಸು ಮಾಡಿತ್ತು.

2023ರ ಏಪ್ರಿಲ್ 1ರಿಂದ ಅನ್ವಯವಾಗುವಂತೆ ಶೇ 17ರಷ್ಟು ಮಧ್ಯಂತರ ಪರಿಹಾರ ನೀಡುವ ನಿರ್ಧಾರವನ್ನು ಬಸವರಾಜ ಬೊಮ್ಮಾಯಿ ನೇತೃತ್ವದ ಸರ್ಕಾರ ಕೈಗೊಂಡಿತ್ತು. ಬಾಕಿ ಉಳಿದಿರುವ ಶೇ 10.50ರಷ್ಟು ನೀಡಲು ಮುಖ್ಯಮಂತ್ರಿ ಸಿದ್ದರಾಮಯ್ಯ ಅಧ್ಯಕ್ಷತೆಯ ಸಚಿವ ಸಂಪುಟ ಸಭೆ ಒಪ್ಪಿಗೆ ನೀಡಿತ್ತು.

ಎಲ್ಲ ನಿವೃತ್ತರಿಗೆ ಗ್ರಾಚ್ಯುಟಿಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಂಗನವಾಡಿ ಕಾರ್ಯಕರ್ತೆಯರಿಗೆ ಹಾಗೂ ಸಹಾಯಕಿಯರಿಗೆ 2023ರ ಏಪ್ರಿಲ್ 1ಕ್ಕೆ ಅನ್ವಯವಾಗುವಂತೆ ಗ್ರಾಚ್ಯುಟಿ ನೀಡುವ ಸರ್ಕಾರದ ಆದೇಶವನ್ನು ಹಿಂಪಡೆದು, ಎಲ್ಲ ನಿವೃತ್ತರಿಗೂ ಗ್ರಾಚುಯಿಟಿ ನೀಡಬೇಕು ಎಂದು ಕರ್ನಾಟಕ ರಾಜ್ಯ ಅಂಗನವಾಡಿ ಕಾರ್ಯಕರ್ತೆಯರ ಮತ್ತು ಸಹಾಯಕಿಯರ ಸಂಘಟನೆಗಳ ಸಂಯುಕ್ತ ಸಂಘರ್ಷ ಸಮಿತಿ ಆಗ್ರಹಿಸಿದೆ.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕರ್ನಾಟಕ ರಾಜ್ಯ ಅಂಗನವಾಡಿ ಕಾರ್ಯಕರ್ತೆಯರ ಮತ್ತು ಸಹಾಯಕಿಯರ ಫೆಡರೇಷನ್‌ನ (ಎಐಟಿಯುಸಿ) ಪ್ರಧಾನ ಕಾರ್ಯದರ್ಶಿ ಎಂ. ಜಯಮ್ಮ, ‘ನಿವೃತ್ತರಾದ ಎಲ್ಲ ಅಂಗನವಾಡಿ ಕಾರ್ಯಕರ್ತೆಯರಿಗೆ ಹಾಗೂ ಸಹಾಯಕಿಯರಿಗೆ ಗ್ರಾಚ್ಯುಟಿ ನೀಡಬೇಕೆಂದು 2022ರಲ್ಲಿ ಸುಪ್ರೀಂ ಕೋರ್ಟ್ ಆದೇಶ ನೀಡಿದೆ. ಅದನ್ನು ಜಾರಿ ಮಾಡಬೇಕು’ ಎಂದು ಒತ್ತಾಯಿಸಿದರು.

‘ಅಂಗನವಾಡಿ ಕೇಂದ್ರಗಳಿಗೆ ಪೂರೈಕೆ ಆಗುತ್ತಿರುವ ಪೌಷ್ಟಿಕ ಆಹಾರ ಕಳಪೆ ಗುಣಮಟ್ಟದಿಂದ ಕೂಡಿದ್ದು, ಫಲಾನುಭವಿಗಳು ಈ ಆಹಾರ ಸೇವಿಸುತ್ತಿಲ್ಲ. ಸಮಗ್ರ ಶಿಶು ಅಭಿವೃದ್ಧಿ ಯೋಜನೆಯ ಪ್ರಕಾರ ಸ್ಥಳೀಯ ಪೌಷ್ಟಿಕ ಆಹಾರ ನೀಡಬೇಕೆಂಬ ನಿಯಮವಿದ್ದು, ಅದನ್ನು ಸಂಪೂರ್ಣವಾಗಿ ಉಲ್ಲಂಘಿಸಲಾಗುತ್ತಿದೆ. ಇದರಿಂದ, ಗುತ್ತಿಗೆದಾರರಿಗೆ ಹಾಗೂ ಅಧಿಕಾರಿಗಳಿಗೆ ಹಣ ಮಾಡಲು ಅನುಕೂಲವಾಗುವ ವ್ಯವಸ್ಥೆಯನ್ನು ರೂಪಿಸಲಾಗಿದೆ’ ಎಂದು ದೂರಿದರು.

ಟಿಯುಸಿಸಿ ಅಧ್ಯಕ್ಷ ಜಿ.ಆರ್. ಶಿವಶಂಕರ್, ಅಂಗನವಾಡಿ ಕಾರ್ಯಕರ್ತೆಯರ ಮತ್ತು ಸಹಾಯಕಿಯರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಶಿವಣ್ಣ, ಕರ್ನಾಟಕ ರಾಜ್ಯ ಅಂಗನವಾಡಿ ಕಾರ್ಯಕರ್ತೆಯರ ಮತ್ತು ಸಹಾಯಕಿಯರ ಸಂಘದ ಅಧ್ಯಕ್ಷೆ ಬಿ. ಪ್ರೇಮಾ, ಎಐಯುಟಿಯುಸಿಯ ಸೋಮಶೇಖರ ಪತ್ರಿಕಾಗೋಷ್ಠಿಯಲ್ಲಿದ್ದರು.

ನೀಟ್–ಯುಜಿ: ದೆಹಲಿ ಐಐಟಿ ನಿರ್ದೇಶಕರಿಗೆ ಸುಪ್ರೀಂ ಕೋರ್ಟ್ ಸೂಚನೆ

ಸರಿ ಉತ್ತರ ಗುರುತಿಸಲು ತಂಡ

ನವದೆಹಲಿ (ಪಿಟಿಐ): ನೀಟ್–ಯುಜಿ 2024 ಪರೀಕ್ಷೆಯಲ್ಲಿ ಕೇಳಿದ್ದ ಒಂದು ಪ್ರಶ್ನೆಗೆ ಸರಿಯಾದ ಉತ್ತರ ಏನು ಎಂಬ ಬಗ್ಗೆ ವರದಿಯೊಂದನ್ನು ಸಲ್ಲಿಸಲು ಮೂವರು ತಜ್ಞರ ತಂಡವೊಂದನ್ನು ರಚಿಸುವಂತೆ ಐಐಟಿ–ದೆಹಲಿಯ ನಿರ್ದೇಶಕರಿಗೆ ಸುಪ್ರೀಂ ಕೋರ್ಟ್ ಸೋಮವಾರ ಸೂಚನೆ ನೀಡಿದೆ. ಸರಿ ಉತ್ತರ ಕುರಿತ ವರದಿಯನ್ನು ಮಂಗಳವಾರ ಮಧ್ಯಾಹ್ನದ ವೇಳೆಗೆ ಕೋರ್ಟ್‌ಗೆ ಸಲ್ಲಿಸಬೇಕಿದೆ.

ಪರಮಾಣುವಿಗೆ ಸಂಬಂಧಿಸಿದ ಒಂದು ಪ್ರಶ್ನೆಗೆ ಎರಡು ಸರಿ ಉತ್ತರಗಳು ಇವೆ. ಪರೀಕ್ಷೆಯನ್ನು ಬರೆದಿದ್ದ ವಿದ್ಯಾರ್ಥಿಗಳ ಪೈಕಿ ಒಂದು ಬಗೆಯ ಸರಿ ಉತ್ತರವನ್ನು ನೀಡಿದವರಿಗೆ ನಾಲ್ಕು ಅಂಕ ನೀಡಲಾಗಿದೆ ಎಂದು ಅರ್ಜಿದಾರರಲ್ಲಿ ಕೆಲವರು ಕೋರ್ಟ್‌ಗೆ ಮಾಹಿತಿ ನೀಡಿದರು.

ಈ ರೀತಿ ಮಾಡಿದ್ದು ಅಂತಿಮ ಮೆರಿಟ್ ಪಟ್ಟಿಯ ಮೇಲೆ ಗಣನೀಯ ಪರಿಣಾಮ ಉಂಟುಮಾಡುತ್ತದೆ ಎಂದು ಅವರು ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಡಿ.ವೈ. ಚಂದ್ರಚೂಡ್ ನೇತೃತ್ವದ ಪೀಠಕ್ಕೆ ವಿವರಿಸಿದರು.

ನೀಟ್–ಯುಜಿ ಪರೀಕ್ಷೆಗೆ ಸಂಬಂಧಿಸಿದ ಅರ್ಜಿಗಳ ವಿಚಾರಣೆಯನ್ನು ಪೀಠವು ಮಂಗಳವಾರ ಮತ್ತೆ ಕೈಗೆತ್ತಿಕೊಳ್ಳಲಿದೆ. ನ್ಯಾಯಮೂರ್ತಿಗಳಾದ ಜೆ.ಬಿ. ಪಾರ್ದೀವಾಲಾ ಮತ್ತು ಮನೋಜ್ ಮಿಶ್ರಾ ಅವರೂ ಈ ಪೀಠದಲ್ಲಿ ಇದ್ದಾರೆ.

ಪರೀಕ್ಷೆಯನ್ನು ನಡೆಸುವ ವ್ಯವಸ್ಥೆಯು ವಿಫಲವಾಗಿದೆ ಎಂಬುದನ್ನು ತೋರಿಸುವಂತೆ ಪೀಠವು ಈ ಮೊದಲು ಅರ್ಜಿದಾರರಿಗೆ ಸೂಚಿಸಿತ್ತು. ಅಲ್ಲದೆ, ಪ್ರಶ್ನೆಪತ್ರಿಕೆ ಸೋರಿಕೆಯು ದೇಶದಾದ್ಯಂತ ವ್ಯಾಪಕವಾಗಿದೆ ಎಂಬುದನ್ನು ಸಾಬೀತು-ಮಾಡುವಂತೆಯೂ ಅದು ಸೂಚಿಸಿತು.

ಪ್ರಶ್ನೆಪತ್ರಿಕೆ ಸೋರಿಕೆಯು ವ್ಯಾಪಕವಾಗಿದೆ ಎಂಬುದನ್ನು ತೋರಿಸಲು ಅಧಿಕೃತವಾಗಿ ಯಾವುದೇ ಆಧಾರ ಇದುವರೆಗೆ ಇಲ್ಲ. ಪಟ್ನಾ ಮತ್ತು ಹಜಾರಿಬಾಗ್‌ನಲ್ಲಿ ಒಂದಿಷ್ಟು ಲೋಪಗಳು ಆಗಿವೆ. ಆದರೆ, ವ್ಯವಸ್ಥೆಯ ಲೋಪವನ್ನು ತೋರಿಸಲು ಅವಷ್ಟೇ ಸಾಕಾಗುವುದಿಲ್ಲ ಎಂದು ಪೀಠವು ಹೇಳಿತು.

ಪೀಠವು ವಿಚಾರಣೆಯ ವೇಳೆ, ಹರಿಯಾಣದ ಝಜ್ಜರ್‌ನಲ್ಲಿನ ಪರೀಕ್ಷಾ ಕೇಂದ್ರಗಳಲ್ಲಿ ಕೆಲವು ವಿದ್ಯಾರ್ಥಿಗಳಿಗೆ ಕೃಪಾಂಕ ಮತ್ತು ಹೆಚ್ಚುವರಿ ಸಮಯ ನೀಡಿದ್ದನ್ನು ಪ್ರಶ್ನಿಸಿತು. ಈ ವಿಚಾರವಾಗಿ ಟಿಪ್ಪಣಿಯೊಂದನ್ನು ಸಲ್ಲಿಸುವಂತೆ ರಾಷ್ಟ್ರೀಯ ಪರೀಕ್ಷಾ ಏಜೆನ್ಸಿಗೆ (ಎನ್‌ಟಿಎ) ಸೂಚಿಸಿತು.

ನೀಟ್ ಮರು ಪರೀಕ್ಷೆಗೆ ಆಗ್ರಹಿಸಿ ಭಾರತೀಯ ಯುವ ಕಾಂಗ್ರೆಸ್ (ಐವೈಸಿ) ಕಾರ್ಯಕರ್ತರು ಸೋಮವಾರ ನವದೆಹಲಿಯಲ್ಲಿ ಪ್ರತಿಭಟನೆ ನಡೆಸಿದರು –ಪಿಟಿಐ

'ಪರೀಕ್ಷಾ ವ್ಯವಸ್ಥೆಯಲ್ಲೇ ಸಮಸ್ಯೆ ಇದೆ'

ನವದೆಹಲಿ (ಪಿಟಿಐ): ದೇಶದ ಪರೀಕ್ಷಾ ವ್ಯವಸ್ಥೆಯಲ್ಲಿಯೇ ಗಂಭೀರವಾದ ಸಮಸ್ಯೆ ಇದೆ. ಇದು 'ನೀಟ್' ಸೇರಿದಂತೆ ಬಹುತೇಕ ಎಲ್ಲ ಪ್ರಮುಖ ಪರೀಕ್ಷೆಗಳ ಮೇಲೆ ಪರಿಣಾಮ ಬೀರಿದೆ ಎಂದು ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಸೋಮವಾರ ಆರೋಪಿಸಿದರು.

ಲೋಕಸಭೆಯಲ್ಲಿ ಈ ಕುರಿತು ಪ್ರಸ್ತಾಪಿಸಿದ ಅವರು, 'ಈ ಪರೀಕ್ಷಾ ವ್ಯವಸ್ಥೆಯಿಂದ ದೇಶದ ಲಕ್ಷಾಂತರ ವಿದ್ಯಾರ್ಥಿಗಳು ತೊಂದರೆಗೆ ಸಿಲುಕಿದ್ದಾರೆ. ಆದರೆ, ಶಿಕ್ಷಣ ಸಚಿವರಿಗೆ ಇದರ ಮೂಲ ಸಮಸ್ಯೆ ಅರ್ಥವಾದಂತೆ ಇಲ್ಲವೋ ಗೊತ್ತಿಲ್ಲ. ಅವರು ತಮ್ಮೊಬ್ಬರನ್ನು ಬಿಟ್ಟು ಉಳಿದವರೆಲ್ಲರನ್ನೂ ದೂರುತ್ತಾರೆ' ಎಂದು ಹೇಳಿದರು.

'ಶ್ರೀಮಂತರು, ದೇಶದ ಪರೀಕ್ಷಾ ವ್ಯವಸ್ಥೆಯನ್ನೇ ಖರೀದಿಸಬಹುದು ಎಂಬಂತಾಗಿದೆ. ಇದು ವ್ಯವಸ್ಥಿತ ಸಮಸ್ಯೆ ಆಗಿರುವುದರಿಂದ, ಅದನ್ನು ವ್ಯವಸ್ಥಿತವಾಗಿ ಸರಿಪಡಿಸಲು ನೀವು ಏನು ಮಾಡುತ್ತಿದ್ದೀರಿ' ಎಂದು ಅವರು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರನ್ನು ಪ್ರಶ್ನಿಸಿದರು.

ಕಾಂಗ್ರೆಸ್ ಸದಸ್ಯ ಮಾಣಿಕಂ ಟ್ಯಾಗೋರ್ ಅವರು, 'ದೇಶದಲ್ಲಿ ಏಳು ವರ್ಷಗಳಲ್ಲಿ 70 ಪರೀಕ್ಷೆಗಳ ಪ್ರಶ್ನೆಪತ್ರಿಕೆಗಳು ಸೋರಿಕೆಯಾಗಿವೆ. ಇವುಗಳ ಬಗ್ಗೆ ಯಾವ ಕ್ರಮ ತೆಗೆದುಕೊಳ್ಳಲಾಗಿದೆ. ಇದರ ಹೊಣೆಹೊತ್ತು ಕೇಂದ್ರ ಶಿಕ್ಷಣ ಸಚಿವರು ರಾಜೀನಾಮೆ ನೀಡುತ್ತಾರೆಯೇ' ಎಂದು ಕೇಳಿದರು.

ಶಿಕ್ಷಣ ವ್ಯವಸ್ಥೆ ಮೇಲೆ ಪರಿಣಾಮ: 'ಈ ವಿಷಯದ ಬಗ್ಗೆ ರಚನಾತ್ಮಕವಾಗಿ ಚರ್ಚಿಸುವ ಅಗತ್ಯವಿದೆ' ಎಂದು ಒತ್ತಿ ಹೇಳಿದ ಸ್ಪೀಕರ್ ಓಂ ಬಿರ್ಲಾ ಅವರು, 'ದೇಶದ ಎಲ್ಲ ಪರೀಕ್ಷೆಗಳ ಮೇಲೆ ಪ್ರಶ್ನೆಗಳನ್ನು ಎತ್ತಿದರೆ, ಅದು ದೇಶದ ಶಿಕ್ಷಣ ವ್ಯವಸ್ಥೆಯ ಮೇಲೆ ಪರಿಣಾಮ ಬೀರುತ್ತದೆ' ಎಂದರು.

ಈ ಬಗ್ಗೆ ಸಿಬಿಐ ತನಿಖೆ ನಡೆಸುತ್ತಿದ್ದು, ಸುಪ್ರೀಂ ಕೋರ್ಟ್‌ನಲ್ಲಿ ವಿಚಾರಣೆ ನಡೆಯುತ್ತಿದೆ. ಹೀಗಾಗಿ ವ್ಯವಸ್ಥೆ ಸುಧಾರಣೆ ಬಗ್ಗೆ ಚರ್ಚೆಯು ಒಳಿತು ಎಂದು ಹೇಳಿದರು.

ಸ್ಪೀಕರ್ ಅವರು ಚರ್ಚೆಯನ್ನು ಸಮಾಪ್ತಿಗೊಳಿಸಿದ ಬಳಿಕ ರಾಹುಲ್ ಗಾಂಧಿ ಅವರು ಮಾತನಾಡಲು ಮುಂದಾದರು. ಅದಕ್ಕೆ ಸ್ಪೀಕರ್ ಅವಕಾಶ ನೀಡಲಿಲ್ಲ. ಇದನ್ನು ವಿರೋಧಿಸಿ ಕಾಂಗ್ರೆಸ್, ಟಿಎಂಸಿ, ಡಿಎಂಕೆ ಸೇರಿದಂತೆ ಬಹುತೇಕ ವಿರೋಧ ಪಕ್ಷಗಳ ಸದಸ್ಯರು ಸಭಾತ್ಯಾಗ ನಡೆಸಿದರು.

'7 ವರ್ಷಗಳಲ್ಲಿ ಸೋರಿಕೆ ಆದ ಸಾಕ್ಷ್ಯವಿಲ್ಲ'

'ಇಡೀ ಪರೀಕ್ಷಾ ವ್ಯವಸ್ಥೆಯನ್ನೇ ಟೀಕಿಸುವುದು ಸರಿಯಲ್ಲ. ಕಳೆದ ಏಳು ವರ್ಷಗಳಲ್ಲಿ ಪ್ರಶ್ನೆಪತ್ರಿಕೆ ಸೋರಿಕೆಯಾದ ಬಗ್ಗೆ ಯಾವುದೇ ಸಾಕ್ಷ್ಯಗಳಿಲ್ಲ' ಎಂದು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಲೋಕಸಭೆಯಲ್ಲಿ ಉತ್ತರಿಸಿದರು.

ರಾಷ್ಟ್ರೀಯ ಪರೀಕ್ಷಾ ಏಜೆನ್ಸಿ (ಎನ್‌ಟಿಎ) ಆರಂಭವಾದಾಗಿನಿಂದ 240 ಪರೀಕ್ಷೆಗಳನ್ನು ನಡೆಸಿದ್ದು, 4.5 ಕೋಟಿಗೂ ಹೆಚ್ಚು ವಿದ್ಯಾರ್ಥಿಗಳು ಪರೀಕ್ಷೆಗಳನ್ನು ಬರೆದಿದ್ದಾರೆ. 2018 ರಿಂದ ಎನ್‌ಟಿಎ ಒಟ್ಟು 16 ಪರೀಕ್ಷೆಗಳನ್ನು ಮುಂದೂಡಿದೆ. ಕೋವಿಡ್–19, ಆಡಳಿತಾತ್ಮಕ, ಸಾಗಣೆ ಮತ್ತು ತಾಂತ್ರಿಕ ಕಾರಣಗಳಿಂದ ಇವುಗಳನ್ನು ಮುಂದೂಡಲಾಗಿತ್ತು ಎಂದು ಸಚಿವರು ಮಾಹಿತಿ ನೀಡಿದರು.

'ನಾವು ಏನನ್ನೂ ಮುಚ್ಚಿಡುತ್ತಿಲ್ಲ. ಎಲ್ಲವೂ ದಾಖಲೆಯಲ್ಲಿದೆ. ನಮ್ಮ ನಾಯಕರಾದ ಪ್ರಧಾನಿ ಅವರ ಅನುಗ್ರಹದಿಂದ ನಾನು ಇಲ್ಲಿದ್ದೇನೆ. ಉತ್ತರದಾಯಿತ್ವದ ವಿಷಯ ಬಂದಾಗ ನಮ್ಮ ಸರ್ಕಾರ ಸಾಮೂಹಿಕವಾಗಿ ಜವಾಬ್ದಾರಿ ತೆಗೆದುಕೊಳ್ಳುತ್ತದೆ' ಎಂದರು.

ರಾಹುಲ್ ಗಾಂಧಿ ಮತ್ತು ಅವರ ಪಕ್ಷ ಮೊಸಳೆ ಕಣ್ಣೀರು ಸುರಿಸುತ್ತಿದೆ. ಆದರೆ ಯುಪಿಎ ಆಡಳಿತ ಅವಧಿ ಮತ್ತು ಉತ್ತರ ಪ್ರದೇಶದಲ್ಲಿ ಅಖಿಲೇಶ್ ಯಾದವ್ ಅವರ ಅವಧಿಯಲ್ಲಿ ಆದ ಪ್ರಶ್ನೆ ಪತ್ರಿಕೆ ಸೋರಿಕೆಗಳನ್ನು ಕೆದಕಿದರೆ ಭಾರಿ ಹಗರಣಗಳು ಹೊರಬರುತ್ತವೆ ಎಂದು ಪ್ರಧಾನ್ ತಿಳಿಸಿದರು. ಪರೀಕ್ಷಾ ನಕಲು ಸೇರಿದಂತೆ ಇತರ ದುಷ್ಕೃತ್ಯಗಳನ್ನು ತಡೆಯುವ ಮಸೂದೆಯನ್ನು ಕಾನೂನುಗೊಳಿಸಲು ಯುಪಿಎಗೆ ಏಕೆ ಸಾಧ್ಯವಾಗಲಿಲ್ಲ ಎಂದು ಪ್ರಶ್ನಿಸಿದರು.

ಪಶ್ಚಿಮ ಬಂಗಾಳ: ಇಬ್ಬರು ಶಾಸಕರಿಗೆ ₹500 ದಂಡ

ಕೋಲ್ಕತ್ತ (ಪಿಟಿಐ): ನೂತನವಾಗಿ ಆಯ್ಕೆಯಾದ ಟಿಎಂಸಿ ಪಕ್ಷದ ಇಬ್ಬರು ಶಾಸಕರಿಗೆ ಪಶ್ಚಿಮ ಬಂಗಾಳದ ಸ್ಪೀಕರ್ ಪ್ರಮಾಣ ವಚನ ಬೋಧಿಸಿದ ವಿಚಾರಕ್ಕೆ ಸಂಬಂಧಿಸಿದಂತೆ ಸರ್ಕಾರ ಹಾಗೂ ರಾಜ್ಯಪಾಲರ ನಡುವೆ ತಿಕ್ಕಾಟ ಮುಂದುವರಿದಿದೆ.

ಪ್ರಮಾಣವಚನದ ಕಾನೂನುಬದ್ಧತೆಯನ್ನು ಪ್ರಶ್ನಿಸಿ ಇಬ್ಬರೂ ಶಾಸಕರಿಗೆ ರಾಜಭವನದಿಂದ ಇ–ಮೇಲ್ ಮಾಡಲಾಗಿದ್ದು, ತಲಾ ₹500 ದಂಡ ಪಾವತಿಸುವಂತೆ ಸೂಚಿಸಲಾಗಿದೆ.

ಮುರ್ಷಿದಾಬಾದ್ ಜಿಲ್ಲೆಯ ಭಾಗಬಂಗೋಲಾ ಶಾಸಕ ರಾಯತ್ ಹುಸೈನ್ ಸರ್ಕಾರ್, ಕೋಲ್ಕತ್ತ ಹೊರವಲಯದ ಬಾರಾನಗರ ಕ್ಷೇತ್ರದ ಶಾಸಕಿ ಸಯಂತಿಕಾ ಬ್ಯಾನರ್ಜಿ ಅವರಿಗೆ ರಾಜಭವನಕ್ಕೆ ಆಗಮಿಸಿ ಪ್ರಮಾಣವಚನ ಸ್ವೀಕರಿಸುವಂತೆ ರಾಜ್ಯಪಾಲ ಸಿ.ವಿ. ಆನಂದ ಬೋಸ್ ಅವರು ಆಹ್ವಾನ ನೀಡಿದ್ದರು. ಇದನ್ನು ಇಬ್ಬರು ಶಾಸಕರು ತಿರಸ್ಕರಿಸಿ, ಪ್ರತಿಭಟನೆ ನಡೆಸಿದ್ದರು. ಬಳಿಕ ಈ ಜವಾಬ್ದಾರಿಯನ್ನು ರಾಜ್ಯಪಾಲರು ಡೆಪ್ಯುಟಿ ಸ್ಪೀಕರ್‌ಗೆ ವಹಿಸಿದ್ದರು.

ರಾಜ್ಯಪಾಲರ ಸೂಚನೆ ಧಿಕ್ಕರಿಸಿ, ಜುಲೈ 5ರ ವಿಶೇಷ ಅಧಿವೇಶನದಲ್ಲಿ ಸ್ಪೀಕರ್ ಬಿಮನ್ ಬ್ಯಾನರ್ಜಿ ಅವರು ಪ್ರಮಾಣವಚನ ಬೋಧಿಸಿದ್ದರು.

ಕರ್ನಾಟಕ ಸರಕಾರ
(ಲೋಕೋಪಯೋಗಿ, ಇಲಾಖೆ)
ಕಾರ್ಯನಿರ್ವಾಹಕ ಇಂಜಿನೀಯರ್‌ರವರ ಕಛೇರಿ
ಲೋಕೋಪಯೋಗಿ ಇಲಾಖೆ, ಸೇಡಂ ವಿಭಾಗ ಜಿಲ್ಲೆಃ ಕಲಬುರಗಿ

ಸಂ:ಕಾನಿಇಂ/ಲೋಇ./ಸೇವಿ/ತಾಶಾ–1/2023–24/758 ದಿನಾಂಕ: 20–07–2024

–:: ಅಲ್ಪಾವಧಿ ಇ–ಪ್ರೊಕ್ಯೂರಮೆಂಟ್ ಟೆಂಡರ್ ಪ್ರಕಟಣೆ ::–

1) ಕಾಮಗಾರಿಯ ವಿವರ : 1. ಚಿಂಚೋಳಿ ತಾಲೂಕಿನ 02 ಕೆ.ಕೆ.ಆರ್.ಡಿ.ಬಿ ಇಂಡೆಂಟ್ ಸಂ : **11189, 11730** ಯೋಜನೆ ಅಡಿಯಲ್ಲಿನ ಕಾಮಗಾರಿ. 2. ಚಿತ್ತಾಪೂರ ತಾಲೂಕಿನ 01 ಸ್ಥಳಿಯ ಶಾಸಕರ ಅನುದಾನದ ಯೋಜನೆ ಅಡಿಯಲ್ಲಿನ ಕಾಮಗಾರಿ ಇಂಡೆಂಟ್ ಸಂ : **10685/CALL-2**, 3. ಸೇಡಂ ತಾಲೂಕಿನ **01** 2059 ಲೆಕ್ಕ ಶೀರ್ಷಿಕೆ ಅಡಿಯಲ್ಲಿನ ಕಾಮಗಾರಿ ಇಂಡೆಂಟ್ ಸಂ : **4288/ CALL-2**, 2) ಲೆಕ್ಕ ಶೀರ್ಷಿಕೆ: 2024–25ನೇ ಸಾಲಿನ ಕೆ.ಕೆ.ಆರ್.ಡಿ.ಬಿ & 2059, ಸ್ಥಳಿಯ ಶಾಸಕರ ಯೋಜನೆ ಅಡಿಯಲ್ಲಿನ ಕಾಮಗಾರಿಗಳು, 3) ಟೆಂಡರಿಗಿಟ್ಟ ಮೊತ್ತ: **ಕನಿಷ್ಠ ರೂ. 4.99 ಲಕ್ಷಗಳು, ಗರಿಷ್ಠ ರೂ. 185.00 ಲಕ್ಷಗಳು,** 4) ಗುತ್ತಿಗೆದಾರರ ಅರ್ಹತೆ: 3ನೇ ದರ್ಜೆ & ಮೇಲ್ಪಟ್ಟು, 5) ಪೂರ್ವಭಾವಿ ಸಭೆ ದಿನಾಂಕ: 25–07–2024 ಬೆಳಿಗ್ಗೆ 11:30 ಗಂಟೆವರೆಗೆ, 6) ಟೆಂಡರ್ ಸ್ಪಷ್ಟೀಕರಣ ಪಡೆಯುವ ಹಾಗೂ ಸಲ್ಲಿಸುವ ಅಂತಿಮ ದಿನಾಂಕ: 26–07–2024 ಸಾಯಂಕಾಲ 17:30 ಗಂಟೆಯವರೆಗೆ, 7) ಟೆಂಡರ್ ಅರ್ಜಿ ಬೆಲೆ ಮತ್ತು ಇ.ಎಂ.ಡಿ ಮೊತ್ತ: ಟೆಂಡರ್ ಫಾರಂ ಬೆಲೆ & ಇ.ಎಮ್.ಡಿ ಇ–ಪ್ರೊಕ್ಯೂರಮೆಂಟ್‌ನಲ್ಲಿ ನಮೂದಿಸಿದಂತೆ, 8) ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ: 29–07–2024 ರ ಸಾಯಂಕಾಲ 16:00 ಗಂಟೆಯವರೆಗೆ, 9) ಟೆಂಡರ್ ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 30–07–2024 ರ ಸಾಯಂಕಾಲ 16:30 ಗಂಟೆಯವರೆಗೆ, 10) ಟೆಂಡರ್ ಆರ್ಥಿಕ ಬಿಡ್ ತೆರೆಯುವ ದಿನಾಂಕ: 01–08–2024 ರ ಸಾಯಂಕಾಲ 16:30 ಗಂಟೆಯವರೆಗೆ, 11) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ: ಕಾರ್ಯನಿರ್ವಾಹಕ ಇಂಜಿನೀಯರ್, ಲೋಕೋಪಯೋಗಿ ಇಲಾಖೆ, ವಿಭಾಗ ಸೇಡಂ, 12) ಅಂತರಜಾಲ ತಾಣದ ವಿಳಾಸ: www.kppp.karnataka.gov.in, 13) ಬದಲಾವಣೆಗಾಗಿ ಸಂಪರ್ಕಿಸುವ ಬಗ್ಗೆ : ಯಾವುದೇ ಮಾರ್ಪಾಡು ಬದಲಾವಣೆಗಳನ್ನು www.kppp.karnataka.gov.in ಮಾಡಲಾಗುವುದು.

ಟಿಪ್ಪಣಿ : 1) ಈ ಕೆಳಗೆ ಸಹಿ ಮಾಡಿರುವವರು ಯಾವುದೇ ಕಾರಣಗಳನ್ನು ನೀಡದೆ ಪ್ರಕ್ರಿಯೆಯ ಮುಂದೂಡುವಿಕೆ/ ಸಂಪೂರ್ಣವಾಗಿ ಟೆಂಡರ್ ರದ್ದುಗೊಳಿಸುವ/ಟೆಂಡರ್ ನಿರಾಕರಿಸುವ ಹಕ್ಕನ್ನು ಹೊಂದಿರುತ್ತಾರೆ. 2) ಇನ್ನು ಮುಂದೆ ಟೆಂಡರ್ ಪ್ರಕ್ರಿಯೆಯಲ್ಲಿ ಯಾವುದೇ ಬದಲಾವಣೆಗಳು ಇದ್ದಲ್ಲಿ ದಿನ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ, ಬದಲಾಗಿ ವಿದ್ಯುನ್ಮಾನ ಸಂಗ್ರಹಣೆ ವೇದಿಕೆಯಲ್ಲಿ ಮಾತ್ರ ಬದಲಾವಣೆಗಳನ್ನು ಪ್ರಕಟಿಸಲಾಗುವುದು.

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರ್
ಲೋಕೋಪಯೋಗಿ, ಇಲಾಖೆ ವಿಭಾಗ ಸೇಡಂ
ವಾ.ಸಾ.ಸಂ.ಇ/ಕಲಬುರಗಿ/233/ಕೆ.ಎಸ್.ಎಂ.ಸಿ.&ಎ/2024–25

'ಮಿದುಳು ತಿನ್ನುವ ಅಮೀಬಾ' ಸೋಂಕು ಬಾಲಕ ಚೇತರಿಕೆ

ಕೋಯಿಕ್ಕೋಡ್ (ಪಿಟಿಐ): ಅಪರೂಪವಾದ ಮತ್ತು ಪ್ರಾಣಕ್ಕೆ ಎರವಾಗುವ 'ಮಿದುಳು ತಿನ್ನುವ ಅಮೀಬಾ' ಸೋಂಕಿಗೆ ತುತ್ತಾಗಿದ್ದ ಕೇರಳದ ಬಾಲಕನೊಬ್ಬ ಚೇತರಿಸಿಕೊಂಡಿದ್ದಾನೆ.

'ಮಿದುಳು ತಿನ್ನುವ ಅಮೀಬಾ' ಎಂಬ ಹೆಸರಿನಿಂದ ಕರೆಯಲಾಗುವ 'ಅಮೀಬಿಕ್ ಮೆನಿಂಗೊಎನ್ಸೆಫಲೈಟಿಸ್' ಸೋಂಕಿಗೆ ಚಿಕಿತ್ಸೆ ಪಡೆಯುತ್ತಿದ್ದ 14 ವರ್ಷದ ಬಾಲಕ ಗುಣಮುಖನಾಗಿದ್ದಾನೆ ಎಂದು ಆರೋಗ್ಯ ಸಚಿವರಾದ ವೀಣಾ ಜಾರ್ಜ್ ಸೋಮವಾರ ಹೇಳಿದ್ದಾರೆ. ಈ ಸೋಂಕಿಗೆ ತುತ್ತಾದವರ ಪೈಕಿ ಶೇ 97 ಮಂದಿ ಜೀವ ಕಳೆದುಕೊಂಡಿದ್ದಾರೆ ಎಂದು ಅಂಕಿ ಅಂಶಗಳು ಹೇಳುತ್ತವೆ.

'ಸೋಂಕಿಗೆ ತುತ್ತಾದವರಲ್ಲಿ ಸಾವಿನ ಪ್ರಮಾಣ ಗಮನಿಸಿದರೆ ಬಾಲಕ ಚೇತರಿಸಿಕೊಂಡಿರುವುದು ದೇಶದಲ್ಲೇ ಅಪರೂಪದ ಘಟನೆ ಎನ್ನಬಹುದು. ಈವರೆಗೆ ವಿಶ್ವದಲ್ಲಿ 11 ಮಂದಿ ಈ ಸೋಂಕಿನಿಂದ ಚೇತರಿಸಿಕೊಂಡಿದ್ದಾರೆ' ಎಂದು ವೀಣಾ ಜಾರ್ಜ್ ತಿಳಿಸಿದರು.

'ಮಿದುಳಿನ ಉರಿಯೂತ ಕಾಣಿಸಿಕೊಂಡ ಬಾಲಕನನ್ನು ಅದೇ ದಿನ ಕೋಯಿಕ್ಕೋಡ್‌ನ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆರೋಗ್ಯ ಇಲಾಖೆಯು 'ಮಿಲ್ಟೆಫೊಸೀನ್' ಔಷಧವನ್ನು ಒದಗಿಸಿತು. 3 ವಾರಗಳ ಚಿಕಿತ್ಸೆಯ ಬಳಿಕ ಬಾಲಕ ಚೇತರಿಸಿಕೊಂಡಿದ್ದಾನೆ' ಎಂದು ಪ್ರಕಟಣೆ ತಿಳಿಸಿದೆ.

'ನೌಕರರ ತಟಸ್ಥ ನಿಲುವಿಗೆ ಸವಾಲು'

ಆರ್‌ಎಸ್‌ಎಸ್ ಸದಸ್ಯತ್ವ: ನಿಷೇಧ ಹಿಂಪಡೆದ ಕೇಂದ್ರದ ನಿಲುವಿಗೆ ವಿರೋಧ

ನವದೆಹಲಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರು ಸರ್ಕಾರಿ ನೌಕರರನ್ನು ಸಿದ್ಧಾಂತದ ಆಧಾರದ ಮೇಲೆ ವಿಭಜಿಸುವ ಮೂಲಕ ರಾಜಕೀಯ ಮಾಡುತ್ತಿದ್ದಾರೆ. ಇದು ಸಾರ್ವಜನಿಕ ಸೇವಕರು ತಟಸ್ಥ ನಿಲುವಿನೊಂದಿಗೆ ಕೆಲಸ ಮಾಡುವುದಕ್ಕೆ ಸವಾಲೊಡ್ಡುತ್ತದೆ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಆರೋಪಿಸಿದ್ದಾರೆ.

'ದೇಶವು 1947ರಲ್ಲಿ ತ್ರಿವರ್ಣ ಧ್ವಜವನ್ನು ಅಳವಡಿಸಿಕೊಂಡಾಗ ಆರ್‌ಎಸ್‌ಎಸ್ ವಿರೋಧಿಸಿತ್ತು. ಆಗ ಸರ್ದಾರ್ ವಲ್ಲಭಭಾಯಿ ಪಟೇಲರು ಆರ್‌ಎಸ್‌ಎಸ್‌ಗೆ ಎಚ್ಚರಿಕೆ ನೀಡಿದ್ದರು. 1948ರ ಫೆಬ್ರುವರಿ 4ರಂದು ಗಾಂಧೀಜಿ ಅವರ ಹತ್ಯೆಯಾದ ಬಳಿಕ ಪಟೇಲರು ಆರ್‌ಎಸ್‌ಎಸ್ ಅನ್ನು ನಿಷೇಧಿಸಿದ್ದರು. 1966ರಲ್ಲಿ ಆರ್‌ಎಸ್‌ಎಸ್ ಚಟುವಟಿಕೆಗಳಲ್ಲಿ ಭಾಗಿಯಾಗದಂತೆ ಸರ್ಕಾರಿ ನೌಕರರ ವಿರುದ್ಧ ಹೇರಲಾಗಿದ್ದ ನಿಷೇಧವನ್ನು, 58 ವರ್ಷಗಳ ಬಳಿಕ ಮೋದಿ ಅವರು ತೆರವುಗೊಳಿಸಿ-ದ್ದಾರೆ' ಎಂದು ಅವರು 'ಎಕ್ಸ್'ನಲ್ಲಿ ಹೇಳಿದ್ದಾರೆ.

'ಸಾಂವಿಧಾನಿಕ ಮತ್ತು ಸ್ವಾಯತ್ತ ಸಂಸ್ಥೆಗಳನ್ನು ಸಾಂಸ್ಥಿಕವಾಗಿ ಸ್ವಾಧೀನಪಡಿಸಿಕೊಳ್ಳಲು ಬಿಜೆಪಿ ಮತ್ತು ಆರ್‌ಎಸ್‌ಎಸ್ ಹೇಗೆ ಕೆಲಸ ಮಾಡುತ್ತಿವೆ ಎಂಬುದು ತಿಳಿದಿದೆ. ಇದೀಗ ಮೋದಿ ಅವರು ಸರ್ಕಾರಿ ಕಚೇರಿಗಳನ್ನು ರಾಜಕೀಯಗೊಳಿಸಿದ್ದಾರೆ ಮತ್ತು ನೌಕರರು ಒಂದು ಸಿದ್ಧಾಂತರ ಪರವಾಗಿ ಇರುವಂತೆ ಮಾಡಿದ್ದಾರೆ' ಎಂದು ಅವರು ದೂರಿದ್ದಾರೆ.

ಬಿಜೆಪಿ, ಆರ್‌ಎಸ್‌ಎಸ್ ಸ್ವಾಗತ

ನವದೆಹಲಿ (ಪಿಟಿಐ): ಸರ್ಕಾರಿ ನೌಕರರಿಗೆ ಆರ್‌ಎಸ್‌ಎಸ್ ಸದಸ್ಯತ್ವ ಪಡೆಯಲು ಹೇರಲಾಗಿದ್ದ ನಿಷೇಧವನ್ನು ಹಿಂಪಡೆದ ಕೇಂದ್ರ ಸರ್ಕಾರದ ನಿರ್ಧಾರವನ್ನು ಬಿಜೆಪಿ ಮತ್ತು ಆರ್‌ಎಸ್‌ಎಸ್ ಸ್ವಾಗತಿಸಿದ್ದು, ದೇಶದ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಬಲಪಡಿಸುತ್ತದೆ ಎಂದು ಹೇಳಿವೆ.

ಹಿಂದೆ ಆಡಳಿತ ನಡೆಸಿದವರು ನಿಷೇಧ ಹೇರುವ ಮೂಲಕ ತಮ್ಮ ರಾಜಕೀಯ ಹಿತಾಸಕ್ತಿಗಳನ್ನು ಕಾಯ್ದುಕೊಂಡಿದ್ದರು ಎಂದು ಅವು ಆರೋಪಿಸಿವೆ.

'1966ರಲ್ಲಿ ಕಾಂಗ್ರೆಸ್ ಸರ್ಕಾರವು ತನ್ನ ರಾಜಕೀಯ ಹಿತಾಸಕ್ತಿಗಾಗಿ ಸರ್ಕಾರಿ ನೌಕರರು ಆರ್‌ಎಸ್‌ಎಸ್ ಚಟುವಟಿಕೆಗಳಲ್ಲಿ ಭಾಗಿಯಾಗದಂತೆ ನಿಷೇಧಿಸಿತ್ತು' ಎಂದು ಕೇಂದ್ರ ಸಚಿವ ಪಿಯೂಷ್ ಗೋಯಲ್ ಟೀಕಿಸಿದರು.

ಪ್ರಜಾಪ್ರಭುತ್ವ ಬಲಪಡಿಸುತ್ತದೆ: 'ಕೇಂದ್ರ ಸರ್ಕಾರದ ನಿರ್ಧಾರ ಸೂಕ್ತವಾಗಿದ್ದು, ದೇಶದ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಬಲಪಡಿಸುತ್ತದೆ' ಎಂದು ಆರ್‌ಎಸ್‌ಎಸ್ ವಕ್ತಾರ ಸುನೀಲ್ ಅಂಬೇಕರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಆರ್‌ಎಸ್‌ಎಸ್ 99 ವರ್ಷಗಳಿಂದ ದೇಶ ಕಟ್ಟುವ ಕಾಯಕದಲ್ಲಿ ನಿರತವಾಗಿದ್ದು, ಸಮಾಜ ಸೇವೆಯಲ್ಲಿ ತೊಡಗಿಸಿಕೊಂಡಿದೆ ಎಂದು ಅವರು ಹೇಳಿದ್ದಾರೆ.

ರಾಷ್ಟ್ರೀಯ ಭದ್ರತೆ, ಏಕತೆ, ಸಮಗ್ರತೆಗೆ ಸಂಘ ತನ್ನದೇ ಆದ ಕೊಡುಗೆ ನೀಡಿದೆ. ಪ್ರಕೃತಿ ವಿಕೋಪದ ಸಂದರ್ಭಗಳಲ್ಲಿ ಸಮಾಜದ ಜತೆಯಲ್ಲಿದ್ದು ಕಾರ್ಯನಿರ್ವಹಿಸಿದೆ ಎಂದು ಅವರು ತಿಳಿಸಿದ್ದಾರೆ.

ಆರ್‌ಎಸ್‌ಎಸ್ ಅನ್ನು ಓಲೈಸಲು ಕೇಂದ್ರ ಸರ್ಕಾರ ತೆಗೆದುಕೊಂಡಿರುವ ಈ ನಿರ್ಧಾರವು ರಾಜಕೀಯ ಹಿತಾಸಕ್ತಿ ಹೊಂದಿದೆಯೇ ಹೊರತು ರಾಷ್ಟ್ರೀಯ ಹಿತಾಸಕ್ತಿಯನ್ನಲ್ಲ
ಮಾಯಾವತಿ, ಬಿಎಸ್‌ಪಿ ಅಧ್ಯಕ್ಷೆ

'ಆರ್‌ಎಸ್‌ಎಸ್ ವಿರುದ್ಧ ಹೇರಲಾಗಿದ್ದ ನಿಷೇಧವನ್ನು ಹಿಂಪಡೆಯುವ ಸಂದರ್ಭದಲ್ಲಿ, ತಾನು ಭಾರತದ ಸಂವಿಧಾನಕ್ಕೆ ಅನುಗುಣವಾಗಿ, ಸಾಮಾಜಿಕ ಸಂಘಟನೆಯಾಗಿ ಮುಂದು-ವರಿಯುತ್ತೇನೆ. ರಾಜಕೀಯ ಉದ್ದೇಶ ಹೊಂದಿರುವುದಿಲ್ಲ ಎಂದು ಸರ್ದಾರ್ ವಲ್ಲಭಭಾಯಿ ಪಟೇಲ್ ಅವರಿಗೆ ಭರವಸೆ ನೀಡಿ, ಕ್ಷಮೆ ಕೋರಿತ್ತು. ಸರ್ಕಾರ ಈಗ ಕೈಗೊಂಡಿರುವ ಕ್ರಮವು ಅದರ ಉಲ್ಲಂಘನೆಯಾಗಿದೆ' ಎಂದು ಖರ್ಗೆ ಆರೋಪಿಸಿದ್ದಾರೆ.

ನೆನಪು ಬಿಚ್ಚಿಟ್ಟ 'ಸುಪ್ರೀಂ' ನ್ಯಾಯಮೂರ್ತಿ ಎಸ್‌ವಿಎನ್ ಭಟ್ಟಿ

'ಮುಸ್ಲಿಂ ವ್ಯಕ್ತಿಯ ಹೋಟೆಲ್‌ಗೆ ಹೋಗುತ್ತಿದ್ದೆ'

ನವದೆಹಲಿ (ಪಿಟಿಐ): ಹೋಟೆಲ್‌ಗಳಲ್ಲಿ ಸ್ವಚ್ಛತೆಗೆ ಆದ್ಯತೆ ನೀಡಬೇಕು ಎಂಬುದನ್ನು ಒತ್ತಿ ಹೇಳಿದ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಎಸ್‌ವಿಎನ್ ಭಟ್ಟಿ, 'ಕೇರಳದಲ್ಲಿದ್ದಾಗ ನಾನು ಮುಸ್ಲಿಂ ವ್ಯಕ್ತಿ ನಡೆಸುತ್ತಿದ್ದ ಸಸ್ಯಾಹಾರಿ ಹೋಟೆಲ್‌ಗೆ ಆಗಿಂದಾಗ್ಗೆ ಭೇಟಿ ಕೊಡುತ್ತಿದ್ದೆ' ಎಂಬುದನ್ನು ನೆನಪಿಸಿಕೊಂಡರು.

'ಕಾವಡ್ ಯಾತ್ರೆ'ಯ ಮಾರ್ಗಗಳಲ್ಲಿರುವ ತಿಂಡಿ–ತಿನಿಸುಗಳ ಮಳಿಗೆಗಳ ಮಾಲೀಕರು ತಮ್ಮ ಹೆಸರು ಮತ್ತು ಇತರ ವಿವರಗಳನ್ನು ಮಳಿಗೆಗಳ ಮುಂದೆ ಪ್ರದರ್ಶಿಸುವಂತೆ ಉತ್ತರ ಪ್ರದೇಶ ಹಾಗೂ ಉತ್ತರಾಖಂಡ ರಾಜ್ಯಗಳಲ್ಲಿ ಹೊರಡಿಸಿದ್ದ ನಿರ್ದೇಶನಗಳನ್ನು ಪ್ರಶ್ನಿಸಿ ಸಲ್ಲಿಸಲಾಗಿರುವ ಅರ್ಜಿಗಳನ್ನು ಎಸ್‌ವಿಎನ್ ಭಟ್ಟಿ ಅವರಿದ್ದ ಪೀಠ ಸೋಮವಾರ ವಿಚಾರಣೆ ನಡೆಸಿತು.

'ಕೇರಳದಲ್ಲಿ ನ್ಯಾಯಮೂರ್ತಿಯಾಗಿ ಇದ್ದಾಗ ನನ್ನ ಒಂದು ಅನುಭವವನ್ನು ಹೇಳುತ್ತೇನೆ. ಆ ಊರಿನ ಹೆಸರನ್ನು ಬಹಿರಂಗಪಡಿಸುವುದಿಲ್ಲ. ಆ ಊರಿನಲ್ಲಿ ಹಿಂದೂ ವ್ಯಕ್ತಿ ನಡೆಸುತ್ತಿದ್ದ ಸಸ್ಯಾಹಾರಿ ಹೋಟೆಲ್ ಹಾಗೂ ಮುಸ್ಲಿಂ ವ್ಯಕ್ತಿ ನಡೆಸುತ್ತಿದ್ದ ಸಸ್ಯಾಹಾರಿ ಹೋಟೆಲ್ ಇವೆ. ಸಸ್ಯಾಹಾರಕ್ಕಾಗಿ ನಾನು ಮುಸ್ಲಿಂ ವ್ಯಕ್ತಿ ನಡೆಸುತ್ತಿದ್ದ ಹೋಟೆಲ್‌ಗೆ ಹೋಗುತ್ತಿದ್ದೆ. ದುಬೈನಿಂದ ವಾಪಸಾಗಿ ಹೋಟೆಲ್ ಉದ್ಯಮ ಆರಂಭಿಸಿದ್ದ ಅವರು ಆಹಾರದ ಗುಣಮಟ್ಟ, ಸುರಕ್ಷತೆ, ಸ್ವಚ್ಛತೆ ಮತ್ತು ನೈರ್ಮಲ್ಯದ ವಿಚಾರದಲ್ಲಿ ಅಂತರ ರಾಷ್ಟ್ರೀಯ ಗುಣಮಟ್ಟವನ್ನು ಕಾಯ್ದು-ಕೊಂಡಿದ್ದರು. ಆದ್ದರಿಂದ ಆ ಹೋಟೆಲ್ ನನ್ನ ಆಯ್ಕೆಯಾಗಿತ್ತು' ಎಂದು ಹೇಳಿದರು.

ನ್ಯಾಯಮೂರ್ತಿಗಳಾದ ಎಸ್‌ವಿಎನ್ ಭಟ್ಟಿ ಮತ್ತು ಹೃಷಿಕೇಶ್ ರಾಯ್ ಅವರಿದ್ದ ಪೀಠವು, ಉತ್ತರ ಪ್ರದೇಶ ಹಾಗೂ ಉತ್ತರಾಖಂಡ ರಾಜ್ಯಗಳಲ್ಲಿ ಹೊರಡಿಸಿದ್ದ ನಿರ್ದೇಶನಗಳಿಗೆ ಮಧ್ಯಂತರ ತಡೆಯಾಜ್ಞೆ ನೀಡಿದೆ.

ಚರ್ಚೆ ನೋಟಿಸ್ ತಿರಸ್ಕರಿಸಿದ ಸಭಾಪತಿ

ನವದೆಹಲಿ (ಪಿಟಿಐ): ಕಾವಡ್ ಯಾತ್ರೆ ಮಾರ್ಗದಲ್ಲಿನ ಅಂಗಡಿಗಳ ಮುಂದೆ ಮಾಲೀಕರು ತಮ್ಮ ಹೆಸರನ್ನು ಪ್ರದರ್ಶಿಸಬೇಕು ಎಂಬ ಉತ್ತರಪ್ರದೇಶ ಸರ್ಕಾರದ ಆದೇಶದ ಕುರಿತು ಚರ್ಚೆಗೆ ಕೋರಿದ ಪ್ರತಿಪಕ್ಷಗಳ ನೋಟಿಸ್‌ಗಳನ್ನು ರಾಜ್ಯಸಭಾ ಸಭಾಪತಿ ಜಗದೀಪ್ ಧನಕರ್ ತಿರಸ್ಕರಿಸಿದ್ದಾರೆ.

'ಹೆಸರು ಪ್ರದರ್ಶನ ಕಡ್ಡಾಯ ಅಲ್ಲ'

ಭೋಪಾಲ್: ರಾಜ್ಯದಲ್ಲಿ ಕಾವಡ್ ಯಾತ್ರೆಯ ಮಾರ್ಗದಲ್ಲಿ ಅಂಗಡಿ ಮಾಲೀಕರು ತಮ್ಮ ಹೆಸರನ್ನು ಪ್ರದರ್ಶಿಸಬೇಕೆಂಬ ಸೂಚನೆ ನೀಡಿಲ್ಲ ಎಂದು ಮಧ್ಯಪ್ರದೇಶ ಸರ್ಕಾರ ಸ್ಪಷ್ಟಪಡಿಸಿದೆ.

'ಹೆಸರು ಪ್ರದರ್ಶಿಸುವಂತೆ ಸರ್ಕಾರದ ಮಟ್ಟದಲ್ಲಿ ಯಾವುದೇ ನಿರ್ದೇಶನ ಹೊರಡಿಸಿಲ್ಲ' ಎಂದು ನಗರಾಭಿವೃದ್ಧಿ ಮತ್ತು ವಸತಿ ಇಲಾಖೆ ಭಾನುವಾರ ರಾತ್ರಿ ಪ್ರಕಟಣೆಯಲ್ಲಿ ತಿಳಿಸಿದೆ. ಇದಕ್ಕೆ ಸಂಬಂಧಿಸಿದಂತೆ ಗೊಂದಲ ಉಂಟುಮಾಡಬೇಡಿ ಎಂದು ಸ್ಥಳೀಯ ಸಂಸ್ಥೆಗಳಿಗೆ ಸೂಚಿಸಿದೆ.

'ಮಧ್ಯಪ್ರದೇಶದ ಹೊರಾಂಗಣ ಜಾಹೀರಾತು ನಿಯಮಗಳು– 2017ರ ಅಡಿಯಲ್ಲಿ ಅಂಗಡಿಗಳ ಮುಂದೆ ಬೋರ್ಡ್‌ಗಳನ್ನು ಹಾಕಬಹುದು. ಈ ಬೋರ್ಡ್‌ಗಳಲ್ಲಿ ಅಂಗಡಿ ಮಾಲೀಕರ ಹೆಸರನ್ನು ಪ್ರದರ್ಶಿಸುವುದು ಕಡ್ಡಾಯ ಅಲ್ಲ' ಎಂದು ಹೇಳಿದೆ. ಮಧ್ಯಪ್ರದೇಶದ ಉಜ್ಜಯಿನಿಯಲ್ಲಿನ ಅಂಗಡಿಗಳ ಮುಂದೆ ಮಾಲೀಕರ ಹೆಸರು ಪ್ರದರ್ಶಿಸಬೇಕು ಎಂದು ಅಲ್ಲಿನ ಮಹಾನಗರ ಪಾಲಿಕೆ ಆದೇಶಿಸಿದ್ದಾಗಿ ವರದಿಯಾಗಿತ್ತು.

ಐಎನ್‌ಎಸ್ ಬ್ರಹ್ಮಪುತ್ರ ನೌಕೆಯಲ್ಲಿ ಬೆಂಕಿ

ಪ್ರಜಾವಾಣಿ ವಾರ್ತೆ

ಮುಂಬೈ: ಭಾರತೀಯ ನೌಕಾಪಡೆಯ ಯುದ್ಧ ನೌಕೆಗಳಲ್ಲಿ ಒಂದಾಗಿರುವ ಐಎನ್‌ಎಸ್ ಬ್ರಹ್ಮಪುತ್ರದಲ್ಲಿ ಭಾರಿ ಅಗ್ನಿ ದುರಂತ ಸಂಭವಿಸಿದೆ. ಇದರಿಂದ ನೌಕೆಗೆ ಸಾಕಷ್ಟು ಹಾನಿ ಉಂಟಾಗಿದ್ದು, ಒಂದು ಕಡೆಗೆ ವಾಲಿದೆ ಎಂದು ನೌಕಾಪಡೆಯ ಮೂಲಗಳು ತಿಳಿಸಿವೆ.

ಮುಂಬೈನಲ್ಲಿರುವ ನೌಕಾಪಡೆಯ ಡಾಕ್‌ಯಾರ್ಡ್‌ನಲ್ಲಿ ದುರಸ್ತಿಗಾಗಿ ನಿಲ್ಲಿಸಿದ್ದ ವೇಳೆ ಬೆಂಕಿ ಕಾಣಿಸಿಕೊಂಡಿದೆ. ನೌಕೆಯ ಒಬ್ಬ ಸಿಬ್ಬಂದಿ ನಾಪತ್ತೆಯಾಗಿದ್ದು, ಅವರ ಪತ್ತೆಗೆ ಶೋಧ ಕಾರ್ಯ ಕೈಗೊಳ್ಳಲಾಗಿದೆ.

'ಜುಲೈ 21ರ ಸಂಜೆ ನೌಕೆಯಲ್ಲಿ ಬೆಂಕಿ ಕಾಣಿಸಿಕೊಂಡಿದೆ. ಡಾಕ್‌ಯಾರ್ಡ್‌ನ ಅಗ್ನಿಶಾಮಕ ದಳದ ನೆರವಿನಿಂದ ಸೋಮವಾರ (ಜುಲೈ 22) ಬೆಳಿಗ್ಗೆ ಬೆಂಕಿಯನ್ನು ಸಂಪೂರ್ಣ ನಿಯಂತ್ರಣಕ್ಕೆ ತರಲಾಯಿತು. ಸೋಮವಾರ ಮಧ್ಯಾಹ್ನದ ವೇಳೆಗೆ ನೌಕೆ ಒಂದು ಭಾಗಕ್ಕೆ ವಾಲತೊಡಗಿತು. ಎಲ್ಲ ಪ್ರಯತ್ನಗಳ ಹೊರತಾಗಿಯೂ ಹಡಗನ್ನು ನೇರವಾಗಿಸಲು ಸಾಧ್ಯವಾಗಲಿಲ್ಲ' ಎಂದು ನೌಕಾಪಡೆಯ ಪ್ರಕಟಣೆ ತಿಳಿಸಿದೆ.

ಅವಘಡಕ್ಕೆ ಕಾರಣ ಪತ್ತೆಹಚ್ಚಲು ನೌಕಾಪಡೆಯು ತನಿಖೆಗೆ ಆದೇಶಿಸಿದೆ.

ಇದು ದಶಕದ ಅವಧಿಯಲ್ಲಿ ನೌಕಾಪಡೆಯಲ್ಲಿ ಸಂಭವಿಸಿದ ಅತ್ಯಂತ ದೊಡ್ಡ ದುರಂತಗಳಲ್ಲಿ ಒಂದಾಗಿದೆ.

3,850 ಟನ್ ತೂಕದ ಯುದ್ಧನೌಕೆಯನ್ನು 2000ನೇ ಇಸವಿಯಲ್ಲಿ ಸೇನೆಗೆ ಸೇರ್ಪಡೆಗೊಳಿಸಲಾಗಿತ್ತು.

ಅಗ್ನಿ ಅವಘಡದ ನಂತರ ಐಎನ್‌ಎಸ್ ಬ್ರಹ್ಮಪುತ್ರ ನೌಕೆಯು ಒಂದು ಕಡೆಗೆ ವಾಲಿದೆ

ಲೋಕೋಪಯೋಗಿ ಇಲಾಖೆ
ಕಾರ್ಯನಿರ್ವಾಹಕ ಅಭಿಯಂತರರವರ ಕಛೇರಿ
ಲೋಕೋಪಯೋಗಿ ಇಲಾಖೆ, ಬೆಳಗಾವಿ ವಿಭಾಗ, ಬೆಳಗಾವಿ.

ಸಂಖ್ಯೆ : ಲೋ.ಇ./ಬೆವಿ/ತಾಂಶಾ/ಗುತ್ತಿಗೆ/2024–25/2006 ದಿನಾಂಕ : 19–07–2024

ಟೆಂಡರ್ ಅಧಿಸೂಚನೆ (ಇ-ಪ್ರೋಕ್ಯೂರ್‌ಮೆಂಟ್‌ನಲ್ಲಿ)

ಕಾರ್ಯನಿರ್ವಾಹಕ ಅಭಿಯಂತರು, ಲೋಕೋಪಯೋಗಿ ಇಲಾಖೆ ಬೆಳಗಾವಿ ವಿಭಾಗ, ಬೆಳಗಾವಿ ಅಡಿಯಲ್ಲಿ ಐಟಂವಾರು ಗುತ್ತಿಗೆಗಳನ್ನು ಇ–ಪ್ರೋಕ್ಯೂರ್‌ಮೆಂಟ್‌ನಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಸ್ಟ್ಯಾಂಡರ್ಡ ಟೆಂಡರ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ – 1, 2, 3 & 4 ರಲ್ಲಿ **ಲೆಕ್ಕ ಶೀರ್ಷಿಕೆ : 5054 ರಾಜ್ಯ ಹೆದ್ದಾರಿ ರಸ್ತೆಗಳ ಸುಧಾರಣೆ, 3054 ರಾಜ್ಯ ಹೆದ್ದಾರಿ ರಸ್ತೆಗಳ ನಿರ್ವಹಣೆ, 3054 ಜಿಲ್ಲಾ ಮುಖ್ಯ ರಸ್ತೆಗಳ ನಿರ್ವಹಣೆ, ಮತ್ತು 8443 ಠೇವಣಿ ವಂತಿಕೆ ಅಡಿಯಲ್ಲಿ ಒಟ್ಟು 38 ಕಾಮಗಾರಿಗಳಿಗೆ ಗುತ್ತಿಗೆಯನ್ನು ಕರೆಯಲಾಗಿದ್ದು ಗರಿಷ್ಠ ಹಾಗೂ ಕನಿಷ್ಠ ಗುತ್ತಿಗೆಗೆ ಇಟ್ಟ ಅಂದಾಜು ಮೊತ್ತವು ಅನುಕ್ರಮವಾಗಿ 109.65 ಲಕ್ಷಗಳು ಹಾಗೂ 14.97 ಲಕ್ಷಗಳು ಇದ್ದು, ಮುಂಗಡ ಮೊತ್ತವು ಅನುಕ್ರಮವಾಗಿ ರೂ. 2,00,000/– ಹಾಗೂ 16,000/– ಇರುತ್ತದೆ. ಭಾಗ – 1 : ಟೆಂಡರ್‌ಗಳನ್ನು ಸ್ವೀಕರಿಸುವ ದಿನಾಂಕ : 31–07–2024 ರ ಸಂಜೆ 4.30 ಘಂಟೆಯವರೆಗೆ ಮತ್ತು ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 01–08–2024 ರ ಸಂಜೆ 4.45 ಗಂಟೆಯ ನಂತರ ಹಾಗೂ ಭಾಗ – 2 : ಜಾಹೀರ್ ಲಿಲಾವು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಇಲಾಖೆ ಸುವರ್ಣಸೌಧ ಬೆಳಗಾವಿ ಕಛೇರಿಯಲ್ಲಿ ದಿನಾಂಕ : 30–07–2024 ರಂದು ಮುಂಜಾನೆ 11.00 ಗಂಟೆಗೆ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಸುವರ್ಣಸೌಧ ಬೆಳಗಾವಿ ಇವರ ಹೆಸರಿನಲ್ಲಿ ರೂ. 1000/– ಡಿ.ಡಿ. ಕಟ್ಟಿ ಭಾಗವಹಿಸಬಹುದು.** ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು **ಈ ಕೆಳಗೆ ಸಹಿ ಮಾಡಿದವರ ಕಚೇರಿಯಲ್ಲಿ ಹಾಗೂ ಅಂತರ್‌ಜಾಲದ ಮೂಲಕ ವೆಬ್‌ಸೈಟ್ ವಿಳಾಸ www.kppp.karnataka.gov.in ರಲ್ಲಿ ದಿನಾಂಕ : 19–07–2024 ರ ನಂತರ ಪಡೆಯಬಹುದು.** (ಒಂದು ವೇಳೆ ಬಿಡ್ ಸ್ವೀಕೃತವಾಗದಿದ್ದಲ್ಲಿ 3 ದಿನಗಳ ಸಂಯಮ ಚಾಲಿತ ಸಕ್ರೀಯಗೊಳಿಸಲಾಗಿದೆ)

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು,
ಲೋ.ಇ., ಬೆಳಗಾವಿ ವಿಭಾಗ, ಬೆಳಗಾವಿ.
ಡಿಐಪಿಆರ್/ಬೆಳಗಾವಿ/429/ಮಣಿಪಾಲ್/2024–25

ಕೆನರಾ ಬ್ಯಾಂಕ್ Canara Bank
(ಭಾರತ ಸರ್ಕಾರದ ಒಂದು ಉದ್ಯಮ)
ಎಆರ್‌ಎಂ–1 ಶಾಖೆ, 2ನೇ ಮಹಡಿ, ನಂ.86, ಸ್ಪೆನ್ಸರ್ ಟವರ್, ಎಂ.ಜಿ. ರಸ್ತೆ, ಬೆಂಗಳೂರು–560001. ದೂರವಾಣಿ: 080–25588028, 25588641, ಎಕ್ಸ್‌ಟೆನ್ಷನ್: 530, ಇ–ಮೇಲ್: cb2366@canaranbank.com

ಹರಾಜು ಮಾರಾಟ ಪ್ರಕಟಣೆ

ಪ್ರೊವಿಜೊ ನಿಯಮ 8(6)ರ ಸೆಕ್ಯುರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮ 2002ರ ಸೆಕ್ಯೂರಿಟೈಜೇಷನ್ ಆಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಷಿಯಲ್ ಅಸ್ಸೆಟ್ಸ್ ಆಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಆಕ್ಟ್ 2002 ಮತ್ತು ಸೆಕ್ಯೂರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮ 2002ರ ಅಡಿಯಲ್ಲಿ ಸ್ಥಿರಾಸ್ತಿಗಳ ಹರಾಜು ಮಾರಾಟ

ಸಾಮಾನ್ಯವಾಗಿ ಸಾರ್ವಜನಿಕರಿಗೆ, ಸಾಲಗಾರರು ಮತ್ತು ಜಾಮೀನುದಾರರಿಗೆ ಈ ಸೂಚನೆ ಮೂಲಕ ತಿಳಿಸುವುದೇನೆಂದರೆ ಭದ್ರತಾ ಸಾಲದಾತರಿಗೆ ಈ ಕೆಳಗೆ ವಿವರಿಸಿದ ಅಡಮಾನಾದ/ವಿಧಿಸಿದ ಚರಾಸ್ತಿ/ಸ್ಥಿರಾಸ್ತಿಯನ್ನು ಅಧಿಕೃತ ಅಧಿಕಾರಿ, **ಕೆನರಾ ಬ್ಯಾಂಕ್** ರವರು ಭೌತಿಕವಾಗಿ ಸ್ವಾಧೀನಪಡಿಸಿಕೊಂಡಿರುತ್ತಾರೆ ಮತ್ತು **ದಿನಾಂಕ: 09.08.2024 ರಂದು (ಬೆಳಗ್ಗೆ 10.30 ರಿಂದ 11.00 ರವರೆಗೆ)** ಸ್ವತ್ತನ್ನು **"ಎಲ್ಲಿದೆಯೊ ಹಾಗೆ", "ಏನಿದೆಯೊ ಹಾಗೆ", "ಹೇಗಿದೆಯೋ ಹಾಗೆ"** ಆಧಾರದಲ್ಲಿ ಸಾಲ ವಸೂಲಾತಿಗಾಗಿ ಮಾರಾಟ ಮಾಡಲಾಗುವುದು ಸಂದಾಯವಾಗತಕ್ಕ ಮೊಬಲಗು: **ರೂ.17,43,05,67,388.63 ದಿನಾಂಕ: 21.07.2024 ರಂತೆ** ಬಡ್ಡಿ ಇತರ ಖರ್ಚು ವೆಚ್ಚಗಳು ಚುಕ್ತಾ ಮಾಡುವುದಕ್ಕೆ ಋಣ ಬಾಧ್ಯವಾಗಿರುತ್ತದೆ. **ಕೆನರಾ ಬ್ಯಾಂಕ್, ಎಆರ್‌ಎಂ–1 ಶಾಖೆ ಬೆಂಗಳೂರು** ರವರಿಂದ **ಸಾಲಗಾರರಾದ: 1) ಮೆ॥ ಎಸ್‌ಎಸ್‌ಜೆವಿ ಪ್ರಾಜೆಕ್ಟ್ಸ್ ಪ್ರೈವೇಟ್ ಲಿಮಿಟೆಡ್,** ಟೆರೇಸ್ ಮಹಡಿ, "ವೈನಾಥೇಯ" ನಂ.64, 1ನೇ ಮೇನ್, ಎಸ್ ಟಿ ಬೆಡ್, ಕೋರಮಂಗಲ, ಬೆಂಗಳೂರು–560034, **2) ಶ್ರೀಮತಿ ಹರಿಣಿ ಎಂ ಶೆಟ್ಟಿ** ಕೋಂ ಎನ್ ಮನೋಹರ್ ಶೆಟ್ಟಿ, **ನಿರ್ದೇಶಕರು, ಮೆ॥ ಎಸ್‌ಎಸ್‌ಜೆವಿ ಪ್ರಾಜೆಕ್ಟ್ಸ್ ಪ್ರೈವೇಟ್ ಲಿಮಿಟೆಡ್, 3) ಶ್ರೀ. ಎನ್ ಮನೋಹರ್ ಶೆಟ್ಟಿ** ಬಿನ್ ಲೇಟ್ ನಾರಾಯಣ ಶೆಟ್ಟಿ, **ನಿರ್ದೇಶಕರು, ಮೆ॥ ಎಸ್‌ಎಸ್‌ಜೆವಿ ಪ್ರಾಜೆಕ್ಟ್ಸ್ ಪ್ರೈವೇಟ್ ಲಿಮಿಟೆಡ್,** ಇವರಿಬ್ಬರ ವಿಳಾಸ: ನಂ.861, 13ನೇ ಮೇನ್, 3ನೇ ಬ್ಲಾಕ್, ಕೋರಮಂಗಲ, ಬೆಂಗಳೂರು–560034, **4) ಮೆ॥ ದ್ರೋಣಗಿರಿ ಫಾರ್ಮ್ಸ್ ಪ್ರೈವೇಟ್ ಲಿಮಿಟೆಡ್,** ಫ್ಲಾಟ್ ನಂ.303, ಶ್ರೀ ರಮಣ ಎನ್ಕ್ಲೇವ್, ಮಧುರಾ ನಗರ, ಎಸ್ ಆರ್ ನಗರ ಪೋಸ್ಟ್, ಹೈದರಾಬಾದ್–500038, **5) ಮೆ॥ ಮಂದಾರಗಿರಿ ಗ್ರೀನ್‌ಫೀಲ್ಡ್ ಪ್ರೈವೇಟ್ ಲಿಮಿಟೆಡ್,** ಫ್ಲಾಟ್ ನಂ.102, ಶ್ರೀ ರಮಣ ಎನ್‌ಕ್ಲೇವ್, ಮಧುರಾನಗರ , ಎಸ್ ಆರ್ ನಗರ ಪೋಸ್ಟ್, ಹೈದರಾಬಾದ್–500038, **6) ಮೆ॥ ಘಟಪ್ರಭಾ ಅಗ್ರೋ–ಫಾರ್ಮ್ಸ್ ಪ್ರೈವೇಟ್ ಲಿಮಿಟೆಡ್,** ಫ್ಲಾಟ್ ನಂ.3892, ಹೆಚ್‌ಎಂಟಿ ಹಿಲ್ಸ್, 2ನೇ ಉದ್ಯಮ, ಜೆಎನ್‌ಟಿಯು ಕಾಲೇಜ್ ಎದುರು, ಕುಕಟ್‌ಪಲ್ಲಿ, ಹೈದರಾಬಾದ್–500072. ಇವರುಗಳಿಗೆ ಸಾಲವನ್ನು ನೀಡಿರುತ್ತದೆ.

ಮೀಸಲು ಬೆಲೆ ಮತ್ತು ಮುಂಗಡ ಹಣ ಠೇವಣಿ ವಿವರಗಳು ಕೆಳಗಿನಂತಿದೆ, ಮತ್ತು ಅರ್ನೆಸ್ಟ್ ಮನಿ ಠೇವಣಿಯನ್ನು **ಅಧಿಕೃತ ಅಧಿಕಾರಿ, ಕೆನರಾ ಬ್ಯಾಂಕ್, ಎಆರ್‌ಎಂ–1 ಶಾಖೆ, ಬೆಂಗಳೂರು** ಪರವಾಗಿ ಡಿಮ್ಯಾಂಡ್ ಡ್ರಾಫ್ಟ್ ಮೂಲಕ ಠೇವಣಿ ಇಡಬೇಕು ಅಥವಾ **ಕೆನರಾ ಬ್ಯಾಂಕ್, ಎಆರ್‌ಎಂ–1 ಶಾಖೆ, ಬೆಂಗಳೂರು,** ಖಾತೆ ಸಂಖ್ಯೆ **209272434,** ಐಎಫ್‌ಎಸ್‌ಸಿ ಕೋಡ್: **(IFSC CNRB0002366)**. **ದಿನಾಂಕ: 08.08.2024 ರಂದು ಸಂಜೆ 5.00 ಗಂಟೆಗೆ** ಅಥವಾ ಮೊದಲು ಬಿಡ್ ಫಾರ್ಮ್‌ನ ಹಾರ್ಡ್ ಕಾಪಿಯನ್ನು ಸಲ್ಲಿಸಬೇಕು:–

ಸ್ಥಿರಾಸ್ತಿಗಳ ವಿವರಣೆ: 1) ಮೆ॥ ದ್ರೋಣಗಿರಿ ಆಗ್ರೋ ಫಾರ್ಮ್ಸ್ ಪ್ರೈವೇಟ್ ಲಿಮಿಟೆಡ್: (₹. ಕೋಟಿಗಳಲ್ಲಿ)

ಕ್ರ.ಸಂ.	ಸರ್ವೆ ನಂ.	ಆಸ್ತಿಯ ವಿಸ್ತೀರ್ಣ		ಚಕ್ಕುಬಂದಿ	ಮೀಸಲು ಬೆಲೆ	ಇಎಂಡಿ ಮೊತ್ತ	ಬಿಡ್ ಗುಣಾಂಕಗಳ ಮೊತ್ತ
		ಎಕರೆಗಳು	ಗುಂಟೆಗಳು				
1	282/P1	27 02	33 00	As per sketch	11.27	1.127	0.10
2	282/P2	23	22	As per sketch			
3	206	20	00	As per sketch			
	TOTAL ACRES	73	15				

ಕಟ್ಟಡದ ಸರಿಸುಮಾರು ವಿಸ್ತೀರ್ಣ 6,178 ಚದರ ಅಡಿ.

2) ಮೆ॥ ಮಂದಾರಗಿರಿ ಗ್ರೀನ್‌ಫೀಲ್ಡ್ ಪ್ರೈವೇಟ್ ಲಿಮಿಟೆಡ್: (₹. ಕೋಟಿಗಳಲ್ಲಿ)

ಕ್ರ.ಸಂ.	ಸರ್ವೆ ನಂ.	ಆಸ್ತಿಯ ವಿಸ್ತೀರ್ಣ		ಚಕ್ಕುಬಂದಿ	ಮೀಸಲು ಬೆಲೆ	ಇಎಂಡಿ ಮೊತ್ತ	ಬಿಡ್ ಗುಣಾಂಕಗಳ ಮೊತ್ತ
		ಎಕರೆಗಳು	ಗುಂಟೆಗಳು				
1	205/P2	07	08	As per sketch	4.20	0.42	0.10
2	282/P3	13 01	33 20	As per sketch			
3	282/P3	05	06	As per sketch			
	TOTAL ACRES	27	27				

ಕಟ್ಟಡದ ಸರಿಸುಮಾರು ವಿಸ್ತೀರ್ಣ 285 ಚದರ ಅಡಿ.

3) ಮೆ॥ ಘಟಪ್ರಭಾ ಅಗ್ರೋ ಫಾರ್ಮ್ಸ್ ಪ್ರೈವೇಟ್ ಲಿಮಿಟೆಡ್: (₹. ಕೋಟಿಗಳಲ್ಲಿ)

ಕ್ರ.ಸಂ.	ಸರ್ವೆ ನಂ.	ಆಸ್ತಿಯ ವಿಸ್ತೀರ್ಣ		ಚಕ್ಕುಬಂದಿ	ಮೀಸಲು ಬೆಲೆ	ಇಎಂಡಿ ಮೊತ್ತ	ಬಿಡ್ ಗುಣಾಂಕಗಳ ಮೊತ್ತ
		ಎಕರೆಗಳು	ಗುಂಟೆಗಳು				
1	282/P4	18 03	05 00	As per sketch	8.06	0.806	0.10
2	204	30 00	27 19	As per sketch			
	TOTAL ACRES	52	11				

ಕಟ್ಟಡದ ಸರಿಸುಮಾರು ವಿಸ್ತೀರ್ಣ 12,825 ಚದರ ಅಡಿ.

4) ಶ್ರೀಮತಿ ಹರಿಣಿ ಶೆಟ್ಟಿ: (₹. ಕೋಟಿಗಳಲ್ಲಿ)

ಕ್ರ.ಸಂ.	ಸರ್ವೆ ನಂ.	ಆಸ್ತಿಯ ವಿಸ್ತೀರ್ಣ		ಚಕ್ಕುಬಂದಿ	ಮೀಸಲು ಬೆಲೆ	ಇಎಂಡಿ ಮೊತ್ತ	ಬಿಡ್ ಗುಣಾಂಕಗಳ ಮೊತ್ತ
		ಎಕರೆಗಳು	ಗುಂಟೆಗಳು				
1	276/P2	02	00	As per sketch	23.74	2.374	0.10
2	277	00	14	As per sketch			
3	286	02	07	As per sketch			
4	287	01	00	As per sketch			
5	279	03 00	34 21	As per sketch			
6	282/P5	10 01	30 07	As per sketch			
7	282/P1	10 01	29 00	As per sketch			
8	281	08 00	39 12	As per sketch			
9	282/P6	50 05	04 00	As per sketch			
10	282/P3	27 03	10 20	As per sketch			
11	205/P1	17 00	30 12	As per sketch			
12	282/P4	01	27	As per sketch			
13	280	00	07	As per sketch			
14	135/P1	02 00	20 03	As per sketch			
15	135/P2	02 00	20 03	As per sketch			
	TOTAL ACRES	153	29				

ಕಟ್ಟಡದ ಸರಿಸುಮಾರು ವಿಸ್ತೀರ್ಣ 14,853 ಚದರ ಅಡಿ.

ಮೇಲಿನ ಎಲ್ಲಾ ಕಾಫಿ ಎಸ್ಟೇಟ್‌ಗಳ ವಿಸ್ತೀರ್ಣ 307.18 ಎಕರೆಗಳು ಈ ಆಸ್ತಿಯು ಜವಳಿ ಮತ್ತು ಕೂವೆ ಗ್ರಾಮಗಳು, ಬಾಳೂರು ಹೋಬಳಿ, ಮೂಡಿಗೆರೆ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ, ಕರ್ನಾಟಕದಲ್ಲಿವೆ ಮತ್ತು ಈಗ ಇದನ್ನು ಸತ್ಯನಾರಾಯಣ ಪ್ಲಾಂಟೇಶನ್ಸ್ ಎಂದು ಕರೆಯಲಾಗುತ್ತದೆ.



ಎನ್‌ಕಂಬರೇನ್ಸ್ ಯಾವುದಾದರೂ ಇದ್ದಲ್ಲಿ: ಬ್ಯಾಂಕಿನ ಗಮನಕ್ಕೆ ಬಂದಿಲ್ಲ ಮಾರಾಟದ ವಿವರವಾದ ನಿಯಮಗಳು ಮತ್ತು ಷರತ್ತುಗಳಿಗಾಗಿ, 'ಇ–ಹರಾಜು'ಲಿಂಕ್ ಪ್ರೊವೈಡೆಡ್ ಕೆನರಾ ಬ್ಯಾಂಕ್‌ರವರ ವೆಬ್‌ಸೈಟ್: **(www.canarabank.com)** ನಲ್ಲಿ ಒದಗಿಸಲಾಗಿದೆ ಅಥವಾ **ಮುಖ್ಯ ಪ್ರಬಂಧಕರು, ಕೆನರಾ ಬ್ಯಾಂಕ್, ಎಆರ್‌ಎಂ–1 ಶಾಖೆ, ಬೆಂಗಳೂರು ಮೊಬೈಲ್ ನಂ.: 9483532366** ಮತ್ತು **7483935007** ಅನ್ನು ಯಾವುದೇ ಕೆಲಸದ ದಿನದಂದು ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದು.

ದಿನಾಂಕ : 22.07.2024
ಸ್ಥಳ : ಬೆಂಗಳೂರು

ಸಹಿ/– ಅಧಿಕೃತ ಅಧಿಕಾರಿ,
ಕೆನರಾ ಬ್ಯಾಂಕ್

ಷೇರುಪೇಟೆ ವಹಿವಾಟು ▼102

80,604 ಹಿಂದಿನ ಅಂತ್ಯ | 80,502 ಇಂದಿನ ಅಂತ್ಯ

ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	24,530
ಇಂದಿನ ಅಂತ್ಯ	24,509
▼	21
ದಿನದ ಕನಿಷ್ಠ	24,362

ವಿನಿಮಯ ದರ

$ ಡಾಲರ್	83.66
£ ಪೌಂಡ್	108.01
€ ಯುರೊ	91.00
¥ ಯೆನ್ (100ಕ್ಕೆ)	53

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು 100ಕ್ಕೆ	₹570
12 ಕ್ಕೆ	₹75
ಮೈಸೂರು 100ಕ್ಕೆ	₹573

ಖಾದ್ಯ ತೈಲ ಮುಂಬೈ (10 ಕೆಜಿಗೆ) (ಆವರಣದಲ್ಲಿ ಹಿಂದಿನ ವಹಿವಾಟಿನ ದರ)

ಶೇಂಗಾ (ರಿಫೈನ್ಡ್)	₹1570 (1570)
ಸೋಯಾ (ರಿಫೈನ್ಡ್)	₹965 (965)
ಸೂರ್ಯಕಾಂತಿ (ರಿಫೈನ್ಡ್)	₹965 (965)
ಪಾಮೋಲಿನ್	₹910 (910)

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹266-430
ದ್ವಿತಳಿ (ಬಿ.ವಿ)	₹222-600

ಎಂಆರ್‌ಪಿಎಲ್ ಲಾಭ ಇಳಿಕೆ

ಪ್ರಜಾವಾಣಿ ವಾರ್ತೆ

ಮಂಗಳೂರು: ಮಂಗಳೂರು ರಿಫೈನರಿ ಆ್ಯಂಡ್ ಪೆಟ್ರೊ ಕೆಮಿಕಲ್ಸ್ ಲಿಮಿಟೆಡ್ (ಎಂಆರ್‌ಪಿಎಲ್) ಕಂಪನಿಯು 2024–25ನೇ ಹಣಕಾಸು ವರ್ಷದ ಪ್ರಥಮ ತ್ರೈಮಾಸಿಕದ ಲಾಭದ ಪ್ರಮಾಣ ಗಣನೀಯವಾಗಿ ಕುಸಿದಿದೆ.

2023–24ನೇ ಸಾಲಿನ ಪ್ರಥಮ ತ್ರೈಮಾಸಿಕದಲ್ಲಿ ಕಂಪನಿಯು ₹1,013 ಕೋಟಿ ಲಾಭ ಗಳಿಸಿತ್ತು. ಪ್ರಸಕ್ತ ಹಣಕಾಸು ವರ್ಷದ ಏಪ್ರಿಲ್–ಜೂನ್ ತ್ರೈಮಾಸಿಕದಲ್ಲಿ ಕಂಪನಿಯು ತೆರಿಗೆ ನಂತರ ₹66 ಕೋಟಿ ಲಾಭ ಗಳಿಸಿದೆ.

ಇಲ್ಲಿ ಸೋಮವಾರ ನಡೆದ ಕಂಪನಿಯ ಆಡಳಿತ ಮಂಡಳಿ ಸಭೆಯಲ್ಲಿ ಪ್ರಥಮ ತ್ರೈಮಾಸಿಕ ವರದಿಗೆ ಅನುಮೋದನೆ ನೀಡಲಾಯಿತು.

ಕಂಪನಿಯು ಪ್ರಥಮ ತ್ರೈಮಾಸಿಕದಲ್ಲಿ ಕಾರ್ಯಾಚರಣೆಯಿಂದ ಒಟ್ಟು ₹27,289 ಕೋಟಿ ಗಳಿಸಿದೆ. 2023–24ನೇ ಸಾಲಿನಲ್ಲಿ ಕಂಪನಿ ₹24,825 ಕೋಟಿ ವರಮಾನ ಗಳಿಸಿತ್ತು.

ಕಂಪನಿಯು ಕಚ್ಚಾ ತೈಲದ ಪ್ರತಿ ಬ್ಯಾರೆಲ್‌ಗೆ ₹393.18 ನಿವ್ವಳ ಸಂಸ್ಕರಣಾ ಲಾಭಾಂಶ ಗಳಿಸಿದೆ. ಕಳೆದ ವರ್ಷ ಇದು ಪ್ರತಿ ಬ್ಯಾರೆಲ್ ಕಚ್ಚಾ ತೈಲಕ್ಕೆ ₹820.65 ಇತ್ತು.

2024ರ ಮೇ ತಿಂಗಳಲ್ಲಿ ಕಂಪನಿಯು 15.93 ಲಕ್ಷ ಟನ್ ಕಚ್ಚಾ ತೈಲವನ್ನು ಸಂಸ್ಕರಿಸಿದೆ. ಇದು ಕಂಪನಿಯ ಇದುವರೆಗಿನ ಗರಿಷ್ಠ ಸಾಧನೆಯಾಗಿದೆ. ಕಳೆದ ವರ್ಷ ಇದೇ ಅವಧಿಯಲ್ಲಿ 15.57 ಲಕ್ಷ ಟನ್ ಕಚ್ಚಾ ತೈಲವನ್ನು ಸಂಸ್ಕರಿಸಿತ್ತು. ಮೇ ತಿಂಗಳಲ್ಲಿ ಕಂಪನಿಯು 2.30 ಲಕ್ಷ ಟನ್ ವಿಮಾನ ಇಂಧನವನ್ನು (ಎಟಿಎಫ್) ಉತ್ಪಾದಿಸಿದೆ. ಕಳೆದ ವರ್ಷದ ಇದೇ ಅವಧಿಯಲ್ಲಿ 2.27 ಲಕ್ಷ ಟನ್ ಎಟಿಎಫ್ ಅನ್ನು ಉತ್ಪಾದಿಸಿತ್ತು.

ಕಂಪನಿಯು ಇದೇ ಮೊದಲ ಬಾರಿಗೆ ರಷ್ಯಾದ ಕಲಿನಿಂಗ್ರ್ಯಾಡ್ ಕಚ್ಚಾ ತೈಲವನ್ನು (ಏಪ್ರಿಲ್‌ನಲ್ಲಿ) ಸಂಸ್ಕರಣೆ ಮಾಡಿದೆ. ರಷ್ಯಾದ ವರಾಂಡೆ ಕಚ್ಚಾ ತೈಲ ಮತ್ತು ಹಾಗೂ ಕುವೈತ್‌ನ ಇಯೋಸಿನ್ ಕಚ್ಚಾ ತೈಲವನ್ನು ಮೊದಲ ಸಲ (ಜೂನ್ ತಿಂಗಳಿನಲ್ಲಿ) ಸಂಸ್ಕರಣೆ ಮಾಡಿದೆ ಎಂದು ಎಂಆರ್‌ಪಿಎಲ್ ಪ್ರಕಟಣೆ ತಿಳಿಸಿದೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

60ನೇ ವರ್ಷದ ಚಿರಸ್ಮರಣೆ

ಶ್ರೀಮತಿ ಪಾಪಮ್ಮ
ಸಾರಕ್ಕಿ ಕೆ. ಎನ್. ಮುನಿಸ್ವಾಮಿರೆಡ್ಡಿಯವರ ಧರ್ಮಪತ್ನಿ
06-06-1974

ಸಾರಕ್ಕಿ
ಶ್ರೀ ಕೆ. ಎನ್. ಮುನಿಸ್ವಾಮಿರೆಡ್ಡಿಯವರು
23-07-1964

ನೀವು ನಮ್ಮನ್ನಗಲಿ ಇಂದಿಗೆ 60 ವರ್ಷ ಕಳೆದರೂ ನಿಮ್ಮ ನೆನಪು ನಮ್ಮಲ್ಲಿ ಚಿರಸ್ಮರಣೀಯವಾಗಿ ಉಳಿದಿದೆ. ನಿಮ್ಮ ಆದರ್ಶ ನಮಗೆ ಸದಾ ದಾರಿದೀಪವಾಗಿದೆ. ನಿಮ್ಮ ಆತ್ಮಕ್ಕೆ ಭಗವಂತನು ಚಿರಶಾಂತಿ ಕರುಣಿ ಸಲೆಂದು ಸದಾ ಪ್ರಾರ್ಥಿಸುವ.

ಮೊಮ್ಮಕ್ಕಳು, ಮರಿಮೊಮ್ಮಕ್ಕಳು
ಮತ್ತು ಕೆ.ಎಂ.ಕೆ ಕುಟುಂಬವರ್ಗದವರು

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹207
ಆರ್‌ಎಸ್‌ಎಸ್-5	₹202
ಗುಡ್ ಲಾಟ್ (ಪ್ರತಿ ಕೆ.ಜಿಗೆ)	₹189

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಅರಸೀಕೆರೆ	₹8500-10000
ತಿಪಟೂರು	₹9300-9514
ತುರುವೇಕೆರೆ	₹8000-9500

ಮುದ್ರೆಮನೆ ಕಾಫಿ (50 ಕೆಜಿಗೆ)

ಎಪಿ	₹16250
ಎಸಿ	₹9660
ಆರ್‌ಪಿ	₹18000
ಆರ್‌ಸಿ	₹10030

ಕರ್ನಾಟಕಕ್ಕೆ ಪರಿಹಾರ ನೀಡಲಾಗಿದೆ: ಕೇಂದ್ರ ಸ್ಪಷ್ಟನೆ

‘ಜಿಎಸ್‌ಟಿ ಬಾಕಿ ಇಲ್ಲ’

ಕರ್ನಾಟಕದಲ್ಲಿ ಜಿಎಸ್‌ಟಿ ಸಂಗ್ರಹ (₹ಕೋಟಿಗಳಲ್ಲಿ)



ಪ್ರಜಾವಾಣಿ ವಾರ್ತೆ

ನವದೆಹಲಿ: ‘ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ವ್ಯವಸ್ಥೆಯಿಂದ ಆಗುವ ವರಮಾನ ನಷ್ಟಕ್ಕೆ ಎಲ್ಲ ರಾಜ್ಯಗಳಿಗೆ ಪರಿಹಾರ ನೀಡಲಾಗಿದೆ. ಕರ್ನಾಟಕ ರಾಜ್ಯಕ್ಕೆ ಯಾವುದೇ ಪರಿಹಾರ ಬಾಕಿ ಇಲ್ಲ’ ಎಂದು ಕೇಂದ್ರ ಹಣಕಾಸು ಖಾತೆ ರಾಜ್ಯ ಸಚಿವ ಪಂಕಜ್ ಚೌಧರಿ ಸ್ಪಷ್ಟಪಡಿಸಿದರು.

ಲೋಕಸಭೆಯಲ್ಲಿ ಸೋಮವಾರ ಪ್ರಶ್ನೋತ್ತರ ಅವಧಿಯಲ್ಲಿ ಚಿತ್ರದುರ್ಗ ಸಂಸದ ಗೋವಿಂದ ಕಾರಜೋಳ ಕೇಳಿದ ಪ್ರಶ್ನೆಗೆ ಸಚಿವರು ಈ ಉತ್ತರ ನೀಡಿದರು.

ರಾಜ್ಯಕ್ಕೆ ಜಿಎಸ್‌ಟಿ ಪರಿಹಾರ (₹ಕೋಟಿಗಳಲ್ಲಿ)

ವರ್ಷ	ಪರಿಹಾರ	ಸಾಲ	ಒಟ್ಟು ಮೊತ್ತ
2017-18	7,670	-	7,670
2018-19	12,465	-	12,465
2019-20	18,463	-	18,463
2020-21	19,301	12,407	31,708
2021-22	9,877	18,109	27,986
2022-23	7,966	-	7,966
ಒಟ್ಟು	75,742	30,516	1,06,258

ಜಿಎಸ್‌ಟಿ ಜಾರಿಯಾದ ಮೇಲೆ ರಾಜ್ಯಗಳಿಗೆ ಶೇ 14ರಷ್ಟು ನಷ್ಟ ಪರಿಹಾರ ನೀಡುವ ವ್ಯವಸ್ಥೆ 2017ರ ಜುಲೈನಲ್ಲಿ ಆರಂಭವಾಯಿತು. ಹೊಸ ತೆರಿಗೆ ವ್ಯವಸ್ಥೆ ಜಾರಿಯಾದ ಬಳಿಕ ರಾಜ್ಯಗಳಿಗೆ ಆಗುವ ನಷ್ಟವನ್ನು ಭರಿಸಲು ಈ ಯೋಜನೆ ಜಾರಿ ಮಾಡಲಾಗಿತ್ತು. ನಷ್ಟ ಪರಿಹಾರ ವ್ಯವಸ್ಥೆ 2022ರ ಜೂನ್ ಅಂತ್ಯಕ್ಕೆ ಕೊನೆಗೊಂಡಿದೆ.

ಆದರೆ, 2022ರ ಜೂನ್ ವರೆಗಿನ ₹2,330 ಕೋಟಿ ಪರಿಹಾರ ಎರಡು ವರ್ಷ ಕಳೆದರೂ ಬಿಡುಗಡೆಯಾಗಿಲ್ಲ ಎಂದು ಕರ್ನಾಟಕ ಸರ್ಕಾರ ಹಲವು ಸಲ ಆರೋಪ ಮಾಡಿದೆ. ಜತೆಗೆ, ಕೇಂದ್ರಕ್ಕೆ ಮನವಿ ಸಲ್ಲಿಸಿದೆ. ಆದರೆ, ಈ ಆರೋಪವನ್ನು ಕೇಂದ್ರ ಸರ್ಕಾರ ಅಲ್ಲಗಳೆದಿದೆ.

ಸುದ್ದಿ 2 ನಿಮಿಷ

ಸೆಬಿಗೆ ಯಾವುದೇ ಮಾಹಿತಿ ಬಂದಿಲ್ಲ; ಕೇಂದ್ರ ಸರ್ಕಾರ

ನವದೆಹಲಿ (ಪಿಟಿಐ): ‘ಜೂನ್ 4ರ ಲೋಕಸಭಾ ಫಲಿತಾಂಶದ ದಿನ ಷೇರು ಮಾರುಕಟ್ಟೆಯಲ್ಲಿ ‘ನ್ಯಾಯಯುತವಲ್ಲದ ವ್ಯವಹಾರ’ ನಡೆದಿರುವ ಕುರಿತಂತೆ ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಗೆ (ಸೆಬಿ)ಯಾವುದೇ ನಿರ್ದಿಷ್ಟ ಮಾಹಿತಿ ಬಂದಿಲ್ಲ’ ಎಂದು ಸೋಮವಾರ ಸಂಸತ್ತಿನಲ್ಲಿ ತಿಳಿಸಲಾಗಿದೆ.

ಫಲಿತಾಂಶ ದಿನದಂದು ಷೇರು ಸಂವೇದಿ ಸೂಚ್ಯಂಕ ಹಾಗೂ ಷೇರುಗಳ ಬೆಲೆ ದಿಢೀರ್ ಕುಸಿತದಿಂದ ಒಂದೇ ದಿನ ಹೂಡಿಕೆದಾರರಿಗೆ ₹30 ಲಕ್ಷ ಕೋಟಿ ನಷ್ಟವಾಗಿರುವುದು ಸತ್ಯವೇ ಎಂಬ ಪ್ರಶ್ನೆಗೆ ಲೋಕಸಭೆಯಲ್ಲಿ ಲಿಖಿತ ಉತ್ತರ ನೀಡಿದ ಕೇಂದ್ರ ಹಣಕಾಸು ಖಾತೆಯ ರಾಜ್ಯ ಸಚಿವ ಪಂಕಜ್ ಚೌಧರಿ, ‘ಷೇರು ಮಾರುಕಟ್ಟೆಯು ಹೂಡಿಕೆದಾರರ ಗ್ರಹಿಕೆ ಹಾಗೂ ಇತರೆ ಅಂಶಗಳ ಆಧರಿಸಿ ಕಾರ್ಯಾಚರಿಸುತ್ತದೆ’ ಎಂದು ತಿಳಿಸಿದ್ದಾರೆ.

‘ಸಂಬಂಧಿತ ಪ್ರತಿನಿಧಿಗಳಿಂದ ಷೇರು ಮಾರುಕಟ್ಟೆಯಲ್ಲಿ ವಹಿವಾಟಿನ ಕುರಿತಂತೆ ಸೆ.ಬಿ ಮಾಹಿತಿ ಸ್ವೀಕರಿಸುತ್ತದೆ. ‘ನ್ಯಾಯಯುತವಲ್ಲದ ವ್ಯವಹಾರ’ದ ಕುರಿತಂತೆ ನಿರ್ದಿಷ್ಟ ಮಾಹಿತಿ ಸಿಕ್ಕಿಲ್ಲ’ ಎಂದು ಸಚಿವರು ಸ್ಪಷ್ಟಪಡಿಸಿದರು.

ಕೇಂದ್ರದಲ್ಲಿ ಬಿಜೆಪಿ ಸರಳ ಬಹುಮತ ಪಡೆಯಲಿದೆ ಎಂದು ಜೂನ್ 3ರಂದು ಮಾಧ್ಯಮಗಳಲ್ಲಿ ಪ್ರಕಟಗೊಂಡ ಚುನಾವಣೋತ್ತರ ಸಮೀಕ್ಷೆ ಬೆನ್ನಲ್ಲೇ ಬಿಎಸ್‌ಇ ಶೇ 3.4 ರಷ್ಟು ಏರಿಕೆಯಾಗಿತ್ತು.

ಫಲಿತಾಂಶದ ದಿನ ಸಮ್ಮಿಶ್ರ ಸರ್ಕಾರ ರಚನೆಯಾಗಲಿದೆ ಎಂಬ ಖಚಿತ ಮಾಹಿತಿ ಬಳಿಕ ಷೇರು ಸೂಚ್ಯಂಕವು ಶೇ 6ರಷ್ಟು ಕುಸಿತ ಕಂಡಿತ್ತು.

ಐಸಿಐಸಿಐ ಲೊಂಬಾರ್ಡ್ ಲಾಭ ಏರಿಕೆ

ಬೆಂಗಳೂರು: ಐಸಿಐಸಿಐ ಲೊಂಬಾರ್ಡ್ ಜನರಲ್ ಇನ್ಶೂರೆನ್ಸ್ ಕಂಪನಿ ಲಿಮಿಟೆಡ್, 2024–25ರ ಹಣಕಾಸು ವರ್ಷದ ಜೂನ್ ತ್ರೈಮಾಸಿಕದಲ್ಲಿ ತೆರಿಗೆ ನಂತರದ ಲಾಭ ₹580 ಕೋಟಿ ಗಳಿಸಿದೆ.

ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿ ₹390 ಕೋಟಿ ಗಳಿಸಿತ್ತು. ಇದಕ್ಕೆ ಹೋಲಿಸಿದರೆ ಲಾಭದಲ್ಲಿ ಶೇ 48.7ರಷ್ಟು ಹೆಚ್ಚಳವಾಗಿದೆ ಎಂದು ಕಂಪನಿ ಪ್ರಕಟಣೆಯಲ್ಲಿ ತಿಳಿಸಿದೆ.

ನಿವ್ವಳ ನೇರ ಪ್ರೀಮಿಯಂ ವರಮಾನವು (ಜಿಡಿಪಿಐ) ₹7,688 ಕೋಟಿ ಸಂಗ್ರಹವಾಗಿದ್ದು, ಶೇ 20ರಷ್ಟು ಏರಿಕೆಯಾಗಿದೆ. ತೆರಿಗೆ ಮುಂಚಿನ ಲಾಭ ಶೇ 48.8ರಷ್ಟು ಹೆಚ್ಚಳವಾಗಿದ್ದು, ₹774 ಕೋಟಿ ಸಂಗ್ರಹಿಸಿದೆ.

ಸರಾಸರಿ ಈಕ್ವಿಟಿ ಮೇಲಿನ ಆದಾಯ (ಆರ್‌ಒಎಇ) ಶೇ 14.7 ರಿಂದ ಶೇ 19.1ಕ್ಕೆ ಏರಿಕೆಯಾಗಿದೆ ಎಂದು ತಿಳಿಸಿದೆ.

ಟ್ರಂಪ್ ಹತ್ಯೆ ಯತ್ನ: ಸ್ವತಂತ್ರ ತಜ್ಞರ ತಂಡ ರಚನೆ

ವಾಷಿಂಗ್ಟನ್ (ಎಪಿ): ಅಮೆರಿಕ ಅಧ್ಯಕ್ಷೀಯ ಚುನಾವಣೆಯ ಅಭ್ಯರ್ಥಿ ಡೊನಾಲ್ಡ್ ಟ್ರಂಪ್ ಅವರ ಹತ್ಯೆ ಯತ್ನ ಪ್ರಕರಣವನ್ನು ಪರಾಮರ್ಶಿಸಲು ಸ್ವತಂತ್ರ ತಜ್ಞರ ತಂಡವೊಂದನ್ನು ಅಮೆರಿಕದ ಆಂತರಿಕ ಭದ್ರತಾ ಕಾರ್ಯದರ್ಶಿ ಹಲೆಹ್ಯಾಂಡ್ರೊ ಮಯೋರ್ಕಸ್ ಅವರು ನೇಮಿಸಿದ್ದಾರೆ.

‘ಪೆನ್ಸಿಲ್ವೇನಿಯಾದಲ್ಲಿ ಟ್ರಂಪ್ ಅವರ ಪ್ರಚಾರ ಕಾರ್ಯಕ್ರಮ ಆಯೋಜನೆಗೊಳ್ಳುವ ಹಂತದಲ್ಲಿ, ಕಾರ್ಯಕ್ರಮ ನಡೆಯುತ್ತಿದ್ದಾಗ ಹಾಗೂ ಹತ್ಯೆ ಯತ್ನ ನಡೆದ ಬಳಿಕ, ಸೀಕ್ರೆಟ್ ಸರ್ವಿಸ್ ಸೇರಿದಂತೆ ರಾಜ್ಯ ಹಾಗೂ ಸ್ಥಳೀಯ ಆಡಳಿತವು ಯಾವೆಲ್ಲಾ ಕ್ರಮಗಳನ್ನು ತೆಗೆದುಕೊಂಡಿದ್ದವು ಎನ್ನುವ ಕುರಿತು ಈ ತಂಡವು ಪರಾಮರ್ಶೆ ನಡೆಸಲಿದೆ. 45 ದಿನಗಳ ಒಳಗಾಗಿ ವರದಿಯನ್ನು ಈ ತಂಡ ನೀಡಬೇಕಿದೆ’ ಎಂದು ಆಂತರಿಕ ಭದ್ರತಾ ಕಾರ್ಯದರ್ಶಿ ಹೇಳಿದ್ದಾರೆ.

‘ಅಮೆರಿಕದ ಸೀಕ್ರೆಟ್ ಸರ್ವಿಸ್‌ನ ಭದ್ರತಾ ನೀತಿಗಳು, ಕಾರ್ಯವಿಧಾನಗಳ ಕುರಿತೂ ಈ ತಜ್ಞರ ತಂಡವು ಪರಾಮರ್ಶೆ ನಡೆಸಲಿದೆ. ತನಿಖೆ ಹಂತದಲ್ಲಿ ಇನ್ನಷ್ಟು ಮಾಹಿತಿಯ ಅಗತ್ಯವಿದ್ದಲ್ಲಿ, ಮುಂದಿನ ದಿನಗಳಲ್ಲಿ ಮತ್ತಷ್ಟು ತಜ್ಞರು ಈ ತಂಡವನ್ನು ಸೇರಿಕೊಳ್ಳಲಿದ್ದಾರೆ’ ಎಂದೂ ಅವರು ವಿವರಿಸಿದ್ದಾರೆ.

‘ಟ್ರಂಪ್ ಸೋಲಿಸಲು ದೇಶ ಒಗ್ಗೂಡಿಸುವೆ’

ಬೈಡನ್ ಅನುಮೋದನೆ ಲಭಿಸಿರುವುದು ಗೌರವದ ಸಂಗತಿ: ಕಮಲಾ

ವಾಷಿಂಗ್ಟನ್ (ಪಿಟಿಐ): ಅಮೆರಿಕದ ಅಧ್ಯಕ್ಷ ಜೋ ಬೈಡನ್ ಅವರು ನವೆಂಬರ್‌ನಲ್ಲಿ ನಡೆಯಲಿರುವ ಚುನಾವಣೆಗೆ ಡೆಮಾಕ್ರಟಿಕ್ ಪಕ್ಷದ ಅಭ್ಯರ್ಥಿಯಾಗಿ ತಮ್ಮ ಹೆಸರನ್ನು ಅನುಮೋದಿಸಿರುವುದಕ್ಕೆ ಉಪಾಧ್ಯಕ್ಷೆ ಕಮಲಾ ಹ್ಯಾರಿಸ್ ಹರ್ಷ ವ್ಯಕ್ತಪಡಿಸಿದ್ದಾರೆ.

ಡೆಮಾಕ್ರಟಿಕ್ ಪಕ್ಷದ ಅಭ್ಯರ್ಥಿಯಾಗಿ ಅಧಿಕೃತ ನಾಮನಿರ್ದೇಶನ ಗಳಿಸಲು ಎಲ್ಲ ಪ್ರಯತ್ನ ಮಾಡುವುದಾಗಿ ಹೇಳಿದ್ದಾರೆ. ಚುನಾವಣೆಯಲ್ಲಿ ಡೊನಾಲ್ಡ್ ಟ್ರಂಪ್ ಅವರನ್ನು ಸೋಲಿಸಲಿಕ್ಕಾಗಿ ದೇಶವನ್ನು ಒಗ್ಗೂಡಿಸಲು ‘ತನ್ನೆಲ್ಲಾ ಶಕ್ತಿಯನ್ನು ಬಳಸುವೆ’ ಎಂದು ಘೋಷಿಸಿದ್ದಾರೆ.

ಅಮೆರಿಕದ ಅಧ್ಯಕ್ಷ ಸ್ಥಾನಕ್ಕೆ ಮರು ಆಯ್ಕೆ ಬಯಸಿದ್ದ ಬೈಡನ್, ಭಾನುವಾರ ಸ್ಪರ್ಧೆಯಿಂದ ಏಕಾಏಕಿ ಹಿಂದೆ ಸರಿದಿದ್ದಾರೆ. ಬೈಡನ್ ಸ್ಪರ್ಧೆಗೆ ಡೆಮಾಕ್ರಟಿಕ್ ಪಕ್ಷದಲ್ಲೇ ಅಪಸ್ವರ ಕೇಳಿಬಂದಿತ್ತು. ‘ಪಕ್ಷ ಮತ್ತು ದೇಶದ ಹಿತವನ್ನು ಬಯಸಿ ಈ ತೀರ್ಮಾನ ಕೈಗೊಂಡಿದ್ದೇನೆ. ಅಧಿಕಾರ ಅವಧಿ ಪೂರ್ಣಗೊಳ್ಳುವವರೆಗೆ (ಜನವರಿ 2025ರವರೆಗೆ) ಅಧ್ಯಕ್ಷನಾಗಿ ಮುಂದುವರಿಯುವೆ’ ಎಂದಿದ್ದ ಅವರು ಡೆಮಾಕ್ರಟಿಕ್ ಪಕ್ಷದ ಅಭ್ಯರ್ಥಿಯಾಗಲು 59 ವರ್ಷದ ಕಮಲಾ ಹ್ಯಾರಿಸ್ ಅವರ ಹೆಸರನ್ನು ಸೂಚಿಸಿದ್ದರು.

ಹ್ಯಾರಿಸ್ ಅವರು ಅಧ್ಯಕ್ಷ ಸ್ಥಾನದ ಅಭ್ಯರ್ಥಿಯಾಗುವರೇ ಅಥವಾ ಡೆಮಾಕ್ರಟಿಕ್ ಪಕ್ಷವು ಪರ್ಯಾಯ ಅಭ್ಯರ್ಥಿಯನ್ನು ಆಯ್ಕೆ ಮಾಡಲಿದೆಯೇ ಎಂಬುದು ಇನ್ನೂ ಖಚಿತವಾಗಿಲ್ಲ.

ಡೆಮಾಕ್ರಟಿಕ್ ಪಕ್ಷದ ರಾಷ್ಟ್ರೀಯ ಸಮಿತಿ ಮುಖ್ಯಸ್ಥರಾದ ಜೇಮಿ ಹ್ಯಾರಿಸನ್ ಅವರು, ‘ಡೊನಾಲ್ಡ್ ಟ್ರಂಪ್ ಅವರನ್ನು ಸೋಲಿಸುವ ಸಾಮರ್ಥ್ಯ ಹೊಂದಿರುವ ಅಭ್ಯರ್ಥಿಯ ಆಯ್ಕೆ ಪ್ರಕ್ರಿಯೆಯನ್ನು ಪಕ್ಷವು ಪಾರದರ್ಶಕ ಮತ್ತು ಕ್ರಮಬದ್ಧ ರೀತಿಯಲ್ಲಿ ನಡೆಸಲಿದೆ’ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಮಲಾ ಹ್ಯಾರಿಸ್ ಹಾಗೂ ಜೋ ಬೈಡನ್

ಬೈಡನ್ ಅವರ ಅನುಮೋದನೆ ಇರುವುದರಿಂದ ಹ್ಯಾರಿಸ್, ಪಕ್ಷದ ಅಧ್ಯಕ್ಷೀಯ ಅಭ್ಯರ್ಥಿಯಾಗುವುದು ಬಹುತೇಕ ನಿಚ್ಚಳ ಎಂದು ವಿಶ್ಲೇಷಿಸಲಾಗಿದೆ. ಆದರೂ ಮುಂದಿನ ತಿಂಗಳು ಷಿಕಾಗೊದಲ್ಲಿ ನಡೆಯಲಿರುವ ಡೆಮಾಕ್ರಟಿಕ್ ಪಕ್ಷದ ರಾಷ್ಟ್ರೀಯ ಸಮಾವೇಶದಲ್ಲಿ ಅಧಿಕೃತ ತೀರ್ಮಾನ ಹೊರಬೀಳಲಿದೆ.

2021ರಿಂದಲೂ ಅಮೆರಿಕದ ಉಪಾಧ್ಯಕ್ಷರಾಗಿ ಕಾರ್ಯನಿರ್ವಹಿಸುತ್ತಿರುವ ಕಮಲಾ ಹ್ಯಾರಿಸ್ ಅವರು ಈ ಸ್ಥಾನಕ್ಕೇರಿದ ಮೊದಲ ಮಹಿಳೆ, ಮೊದಲ ಕಪ್ಪುವರ್ಣೀಯರು ಹಾಗೂ ದಕ್ಷಿಣ ಏಷ್ಯಾ ಮೂಲದ ಮೊದಲ ವ್ಯಕ್ತಿ ಎನಿಸಿಕೊಂಡಿದ್ದಾರೆ.

‘ಅಧ್ಯಕ್ಷರಾಗಿ ಮತ್ತು ರಾಜಕಾರಣಿಯಾಗಿ ದಶಕಗಳ ಕಾಲ ದೇಶಕ್ಕೆ ಸಲ್ಲಿಸಿದ ಸೇವೆಗಾಗಿ ಬೈಡನ್ ಅವರಿಗೆ ಅಮೆರಿಕದ ಜನರ ಪರವಾಗಿ ಧನ್ಯವಾದ ಸಲ್ಲಿಸುತ್ತೇನೆ’ ಎಂದು ಹ್ಯಾರಿಸ್ ಹೇಳಿದ್ದಾರೆ.

ಸ್ವಾತಂತ್ರ್ಯಕ್ಕಾಗಿ ನಡೆಯುತ್ತಿರುವ ಹೋರಾಟದಲ್ಲಿ ಅಮೆರಿಕವು ನೀಡಿರುವ ‘ಅಚಲ ಬೆಂಬಲ’ಕ್ಕಾಗಿ ಉಕ್ರೇನ್ ದೇಶವು ಬೈಡನ್ ಅವರಿಗೆ ಕೃತಜ್ಞತೆ ಸಲ್ಲಿಸುತ್ತದೆ
ವೊಲೊಡಿಮಿರ್ ಝೆಲೆನ್‌ಸ್ಕಿ, ಉಕ್ರೇನ್ ಅಧ್ಯಕ್ಷ

ಬೈಡನ್ ತಮ್ಮ ವೃತ್ತಿಜೀವನದುದ್ದಕ್ಕೂ ಮಾಡಿದಂತೆ, ಅಮೆರಿಕದ ಜನರ ಹಿತಾಸಕ್ತಿಯನ್ನು ಪರಿಗಣಿಸಿ ಚುನಾವಣಾ ಕಣದಿಂದ ಹಿಂದೆ ಸರಿದಿದ್ದಾರೆ ಎಂಬುದು ನನಗೆ ತಿಳಿದಿದೆ
ಕಿಯರ್ ಸ್ಟಾರ್ಮರ್, ಬ್ರಿಟನ್ ಪ್ರಧಾನಿ

ಬೈಡನ್ ಅವರನ್ನು ಹಲವು ವರ್ಷಗಳಿಂದ ಬಲ್ಲೆ. ಅವರೊಬ್ಬ ಒಳ್ಳೆಯ ವ್ಯಕ್ತಿ. ಒಬ್ಬ ಅಧ್ಯಕ್ಷರಾಗಿ ಅವರು ಕೆನಡಾದ ನಿಜವಾದ ಪಾಲುದಾರ ಮತ್ತು ಉತ್ತಮ ಸ್ನೇಹಿತರೂ ಹೌದು
ಜಸ್ಟಿನ್ ಟ್ರೂಡೊ, ಕೆನಡಾ ಪ್ರಧಾನಿ

ಪ್ರಾರ್ಥನೆ (ಚೆನ್ನೈ ವರದಿ): ಜೋ ಬೈಡನ್ ಸ್ಪರ್ಧೆಯಿಂದ ಹಿಂದೆ ಸರಿದು, ಉಪಾಧ್ಯಕ್ಷೆ ಕಮಲಾ ಹ್ಯಾರಿಸ್ ಹೆಸರು ಸೂಚಿಸುತ್ತಿದ್ದಂತೆಯೇ, ಭಾರತದಲ್ಲಿನ ಅವರ ಪೂರ್ವಜರ ಗ್ರಾಮದಲ್ಲಿ ಸಂಭ್ರಮ ಮನೆ ಮಾಡಿದೆ.

ಕಮಲಾ ಹ್ಯಾರಿಸ್ ಅವರ ಅಜ್ಜ ಇಲ್ಲಿನ ತುಳಸೇಂದ್ರಪುರಂ ಗ್ರಾಮದ ಮೂಲದವರು. ರಾಜಧಾನಿ ಚೆನ್ನೈನಿಂದ 350 ಕಿ.ಮೀ ದೂರದಲ್ಲಿ ಈ ಗ್ರಾಮವಿದೆ. ಈ ಹಿನ್ನೆಲೆಯಲ್ಲಿ ಸೋಮವಾರ ಇಲ್ಲಿನ ದೇವಾಲಯದಲ್ಲಿ ವಿಶೇಷ ಪೂಜೆಗಳು ನಡೆದವು.

ಕಪ್ಪುವರ್ಣೀಯ ಮಹಿಳೆಯರ ಬೆಂಬಲ

ಅಧ್ಯಕ್ಷ ಸ್ಥಾನದ ಸಂಭಾವ್ಯ ಅಭ್ಯರ್ಥಿಯಾಗಿರುವ ಕಮಲಾ ಹ್ಯಾರಿಸ್ ಅವರನ್ನು ಬೆಂಬಲಿಸಲು ಅಮೆರಿಕದಾದ್ಯಂತವಿರುವ ಕಪ್ಪುವರ್ಣೀಯ ಮಹಿಳೆಯರು ಅಭಿಯಾನ ಆರಂಭಿಸಿದ್ದಾರೆ. ಸಾವಿರಾರು ಮಹಿಳೆಯರು ಭಾನುವಾರ ಆನ್‌ಲೈನ್ ಮೂಲಕ ಚರ್ಚಿಸಿದ್ದಾರೆ.

ಬೈಡನ್ ಹಿಂದೆ ಸರಿದರೆ ಹ್ಯಾರಿಸ್ ಅವರನ್ನು ಅಭ್ಯರ್ಥಿಯಾಗಿ ಬಿಂಬಿಸುವುದಕ್ಕೆ ಸಂಬಂಧಿಸಿದಂತೆ ಡೆಮಾಕ್ರಟಿಕ್ ಪಕ್ಷದಲ್ಲಿರುವ ಕಪ್ಪುವರ್ಣೀಯ ಮಹಿಳಾ ಮುಖಂಡರು ಈ ಹಿಂದೆಯೇ ಸಿದ್ಧತೆ ನಡೆಸಿದ್ದರು. ಬೈಡನ್ ಅವರ ನಿರ್ಧಾರ ಹೊರಬಿದ್ದ ಬೆನ್ನಲ್ಲೇ ಅವರು ಭಾನುವಾರ ಸಂಜೆ ‘ಝೂಮ್ ಕಾಲ್’ ಮೂಲಕ ಮಾತುಕತೆ ನಡೆಸಿ, ಮುಂದಿನ ನಡೆ ಬಗ್ಗೆ ಚರ್ಚಿಸಿದ್ದಾರೆ.

ಕಮಲಾ ಹ್ಯಾರಿಸ್ ಪರವಾಗಿ ಬೆಂಬಲ ಗಿಟ್ಟಿಸುವ ಕೆಲಸವನ್ನು ಈಗಾಗಲೇ ಆರಂಭಿಸಿದ್ದೇನೆ ಎಂದು ಸುದೀರ್ಘ ಅವಧಿಯಿಂದ ಡೆಮಾಕ್ರಟಿಕ್ ಪಕ್ಷದ ಕಾರ್ಯತಂತ್ರ ನಿಪುಣರಾಗಿ ಕೆಲಸ ಮಾಡುತ್ತಿರುವ ಡೋನಾ ಬ್ರೆಜಿಲ್ ಹೇಳಿದ್ದಾರೆ.

ಬಾಂಗ್ಲಾ: 48 ಗಂಟೆ ಪ್ರತಿಭಟನೆ ಸ್ಥಗಿತ

ಮುಖ್ಯಾಂಶಗಳು
- ಪರಿಸ್ಥಿತಿ ಸುಧಾರಿಸಿದ್ದರೂ ಇಂಟರ್‌ನೆಟ್ ಸೇವೆ ಪುನರಾರಂಭವಿಲ್ಲ
- ಕರ್ಫ್ಯೂ ಹಿಂಪಡೆಯಲು ವಿದ್ಯಾರ್ಥಿ ಸಂಘಟನೆ ಆಗ್ರಹ

ಢಾಕಾ (ಎಎಫ್‌ಪಿ): ಸರ್ಕಾರಿ ನೇಮಕಾತಿಗಳಲ್ಲಿ ಮೀಸಲಾತಿ ನೀಡುವುದನ್ನು ವಿರೋಧಿಸಿ ಬಾಂಗ್ಲಾದೇಶದಲ್ಲಿ ನಡೆಯುತ್ತಿರುವ ಪ್ರತಿಭಟನೆಯನ್ನು ವಿದ್ಯಾರ್ಥಿ ಸಂಘಟನೆಯು 48 ಗಂಟೆಗಳ ಕಾಲ ಸ್ಥಗಿತಗೊಳಿಸಿದೆ.

ಮೀಸಲಾತಿಯನ್ನು ಕಡಿತಗೊಳಿಸಿ ಬಾಂಗ್ಲಾದೇಶ ಸುಪ್ರೀಂಕೋರ್ಟ್ ಭಾನುವಾರ ಆದೇಶಿಸಿದ ಬೆನ್ನಲ್ಲೇ ಪ್ರತಿಭಟನಾ ನಿರತ ಸಂಘಟನೆ ಸೋಮವಾರ ಈ ನಿರ್ಧಾರವನ್ನು ಪ್ರಕಟಿಸಿದೆ.

‘ನಾವು 48 ಗಂಟೆಗಳ ಕಾಲ ಪ್ರತಿಭಟನೆಯನ್ನು ಸ್ಥಗಿತಗೊಳಿಸಿದ್ದೇವೆ. ಈ ಸಮಯದಲ್ಲಿ ಸರ್ಕಾರವು ಕರ್ಫ್ಯೂವನ್ನು ಹಿಂತೆಗೆದುಕೊಳ್ಳಬೇಕು. ಇಂಟರ್ ನೆಟ್ ಸೇವೆಯನ್ನು ಮರು ಸ್ಥಾಪಿಸಬೇಕು ಮತ್ತು ವಿದ್ಯಾರ್ಥಿಗಳನ್ನು ಗುರಿಯಾಗಿಸುವುದನ್ನು ನಿಲ್ಲಿಸಬೇಕು’ ಎಂದು ಸಂಘಟನೆಯ ಪ್ರಮುಖ ನಾಯಕ ನಹೀದ್ ಇಸ್ಲಾಂ ಹೇಳಿದರು.

ಇಂಟರ್‌ನೆಟ್ ಮರುಸ್ಥಾಪನೆ ಇಲ್ಲ: ಸುಪ್ರೀಂ ಕೋರ್ಟ್ ಆದೇಶದ ಬೆನ್ನಲ್ಲೇ ಬಾಂಗ್ಲಾದೇಶದಲ್ಲಿ ಪರಿಸ್ಥಿತಿ ಸುಧಾರಿಸಿದ್ದು ಶಾಂತಿಯುತ ವಾತಾವರಣ ನಿರ್ಮಾಣವಾಗಿದೆ. ಆದರೂ, ಇಂಟರ್‌ನೆಟ್ ಸೇವೆ ಮತ್ತು ಮೊಬೈಲ್ ಡೇಟಾವನ್ನು ಸರ್ಕಾರ ಪುನರಾರಂಭಿಸಿಲ್ಲ. ಸರ್ಕಾರವು ಸೋಮವಾರ ದೇಶದಾದ್ಯಂತ ಸಾರ್ವಜನಿಕ ರಜೆ ಘೋಷಿಸಿತ್ತು. ಅಗತ್ಯ ವಸ್ತುಗಳ ಮಾರಾಟ ಮತ್ತು ಖರೀದಿಗೆ ಮಾತ್ರವೇ ಅವಕಾಶ ನೀಡಲಾಗಿತ್ತು. ಈ ವೇಳೆ ಕರ್ಫ್ಯೂ ಸಹ ಮುಂದುವರಿದಿತ್ತು.

ಸರ್ಕಾರಿ ಹುದ್ದೆಗಳ ಭರ್ತಿ ವೇಳೆ, 1971ರಲ್ಲಿ ಬಾಂಗ್ಲಾದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಸೇನಾ ಸಿಬ್ಬಂದಿಯ ಮಕ್ಕಳು ಮತ್ತು ಸಂಬಂಧಿಕರಿಗೆ ನೀಡಲಾಗಿದ್ದ ಶೇ30ರಷ್ಟು ಕೋಟಾವನ್ನು ಕೊನೆಗೊಳಿಸಬೇಕೆಂದು ವಿದ್ಯಾರ್ಥಿಗಳು ತೀವ್ರ ಪ್ರತಿಭಟನೆ ನಡೆಸಿದ್ದರು.

ಈ ವೇಳೆ ನಡೆದ ಹಿಂಸಾಚಾರದಲ್ಲಿ ಈವರೆಗೆ 100ಕ್ಕೂ ಅಧಿಕ ಮಂದಿ ಸಾವಿಗೀಡಾಗಿದ್ದಾರೆ ಎಂದು ಸ್ಥಳೀಯ ದಿನ ಪತ್ರಿಕೆಗಳು ವರದಿ ಮಾಡಿವೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

ಉದ್ಯೋಗಾವಕಾಶ

Call Centre

IKONTEL HIRING Support Executive Voice process. Good communication, computer skills. Salary+Incentive Call: 7411800015/ 7008230175/ 9845914011 Bangalore.

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/ ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ಅಣಬೆ ತರಬೇತಿ ಪಡೆದು ಮನೆಯಿಂದಲೇ ಅಣಬೆ ಬೆಳೆಸಿ ತಿಂಗಳಿಗೆ 30,000ಕ್ಕೂ ಹೆಚ್ಚು ಸಂಪಾದಿಸಿ ತರಬೇತಿಗಾಗಿ ಬೆಂಗಳೂರು 8095555516 ಶಿವಮೊಗ್ಗ 8095555517

General

ತಕ್ಷಣ ಬೇಕಾಗಿದ್ದಾರೆ . ಟಯೋಟಾ,TVS, ಬ್ರಿಟಾನಿಯಾ,ಟಾಟಾ ಮೋಟಾರ್ಸ್ ಕಂಪನಿಗಳಿಗೆ SSLC,PUC,Degree, ITI ನವರು.18,000/- 60,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ. 9035277967

ವರ್ಕ್ ಫ್ರಮ್ ಹೋಮ್. ಆಫೀಸ್ ಕೆಲಸಕ್ಕೆ ಬೇಕಾಗಿದ್ದಾರೆ.15,000 - 43,500/-. ವಯೋಮಿತಿ ಇರುವುದಿಲ್ಲ. ಮೊದಲು ಬಂದವರಿಗೆ ಆದ್ಯತೆ. 8861041526, 9945791526

ಪ್ರವಾಸ

Travel

7 ದಿನಗಳ ಕಾಶಿ,ಗಯಾ ಪ್ರಯಾಗ್ ರಾಜ್ ಅಯೋಧ್ಯಾ. 12 ದಿನಗಳ ನೇಪಾಳ,ಮುಕ್ತಿನಾಥ ಕಾಶಿ. 10 ದಿನಗಳ ಗುಜರಾತ್ ಪ್ರವಾಸ. 13 ದಿನಗಳ ಚಾರ್‌ಧಾಮ್‌ಯಾತ್ರೆ 11 ದಿನಗಳ ರಾಜಸ್ಥಾನ್. 12 ದಿನಗಳ ಮಧ್ಯಪ್ರದೇಶ. ಸಂಪರ್ಕಿಸಿ: ನಂದಿ ಹಾಲಿಡೇಸ್ ಡಿವಿಜಿ.ರಸ್ತೆ ಬಸವನಗುಡಿ ಬೆಂಗಳೂರು-04. 9980270467 9740228186

Part-Time Jobs

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ ತಿಂಗಳಿಗೆ 15,000-20,000ವರೆಗೆ ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ: 9663542555, 9663563555

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
ಸಾರ್ವಜನಿಕ ಪ್ರಕಟಣೆ
BOOK YOUR PUBLIC NOTICE ADS IN PRAJAVANI ALL KARNATAKA, ON ALL DAYS
@500/-* PER SQCM
www.dhclassifieds.com
BOOK NOW
*Conditions apply
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9886213331 | +91 9845114560
+91 9731810277 | 080- 45557163/164

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ
ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಟ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

ಕರ್ನಾಟಕ ಸರ್ಕಾರ
ಕಾಲೇಜು ಶಿಕ್ಷಣ ಇಲಾಖೆ
ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ, ಶೇಷಾದ್ರಿ ರಸ್ತೆ, ಬೆಂಗಳೂರು – 560001.

ಸಂಖ್ಯೆ: DCE/ITS/PUR/12/2024-INFO Comp No.1437822 ದಿನಾಂಕ: 22.07.2024

ಪ್ರಕಟಣೆ

ಇಲಾಖೆಯು ರಾಜ್ಯದ 440 ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ ಕೆಳಕಂಡ ವಿಷಯಗಳಲ್ಲಿ ಪದವಿ ಮತ್ತು ಸ್ನಾತಕೋತ್ತರ ಸ್ತರಗಳಲ್ಲಿ ಪರಾಮರ್ಶನ ಪುಸ್ತಕಗಳನ್ನು ಒದಗಿಸಲು ಉದ್ದೇಶಿಸಿದ್ದು ಪುಸ್ತಕ ಪ್ರಕಾಶನ ಸಂಸ್ಥೆಗಳು ವಿವಿಧ ವಿಷಯಗಳಲ್ಲಿ ತಮ್ಮ ಸಂಸ್ಥೆ ಪ್ರಕಟಿಸಿರುವ ಪರಾಮರ್ಶನ ಪುಸ್ತಕಗಳ (Reference Books) ಪಟ್ಟಿಯನ್ನು (ಪಠ್ಯಪುಸ್ತಕಗಳನ್ನು ಸೇರಿಸುವಂತಿಲ್ಲ) ಕೆಳಗೆ ನೀಡಿರುವ ಎಕ್ಸೆಲ್ ಫಾರ್ಮ್ಯಾಟಿನಲ್ಲಿ ಇಂಗ್ಲಿಷ್ ಭಾಷೆಯಲ್ಲಿ ಟೈಪ್ ಮಾಡಿ ದಿನಾಂಕ : 31–07–21024ರ ಒಳಗೆ ಕಾಲೇಜು ಶಿಕ್ಷಣ ಇಲಾಖೆಗೆ ಇ–ಮೇಲ್: rusa.dce@gmail.com ಮೂಲಕ ಸಲ್ಲಿಸುವಂತೆ ತಿಳಿಸಿದೆ. ಈ ಎಕ್ಸೆಲ್ ಫಾರ್ಮ್ಯಾಟಿನ ಸಾಫ್ಟ್ ಪ್ರತಿ http://tiny.cc/dcebook ನಲ್ಲಿ ಲಭ್ಯವಿದೆ. ಈ ಪಟ್ಟಿಯಲ್ಲಿ ನಮೂದಿಸಬಹುದಾದ ಪಠ್ಯಪುಸ್ತಕಗಳನ್ನು ಪರಿಗಣಿಸಲಾಗುವುದಿಲ್ಲ. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: 9986800014

List of subjects for which reference books are to be supplied

1. Biochemistry	11. Electronics	21. Law	30. Political Science
2. Biotechnology	12. Environmental Studies	22. Library & Information Science	31. Psychology
3. Botany	13. English		32. Public Administration
4. Business Management	14. Genetics	23. Linguistics	33. Rural Development
5. Chemistry	15. Geography	24. Mathematics	34. Social Work
6. Commerce	16. Hindi	25. Microbiology	35. Sociology
7. Computer Science	17. History	26. Music	36. Tourism Administration
8. Criminology	18. Home Science	27. Philosophy	37. Urdu
9. Economics	19. Journalism	28. Physical Education	38. Zoology
10. Education	20. Kannada	29. Physics	

Format for reference book list to be submitted by publishers

Sl	Subject	ISBN /ISBN code	Book Title	Author Names	Publisher Name	Publication Year	Edit -ion	Number of volumes in set (if applicable)	Paper back/ Hard bound	Lang -uage	MRP	Number of copies available for supply	Level (Under graduate/ Post graduate)
1.													
2.													
3.													

ಸಹಿ/–
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಆಯುಕ್ತರು

DIPR/CP/1049/Zen/2024-25

ಹೆಚ್ಚಿನ ಪಂದ್ಯಗಳಿಗೆ ರೋಹಿತ್, ಕೊಹ್ಲಿ ಲಭ್ಯ

ಭಾರತ ತಂಡದ ಮುಖ್ಯ ಕೋಚ್ ಗೌತಮ್ ಗಂಭೀರ್ ವಿಶ್ವಾಸ • ಬೂಮ್ರಾಗೆ ಕಾರ್ಯಭಾರ ನಿರ್ವಹಣೆ ಅನ್ವಯ

ಮುಂಬೈ (ಪಿಟಿಐ): ಟಿ20 ಅಂತರ ರಾಷ್ಟ್ರೀಯ ಕ್ರಿಕೆಟ್‌ನಿಂದ ನಿವೃತ್ತರಾಗಿರುವ ಸೀನಿಯರ್ ಬ್ಯಾಟರ್‌ಗಳಾದ ರೋಹಿತ್ ಶರ್ಮಾ ಮತ್ತು ವಿರಾಟ್ ಕೊಹ್ಲಿ ಅವರು ಬಹುತೇಕ ಏಕದಿನ ಪಂದ್ಯಗಳಿಗೆ ಮತ್ತು ಟೆಸ್ಟ್‌ಗಳಿಗೆ ಲಭ್ಯರಾಗುತ್ತಾರೆ ಎಂದು ನಿರೀಕ್ಷಿಸಿರುವುದಾಗಿ ಭಾರತ ತಂಡದ ಮುಖ್ಯ ಕೋಚ್ ಗೌತಮ್ ಗಂಭೀರ್ ಸೋಮವಾರ ಇಲ್ಲಿ ತಿಳಿಸಿದ್ದಾರೆ.

ದಕ್ಷಿಣ ಆಫ್ರಿಕಾದಲ್ಲಿ ನಿಗದಿಯಾಗಿರುವ 2027ರ ಏಕದಿನ ವಿಶ್ವಕಪ್‌ಗೆ ಪರಿಗಣಿಸುವಂತಾಗಲು ಅವರಿಬ್ಬರೂ ಫಿಟ್‌ನೆಸ್ ಉಳಿಸಿಕೊಳ್ಳುವ ವಿಶ್ವಾಸವೊಂದಿರುವುದಾಗಿಯೂ ಗಂಭೀರ್ ಹೇಳಿದ್ದಾರೆ.

ಟಿ20 ವಿಶ್ವಕಪ್ ಗೆದ್ದ ನಂತರ ಅಂತರ ರಾಷ್ಟ್ರೀಯ ಚುಟುಕು ಕ್ರಿಕೆಟ್‌ನಿಂದ ನಿವೃತ್ತಿ ಪಡೆಯುವುದಾಗಿ ಈ ಅನುಭವಿ ಬ್ಯಾಟರ್‌ಗಳು ಹೇಳಿದ್ದರು. ಇಬ್ಬರೂ ಶ್ರೀಲಂಕಾ ಪ್ರವಾಸಕ್ಕೆ ವಿಶ್ರಾಂತಿ ಪಡೆಯಬಹುದೆಂದು ನಿರೀಕ್ಷಿಸಲಾಗಿತ್ತು.

ಆದರೆ ಐಸಿಸಿ ಚಾಂಪಿಯನ್ಸ್ ಟ್ರೋಫಿ ಹಿನ್ನೆಲೆಯಲ್ಲಿ, ರೋಹಿತ್ ಮತ್ತು ಕೊಹ್ಲಿ ಇಬ್ಬರೂ ಮುಂದಿನ ತಿಂಗಳು ದ್ವೀಪ-ರಾಷ್ಟ್ರದಲ್ಲಿ ನಡೆಯಲಿರುವ ಏಕದಿನ ಕ್ರಿಕೆಟ್ ಸರಣಿಗೆ ಪ್ರಕಟಿಸಿರುವ ತಂಡದಲ್ಲಿ ಸ್ಥಾನ ಪಡೆದಿದ್ದಾರೆ. ಚಾಂಪಿಯನ್ಸ್ ಟ್ರೋಫಿ ಮುಂದಿನ ಫೆಬ್ರುವರಿ- ಮಾರ್ಚ್ ತಿಂಗಳಲ್ಲಿ ಪಾಕಿಸ್ತಾನದಲ್ಲಿ ನಿಗದಿ ಆಗಿದೆ.

ಮುಖ್ಯ ಕೋಚ್ ಆದ ನಂತರ ಮೊದಲ ಮಾಧ್ಯಮಗೋಷ್ಠಿಯಲ್ಲಿ ಮಾತನಾಡಿದ ಗಂಭೀರ್, ಅನುಭವಿ ವೇಗಿ ಜಸ್‌ಪ್ರೀತ್ ಬೂಮ್ರಾ ಅವರಿಗೆ ಸಂಬಂಧಿಸಿ ಮಾತ್ರ ಕಾರ್ಯಭಾರ ಒತ್ತಡದ ಮಾತುಗಳನ್ನು ಆಡಿದರು.

'ಬೂಮ್ರಾ ಅಂಥ ಆಟಗಾರರಿಗೆ ಸಂಬಂಧಿಸಿ ಕಾರ್ಯಒತ್ತಡ ನಿರ್ವಹಣೆ ಮಾಡುವುದು ಮುಖ್ಯವಾಗಿದೆ ಎಂದು ಹಿಂದೆಯೂ ಹೇಳಿದ್ದೇನೆ. ಉತ್ತಮ ಪ್ರದರ್ಶನ ನೀಡಿದ್ದು, ಉತ್ತಮ ಲಯದಲ್ಲಿರುವ ಬ್ಯಾಟರ್‌ಗಳು ಎಲ್ಲ ಪಂದ್ಯಗಳನ್ನು ಆಡಬೇಕಾಗುತ್ತದೆ' ಎಂದರು.

ರೋಹಿತ್ ಮತ್ತು ವಿರಾಟ್ ಟಿ20 ಕ್ರಿಕೆಟ್‌ನಿಂದ ನಿವೃತ್ತರಾದ ಕಾರಣ ಅವರಿಗೆ ಎರಡು ಮಾದರಿಗಳಷ್ಟೇ ಉಳಿದಿವೆ. ಅವರಿಬ್ಬರೂ ಬಹುತೇಕ ಪಂದ್ಯಗಳಿಗೆ ಲಭ್ಯರಿರುವ ವಿಶ್ವಾಸವಿದೆ' ಎಂದು ಗಂಭೀರ್ ಹೇಳಿದರು.

'ಬೂಮ್ರಾ ಅವರು ವಿರಳ ರೀತಿಯ ಬೌಲರ್. ಹೀಗಾಗಿ ವೇಗದ ಬೌಲರ್‌ಗಳಿಗೆ ಆಗುವ ರೀತಿ ಅವರು ಗಾಯಾಳಾಗದಂತೆ ಎಚ್ಚರಿಕೆಯಿಂದ ನಿರ್ವಹಣೆ ಮಾಡಬೇಕಾಗುತ್ತದೆ. ಬರೇ ಬೂಮ್ರಾ ಮಾತ್ರವಲ್ಲ, ಹೆಚ್ಚಿನ ವೇಗದ ಬೌಲರ್‌ಗಳ ವಿಷಯದಲ್ಲೂ ಕಾರ್ಯಭಾರ ಹೆಚ್ಚಾಗದಂತೆ ನೋಡಿಕೊಳ್ಳುವುದು ನಮ್ಮ ಜವಾಬ್ದಾರಿಯಾಗಿದೆ' ಎಂದರು.

ಪ್ರತ್ಯೇಕ ತಂಡ- ಸಾಧ್ಯತೆ: ಏಕದಿನ, ಟಿ20 ಮತ್ತು ಟೆಸ್ಟ್‌ಗೆ ಮೂರು ಪ್ರತ್ಯೇಕ ತಂಡಗಳನ್ನು ಹೊಂದುವ ಸಾಧ್ಯತೆಯನ್ನು ಅವರು ಅಲ್ಲಗಳೆಯಲಿಲ್ಲ. ಆದರೆ ಈಗ ಭಾರತ ತಂಡ ಸ್ಥಿರ ಪ್ರದರ್ಶನ ನೀಡುವುದು ಅತ್ಯಗತ್ಯವಾಗಿದೆ ಎಂದರು.

'ಮೂರು ತಂಡಗಳು ಇರಲಿವೆ ಎಂಬುದನ್ನು ಈಗಲೇ ನಾನು ಹೇಳಲಾರೆ. ಟಿ20 ತಂಡ ಪರಿವರ್ತನೆಯ ಹಂತದಲ್ಲಿದೆ. ಅತ್ಯುತ್ತಮ, ವಿಶ್ವದರ್ಜೆಯ ಮೂವರು ಆಟಗಾರರು ಈ ಮಾದರಿಯಿಂದ ನಿವೃತ್ತಿಯಾಗಿದ್ದಾರೆ' ಎಂದು ರೋಹಿತ್, ವಿರಾಟ್, ಜಡೇಜ ಅವರ ನಿವೃತ್ತಿ ಉದ್ದೇಶಿಸಿ ಹೇಳಿದರು.

'ಆದರೆ ಏಕದಿನ ಮತ್ತು ಟೆಸ್ಟ್ ಕ್ರಿಕೆಟ್‌ನಲ್ಲಿ ಸ್ಥಿರ ಪ್ರದರ್ಶನ ನೀಡಿದಷ್ಟೂ ತಂಡಕ್ಕೆ ಉತ್ತಮ. ಈ ಎರಡು ಮಾದರಿಗಳಲ್ಲಿ ಹೆಚ್ಚು ಆಟಗಾರರಿರುವುದು, ಯಾವುದೇ ತಂಡಕ್ಕೆ ಒಳ್ಳೆಯದು' ಎಂದರು.

ಸುದ್ದಿಗೋಷ್ಠಿಯಲ್ಲಿ ಗೌತಮ್ ಗಂಭೀರ್ ಮತ್ತು ಅಜಿತ್ ಅಗರಕರ್ —ಪಿಟಿಐ ಚಿತ್ರ

'ಕೊಹ್ಲಿ ಜೊತೆ ಬಾಂಧವ್ಯದ ಚರ್ಚೆ ಟಿಆರ್‌ಪಿಗಷ್ಟೇ ಸರಿ'

ಮುಂಬೈ (ಪಿಟಿಐ): ತಮ್ಮ ಮತ್ತು ವಿರಾಟ್ ಕೊಹ್ಲಿ ನಡುವಣ ಬಹುಚರ್ಚಿತ ಸಂಬಂಧದ ಬಗ್ಗೆ ಪ್ರಸ್ತಾಪಿಸಿರುವ ಭಾರತ ತಂಡದ ಹೆಡ್ ಕೋಚ್ ಗೌತಮ್ ಗಂಭೀರ್, 'ನಮ್ಮಿಬ್ಬರ ಸಂಬಂಧ ಚೆನ್ನಾಗಿದೆ. ಈ ಬಗ್ಗೆ ನಡೆಯುವ ಚರ್ಚೆಯೆಲ್ಲಾ ಟಿಆರ್‌ಪಿಗಷ್ಟೇ ಸರಿಹೋಗಬಹುದು' ಎಂದು ಖಾರವಾಗಿ ಹೇಳಿದ್ದಾರೆ.

ವಿರಾಟ್ ಕೊಹ್ಲಿ

ಮುಂಬರುವ ದಿನಗಳಲ್ಲೂ ತಮ್ಮಿಬ್ಬರ ಬಾಂಧವ್ಯ ಚೆನ್ನಾಗಿಯೇ ಇರಲಿದೆ ಎಂದಿದ್ದಾರೆ. ಕಳೆದ ವರ್ಷ ಐಪಿಎಲ್ ಪಂದ್ಯಾವಳಿಯ ವೇಳೆ ಇವರಿಬ್ಬರ ಮುನಿಸು ಬಹಿರಂಗಗೊಂಡಿತ್ತು. ಆದರೆ ಈ ವರ್ಷದ ಐಪಿಎಲ್‌ನಲ್ಲಿ ಅದನ್ನು ಮರೆತಿರುವ ರೀತಿ ಇಬ್ಬರೂ ನಡೆದುಕೊಂಡಿದ್ದರು.

'ಇಂಥ ಚರ್ಚೆ ಟಿಆರ್‌ಪಿ ದೃಷ್ಟಿಯಿಂದ ಓಡಬಹುದು. ನಮ್ಮಿಬ್ಬರ ನಡುವಣ ಬಾಂಧವ್ಯ ಇಬ್ಬರು ಪ್ರಬುದ್ಧ ಮನಸ್ಸಿನವರು ಹೊಂದಿರುವಂಥ ಸಂಬಂಧದಂತೆ ಚೆನ್ನಾಗಿದೆ' ಎಂದು ಪತ್ರಿಕಾಗೋಷ್ಠಿಯಲ್ಲಿ ಈ ಸಂಬಂಧ ಕೇಳಿದ ಪ್ರಶ್ನೆಗೆ ಪ್ರತಿಕ್ರಿಯಿಸಿದರು. ತಂಡ ಗೆಲ್ಲುವುದಷ್ಟೇ ಮುಖ್ಯ. ಅದಕ್ಕಾಗಿ ಜೊತೆಯಾಗಿ ಕೆಲಸ ಮಾಡುತ್ತೇವೆ ಎಂದಿದ್ದಾರೆ.

ಭಾರತ ಜುಲೈ 27 ರಿಂದ ಶ್ರೀಲಂಕಾ ಪ್ರವಾಸ ಕೈಗೊಳ್ಳಲಿದ್ದು, ಮೂರು ಟಿ20, ಮೂರು ಏಕದಿನ ಪಂದ್ಯಗಳನ್ನು ಆಡಲಿದೆ.

'ಕ್ರಿಕೆಟ್ ಅಂಗಣದಲ್ಲಿ ತಮ್ಮ ತಮ್ಮ ತಂಡಕ್ಕಾಗಿ ಹೋರಾಡುವುದು ಮತ್ತು ಗೆದ್ದು ಡ್ರೆಸಿಂಗ್ ರೂಮ್‌ಗೆ ಮರಳುವುದು ಪ್ರತಿಯೊಬ್ಬರ ಹಕ್ಕು' ಎಂದು ಐಪಿಎಲ್ ಅನ್ನು ಪರೋಕ್ಷವಾಗಿ ಪ್ರಸ್ತಾಪಿಸಿದ ಅವರು 'ಆದರೆ ನಾವು ಈಗ, ಭಾರತವನ್ನು ಪ್ರತಿನಿಧಿಸುತ್ತಿದ್ದೇವೆ. 140 ಕೋಟಿ ಭಾರತೀಯರನ್ನು ಪ್ರತಿನಿಧಿಸುತ್ತಿದ್ದೇವೆ. ನಾವಿಬ್ಬರೂ ಒಂದೇ ಗುರಿಹೊಂದಿದ್ದೇವೆ. ಅದು ಭಾರತವನ್ನು ಹೆಮ್ಮೆಪಡುವಂತೆ ಮಾಡುವುದು' ಎಂದಿದ್ದಾರೆ.

ನಾಯಕರಾಗಿ ಸೂರ್ಯಕುಮಾರ್ ಆಯ್ಕೆ- ಅಗರಕರ್ ಸಮರ್ಥನೆ

ಮುಂಬೈ (ಪಿಟಿಐ): ಫಿಟ್ನೆಸ್, ಡ್ರೆಸ್ಸಿಂಗ್ ರೂಮ್‌ನಿಂದ ದೊರೆತ ಅಭಿಪ್ರಾಯ, ಸತತವಾಗಿ ಲಭ್ಯತೆ- ಈ ಮೂರು ಅಂಶಗಳು ಸೂರ್ಯಕುಮಾರ್ ಯಾದವ್ ಅವರಿಗೆ, ಹಾರ್ದಿಕ್ ಪಾಂಡ್ಯ ಅವರನ್ನು ಹಿಂದೆಹಾಕಿ ಭಾರತ ಟಿ20 ತಂಡಕ್ಕೆ ನಾಯಕನಾಗಿ ನೇಮಕ ಮಾಡಲು ಕಾರಣವಾದವು ಎಂದು ಆಯ್ಕೆ ಸಮಿತಿ ಅಧ್ಯಕ್ಷ ಅಜಿತ್ ಅಗರಕರ್ ಸೋಮವಾರ ಇಲ್ಲಿ ಹೇಳಿದರು.

ಇದೇ ತಿಂಗಳ 27ರಿಂದ ನಡೆಯುವ ಶ್ರೀಲಂಕಾ ಪ್ರವಾಸಕ್ಕೆ ಪೂರ್ವಭಾವಿಯಾಗಿ ನೂತನ ಮುಖ್ಯ ಕೋಚ್ ಗೌತಮ್ ಗಂಭೀರ್ ಜೊತೆ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿದರು.

'ಸೂರ್ಯಕುಮಾರ್ ನಾಯಕತ್ವಕ್ಕೆ ಅರ್ಹ ಅಭ್ಯರ್ಥಿಯಾಗಿದ್ದಾರೆ. ಒಂದು ವರ್ಷದಿಂದ ಅವರು ಸತತವಾಗಿ ತಂಡದಲ್ಲಿ ಆಡುತ್ತಿದ್ದಾರೆ. ಈ ವೇಳೆ ಡ್ರೆಸಿಂಗ್ ರೂಮ್‌ನಿಂದ ಸಾಕಷ್ಟು ಅಭಿಪ್ರಾಯಗಳು ಸಿಗುತ್ತವೆ. ಅವರಲ್ಲಿ ಆಟದ ಗ್ರಹಿಕೆ ಚೆನ್ನಾಗಿದೆ. ಟಿ20 ಕ್ರಿಕೆಟ್‌ನಲ್ಲಿ ಅವರು ವಿಶ್ವದ ಅತ್ಯುತ್ತಮ ಬ್ಯಾಟರ್ ಬೇರೆ' ಎಂದರು.

ಅವರ ಫಿಟ್ನೆಸ್ ದಾಖಲೆ ಉತ್ತಮವಾಗಿದೆ ಎಂದು ಅಗರಕರ್ ಹೇಳಿದರು. ಆ ಮೂಲಕ, ಫಿಟ್ನೆಸ್ ಸಮಸ್ಯೆಯಿಂದಾಗಿ ಪಾಂಡ್ಯ ಅವರನ್ನು ನಾಯಕತ್ವಕ್ಕೆ ಪರಿಗಣಿಸಲಿಲ್ಲ ಎಂದು ಪರೋಕ್ಷ ಇಂಗಿತ ವ್ಯಕ್ತಪಡಿಸಿದರು.

'ಪಾಂಡ್ಯ ಅವರಿಗೆ ಸಂಬಂಧಿಸಿ ಹೇಳುವುದಾದರೆ ಅವರು ತಂಡದ ಅತಿ ಪ್ರಮುಖ ಆಟಗಾರ. ಅದಕ್ಕಾಗಿ ಅವರು ತಂಡಕ್ಕೆ ಅಗತ್ಯ. ಅವರಂಥ ಕೌಶಲ ಮತ್ತೊಬ್ಬ ಆಟಗಾರನಲ್ಲಿ ಕಂಡುಕೊಳ್ಳುವುದು ಕಷ್ಟ' ಎಂದರು.

'ಕಳೆದ ಕೆಲವು ವರ್ಷಗಳಿಂದ ಅವರಿಗೆ ಫಿಟ್ನೆಸ್ ಕಾಪಾಡಿಕೊಳ್ಳುವುದು ಸವಾಲಾಗಿದೆ. ಆಗ ಅವರಿಗೂ ಕಷ್ಟ. ಆಯ್ಕೆಗಾರರಿಗೂ ಸಹ' ಎಂದರು.

ಕೆ.ಎಲ್.ರಾಹುಲ್‌ಗೆ ಸಂಬಂಧಿಸಿದ ಪ್ರಶ್ನೆಗೆ ಉತ್ತರಿಸಿದ ಅವರು, ರಾಹುಲ್ ಅವರನ್ನು ಕಡೆಗಣಿಸಿದ ವೇಳೆ ತಾವು ಆಯ್ಕೆಗಾರರೇ ಆಗಿರಲಿಲ್ಲ ಎಂದರು.

ಜಡೇಜಾ 'ಕೈಬಿಟ್ಟಿಲ್ಲ': ರವೀಂದ್ರ ಜಡೇಜಾ ಅವರನ್ನು 'ಕೈಬಿಟ್ಟಿಲ್ಲ' ಎಂದು ಅವರು ಸ್ಪಷ್ಟಪಡಿಸಿದರು. ಆದರೆ ಇದನ್ನು ಆಯ್ಕೆ ಸಮಿತಿ ಸ್ಪಷ್ಟಪಡಿಸಬೇಕಿತ್ತು ಎಂದು ಅವರು ಒಪ್ಪಿಕೊಂಡರು. ಈ ವರ್ಷ ಬಿಡುವಿಲ್ಲದ ವೇಳಾಪಟ್ಟಿ ಇದೆ. ಅವರು ಹೆಚ್ಚಿನ ಟೆಸ್ಟ್ ಪಂದ್ಯಗಳಿಗೆ ಅವಕಾಶ ಪಡೆಯುತ್ತಾರೆ ಎಂದು ಹೇಳಿದರು.

ಲಂಕಾ ಪ್ರವಾಸಕ್ಕೆ ನೆರವು ಸಿಬ್ಬಂದಿ ನೇಮಕ

ಭಾರತ ತಂಡದ ಮಾಜಿ ಆಲ್‌ರೌಂಡರ್ ಅಭಿಷೇಕ್ ನಾಯರ್, ನೆದರ್ಲೆಂಡ್ಸ್‌ನ ಬ್ಯಾಟರ್ ರಯಾನ್ ಟೆನ್ ದುಶ್ಯಾತ್ ಅವರು ಶ್ರೀಲಂಕಾ ಪ್ರವಾಸದಲ್ಲಿ ನೆರವು ಸಿಬ್ಬಂದಿಯಾಗಿ ತಂಡದ ಜೊತೆ ಪಯಣಿಸಲಿದ್ದಾರೆ.

ತಂಡದ ಪೂರ್ಣ ಪ್ರಮಾಣದ ನೆರವು ಸಿಬ್ಬಂದಿ ವಿವರ ಲಂಕಾ ಪ್ರವಾಸದ ನಂತರವಷ್ಟೇ ಗೊತ್ತಾಗಲಿದೆ ಎಂದು ಗಂಭೀರ್ ಹೇಳಿದರು.

'ಬಿಸಿಸಿಐ ಬಗ್ಗೆ ಸಂತಸದಲ್ಲಿದ್ದೇನೆ. ನಾನು ಕೇಳಿದ್ದ ಹೆಚ್ಚಿನ ಮನವಿಗಳಿಗೆ ಅವರು ಒಪ್ಪಿದ್ದಾರೆ. ನೆರವು ಸಿಬ್ಬಂದಿ ವಿಷಯ ಅಂತಿಮಗೊಳ್ಳಬೇಕಿದೆ' ಎಂದರು.

ಲಂಕಾ ಪ್ರವಾಸಕ್ಕೆ ಟಿ.ದಿಲೀಪ್ ಅವರು ಫೀಲ್ಡಿಂಗ್ ಕೋಚ್ ಆಗಿ ಮುಂದುವರಿಯುತ್ತಾರೆ ಮತ್ತು ಸಾಯಿರಾಜ ಬಹುತುಳೆ ಅವರು ಹಂಗಾಮಿ ಬೌಲಿಂಗ್ ಕೋಚ್ ಆಗಿರುತ್ತಾರೆ' ಎಂದರು

ಭಾರತ– ನೇಪಾಳ ಪಂದ್ಯ ಇಂದು

ಹ್ಯಾಟ್ರಿಕ್ ಗೆಲುವಿನತ್ತ ಹರ್ಮನ್ ಪಡೆಯ ಚಿತ್ತ

ದಂಬುಲಾ (ಪಿಟಿಐ): ಆಡಿದ ಮೊದಲ ಎರಡೂ ಪಂದ್ಯಗಳನ್ನು ಅಧಿಕಾರಯುತವಾಗಿ ಗೆದ್ದುಕೊಂಡಿರುವ ಭಾರತ ತಂಡ, ಮಹಿಳೆಯರ ಟಿ20 ಏಷ್ಯಾ ಕಪ್ 'ಎ' ಗುಂಪಿನ ತನ್ನ ಅಂತಿಮ ಪಂದ್ಯದಲ್ಲಿ ಮಂಗಳವಾರ ನೇಪಾಳ ತಂಡವನ್ನು ಎದುರಿಸಲಿದೆ.

ಭಾರತವು ಈ ಪಂದ್ಯವನ್ನೂ ಗೆದ್ದು ಅಜೇಯವಾಗಿ ಸೆಮಿಫೈನಲ್ ಪ್ರವೇಶಿಸುವ ತವಕದಲ್ಲಿದೆ. ಹರ್ಮನ್‌ಪ್ರೀತ್ ಕೌರ್ ಬಳಗ ಮೊದಲ ಪಂದ್ಯದಲ್ಲಿ ಪಾಕಿಸ್ತಾನ ಮೇಲೆ ಏಳು ವಿಕೆಟ್‌ಗಳಿಂದ, ಭಾನುವಾರ ಯುಎಇ ಮೇಳೆ 78 ರನ್‌ಗಳಿಂದ ಜಯಗಳಿಸಿ ನಿರೀಕ್ಷೆಯಂತೆ ಯಶಸ್ಸಿನ ಓಟದಲ್ಲಿದೆ.

ಹರ್ಮನ್‌ಪ್ರೀತ್ ಕೌರ್ ಮತ್ತು ಸ್ಮೃತಿ ಮಂದಾನ

ಭಾನುವಾರ ಪಾಕಿಸ್ತಾನ ಕೈಲಿ 9 ವಿಕೆಟ್‌ಗಳ ಹೀನಾಯ ಸೋಲು ಅನುಭವಿಸಿರುವ ನೇಪಾಳ ಆ ಆಘಾತದಿಂದ ಹೊರಬರುವ ಮೊದಲೇ ಬಲಿಷ್ಠ ಭಾರತ ತಂಡದ ಸವಾಲನ್ನು ಎದುರಿಸಬೇಕಾಗಿದೆ.

ಭಾರತ ಸೆಮಿಫೈನಲ್ ತಲುಪುವ ಧಾವಂತದಲ್ಲಿದ್ದರೆ, ಸಾಂಪ್ರದಾಯಿಕ ಎದುರಾಳಿ ಪಾಕಿಸ್ತಾನವು, ನೇಪಾಳ ಮೇಲೆ ಗಳಿಸಿದ ಭರ್ಜರಿ ಜಯದಿಂದಾಗಿ ರನ್‌ರೇಟ್ ಸುಧಾರಿಸಿಕೊಂಡು ಗುಂಪಿನಲ್ಲಿ ಎರಡನೇ ಸ್ಥಾನಕ್ಕೇರಿದೆ.

ಭಾರತ ತಂಡ, ಬ್ಯಾಟಿಂಗ್ ಮತ್ತು ಬೌಲಿಂಗ್ ಎರಡರಲ್ಲೂ ಉತ್ತಮ ಪ್ರದರ್ಶನ ನೀಡಿದ್ದು, ಅದನ್ನು ಮಂಗಳವಾರವೂ ಮುಂದುವರಿಸುವ ಉತ್ಸಾಹದಲ್ಲಿದೆ. ಪಾಕ್ ವಿರುದ್ಧ ಬೌಲರ್‌ಗಳ ಉತ್ತಮ ಪ್ರದರ್ಶನದ ನಂತರ ಸ್ಮೃತಿ ಮಂದಾನ ಮತ್ತು ಶಫಾಲಿ ವರ್ಮಾ ಅಮೋಘವಾಗಿ ಆಡಿದ್ದರು. ಯುಎಇ ವಿರುದ್ಧ ಹರ್ಮನ್‌ಪ್ರೀತ್ ಮತ್ತು ರಿಚಾ ಘೋಷ್ ಮಧ್ಯಮ ಕ್ರಮಾಂಕದಲ್ಲಿ ಮಿಂಚಿದ್ದರು. ರಿಚಾ ಅವರಂತೂ ಸ್ಫೋಟಕ ಇನಿಂಗ್ಸ್ ಆಡಿ ಕೇವಲ 29 ಎಸೆತಗಳಲ್ಲಿ 64 ರನ್ ಬಾಚಿದ್ದರು. ಕೌರ್ ಇನಿಂಗ್ಸ್‌ಗೆ ಲಂಗರು ಹಾಕಿ 66 ರನ್ ಹೊಡೆದಿದ್ದರು. ಭಾರತ ವನಿತೆಯರು ಟಿ20 ಕ್ರಿಕೆಟ್‌ನಲ್ಲಿ ಮೊದಲ ಬಾರಿ 200 ರನ್‌ಗಳ ಮೊತ್ತ ದಾಟಿದ್ದರು.

ರನ್‌ವೇಗ ನಿಯಂತ್ರಿಸಲು ಮತ್ತು ವಿಕೆಟ್‌ಗಳನ್ನು ಪಡೆಯುವಲ್ಲಿ ರೇಣುಕಾ ಸಿಂಗ್, ಪೂಜಾ ವಸ್ತ್ರಾಕರ್ ಮತ್ತು ದೀಪ್ತಿ ಶರ್ಮಾ ಯಶಸ್ವಿಯಾಗುತ್ತಿದ್ದಾರೆ. ಶ್ರೇಯಾಂಕಾ ಪಾಟೀಲ್ ಬದಲು ಅವಕಾಶ ಪಡೆದ ತನುಜಾ ಕನ್ವರ್ ಕೂಡ ನಾಲ್ಕು ಓವರ್‌ಗಳಲ್ಲಿ ತೆತ್ತಿದ್ದು 14 ರನ್‌ಗಳನ್ನಷ್ಟೇ.

ಇಂದೂ ಬಾರ್ಮಾ ನೇತೃತ್ವದ ನೇಪಾಳ ಮೊದಲ ಪಂದ್ಯದಲ್ಲಿ ಯುಎಇ ಮೇಲೆ ಆರು ವಿಕೆಟ್‌ಗಳ ಗೆಲುವಿನೊಡನೆ ಶುಭಾರಂಭ ಮಾಡಿದರೂ, ನಂತರ ಪಾಕ್ ಎದುರು ಸೋತಿತ್ತು. ಈಗ ಪ್ರಬಲ ಭಾರತಕ್ಕೆ ಸವಾಲೊಡ್ಡುವುದು ಹಿಮಾಲಯದ ತಪ್ಪಲಿನ ಪುಟ್ಟ ದೇಶದ ತಂಡಕ್ಕೆ ಸುಲಭವೇನಲ್ಲ.

ಮಹಿಳೆಯರ ಏಷ್ಯಾ ಕಪ್ 2024

ಇಂದಿನ ಪಂದ್ಯಗಳು

ಪಾಕಿಸ್ತಾನ	Vs	ಯುಎಇ	ಮಧ್ಯಾಹ್ನ 2
ಭಾರತ	Vs	ನೇಪಾಳ	ರಾತ್ರಿ 7

ಲೈವ್: ಸ್ಟಾರ್ ಸ್ಪೋರ್ಟ್ಸ್, ಡಿಸ್ನಿ ಹಾಟ್‌ಸ್ಟಾರ್

ನೂರು ವರ್ಷ ಹಿಂದಿನ ತಾಣದಲ್ಲಿ ನೆನಪಿನ ಬುತ್ತಿ...

ಪ್ಯಾರಿಸ್ (ಎಎಫ್‌ಪಿ): ಸರಿಯಾಗಿ ನೂರು ವರ್ಷಗಳ ನಂತರ ಒಲಿಂಪಿಕ್ಸ್ ಫ್ರಾನ್ಸ್ ರಾಜಧಾನಿ ಪ್ಯಾರಿಸ್‌ಗೆ ಮರಳಿದೆ. ಆದರೆ ಅಂದು ಬಳಕೆಯಾದ ಕ್ರೀಡಾಂಗಣದಲ್ಲಿ ಕೆಲವು ಈಗಲೂ ಅಸ್ತಿತ್ವದಲ್ಲಿವೆ. ಆದರೆ ಅವುಗಳನ್ನು ಬಳಸಲಾಗುತ್ತಿಲ್ಲ. ದೇಶದ ಕ್ರೀಡಾ ದಿಗ್ಗಜರ ಹೆಸರನ್ನು ಇವು ಹೊಂದಿವೆ.

ನಗರದ ಉತ್ತರ ಭಾಗದಲ್ಲಿರುವ ಕೊಲಂಬೆಸ್‌ನಲ್ಲಿ ಆಗಿನ ಕಾಲದಲ್ಲಿ ಮುಖ್ಯ ಕ್ರೀಡಾಂಗಣವನ್ನು ನಿರ್ಮಿಸಲಾಗಿತ್ತು. ಇಲ್ಲಿಯೇ ಕ್ರೀಡಾ ಗ್ರಾಮವೂ ಇತ್ತು. ಈಗ ಇಲ್ಲಿ ಪುನರ್‌ವಿನ್ಯಾಸಗೊಳಿಸಿರುವ ಕ್ರೀಡಾಂಗಣ ಹಾಕಿಗೆ ಬಳಕೆಯಾಗಲಿದೆ.

ಖಾಸಗಿ ರೇಸಿಂಗ್ ಕ್ಲಬ್‌ಗೆ ಈ ಜಾಗ ಸೇರಿತ್ತು. ಈ ಜಮೀನಿನಲ್ಲಿ 60 ಸಾವಿರ ಮಂದಿಗೆ ಅವಕಾಶವಿರುವ ಕ್ರೀಡಾಂಗಣ ನಿರ್ಮಿಸಲು ಕ್ಲಬ್ ಒಪ್ಪಿಕೊಂಡಿತು. ಇದಕ್ಕಾಗಿ ತಗುಲಿದ ವೆಚ್ಚವನ್ನು ಒಲಿಂಪಿಕ್ಸ್‌ನಿಂದ ಬಂದ ಹಣದಿಂದ ನೀಡುವಂತೆ ಕೇಳಿತ್ತು ಎಂದು ಇತಿಹಾಸಕಾರ ಮೈಕೆಲ್ ಡೆಲಿಪೈನ್ ಅವರು ಕ್ರೀಡಾಂಗಣದ ಬಗ್ಗೆ ಬರೆದಿರುವ ಕೃತಿಯಲ್ಲಿ ಉಲ್ಲೇಖಿಸುತ್ತಾರೆ.

ಇದೇ ತಾಣದಲ್ಲಿ ಬ್ರಿಟಿಷ್ ಸ್ಪ್ರಿಂಟರ್‌ಗಳಾದ ಹೆರಾಲ್ಡ್ ಅಬ್ರಹಾಮ್ಸ್ ಮತ್ತು ಎರಿಕ್ ಲಿಡ್ಡೆಲ್ ನಡುವಣ ನಡೆದ ತುರುಸಿನ ಓಟ 'ಚಾರಿಯಟ್ಸ್ ಆಫ್ ಫೈರ್' ಹಾಲಿವುಡ್ ಸಿನಿಮಾಕ್ಕೆ ವಸ್ತುವಾಯಿತು. ಲಾಂಗ್‌ಜಂಪ್‌ನಲ್ಲಿ ಅಗ್ರಸ್ಥಾನ ಪಡೆದ ಡೆಹಾರ್ಟ್ ಹಬ್ಬರ್ಡ್ ಅವರು ಒಲಿಂಪಿಕ್ ಚಿನ್ನ ಗೆದ್ದ ಅಮೆರಿಕದ ಮೊದಲ ಕಪ್ಪುವರ್ಣೀಯ ಅಥ್ಲೀಟ್ ಎನಿಸಿದರು. ಈ ಕ್ರೀಡಾಂಗಣಕ್ಕೆ ನಂತರ ರೇಸಿಂಗ್ ರಗ್ಬಿ ತಾರೆ ಈವ್ಸ್ ಡು ಮನೊಯಿ ಅವರ ಹೆಸರಿಡಲಾಯಿತು. ಇದೇ ಕ್ರೀಡಾಂಗಣದಲ್ಲಿ ಬ್ರೆಜಿಲ್ ದಂತಕತೆ ಪೆಲೆ ಅವರು 1963ರಲ್ಲಿ ಫ್ರಾನ್ಸ್ ವಿರುದ್ಧ ನಡೆದ ಫುಟ್‌ಬಾಲ್ ಪಂದ್ಯದಲ್ಲಿ ಹ್ಯಾಟ್ರಿಕ್ ಸಾಧಿಸಿದ್ದರು.

ಈ ಕ್ರೀಡಾಂಗಣದ ಆಚೆಯಿರುವ ಪಿಸೈನ್ ಡೆಸ್ ಟೂರ್ಲೆಯ ಈಜುಕೊಳದಲ್ಲಿ ಅಮೆರಿಕದ ಈಜುತಾರೆ ಜಾನಿ ವೀಸ್‌ಮುಲ್ಲರ್ ಒಲಿಂಪಿಕ್ಸ್‌ನಲ್ಲಿ ಮೂರು ಚಿನ್ನದ ಪದಕಗಳನ್ನು ಗೆದ್ದಿದ್ದರು. ಅವರು ನಂತರ ಟಾರ್ಜನ್ ಸಿನಿಮಾಗಳಲ್ಲಿ ನಾಯಕನಾಗಿ ಪ್ರಸಿದ್ಧಿ ಪಡೆದರು. ಈ ಈಜುಕೊಳಕ್ಕೆ ಜಾರ್ಜಸ್ ವಲ್ಲರೆ ಹೆಸರು ಇಡಲಾಗಿದೆ. ಹಲವು ವರ್ಷಗಳ ಕಾಲ ಫ್ರಾನ್ಸ್ ಈಜು ಫೆಡರೇಷನ್‌ನ ಪ್ರಧಾನ ಕಚೇರಿ ಇಲ್ಲಿತ್ತು. ಈ ಬಾರಿ ಇದನ್ನು ನವೀಕರಿಸಿದ್ದು, ಒಲಿಂಪಿಕ್ಸ್ ಈಜುಪಟುಗಳಿಗೆ ತಾಲೀಮು ನಡೆಸಲು ಬಳಕೆಯಾಗಲಿದೆ.

ಆದರೆ ನಗರದ ಈಶಾನ್ಯ ಭಾಗದ ನಯನಮನೋಹರ ಗಿರಿಯ ಮೇಲಿದ್ದ ಫುಟ್‌ಬಾಲ್ ಕ್ರೀಡಾಂಗಣ ಈಗ ಪಾಳುಬಿದ್ದಿದೆ.

ಉತ್ತರ ಪ್ಯಾರಿಸ್‌ನ ಸೇಂಟ್ ಡೆನಿಸ್‌ನಲ್ಲಿರುವ ಒಲಿಂಪಿಕ್ಸ್ ಕ್ರೀಡಾಗ್ರಾಮಕ್ಕೆ ಫ್ರಾನ್ಸ್ ಅಧ್ಯಕ್ಷ ಇಮ್ಯಾನುಯೆಲ್ ಮ್ಯಾಕ್ರನ್ ಅವರು ಸೋಮವಾರ ಭೇಟಿ ನೀಡಿ ಸಿದ್ಧತೆಗಳನ್ನು ಪರಿಶೀಲಿಸಿ, ಫ್ರೆಂಚ್ ಅಥ್ಲೀಟ್‌ಗಳ ಜೊತೆ ಸಮಾಲೋಚನೆ ನಡೆಸಿದರು —ಎಎಫ್‌ಪಿ ಚಿತ್ರ

ಕ್ರೀಡಾಗ್ರಾಮ ತಲುಪಿದ ಮತ್ತಷ್ಟು ಅಥ್ಲೀಟ್‌ಗಳು

ಪ್ಯಾರಿಸ್ (ಪಿಟಿಐ): ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಸ್ಪರ್ಧಿಸಲು ಆರ್ಚರಿ, ಟೇಬಲ್ ಟೆನಿಸ್ ಮತ್ತು ಹಾಕಿ ತಂಡದ ಸದಸ್ಯರು ಸೇರಿದಂತೆ ಒಟ್ಟು 49 ಭಾರತದ ಕ್ರೀಡಾಪಟುಗಳು ಈತನಕ ಕ್ರೀಡಾಗ್ರಾಮಕ್ಕೆ ಬಂದಿದ್ದಾರೆ.

ಟೇಬಲ್ ಟೆನಿಸ್ ತಂಡದ ಎಂಟು ಸದಸ್ಯರು ಮತ್ತು ಪುರುಷರ ಹಾಕಿ ತಂಡದ 19 ಸದಸ್ಯರು ಸೇರಿದಂತೆ 39 ಅಥ್ಲೀಟ್‌ಗಳು ಫ್ರಾನ್ಸ್ ರಾಜಧಾನಿಗೆ ಬಂದಿದ್ದಾರೆ. ಒಲಿಂಪಿಕ್ಸ್‌ಗೆ ಅರ್ಹತೆ ಪಡೆದ 21 ಮಂದಿಯಲ್ಲಿ 10 ಶೂಟರ್‌ಗಳೂ ತಲುಪಿದ್ದಾರೆ. ಅಲ್ಲದೆ, ಬಂದಿರುವ ತಂಡದಲ್ಲಿ ಆರ್ಚರಿ ತಂಡದ ಆರು ಸದಸ್ಯರು, ಇಬ್ಬರು ಟೆನಿಸ್ ಆಟಗಾರರು, ಒಬ್ಬ ಬ್ಯಾಡ್ಮಿಂಟನ್‌ಪಟು, ಒಬ್ಬ ರೋವರ್ ಮತ್ತು ಇಬ್ಬರು ಈಜುಗಾರರು ಇದ್ದಾರೆ.

ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ 70 ಪುರುಷರು ಮತ್ತು 47 ಮಹಿಳೆಯರು ಸೇರಿದಂತೆ ಒಟ್ಟು 117 ಕ್ರೀಡಾಪಟುಗಳು ಭಾರತವನ್ನು ಪ್ರತಿನಿಧಿಸಲಿದ್ದಾರೆ. ಅವರು 95 ಪದಕಗಳಿಗಾಗಿ 69 ಸ್ಪರ್ಧೆಗಳಲ್ಲಿ ಭಾಗವಹಿಸಲಿದ್ದಾರೆ. ಅವರೊಂದಿಗೆ 140 ನೆರವು ಸಿಬ್ಬಂದಿ ಇರುವರು.

ಟೋಕಿಯೊ ಒಲಿಂಪಿಕ್ಸ್‌ನಲ್ಲಿ 119 ಮಂದಿಯ ತಂಡವು ಭಾರತವನ್ನು ಪ್ರತಿನಿಧಿಸಿತ್ತು. ಅಲ್ಲಿ ನೀರಜ್ ಚೋಪ್ರಾ ಐತಿಹಾಸಿಕ ಚಿನ್ನ ಗೆದ್ದಿದ್ದರು. ಅಲ್ಲಿ ಒಂದು ಚಿನ್ನ, ಎರಡು ಬೆಳ್ಳಿ ಸೇರಿದಂತೆ ಭಾರತವು 7 ಪದಕಗಳನ್ನು ಗೆದ್ದಿತ್ತು. ಅದು ಭಾರತದ ಈವರೆಗಿನ ಅತ್ಯುತ್ತಮ ಸಾಧನೆಯಾಗಿದೆ.

ತಪ್ಪು ಮರುಕಳಿಸದಂತೆ ಎಚ್ಚರ ವಹಿಸುವೆ: ಬಾತ್ರಾ

ನವದೆಹಲಿ (ಪಿಟಿಐ): ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಒಂದೊಂದು ಪಂದ್ಯದ ಮೇಲೆ ಮಾತ್ರ ಗಮನ ಕೇಂದ್ರೀಕರಿಸುತ್ತೇನೆ. ಆರಂಭಿಕ ಹಂತದಲ್ಲಿ ಪದಕ ಗೆಲ್ಲುವುದರ ಕುರಿತು ಯಾವುದೇ ಯೋಚನೆ ಮಾಡುವುದಿಲ್ಲ ಎಂದು ಭಾರತದ ಟೇಬಲ್ ಟೆನಿಸ್ ಆಟಗಾರ್ತಿ ಮಣಿಕಾ ಬಾತ್ರಾ ಹೇಳಿದ್ದಾರೆ.



ತಂಡದ ಸದಸ್ಯರೊಂದಿಗೆ ಪ್ಯಾರಿಸ್ ಒಲಿಂಪಿಕ್ಸ್‌ಗಾಗಿ ಸಿದ್ಧತೆ ನಡೆಸುತ್ತಿರುವ ಮಣಿಕಾ, ಟೋಕಿಯೊ ಒಲಿಂಪಿಕ್ಸ್‌ನ ಅನುಭವದಿಂದ ಕಲಿತಿದ್ದಾಗಿ ಹೇಳಿದ್ದಾರೆ.

'ಕಳೆದ ಒಲಿಂಪಿಕ್ಸ್‌ನಿಂದ ಬಹಳಷ್ಟು ಸಂಗತಿಗಳನ್ನು ಕಲಿತಿದ್ದೇನೆ. ಮತ್ತೆ ಅದೇ ತಪ್ಪುಗಳನ್ನು ಮಾಡಲು ಹೋಗುವುದಿಲ್ಲ. ಆಂದಿನಿಂದ ನನ್ನ ಮನಸ್ಥಿತಿ ಬದಲಾಗಿದೆ. ನಾನು ಶಾಂತ ಚಿತ್ತದಿಂದ ಇದ್ದೇನೆ ಮತ್ತು ನನ್ನ ಮೇಲೆ ವಿಶ್ವಾಸ ಬಂದಿದೆ' ಎಂದು ಮಣಿಕಾ ಅವರು ಸಂದರ್ಶನದಲ್ಲಿ ತಿಳಿಸಿದ್ದಾರೆ.

'ನನ್ನ ಸಾಮರ್ಥ್ಯ ಮತ್ತು ಚುರುಕುತನ ಹೆಚ್ಚಿಸಿಕೊಳ್ಳಲು ಪ್ರಯತ್ನಿಸುತ್ತಿದ್ದೇನೆ. ಆದರೆ, ನಾನು ನಿಧಾನವಾಗಿ ಸಾಗುತ್ತೇನೆ ಎಂದಿದ್ದಾರೆ.

ಫುಟ್‌ಬಾಲ್ ಪಂದ್ಯದ ವೇಳೆ ಸ್ಟ್ಯಾಂಡ್ ಕುಸಿತ; ಹಲವರಿಗೆ ಗಾಯ

ಬೆಂಗಳೂರು: ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಮುಖ್ಯಮಂತ್ರಿ ಕಪ್ ಫುಟ್‌ಬಾಲ್ ಟೂರ್ನಿಯ ಫೈನಲ್ ವೇಳೆ ಉತ್ತರ ಸ್ಟ್ಯಾಂಡ್‌ನ ಕೆಳಗಿನ ಭಾಗ ಕುಸಿದು, ಹಲವರು ಗಾಯಗೊಂಡಿದ್ದಾರೆ ಎಂದು ವರದಿಯಾಗಿದೆ.

ಶಾಂತಿನಗರ ವಿಧಾನಸಭಾ ಕ್ಷೇತ್ರ ಮತ್ತು ಸಿ.ವಿ. ರಾಮನ್ ನಗರ ವಿಧಾನಸಭಾ ಕ್ಷೇತ್ರ ತಂಡಗಳ ನಡುವೆ ಫೈನಲ್ ಹಣಾಹಣಿ ನಡೆದಿತ್ತು. ಈ ವೇಳೆ ಗ್ಯಾಲರಿಗಳು ಪ್ರೇಕ್ಷಕರಿಂದ ತುಂಬಿದ್ದವು. ಈ ವೇಳೆ ಕುಸಿತ ಉಂಟಾಗಿದೆ. ಘಟನೆಯ ವಿಡಿಯೊವನ್ನು ಪ್ರೇಕ್ಷಕರೊಬ್ಬರು ಸೆರೆಹಿಡಿದು, ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡಿದ್ದಾರೆ.

ಪಂದ್ಯ ಆರಂಭಗೊಂಡ 35ನೇ ನಿಮಿಷದಲ್ಲಿ ಉತ್ತರ ಸ್ಟ್ಯಾಂಡ್‌ನ ಗ್ಯಾಲರಿಯ ಒಂದು ಭಾಗವು ಕುಸಿದಿದೆ. ಜನರು ಭಯಭೀತರಾಗಿ ಓಡಿಹೋದರು. ಹತ್ತಕ್ಕೂ ಹೆಚ್ಚು ಮಂದಿಯನ್ನು ಆಂಬ್ಯುಲೆನ್ಸ್‌ನಲ್ಲಿ ಆಸ್ಪತ್ರೆಗೆ ಕರೆದೊಯ್ಯಲಾಯಿತು ಎಂದು ಘಟನಾ ಸ್ಥಳದಲ್ಲಿದ್ದ ಮೆರ್ವಿನ್ ಇಮ್ಯಾನುಯೆಲ್ ಅವರು 'ಪ್ರಜಾವಾಣಿ'ಗೆ ತಿಳಿಸಿದರು.

ಚಾಮರಿ ಶತಕ: ಲಂಕಾಗೆ ಜಯ

ದಂಬುಲಾ (ಪಿಟಿಐ): ಆರಂಭ ಆಟಗಾರ್ತಿ ಚಾಮರಿ ಅಟ್ಟಪಟ್ಟು ಅವರ ಅಜೇಯ ಶತಕದ (119*, 69ಎ, 4x14, 6x7) ನೆರವಿನಿಂದ ಆತಿಥೇಯ ಶ್ರೀಲಂಕಾ ತಂಡ, ಮಹಿಳೆಯರ ಏಷ್ಯಾ ಕಪ್ ಟಿ20 ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ ಮಲೇಷ್ಯಾ ತಂಡವನ್ನು 144 ರನ್‌ಗಳಿಂದ ಸದೆಬಡಿಯಿತು.

'ಬಿ' ಗುಂಪಿನ ಈ ಪಂದ್ಯದಲ್ಲಿ ನಾಯಕಿ ಚಾಮರಿ ಅವರ ಶತಕದ ನಂತರ, ಲಂಕಾ ಬೌಲರ್‌ಗಳು ಸಾಂಘಿಕ ಪ್ರದರ್ಶನ ನೀಡಿದರು. ಬ್ಯಾಟ್ ಮಾಡಲು ನಿರ್ಧರಿಸಿದ ಲಂಕಾ ಮೊದಲು ಆಡಿ 4 ವಿಕೆಟ್‌ಗೆ 184 ರನ್‌ಗಳ ದೊಡ್ಡ ಮೊತ್ತ ಕಲೆಹಾಕಿತು. ಮಲೇಷ್ಯಾ ಕೇವಲ ಒಂದು ಎಸೆತ ಉಳಿದಿರುವಂತೆ ಬರೇ 40 ರನ್ನಿಗೆ ಉರುಳಿತು. ಎಲ್ಸಾ ಹಂಟರ್ (10) ಬಿಟ್ಟರೆ ಉಳಿದವರು ಯಾರೂ ಎರಡಂಕಿ ತಲುಪಲಿಲ್ಲ.

ಲಂಕಾ ಬೌಲರ್‌ಗಳ ಪೈಕಿ, 15 ವರ್ಷ ವಯಸ್ಸಿನ ಎಡಗೈ ಸ್ಪಿನ್ನರ್ ಶಶಿನಿ ಗಿಮ್ಹಾನಿ ತಮ್ಮ ಪಾಲಿನ 4 ಓವರುಗಳಲ್ಲಿ 9 ರನ್ನಿಗೆ 3 ವಿಕೆಟ್ ಪಡೆದು ಮಿಂಚಿದರು.

ಸ್ಕೋರುಗಳು: ಶ್ರೀಲಂಕಾ: 20 ಓವರುಗಳಲ್ಲಿ 4 ವಿಕೆಟ್‌ಗೆ 184 (ಚಾಮರಿ ಅಟ್ಟಪಟ್ಟು ಔಟಾಗದೇ 119, ಹರ್ಷಿತಾ ಸಮರವಿಕ್ರಮ 26, ಅನುಷ್ಕಾ ಸಂಜೀವನಿ 31; ವಿನಿಫ್ರೆಡ್ ದುರೈಸಿಂಘಂ 34ಕ್ಕೆ2); ಮಲೇಷ್ಯಾ: 19.5 ಓವರುಗಳಲ್ಲಿ 40 (ಎಲ್ಸಾ ಹಂಟರ್ 10; ಕಾವ್ಯಾ ಕವಿಂದಿ 7ಕ್ಕೆ2, ಶಶಿನಿ ಗಿಮ್ಹಾನಿ 9ಕ್ಕೆ3, ಕವಿಶಾ ದಿಲ್ಹಾರಿ 4ಕ್ಕೆ2). ಪಂದ್ಯದ ಆಟಗಾರ್ತಿ: ಚಾಮರಿ ಅಟ್ಟಪಟ್ಟು

ಬಾಂಗ್ಲಾಗೆ ಗೆಲುವು

ದಂಬುಲಾ (ಪಿಟಿಐ): ರಬಿಯಾ ಖಾನ್ (14ಕ್ಕೆ 4) ಅವರ ಪರಿಣಾಮಕಾರಿ ಬೌಲಿಂಗ್ ದಾಳಿ ಮತ್ತು ಮುರ್ಷಿದಾ ಖಾತುನ್ (50, 55ಎ) ಅವರ ಅರ್ಧಶತಕದ ಬಲದಿಂದ ಬಾಂಗ್ಲಾದೇಶ ತಂಡವು ಮಹಿಳೆಯರ ಟಿ20 ಏಷ್ಯಾಕಪ್ ಟೂರ್ನಿಯ ಪಂದ್ಯದಲ್ಲಿ ಥಾಯ್ಲೆಂಡ್ ತಂಡವನ್ನು ಸೋಮವಾರ ಏಳು ವಿಕೆಟ್‌ಗಳಿಂದ ಮಣಿಸಿತು.

ಸಂಕ್ಷಿಪ್ತ ಸ್ಕೋರ್: ಥಾಯ್ಲೆಂಡ್: 20 ಓವರ್‌ಗಳಲ್ಲಿ 9 ವಿಕೆಟ್‌ಗೆ 96 (ನಟ್ಟಾಯ ಬೂಚಾತಂ 40, ರಬಿಯಾ ಖಾನ್ 14ಕ್ಕೆ 4, ರಿತು ಮೋನಿ 10ಕ್ಕೆ 2). **ಬಾಂಗ್ಲಾದೇಶ:** 17.3 ಓವರ್‌ಗಳಲ್ಲಿ 3 ವಿಕೆಟ್‌ಗೆ 100 (ಮುರ್ಷಿದಾ ಖಾತುನ್ 50). **ಫಲಿತಾಂಶ:** ಬಾಂಗ್ಲಾದೇಶಕ್ಕೆ 7 ವಿಕೆಟ್‌ಗಳ ಜಯ.

ವಿಶ್ವಕಪ್: ಆಯೋಜನೆಯ ಪರಾಮರ್ಶೆಗೆ ತ್ರಿಸದಸ್ಯ ಸಮಿತಿ

ಕೊಲಂಬೊ (ಪಿಟಿಐ): ವೆಸ್ಟ್ ಇಂಡೀಸ್ ಮತ್ತು ಅಮೆರಿಕ ಆತಿಥ್ಯದಲ್ಲಿ ಕಳೆದ ತಿಂಗಳು ನಡೆದ ಟಿ20 ವಿಶ್ವಕಪ್‌ನಲ್ಲಿ ಅನಗತ್ಯ ನಷ್ಟ, ಪಿಚ್‌ಗಳ ಕಳಪೆ, ಆಟಗಾರರಿಗೆ ಎದುರಾದ ಪ್ರಯಾಣದ ಬವಣೆ ಪರಿಶೀಲಿಸಲು ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ (ಐಸಿಸಿ) ಸೋಮವಾರ ತ್ರಿಸದಸ್ಯರ ಸಮಿತಿಯನ್ನು ರಚಿಸಿದೆ.

ನ್ಯೂಜಿಲೆಂಡ್‌ನ ಮಾಜಿ ಕ್ರಿಕೆಟಿಗ ರೋಜರ್ ಟೂಸ್, ಐಸಿಸಿಯ ಉಪಾಧ್ಯಕ್ಷರಾದ ಇಮ್ರಾನ್ ಖ್ವಾಜಾ ಮತ್ತು ಲಾಸನ್ ನೈಡೂ ಅವರನ್ನು ಒಳಗೊಂಡ ಸಮಿತಿ ರಚಿಸಲಾಗಿದೆ.

'ವಿಶ್ವಕಪ್ ಆಯೋಜನೆಯಲ್ಲಿ ಆದ ವ್ಯತ್ಯಾಸಗಳ ಬಗ್ಗೆ ಈ ಸಮಿತಿಯು ಪರಿಶೀಲನೆ ನಡೆಸಲಿದೆ. ಈ ಸಮಿತಿಯು ವರ್ಷದ ನಂತರ ಮಂಡಳಿಗೆ ವರದಿ ನೀಡಲಿದೆ' ಎಂದು ಐಸಿಸಿ ತಿಳಿಸಿದೆ.

ನ್ಯೂಯಾರ್ಕ್, ಫ್ಲೋರಿಡಾ ಮತ್ತು ಡಲಾಸ್‌ನಲ್ಲಿ ಪಂದ್ಯಗಳನ್ನು ನಡೆಸಿದ್ದ ರಿಂದ ಐಸಿಸಿಯು ₹167 ಕೋಟಿಗಿಂತಲೂ ಹೆಚ್ಚಿನ ನಷ್ಟ ಅನುಭವಿಸಿದೆ ಎಂದು ಅಂದಾಜಿಸಲಾಗಿದೆ.

ಟೂರ್ನಿಯ ಅಮೆರಿಕದ ಲೆಗ್‌ಗಾಗಿ ಸುಮಾರು ₹1255 ಕೋಟಿ ಬಜೆಟ್ ನಿಗದಿಪಡಿಸಲಾಗಿತ್ತು. ಆದರೆ, ಕೆಲವು ಮಂಡಳಿಯ ಪ್ರಭಾವಿ ಸದಸ್ಯರ ಕಾರಣದಿಂದ ಬಜೆಟ್ ಮಿತಿಮೀರಿದೆ ಎಂದು ತಿಳಿದುಬಂದಿದೆ.

ಡ್ರಾಪ್ ಇನ್ ಪಿಚ್‌ಗಳ ಕಳಪೆ ಗುಣಮಟ್ಟ, ಟಿಕೆಟಿಂಗ್ ಅವ್ಯವಸ್ಥೆ ಮತ್ತು ಆಟಗಾರರ ಪ್ರಯಾಣದ ಬವಣೆ ಬಗ್ಗೆ ಸಮಿತಿಯು ವರದಿ ನೀಡಲಿದೆ. ಟೂರ್ನಿಯ ನಿರ್ದೇಶಕರಾಗಿದ್ದ ಕ್ರಿಸ್ ಟೆಟ್ಲಿ ರಾಜೀನಾಮೆ ನೀಡಿದ್ದಾರೆ.

---

328 ಅಂತರರಾಷ್ಟ್ರೀಯ ಪಂದ್ಯಗಳನ್ನು ಆಡಿರುವ ಭಾರತ ತಂಡದ ಗೋಲ್‌ಕೀಪರ್

ಒಲಿಂಪಿಕ್ಸ್ ಬಳಿಕ ಹಾಕಿಗೆ ಶ್ರೀಜೇಶ್ ವಿದಾಯ

ನವದೆಹಲಿ: ಪ್ಯಾರಿಸ್ ಒಲಿಂಪಿಕ್ಸ್ ಬಳಿಕ ಹಾಕಿ ವೃತ್ತಿಜೀವನಕ್ಕೆ ವಿದಾಯ ಹೇಳುವುದಾಗಿ ಭಾರತ ತಂಡದ ಅನುಭವಿ ಗೋಲ್‌ಕೀಪರ್ ಪಿ.ಆರ್. ಶ್ರೀಜೇಶ್ ಅವರು ಸೋಮವಾರ ಘೋಷಿಸಿದ್ದಾರೆ.

36 ವರ್ಷದ ಶ್ರೀಜೇಶ್ 328 ಅಂತರ ರಾಷ್ಟ್ರೀಯ ಪಂದ್ಯಗಳಲ್ಲಿ ಭಾರತವನ್ನು ಪ್ರತಿನಿಧಿಸಿದ್ದಾರೆ. ಅವರು ಮೂರು ಒಲಿಂಪಿಕ್ಸ್, ಕಾಮನ್‌ವೆಲ್ತ್ ಕ್ರೀಡಾಕೂಟ ಮತ್ತು ವಿಶ್ವಕಪ್ ಟೂರ್ನಿಗಳಲ್ಲಿ ಆಡಿದ್ದಾರೆ. ಇದೇ ಜುಲೈ 26ರಿಂದ ನಡೆಯುವ ಒಲಿಂಪಿಕ್ಸ್, ಶ್ರೀಜೇಶ್ ಅವರಿಗೆ 18 ವರ್ಷಗಳ ವೃತ್ತಿಜೀವನದ ವಿದಾಯ ಟೂರ್ನಿ ಆಗಲಿದೆ.

'ಪ್ಯಾರಿಸ್‌ನಲ್ಲಿ ಕೊನೆಯ ಟೂರ್ನಿ ಆಡಲು ಸಿದ್ಧನಾಗುತ್ತಿದ್ದೇನೆ. ನನ್ನ ಪಯಣವನ್ನು ಹಿಂತಿರುಗಿ ನೋಡಿದಾಗ ಹೆಮ್ಮೆಯೆನಿಸುತ್ತದೆ. ಆದರೆ, ಈ ಪ್ರಯಾಣವು ಅಸಾಮಾನ್ಯವಾದುದೇನೂ ಅಲ್ಲ. ಈತನಕ ಪ್ರೀತಿ ಮತ್ತು ಬೆಂಬಲ ನೀಡಿದ ನನ್ನ ಕುಟುಂಬ, ತಂಡದ ಸಹ ಆಟಗಾರರು, ತರಬೇತುದಾರರು, ಅಭಿಮಾನಿಗಳು ಮತ್ತು ಹಾಕಿ ಇಂಡಿಯಾಕ್ಕೆ ಕೃತಜ್ಞನಾಗಿದ್ದೇನೆ. ನನ್ನ ಮೇಲೆ ಇಟ್ಟ ನಂಬಿಕೆಗೆ ಧನ್ಯವಾದಗಳು' ಎಂದು ಹಾಕಿ ಇಂಡಿಯಾದ ಪ್ರಕಟಣೆಯಲ್ಲಿ ಅವರು ತಿಳಿಸಿದ್ದಾರೆ.

'ಒಲಿಂಪಿಕ್ಸ್‌ಗಾಗಿ ಕಠಿಣ ತರಬೇತಿ ಪಡೆದು, ಉತ್ಸಾಹದಿಂದ ಇದ್ದೇವೆ. ನಾವು ಪ್ಯಾರಿಸ್‌ನಲ್ಲಿ ಅತ್ಯುತ್ತಮ ಫಲಿತಾಂಶವನ್ನು ನೀಡಲು ಪ್ರಯತ್ನಿಸುತ್ತೇವೆ. ಖಂಡಿತವಾಗಿಯೂ ಈ ಬಾರಿ ಪದಕದ ಬಣ್ಣ ಬದಲಾಗುವ ವಿಶ್ವಾಸವಿದೆ. ಅದು ಸಾಕಾರವಾದರೆ ನನ್ನ ವೃತ್ತಿಜೀವನದ ಅತ್ಯಂತ ಸ್ಮರಣೀಯ ಕ್ಷಣವಾಗಿರಲಿದೆ' ಎಂದು 2020ರ ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಕಂಚು ಗೆದ್ದ ಭಾರತ ತಂಡದಲ್ಲಿದ್ದ ಶ್ರೀಜೇಶ್ ಹೇಳಿದ್ದಾರೆ.

2006ರಲ್ಲಿ ದಕ್ಷಿಣ ಏಷ್ಯನ್ ಕ್ರೀಡಾಕೂಟದ ಮೂಲಕ ಭಾರತ ತಂಡಕ್ಕೆ ಪದಾರ್ಪಣೆ ಮಾಡಿದ್ದ ಶ್ರೀಜೇಶ್ ಅವರು 2014ರ ಏಷ್ಯನ್ ಕ್ರೀಡಾಕೂಟದಲ್ಲಿ ಚಿನ್ನ ಮತ್ತು 2018ರ ಜಕಾರ್ತಾ-ಪಾಲೆಂಬಾಂಗ್‌ನಲ್ಲಿ ನಡೆದ ಏಷ್ಯಾಡ್‌ನಲ್ಲಿ ಕಂಚಿನ ಪದಕ ಗೆದ್ದ ಭಾರತ ತಂಡದ ಭಾಗವಾಗಿದ್ದರು.

2018ರಲ್ಲಿ ಏಷ್ಯನ್ ಚಾಂಪಿಯನ್ಸ್ ಟ್ರೋಫಿ ವಿಜೇತ, 2022ರ ಕಾಮನ್‌ವೆಲ್ತ್ ಗೇಮ್ಸ್‌ನ ಬೆಳ್ಳಿ ಪದಕ ವಿಜೇತ ರಾಷ್ಟ್ರೀಯ ತಂಡದಲ್ಲಿ ಅವರು ನಿರ್ಣಾಯಕ ಪಾತ್ರವಹಿಸಿದ್ದರು. 2021–22ನಲ್ಲಿ ಹಾಕಿ ಪ್ರೊ ಲೀಗ್ ಭಾರತ ಮೂರನೇ ಸ್ಥಾನ ಗಳಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಕಳೆದ ವರ್ಷ ಏಷ್ಯನ್ ಕ್ರೀಡಾಕೂಟದಲ್ಲಿ ಚಿನ್ನ ಗೆದ್ದ ಭಾರತ ತಂಡದಲ್ಲಿಯೂ ಅವರಿದ್ದರು.

ಕೇರಳದ ಶ್ರೀಜೇಶ್ ಅವರಿಗೆ 2021ರಲ್ಲಿ ಮೇಜರ್ ಧ್ಯಾನ್‌ಚಂದ್ ಖೇಲ್ ರತ್ನ ಪ್ರಶಸ್ತಿಯನ್ನು ಪ್ರದಾನ ಮಾಡಲಾಗಿದೆ. 2021ರಲ್ಲಿ ವರ್ಷದ 'ವರ್ಲ್ಡ್ ಗೇಮ್ಸ್ ಅಥ್ಲೀಟ್' ಪ್ರಶಸ್ತಿಯನ್ನು ಗೆದ್ದ ಭಾರತದ ಎರಡನೇ ಕ್ರೀಡಾಪಟು ಅವರಾಗಿದ್ದಾರೆ. ಜೊತೆಗೆ 2021 ಮತ್ತು 2022 ರಲ್ಲಿ ಸತತ ಎಫ್‌ಐಎಚ್ 'ಗೋಲ್‌ಕೀಪರ್ ಆಫ್ ದಿ ಇಯರ್' ಪ್ರಶಸ್ತಿಗಳು ಅವರಿಗೆ ಸಂದಿವೆ.

'ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಈ ಬಾರಿ ನಮ್ಮ ಪಯಣ ವಿಶೇಷವಾಗಿರಲಿದೆ. ನಮ್ಮ ಅಭಿಯಾನವನ್ನು ಹಾಕಿ ದಂತಕಥೆ ಶ್ರೀಜೇಶ್ ಅವರಿಗೆ ಅರ್ಪಿಸಲು ನಿರ್ಧರಿಸಿದ್ದೇವೆ. ನಮ್ಮೆಲ್ಲರ ಸ್ಫೂರ್ತಿಯಾಗಿರುವ ಶ್ರೀಜೇಶ್ ಅವರಿಗಾಗಿ ಒಲಿಂಪಿಕ್ಸ್‌ನಲ್ಲಿ ಪದಕ ಗೆಲ್ಲಲು ಹೋರಾಟ ನಡೆಸುತ್ತೇವೆ' ಎಂದು ಭಾರತ ತಂಡದ ನಾಯಕ ಹರ್ಮನ್‌ಪ್ರೀತ್ ಸಿಂಗ್ ಪ್ರತಿಕ್ರಿಯಿಸಿದ್ದಾರೆ.

'ನಾನು ಭಾರತ ತಂಡದ ನಾಯಕನಾಗಿದ್ದಾಗ ಶ್ರೀಜೇಶ್ ಅವರು ಅಂತರರಾಷ್ಟ್ರೀಯ ಪಂದ್ಯಕ್ಕೆ ಪದಾರ್ಪಣೆ ಮಾಡಿದ್ದರು. ಅವರು ಭಾರತ ತಂಡಕ್ಕೆ ನೀಡಿರುವ ಕೊಡುಗೆ ಅಪಾರ. ಶ್ರೀಜೇಶ್ ಅವರ ನಿರ್ಧಾರವು ಈ ಬಾರಿ ಒಲಿಂಪಿಕ್ಸ್‌ನಲ್ಲಿ ಮತ್ತೊಮ್ಮೆ ವೇದಿಕೆ ಮೇಲೆ ನಿಲ್ಲಲು ತಂಡಕ್ಕೆ ಪ್ರೇರಣೆಯಾಗಲಿದೆ' ಎಂದು ಹಾಕಿ ಇಂಡಿಯಾ ಅಧ್ಯಕ್ಷ ದಿಲೀಪ್ ಟಿರ್ಕೆ ಹೇಳಿದ್ದಾರೆ.

ಭಾರತ ಹಾಕಿ ತಂಡವು ಜುಲೈ 27ರಂದು ನ್ಯೂಜಿಲೆಂಡ್ ವಿರುದ್ಧ ತನ್ನ ಒಲಿಂಪಿಕ್ ಅಭಿಯಾನವನ್ನು ಆರಂಭಿಸಲಿದೆ. ನಂತರ ಅರ್ಜೆಂಟೀನಾ (ಜುಲೈ 29), ಐರ್ಲೆಂಡ್ (ಜುಲೈ 30), ಬೆಲ್ಜಿಯಂ (ಆಗಸ್ಟ್ 1) ಮತ್ತು ಆಸ್ಟ್ರೇಲಿಯಾ (ಆಗಸ್ಟ್ 2) ತಂಡಗಳನ್ನು ಎದುರಿಸಲಿದೆ.

ಭಾರತ ಹಾಕಿ ತಂಡದ ಗೋಲ್‌ಕೀಪರ್ ಪಿ.ಆರ್. ಶ್ರೀಜೇಶ್ —ಪಿಟಿಐ ಚಿತ್ರ

ಪ್ರಶಸ್ತಿ ಗೆದ್ದ ಬೀಗಲ್ಸ್ ಬಿ.ಸಿ ತಂಡ. (ಎಡದಿಂದ) ನಿಂತವರು ಹರ್ಷಿತಾ (ಮ್ಯಾನೇಜರ್), ಮೇಖಲಾ, ಭೂಮಿಕಾ ಸಿಂಗ್, ಚಂದನಾ, ಮೋಹನ್ ಕುಮಾರ್ (ಕೋಚ್), ಸಂಜನಾ ರಮೇಶ್, ರೆನೆಟ್ಟಾ, ಭವ್ಯಾ (ಕುಳಿತವರು) ರಚನಾ, ಸಮರ, ಗುಣಶ್ರೀ, ಮೇಧಾ, ಸ್ವಾತಿ, ಪೂರ್ವಿ ಮತ್ತು ಬೃಂದಾ ಚಿತ್ರದಲ್ಲಿದ್ದಾರೆ —ಪ್ರಜಾವಾಣಿ ಚಿತ್ರ/ ಬಿ.ಕೆ. ಜನಾರ್ದನ್

ಬ್ಯಾಸ್ಕೆಟ್‌ಬಾಲ್: ಬೀಗಲ್ಸ್ ಚಾಂಪಿಯನ್

ಬೆಂಗಳೂರು: ಬೀಗಲ್ಸ್ ಬಿ.ಸಿ ತಂಡವು ಕರ್ನಾಟಕ ರಾಜ್ಯ ಬಾಸ್ಕೆಟ್‌ಬಾಲ್ ಸಂಸ್ಥೆ ಆಶ್ರಯದಲ್ಲಿ ನಡೆದ ಮಹಿಳೆಯರ ಮೊದಲ ರಾಜ್ಯ ಬ್ಯಾಸ್ಕೆಟ್‌ಬಾಲ್ ಲೀಗ್ ಚಾಂಪಿಯನ್‌ಷಿಪ್‌ನಲ್ಲಿ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡಿತು.

ಮೌಂಟ್ಸ್ ಕ್ಲಬ್ ರನ್ನರ್ಸ್ ಅಪ್ ಸ್ಥಾನ ಪಡೆದರೆ, ಡಿವೈಇಎಸ್ ಮೈಸೂರು ಮತ್ತು ಜೆಎಸ್‌ಸಿ ತಂಡಗಳು ಕ್ರಮವಾಗಿ ಮೂರನೇ ಮತ್ತು ನಾಲ್ಕನೇ ಸ್ಥಾನ ಪಡೆದವು.ವಿಜೇತ ತಂಡವು ಆಕರ್ಷಕ ಟ್ರೋಫಿಯೊಂದಿಗೆ ₹ 75 ಸಾವಿರ ನಗದು ಮತ್ತು ರನ್ನರ್ ಅಪ್ ತಂಡ ₹50 ಸಾವಿರ ಬಹುಮಾನ ಪಡೆದವು.

ಸೋಮವಾರ ನಡೆದ ಫೈನಲ್ ಲೀಗ್ ಪಂದ್ಯದಲ್ಲಿ ಬೀಗಲ್ಸ್ ತಂಡವು 65–32ರಿಂದ ಡಿವೈಇಎಸ್ ಮೈಸೂರು ತಂಡವನ್ನು ಮಣಿಸಿತು. ಮತ್ತೊಂದು ಪಂದ್ಯಲ್ಲಿ ಮೌಂಟ್ಸ್ ಕ್ಲಬ್ ತಂಡವು 70–51ರಿಂದ ಜೆಎಸ್‌ಸಿ ತಂಡವನ್ನು ಸೋಲಿಸಿತು.

ವಿಜೇತ ತಂಡಕ್ಕೆ ಎಫ್‌ಐಬಿಎ ಏಷ್ಯಾ ಅಧ್ಯಕ್ಷ, ವಿಧಾನ ಪರಿಷತ್ ಸದಸ್ಯ ಕೆ.ಗೋವಿಂದರಾಜ್, ಶಾಸಕ ಅಪ್ಪಾಜಿ ಸಿ.ಎಸ್. ನಾಡಗೌಡ, ಕೆಎಸ್‌ಬಿಬಿಎ ಅಧ್ಯಕ್ಷ, ಪೊಲೀಸ್ ಕಮಿಷನರ್ ಬಿ.ದಯಾನಂದ, ಕೆಎಸ್‌ಬಿಬಿಎ ಉಪಾಧ್ಯಕ್ಷ ರಾಜನ್ ಆರ್. ಬಹುಮಾನ ವಿತರಿಸಿದರು.

SAMSUNG

Galaxy Z Flip6

Galaxy AI is here

New features of Galaxy Z Flip6

50MP Flagship Camera

4000mAh Battery

First ever Vapor Chamber on Z Flip

Galaxy AI

Last chance to pre-order at ₹ 47999**

Retail price of Galaxy Z Flip6 (256 GB)	₹ 109999#
Exchange value of old device	₹ 47000~
Upgrade bonus	₹ 15000^
Effective price	₹ 47999**

0 Down payment | 24 Months no cost EMI^^

Per month EMI ₹ 4250~~

+

Get Galaxy Z Assurance

Complete device protection twice in a year, worth ₹ 9999*

Ultimate innovation. Ultimate peace of mind.

Samsung Care+ | Samsung Upgrade | HDFC BANK | BAJAJ FINSERV | Samsung Finance+™

Offer ends today, July 23, 2024

samsung.com

Please dispose of e-waste and plastic waste responsibly. Customers can WhatsApp on 180057267664 for information on e-waste/plastic waste.

Image simulated for illustrative purpose only. Actual UX/UI may differ. Color subject to availability. Flex mode is supported at angles between 75° and 115°. Actual battery performance may vary with different operating conditions and applications. Samsung login is required for certain AI features. Samsung does not make any promises, assurances or guarantees as to the accuracy, completeness or reliability of the output provided by AI features. Samsung promotes responsible use of AI features. Offer may be revised or withdrawn. **Offer price shown above is upon pre-order of 1 unit of Galaxy Z Flip6 12GB|256GB, shown inclusive of exchange value of old device and upgrade bonus. Final price at sole discretion of dealer. #Retail price shown for 1 unit of Galaxy Z Flip6 12GB|256GB. Price is inclusive of taxes. ~Approximate value on exchange of 1 unit of Galaxy Z Flip5 8GB|256GB. Exchange value varies basis model and condition of old device. Exchange at discretion of retailer. ^Upgrade bonus provided by brand at its sole discretion, upon exchange of select smartphones. Upgrade bonus may vary basis the device exchanged. Exchange at the discretion of dealer and exchange value varies basis model and condition of old device. Upgrade bonus and bank cashback cannot be clubbed. ^^Eligibility of EMI at sole discretion of financiers including those listed on Samsung Finance+ (Financier T&C applies). Samsung disclaims any liabilities thereof. ~~EMI computed on zero down payment, 24 months no cost EMI on the price of ₹ 101999 for 1 unit of Galaxy Z Flip6 12GB|256GB (inclusive of ₹ 8000 bank cashback). Bank cashback provided by HDFC bank at its sole discretion. *Samsung Care+ T&C apply. 1 unit of Samsung Care+ Accidental Damage & Liquid Damage Plan worth ₹ 9999 available at ₹ 999, only when purchased with Galaxy Z Flip6, subject to pre-order. Customers eligible for 2 claims under Accidental Damage & Liquid Damage Plan within one year of plan activation date, as per the applicable terms of Samsung Care+. Reach out to dealer for more details. All third party logos/brands are trademarks of the respective brand/company.

Scan and experience Galaxy AI

Or WhatsApp "Hi" to 9870 494949 to pre-order at Samsung Exclusive Store

Cheil-21508/24